ಸಂಸದನಾಗಿ

# ನನ್ನ ಸೇವೆ

## ರಾಜೀವ್ ಚಂದ್ರಶೇಖರ್



## ಬಿಗ್ ಬೆಂಗಳೂರು ಫೈಟ್

ಲೇಖನಗಳು, ಭಾಷಣಗಳು ಮತ್ತು ಪತ್ರಗಳು

# ಸಂಸದನಾಗಿ ನನ್ನ ಸೇವೆ

# ಬಿಗ್ ಬೆಂಗಳೂರು ಫೈಟ್

**ರಾಜೀವ್ ಚಂದ್ರಶೇಖರ್**

## ಲೇಖನಗಳು, ಭಾಷಣಗಳು ಮತ್ತು ಪತ್ರಗಳು

**ಪ್ರಕಾಶಕರು**

ರಾಜ್ಯಸಭಾ ಸದಸ್ಯರ ಕಛೇರಿ: 211 ನಾರ್ತ್ ಅವೆನ್ಯೂ 110001

ಕೃತಿಸ್ವಾಮ್ಯ ಬಿ ರಾಜೀವ್ ಚಂದ್ರಶೇಖರ್ 2017

ಎಲ್ಲ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ.

**ಸೂಚನೆ**

ರಾಜ್ಯಸಭಾ ಸದಸ್ಯರಾದ ರಾಜೀವ್ ಚಂದ್ರಶೇಖರ್ ಅವರ ಈ ಲೇಖನಗಳು, ಪತ್ರಗಳು ಹಾಗೂ ಭಾಷಣಗಳ ಸಂಗ್ರಹದ ಸಂಚಿಕೆಯು ಸೀಮಿತ ಆವೃತ್ತಿಯ, ಮಾಹಿತಿಯ ಉದ್ದೇಶ ಹೊಂದಿರುವ ಪುಸ್ತಕವಾಗಿದ್ದು ನೇರವಾಗಿ ಅಥವಾ ಪರೋಕ್ಷವಾಗಿ, ಪೂರ್ಣವಾಗಿ ಅಥವಾ ಭಾಗಶಃ ಮಾರಾಟ ಅಥವಾ ಸಾರ್ವಜನಿಕ ವಿತರಣೆಯ ಉದ್ದೇಶವನ್ನು ಹೊಂದಿರುವುದಿಲ್ಲ.

ಬೆಂಗಳೂರಿನ ಇಮೇಜಸ್‌ನಿಂದ ಟೈಪ್‌ಸೆಟ್ಟನ್ನು ಮಾಡಲ್ಪಟ್ಟಿದೆ.
ನುಡಿ ಫಾಂಟ್ ಬಳಸಲಾಗಿದೆ.
ಬೆಂಗಳೂರಿನ ರಮ್ಯಾ ಫೋಟೋಗ್ರಾಫಿಕ್ಸ್‌ನಲ್ಲಿ ಮುದ್ರಣಗೊಂಡಿದೆ.

# ಮುನ್ನುಡಿ

ರಾಜೀವ್ ಚಂದ್ರಶೇಖರ್ ಅವರ ಭಾಷಣಗಳು ಹಾಗೂ ಪತ್ರಗಳ ಸಂಗ್ರಹವಾಗಿರುವ ಈ ಪುಸ್ತಕವು ಕಳೆದ 11 ವರ್ಷಗಳ ಅವಧಿಯಲ್ಲಿ ಹತ್ತುಹಲವು ವಿಷಯಗಳಿಗೆ ಸಂಬಂಧಿಸಿದಂತೆ ನಡೆಸಿರುವ ಹೋರಾಟವನ್ನು ಹಾಗೂ ಆ ಹೋರಾಟಗಳ ಫಲಶೃತಿಯನ್ನು ಬಿಂಬಿಸುತ್ತದೆ. ನಾನು ಹಲವಾರು ವರ್ಷಗಳಿಂದಲೂ ರಾಜೀವ್ ಚಂದ್ರಶೇಖರ್ ಅವರನ್ನು ಗಮನಿಸುತ್ತ ಬಂದಿದ್ದೇನೆ. ಈ ದೇಶ ಮತ್ತು ದೇಶದ ನಾಗರೀಕರಿಗಾಗಿ ಸೇವೆ ಸಲ್ಲಿಸುವ ಅವರ ಉತ್ಸಾಹ, ನೀತಿ ನಿರೂಪಣೆಗಳಲ್ಲಿ, ಸಂಸದೀಯ ಚರ್ಚೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವ ಅವರ ಕಾರ್ಯಕ್ಷಮತೆ ಇವೆಲ್ಲವೂ ಪ್ರಶಂಸಾರ್ಹ.

ರಾಜ್ಯಸಭಾ ಸದಸ್ಯರಾಗಿ ರಾಜೀವ್ ಅವರ ಪ್ರಯಾಣ ಮತ್ತು ಅವರು ಕಾರ್ಯನಿರ್ವಹಿಸಿದ ರೀತಿ ಈ ಪುಸ್ತಕದಲ್ಲಿ ಉತ್ತಮವಾದ ರೀತಿಯಲ್ಲಿ ದಾಖಲಾಗಿದೆ. ರಾಜ್ಯಸಭೆಯಲ್ಲಿ ಅವರ ಭಾಷಣಗಳು, ಭಾರತೀಯ ಸಂವಿಧಾನಕ್ಕೆ ಮತ್ತು ಸಂವಿಧಾನದಡಿಯಲ್ಲಿ ನೀಡಲಾಗಿರುವ ನಾಗರೀಕರ ಹಕ್ಕುಗಳಿಗೆ ಹಾಗೂ ಕರ್ತವ್ಯಗಳಿಗೆ ಸಂಪೂರ್ಣವಾದ ಬದ್ಧತೆಯನ್ನು ಪ್ರತಿಬಿಂಬಿಸುತ್ತವೆ. ರಾಜೀವ್ ಅವರ ಚರ್ಚೆಗಳು ಮತ್ತು ಸಂವಾದಗಳಿಗೆ ವಾಸ್ತವಾಂಶಗಳು ಹಾಗೂ ಅಂಕಿಅಂಶಗಳೇ ಆಧಾರವಾಗಿದ್ದು ಸಂಸದೀಯರಾಗಿ ಕಾರ್ಯನಿರ್ವಹಿಸುವಲ್ಲಿನ ಅವರ ದೃಢಸಂಕಲ್ಪವನ್ನು ಇವು ಪ್ರತಿನಿಧಿಸುತ್ತವೆ. 2016ರಲ್ಲಿ ಪಾಕಿಸ್ತಾನವನ್ನು ಭಯೋತ್ಪಾದನೆ ಪ್ರಾಯೋಜಿಸುವ ರಾಷ್ಟ್ರ ಎಂದು ಘೋಷಿಸಬೇಕೆಂಬ ಖಾಸಗಿ ಮಸೂದೆಯನ್ನು ಮಂಡಿಸುವ ಕುರಿತು ಅವರ ಚರ್ಚೆಯು ದೇಶದ ಜನರಿಗೆ ನಿಜವಾಗಿಯೂ ಪ್ರೇರಣೆ ನೀಡಿದ ಅಂಶವೆನಿಸಿತು.

ರಾಜೀವ್ ಅವರ ಪತ್ರಗಳು ಮತ್ತು ಅವರ ದೃಢ ನಿಶ್ಚಯವು ಹಲವಾರು ಹೊಸ ಮಹತ್ವದ ಮೈಲುಗಲ್ಲುಗಳಿಗೆ ಕಾರಣವಾಗಿವೆ. ಸ್ಪೆಕ್ಟ್ರಂ ವಿತರಣೆ ಹಗರಣದ ಸಂದರ್ಭದಲ್ಲಿ ಶೂನ್ಯ ನಷ್ಟದ ತತ್ವವನ್ನು ಪ್ರಶ್ನಿಸುವುದಕ್ಕಾಗಿ ಅವರು ಬಿಂಬಿಸಿದ ವಾಸ್ತವಾಂಶಗಳು ಗಮನಾರ್ಹ. ನಮ್ಮೆಲ್ಲರ ನಗರವಾದ ಬೆಂಗಳೂರು ಉತ್ತಮ ಆಡಳಿತ ಮತ್ತು ಉತ್ತರದಾಯಿತ್ವಕ್ಕೆ, ನಾಗರೀಕರ ಹಕ್ಕುಗಳ ರಕ್ಷಣೆಯ ಬೇಡಿಕೆ ಮುಂದಿಟ್ಟ ರಾಜೀವ್ ತಮ್ಮ ಸತತ ಹೋರಾಟಗಳಿಂದಾಗಿ ಕರ್ನಾಟಕದ ಅತ್ಯಂತ ಜನಪ್ರಿಯ ಮತ್ತು ಜನಪರ ರಾಜಕಾರಣಿಯೆನಿಸಿದ್ದಾರೆ. ದೇಶದ ಸೇನೆ, ಸೈನಿಕರು

ಮತ್ತು ನಿವೃತ್ತ ಸೈನಿಕರ ಪರವಾಗಿ ಅವರು ನಡೆಸಿದ ವಿವಿಧ ಹೋರಾಟಗಳು ಗಮನಾರ್ಹ ಪರಿಣಾಮ ಬೀರಿದವು. ಇವರನ್ನು ಎಲ್ಲರೂ ಸಂಸತ್ತಿನಲ್ಲಿ "ಒಆರ್‌ಒಪಿ ರಾಜೀವ್" (ವನ್ ರಾಂಕ್ ವನ್ ಪೆನ್ಶನ್) ಎಂದು ಕರೆಯುವುದರಲ್ಲಿ ಯಾವುದೇ ಅಚ್ಚರಿಯೂ ಇಲ್ಲ.

ಕಳೆದ ಕೆಲವು ವರ್ಷಗಳಿಂದಲೂ ರಾಜೀವ್ ಅವರ ನಡೆನುಡಿಗಳನ್ನು, ಅವಿರತ ಕಾರ್ಯನಿರ್ವಹಣೆಯನ್ನು ಅವಲೋಕಿಸುತ್ತ ಬಂದಿರುವ ನನಗೆ ಈ ಪುಸ್ತಕಕ್ಕೆ ಚಿಕ್ಕ ಮುನ್ನುಡಿ ಬರೆಯುವ ಸದವಕಾಶ ದೊರೆತಿರುವುದಕ್ಕೆ ಹರ್ಷವೆನಿಸುತ್ತಿದೆ.

ರಾಜೀವ್ ಚಂದ್ರಶೇಖರ್ ಅವರ ಭವಿಷ್ಯದ ಪ್ರಯತ್ನಗಳಿಗೆ ನನ್ನ ಶುಭ ಹಾರೈಕೆಗಳು.

**– ಎಚ್ ಡಿ ದೇವೇಗೌಡ**

ಭಾರತದ ಮಾಜಿ ಪ್ರಧಾನಿ
ಲೋಕ ಸಭಾ ಸದಸ್ಯರು

# ಬಿಗ್ ಬೆಂಗಳೂರು ಫೈಟ್

# ಬಿಗ್ ಬೆಂಗಳೂರು ಫೈಟ್

## ವಿಷಯಸೂಚಿ – ಲೇಖನಗಳು


| | | |
|---|---|---|
| 1 | ವಿಂಗಡಣೆಯೇ ರಾಮಬಾಣವಲ್ಲ | 19 |
| 2 | ಬಿಕ್ಕಟ್ಟಿನಿಂದ ಬಿಕ್ಕಟ್ಟಿಗೆ: ಸರ್ಕಾರಗಳು ಹಾಗೂ ಮುಖಂಡರು ವಿಫಲವಾದುದು ಹೇಗೆ ? | 21 |
| 3 | ಬೆಂಗಳೂರಿಗೆ ಚುನಾವಣೆಯ ಸಾಂವಿಧಾನಿಕ ಹಕ್ಕನ್ನು ನಿರಾಕರಿಸಬೇಡಿ | 25 |
| 4 | ರಾಜಕೀಯವು ಪ್ರಜಾಸತ್ತೆ ಮತ್ತು ಸಂವಿಧಾನವನ್ನು ಗೆಲ್ಲಲು ಸಾಧ್ಯವಿಲ್ಲ: ಮುಕ್ತ, ನ್ಯಾಯಸಮ್ಮತ ಮತ್ತು ಸಕಾಲಿಕ ಚುನಾವಣೆಗಳು ಸಂವಿಧಾನದ ಮೂಲಭೂತ ಸಂರಚನೆಯ ಭಾಗವಾಗಿದ್ದು ಪ್ರಜಾಸತ್ತೆಯ ತಿರುಳೆನಿಸಿವೆ | 30 |
| 5 | ನಮ್ಮಲ್ಲಿ ಹೆಚ್ಚಿನವರು ಮತ ಚಲಾಯಿಸದಿರುವಾಗ ನಾವು ಒಳ್ಳೆಯ ಕಾರ್ಪೊರೇಟರುಗಳು ಮತ್ತು ಆಡಳಿತವಿರಬೇಕೆಂದು ನಿರೀಕ್ಷಿಸುವುದಾದರೂ ಹೇಗೆ? | 34 |
| 6 | ಚುನಾವಣೆ ಪ್ರಕ್ರಿಯೆಯನ್ನು ಅದುಮಲು ಯತ್ನಿಸುತ್ತಿರುವ ಸರ್ಕಾರ | 39 |
| 7 | ಬೆಳ್ಳಂದೂರು ಕೆರೆಯನ್ನು ಸಾಯಿಸಲಿರುವ ಸರ್ಕಾರದ ನಿರ್ಲಕ್ಷ್ಯ | 41 |
| 8 | ಸುಂದರವೂ ಅಲ್ಲ, ಸ್ವಚ್ಛವೂ ಅಲ್ಲ: ಬೆಂಗಳೂರು ಆಗುತ್ತಿದೆ ಜೀವಿಸಲಾಗದ ನಗರ | 46 |
| 9 | ನಿರ್ಲಕ್ಷ್ಯ ಮತ್ತು ಭ್ರಷ್ಟಾಚಾರದ ವಿರುದ್ಧ ಬೆಂಗಳೂರಿನ ವಿಜಯ | 50 |
| 10 | ಎಂಪಿಸಿಯ ಸಾಂವಿಧಾನಿಕ ಮಾನ್ಯತೆಯನ್ನು ಹತ್ತಿಕ್ಕಬೇಡಿ: ಎಂಪಿಸಿಯಲ್ಲಿನ ದೂರದರ್ಶಿತ್ವ ಸಮೂಹಕ್ಕೆ ಸದಸ್ಯರನ್ನು ನೇಮಿಸಿ | 54 |
| 11 | ಗುತ್ತಿಗೆದಾರರ ರಾಜಕಾರಣಿಗಳ ಲಾಭಕ್ಕೆ ಉಕ್ಕಿನ ಮೇಲ್ಸೇತುವೆ ಯೋಜನೆ | 58 |
| 12 | ವಂಚಕರಿಗೆ ಪುರಸ್ಕಾರ ಬೇಡ: ಅಕ್ರಮ ಸಕ್ರಮ ಬಡವರಿಗೆ ನೆರವಾಗಲಿ, ಕಾನೂನು ಉಲ್ಲಂಘಿಸುವವರಿಗೆ ಮತ್ತು ಹಪಾಹಪಿಯ ಬಿಲ್ಡರುಗಳಿಗಲ್ಲ | 61 |
| 13 | ಹೊಸ ವರ್ಷದ ಮುನ್ನಾದಿನ ಬೆಂಗಳೂರಲ್ಲಿ ಸೃಷ್ಟಿಯಾದ ರೌರವ ನರಕ | 65 |
| 14 | ಕಾನೂನು ಉಲ್ಲಂಘಿಸುವವರಿಗೆ ಮತ್ತು ಹಪಾಹಪಿಯ ಬಿಲ್ಡರುಗಳಿಗೆ ನೆರವಾಗುವ ಅಕ್ರಮ ಸಕ್ರಮಕ್ಕೆ 'ನೋ' ಎಂದ ಸುಪ್ರೀಂ ಕೋರ್ಟ್ | 69 |
| 15 | ಉಕ್ಕಿನ ಮೇಲ್ಸೇತುವೆ ಯೋಜನೆಯಲ್ಲಿ ರಾಜಾರೋಷದ ಭ್ರಷ್ಟಾಚಾರ: ಯಾವುದೇ ರಾಜಕಾರಣಿ ಕೂಡ ತಾನು ಪ್ರಾಮಾಣಿಕ ಎಂದು ಹೇಳಿಕೊಳ್ಳಲಾರ | 72 |
| 16 | ನೀರಿನಲ್ಲಿ ಹೊಗೆ ಮತ್ತು ಗಾಳಿಯಲ್ಲಿ ಬೆಂಕಿ | 76 |

# ಬಿಗ್ ಬೆಂಗಳೂರು ಫೈಟ್

## ವಿಷಯಸೂಚಿ – ಭಾಷಣಗಳು


| | | |
|---|---|---|
| 1 | ಮಾದರಿ ನಗರಪಾಲಿಕೆ ಮತ್ತು ಬೆಂಗಳೂರಿನ ಆಡಳಿತ | 83 |
| 2 | ನಮ್ಮ ಬೆಂಗಳೂರು ಪ್ರಶಸ್ತಿ ಪ್ರದಾನ ಸಮಾರಂಭ 2009ರಲ್ಲಿ ಮಾಡಿದ ಭಾಷಣ | 91 |
| 3 | ನಮ್ಮ ಬೆಂಗಳೂರು ಪ್ರಶಸ್ತಿ ಪ್ರಧಾನ ಸಮಾರಂಭ 2010ರಲ್ಲಿ ಮಾಡಿದ ಭಾಷಣ | 95 |
| 4 | ಕರ್ನಾಟಕ ರಾಜ್ಯ ಮತ್ತು ದೇಶದ ಇತರ ಭಾಗಗಳಲ್ಲಿ ರೇಷ್ಮೆ ಕೃಷಿಕರನ್ನು ರಕ್ಷಿಸುವ ಕುರಿತಾಗಿ ಸಂಸತ್ತಿನಲ್ಲಿ ಶೂನ್ಯ ವೇಳೆ ಪ್ರಸ್ತಾಪ | 99 |
| 5 | ಉತ್ತಮ ಆಡಳಿತ ಮತ್ತು ಘನ ತ್ಯಾಜ್ಯ ನಿರ್ವಹಣೆ ಮೂಲಕ ಸಾರ್ವಜನಿಕ ಆರೋಗ್ಯ ಸಮಸ್ಯೆಗೆ ಪರಿಹಾರ | 101 |
| 6 | ಮಾಫಿಯಾ ಮತ್ತು ಸ್ವಜನ ಹಿತಾಸಕ್ತಿಗಳಿಂದ ನಗರವನ್ನು ಪುನಃ ಪಡೆದುಕೊಳ್ಳಲು ಅಭಿಯಾನ | 108 |
| 7 | ಕಾರ್ಲ್‌ಟನ್ ನೆನಪಿನ ಸುರುಳಿಯಾಚೆ – ಸಾರ್ವಜನಿಕ ಸುರಕ್ಷತೆಗಾಗಿ ಸರ್ಕಾರಗಳನ್ನು ಹೊಣೆಯಾಗಿಸುವುದು | 113 |
| 8 | ದೇಶದಲ್ಲಿನ ಬರಗಾಲ ಮತ್ತು ಉಷ್ಣ ಮಾರುತ ಪರಿಸ್ಥಿತಿ ಹಾಗೂ ಅದರಿಂದ ಉಂಟಾಗಿರುವ ನೀರಿನ ಬವಣೆ ಕುರಿತಾಗಿ ಸಂಸತ್ತಿನಲ್ಲಿ ಕಿರು ಚರ್ಚೆ | 120 |

# ಬಿಗ್ ಬೆಂಗಳೂರು ಫೈಟ್

## ವಿಷಯಸೂಚಿ – ಪತ್ರಗಳು


| | | |
|---|---|---|
| 1 | ಕಾರ್ಲ್‌ಟನ್ ಟವರ್ಸ್‌ನಲ್ಲಿ ಅಗ್ನಿ ಅನಾಹುತದ ಕುರಿತು ಮುಖ್ಯಮಂತ್ರಿಯವರಿಗೆ ಪತ್ರ | 127 |
| 2 | 2020ರ ಬೆಂಗಳೂರಿಗಾಗಿ ಯೋಜನೆ ರೂಪಿಸಲು ನಗರಾಭಿವೃದ್ಧಿ ಸಚಿವರಿಗೆ ಪತ್ರ | 130 |
| 3 | ಜಕ್ಕೂರು ವೈಮಾನಿಕ ತರಬೇತಿ ಶಾಲೆಯ ಕುರಿತು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವರಿಗೆ ಪತ್ರ | 132 |
| 4 | ಪದವೀಧರ ಕ್ಷೇತ್ರದ ಮತದಾರರ ಯಾದಿಯ ಕುರಿತು ಬಿಬಿಎಂಪಿ ಆಯುಕ್ತರಿಗೆ ಪತ್ರ | 135 |
| 5 | ನಗರಗಳ ವಾರ್ಷಿಕ ಜೆಎನ್‌ಎನ್‌ಯುಆರ್‌ಎಂ ಸ್ಥಾನನಿಗದಿ ಕುರಿತು ನಗರಾಭಿವೃದ್ಧಿ ಸಚಿವರಿಗೆ ಪತ್ರ | 137 |
| 6 | ಬೆಂಗಳೂರು ಮೂಲಸೌಕರ್ಯ ಯೋಜನೆಗಳ ಅಗತ್ಯ ತತ್ವಗಳ ಕುರಿತು ಮುಖ್ಯಮಂತ್ರಿಯವರಿಗೆ ಪತ್ರ | 139 |
| 7 | ಕೆಜಿಎಫ್‌ಗೆ ಪರಮಾಣು ತ್ಯಾಜ್ಯ ಸುರಿಯುವ ಕುರಿತು ಕರ್ನಾಟಕದ ರಾಜ್ಯಪಾಲರಿಗೆ ಪತ್ರ | 146 |
| 8 | ಪ್ರಭಾವಿಗಳು ಹಾಗೂ ಸ್ಥಾಪಿತ ಹಿತಾಸಕ್ತಿಗಳಿಂದ ನಗರವನ್ನು ಕಾಪಾಡುವಂತೆ ಮುಖ್ಯಮಂತ್ರಿಯವರಿಗೆ ಪತ್ರ | 148 |
| 9 | ಫೋರಂ ಜಂಕ್ಷನ್ನಿನಿಂದ ಸರ್ಜಾಪುರ ರಸ್ತೆಯ ವರೆಗೆ ಅಂಡರ್‌ಪಾಸ್ ನಿರ್ಮಿಸುವಂತೆ ಮುಖ್ಯಮಂತ್ರಿಯವರಿಗೆ ಪತ್ರ | 152 |
| 10 | ದೋಷಪೂರಿತ ಕರಡು ಎಂಪಿಸಿ ನಿಯಮಗಳ ಕುರಿತು ಮುಖ್ಯಮಂತ್ರಿಯವರಿಗೆ ಪತ್ರ | 155 |
| 11 | ಕರಡು ಎಂಪಿಸಿ ನಿಯಮಗಳ ಕುರಿತು ನಗರಾಭಿವೃದ್ಧಿ ಸಚಿವರಿಗೆ ಪತ್ರ | 159 |
| 12 | ಭ್ರಷ್ಟಾಚಾರ ಹಾಗೂ ನಿಧಿಗಳ ದುರ್ಬಳಕೆಯಿಂದ ಬೆಂಗಳೂರಿಗೆ ಆಗುತ್ತಿರುವ ಹಾನಿಯ ಬಗ್ಗೆ ಮುಖ್ಯಮಂತ್ರಿಯವರಿಗೆ ಪತ್ರ | 162 |
| 13 | ಅರುಣಾಚಲ ಪ್ರದೇಶದ ವಿದ್ಯಾರ್ಥಿಯ ಸಾವಿನ ಕುರಿತು ಗೌರವಾನ್ವಿತ ಗೃಹ ಸಚಿವರಿಗೆ ಪತ್ರ | 167 |

# ಬಿಗ್ ಬೆಂಗಳೂರು ಫೈಟ್

## ವಿಷಯಸೂಚಿ – ಪತ್ರಗಳು


| | | |
|---|---|---|
| 14 | ಅಂಗವಿಕಲ ಮತದಾರರಿಗೆ ಸೌಲಭ್ಯವೊದಗಿಸುವ ಕುರಿತು ಚುನಾವಣಾಧಿಕಾರಿಗೆ ಪತ್ರ | 170 |
| 15 | ಬೆಂಗಳೂರಿನಲ್ಲಿರುವ ಕಸ ಮತ್ತು ತ್ಯಾಜ್ಯ ನಿರ್ವಹಣೆಯ ಬಿಕ್ಕಟ್ಟು ತಾರಕಕ್ಕೇರುತ್ತಿರುವ ಬಗ್ಗೆ ಮುಖ್ಯಮಂತ್ರಿಯವರಿಗೆ ಪತ್ರ | 173 |
| 16 | ಬೆಂಗಳೂರಿನಲ್ಲಿರುವ ಭಾರತೀಯರ ತಾರತಮ್ಯದ ಕುರಿತು ಮುಖ್ಯಮಂತ್ರಿಯವರಿಗೆ ಪತ್ರ | 176 |
| 17 | ಬೆಂಗಳೂರಿಗಾಗಿ ಬಹುವಾರ್ಷಿಕ ಶಾಸನಬದ್ಧ ಯೋಜನೆ ರೂಪಿಸಲು ಮುಖ್ಯಮಂತ್ರಿಯವರಿಗೆ ಪತ್ರ | 178 |
| 18 | ಎಂಪಿಸಿಯಲ್ಲಿ ನಾಗರೀಕರ ಪಾಲ್ಗೊಳ್ಳುವಿಕೆ ಕುರಿತು ಮುಖ್ಯಮಂತ್ರಿಯವರಿಗೆ ಪತ್ರ | 182 |
| 19 | ಬೆಂಗಳೂರಿನ ಪಾರಂಪರಿಕ ಕಟ್ಟಡಗಳ ರಕ್ಷಣೆ ಕುರಿತು ಮುಖ್ಯಮಂತ್ರಿಯವರಿಗೆ ಪತ್ರ | 186 |
| 20 | 1925ರ ಭಾರತೀಯ ಉತ್ತರಾಧಿಕಾರ ಕಾಯ್ದೆಯ ಕುರಿತು ಕಾನೂನು ಸಚಿವರಿಗೆ ಪತ್ರ | 190 |
| 21 | 1925ರ ಭಾರತೀಯ ಉತ್ತರಾಧಿಕಾರ ಕಾಯ್ದೆಯ ಕುರಿತು ಮುಖ್ಯಮಂತ್ರಿಯವರಿಗೆ ಪತ್ರ | 192 |
| 22 | ನೋಟಿಫಿಕೇಷನ್ ಹಾಗೂ ಡಿನೋಟಿಫಿಕೇಷನ್ ಪ್ರಕ್ರಿಯೆ ಭ್ರಷ್ಟಾಚಾರದ ಮೂಲವಾಗಿರುವ ಕುರಿತು ಮುಖ್ಯಮಂತ್ರಿಯವರಿಗೆ ಪತ್ರಗಳು | 195 |
| 23 | ಬಿಬಿಎಂಪಿ ಆಯುಕ್ತರ ವಿಚಾರಣೆಗೆ ಅನುಮತಿ ಕೋರಿ ಮುಖ್ಯಮಂತ್ರಿಯವರಿಗೆ ಪತ್ರ | 198 |
| 24 | ಡಿ. ಕೆ. ರವಿಯವರ ಮೃತ್ಯು ಮತ್ತು ಆಡಳಿತದ ಕುರಿತು ಮುಖ್ಯಮಂತ್ರಿಯವರಿಗೆ ಪತ್ರ | 206 |
| 25 | ಬಿಬಿಎಂಪಿ ಚುನಾವಣೆಗಳ ವಿಳಂಬದ ಕುರಿತು ಕರ್ನಾಟಕದ ರಾಜ್ಯಪಾಲರಿಗೆ ಪತ್ರ | 212 |

# ಬಿಗ್ ಬೆಂಗಳೂರು ಫೈಟ್

## ವಿಷಯಸೂಚಿ – ಪತ್ರಗಳು


| | | |
|---|---|---|
| 26 | 2015ರ ಪರಿಷ್ಕೃತ ಮಾಸ್ಟರ್ ಪ್ಲಾನ್ ಉಲ್ಲಂಘನೆ ಕುರಿತು ಬಿಬಿಎಂಪಿ ಆಯುಕ್ತರಿಗೆ ಪತ್ರ | 219 |
| 27 | ರಿಯಲ್ ಎಸ್ಟೇಟ್ ಯೋಜನೆಗಳು ಬೆಂಗಳೂರಿನ ಕೆರೆಗಳಿಗೆ ಬೆದರಿಕೆಯೊಡ್ಡಿರುವ ಕುರಿತು ಪರಿಸರ ಮತ್ತು ಅರಣ್ಯ ಖಾತೆಯ ಸಚಿವರಿಗೆ ಪತ್ರ | 222 |
| 28 | ಬೆಂಗಳೂರಿನ ಕೆರೆಗಳು ಮತ್ತು ಕೆರೆ ಅಚ್ಚುಕಟ್ಟು ಪ್ರದೇಶಗಳ ರಕ್ಷಣೆಗಾಗಿ ಶೂನ್ಯವೇಳೆಯ ಚರ್ಚೆಯಲ್ಲಿ ಪ್ರಸ್ತಾಪ | 226 |
| 29 | ಎಳೆಯರಲ್ಲಿನ ಮದ್ಯಪಾನ ಚಟದ ಕುರಿತು ಮುಖ್ಯಮಂತ್ರಿಯವರಿಗೆ ಪತ್ರ | 230 |
| 30 | ಎಳೆಯರಲ್ಲಿನ ಮದ್ಯಪಾನ ಚಟದ ಕುರಿತು ಅಬಕಾರಿ ಆಯುಕ್ತರಿಗೆ ಪತ್ರ | 233 |
| 31 | ಮಕ್ಕಳ ರಕ್ಷಣೆಗಾಗಿ ಸರ್ಕಾರ–ನಾಗರೀಕರ ಸಹಭಾಗಿತ್ವದ ಕುರಿತು ಮುಖ್ಯಮಂತ್ರಿಯವರಿಗೆ ಪತ್ರ | 235 |
| 32 | ಬಿಬಿಎಂಪಿ ಹಣಕಾಸುಗಳ ಸಿಎಜಿ ಲೆಕ್ಕಪರಿಶೋಧನೆಗೆ ಒತ್ತಾಯಿಸಿ ಮುಖ್ಯಮಂತ್ರಿಯವರಿಗೆ ಪತ್ರ | 238 |
| 33 | ರಾಜಾರೋಷ ಭ್ರಷ್ಟಾಚಾರ ಮತ್ತು ಸ್ಥಾಪಿತ ಹಿತಾಸಕ್ತಿಗಳ ಕಪಿಮುಷ್ಠಿಯ ಕುರಿತು ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರಿಗೆ ಪತ್ರ | 242 |
| 34 | ನಗರದ ಅಭಿವೃದ್ಧಿಯ ಕುರಿತು ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರಿಗೆ ಪತ್ರ | 248 |
| 35 | ಕೋರಮಂಗಲದ ಸಂಚಾರ ನಿರ್ವಹಣೆ ಕುರಿತು ರಾಜ್ಯದ ಗೃಹ ಸಚಿವರಿಗೆ ಪತ್ರ | 250 |
| 36 | ಭಾರತೀಯ ವಿಮಾನಯಾನ ಪ್ರಾಧಿಕಾರದ ಕುರಿತು ನಾಗರೀಕ ವಿಮಾನಯಾನ ಸಚಿವರಿಗೆ ಪತ್ರ | 253 |
| 37 | ನಗರ ಸ್ಥಳೀಯ ಸಂಸ್ಥೆಗಳಿಗೆ ನಿಧಿ ಮಂಜೂರಾತಿ ಕುರಿತು ರಾಜ್ಯ ಹಣಕಾಸು ಆಯೋಗಕ್ಕೆ ಪತ್ರ | 259 |

# ಬಿಗ್ ಬೆಂಗಳೂರು ಫೈಟ್

## ವಿಷಯಸೂಚಿ – ಪತ್ರಗಳು


| | | |
|---|---|---|
| 38 | ರಾಷ್ಟ್ರೀಯ ಹಸಿರು ನ್ಯಾಯಾಧಿಕರಣದ ಆದೇಶ ಜಾರಿ ಕುರಿತು ಮುಖ್ಯಮಂತ್ರಿಯವರಿಗೆ ಪತ್ರ | 265 |
| 39 | ರಾಷ್ಟ್ರೀಯ ಹಸಿರು ನ್ಯಾಯಾಧಿಕರಣದ ಆದೇಶ ಜಾರಿ ಕುರಿತು ಪರಿಸರ ಮತ್ತು ಅರಣ್ಯ ಸಚಿವರಿಗೆ ಪತ್ರ | 269 |
| 40 | ರಾಷ್ಟ್ರೀಯ ಹಸಿರು ನ್ಯಾಯಾಧಿಕರಣದ ಆದೇಶ ಜಾರಿ ಕುರಿತು ಬೆಂಗಳೂರು ಅಭಿವೃದ್ಧಿ ಸಚಿವರಿಗೆ ಪತ್ರ | 273 |
| 41 | ಬಸವೇಶ್ವರ ವೃತ್ತದಿಂದ ಹೆಬ್ಬಾಳದ ವರೆಗಿನ ಉಕ್ಕಿನ ಮೇಲ್ಸೇತುವೆ ವಿರೋಧಿಸಿ ಮುಖ್ಯಮಂತ್ರಿಯವರಿಗೆ ಪತ್ರ | 277 |
| 42 | ರೇರಾಗಾಗಿ ಕರ್ನಾಟಕದಲ್ಲಿ ಅಧಿಕಾರಿಯನ್ನು ನೇಮಿಸುವಂತೆ ಮುಖ್ಯಮಂತ್ರಿಯವರಿಗೆ ಪತ್ರ | 282 |
| 43 | ಮಹದಾಯಿ ನದಿಗೆ ಸಂಬಂಧಿಸಿ ಮುಖ್ಯಮಂತ್ರಿಯವರಿಗೆ ಪತ್ರ | 286 |
| 44 | ಅಸಮರ್ಪಕ ಬಿಎಂಪಿಸಿ ಸೂಚನೆ ಕುರಿತಂತೆ ಮುಖ್ಯಮಂತ್ರಿಯವರಿಗೆ ಪತ್ರ | 291 |
| 45 | ನಮ್ಮ ಬೆಂಗಳೂರು ನಾಗರೀಕರಿಗೆ ಪತ್ರ | 295 |
| 46 | ಉಕ್ಕಿನ ಮೇಲ್ಸೇತುವೆ ವಿವಾದಕ್ಕೆ ಸಂಬಂಧಿಸಿ ಸಾರ್ವಜನಿಕ ಆಡಳಿತಾಧಿಕಾರಿಗಳ ವಿರುದ್ಧ ಸ್ವಯಂಪ್ರೇರಣೆಯ ಕ್ರಮ ಜರುಗಿಸಲು ಲೋಕಾಯುಕ್ತರಿಗೆ ಮನವಿ ಪತ್ರ | 302 |
| 47 | ಉಕ್ಕಿನ ಮೇಲ್ಸೇತುವೆ ರದ್ದುಗೊಳಿಸುವಂತೆ ಕೋರಿ ಮುಖ್ಯಮಂತ್ರಿಯವರಿಗೆ ಬಹಿರಂಗ ಪತ್ರ | 308 |

# ಪರಿಚಯ

"ನಮ್ಮ ಸಂವಿಧಾನದಡಿ ನಾಗರೀಕರು ಹಕ್ಕುಗಳನ್ನು ಹೊಂದಿದ್ದಾರೆ. ಈ ಹಕ್ಕುಗಳಿಗಾಗಿ ನಾವು ಹೋರಾಟ ಆರಂಭಿಸಿ, ಅವುಗಳ ಕುರಿತು ಸರಕಾರಕ್ಕೆ ಮನವರಿಕೆ ಮಾಡಿಕೊಡುವ ಸಮಯವಿದು. ಸರಕಾರಿ ಅಧಿಕಾರಿಗಳು ಮತ್ತು ಬಿಲ್ಡರ್‌ಗಳ ನಡುವಿನ ಅಪವಿತ್ರ ಮೈತ್ರಿಯಿಂದ ನಮ್ಮ ನಗರವನ್ನು ರಕ್ಷಿಸುವುದಕ್ಕಾಗಿ ನಡೆಸುವ ಹೋರಾಟವಿದು. ಕಾನೂನು ಭ್ರಷ್ಟರ ವಿರುದ್ಧ ಸರಕಾರದಿಂದ ಕಠಿಣ ಕ್ರಮ ಹಾಗೂ ಉತ್ತರದಾಯಿತ್ವಕ್ಕಾಗಿ ನಗರವಾಸಿಗಳು ಒಟ್ಟಾಗಿ ಒತ್ತಾಯಿಸಬೇಕಿದೆ. ಈ ಪ್ರಮಾದಗಳಿಂದ ಅನ್ಯಾಯಕ್ಕೊಳಗಾದವರಿಗೆ ನ್ಯಾಯವನ್ನೂ ನಾವು ಕೇಳಬೇಕಿದೆ!"

ಈ ಮೇಲಿನ ನನ್ನ ಮಾತಿನ ಒಟ್ಟಾರೆ ತಾತ್ಪರ್ಯವೆಂದರೆ ಈ ದುರಂತಗಳಿಂದ ಬೆಂಗಳೂರಿನ ಮೇಲಾದ ಪರಿಣಾಮಗಳ ಕುರಿತು ಬೆಳಕು ಚೆಲ್ಲುವುದೇ ಆಗಿದೆ. ಬೆಂಗಳೂರಿನ ಬೆಳವಣಿಗೆ ಹಾಗೂ ಅಭಿವೃದ್ಧಿಯಲ್ಲಿ ನಾಗರೀಕರೇ ಪ್ರಮುಖ ಪಾಲುದಾರರು ಎಂಬುದು ನನ್ನ ಅಚಲ ನಂಬಿಕೆ. ಆದ್ದರಿಂದ ಅವರನ್ನು ನಗರದ ಬೆಳವಣಿಗೆ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಬೇಕು.

ಬೆಂಗಳೂರಿಗೆ ಏಷ್ಯಾದಲ್ಲೇ ಅತೀ ವೇಗವಾಗಿ ಬೆಳವಣಿಗೆ ಹೊಂದುತ್ತಿರುವ ನಗರವೆಂಬ ಹೆಗ್ಗಳಿಕೆ ಇದೆ. ಆದರೂ, ಜಾಗತೀಕರಣ ಮತ್ತು ಮಾಹಿತಿ ತಂತ್ರಜ್ಞಾನ ಕ್ರಾಂತಿಯ ನಿಜವಾದ ಲಾಭ ನಗರಕ್ಕೆ ಲಭಿಸಿಲ್ಲ. ಇದಕ್ಕೆ ಪ್ರಮುಖ ಕಾರಣವೆಂದರೆ ರಾಜಕಾರಣಿಗಳು, ಆಡಳಿತಶಾಹಿ, ಕೆಲವೇ ಕೆಲವು ರಿಯಲ್‌ಎಸ್ಟೇಟ್ ಉದ್ಯಮಿಗಳು ಮತ್ತು ಗುತ್ತಿಗೆದಾರರ ನಡುವಿನ ಅಪವಿತ್ರ ನಂಟು.

ಈ ದುಷ್ಟಕೂಟದ ಹಿತಾಸಕ್ತಿಗಳೇ ನೀತಿನಿರೂಪಣೆಯಲ್ಲಿ ಮುಖ್ಯ ಪಾತ್ರವಹಿಸುತ್ತಿದೆ. ಅದರಿಂದ ನಗರ ಯೋಜನೆ, ಅದನ್ನು ಕಾರ್ಯರೂಪಕ್ಕೆ ತರುವ ಪ್ರಕ್ರಿಯೆಯಲ್ಲಿ ಅಪಾರದರ್ಶಕತೆ ಮನೆ ಮಾಡಿದೆ.

ಸಾರಿಗೆ, ಸಂಚಾರ ವ್ಯವಸ್ಥೆ, ತ್ಯಾಜ್ಯ ನಿರ್ವಹಣೆ, ಪರಿಸರ ಹಾಗೂ ಸಾರ್ವಜನಿಕ ಆರೋಗ್ಯ, ಕೆರೆಗಳು ಹಾಗೂ ನೀರಿನ ಮೂಲಗಳ ನಾಶ, ನೀರಿನ ಕೊರತೆ ಬೆಂಗಳೂರಿನ ಪ್ರಮುಖ ಸಮಸ್ಯೆಗಳಾಗಿದ್ದು, ಈ ಮೂಲಭೂತ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಹೆಚ್ಚಿನ ಪರಿಶ್ರಮದ ಅಗತ್ಯವಿದೆ. ಯೋಜನೆ ಹಾಗೂ ಸಾಂಸ್ಥಿಕ ನಿರ್ವಹಣೆ ನಗರದ ಗಾತ್ರ ಹಾಗೂ ಅಗತ್ಯಕ್ಕೆ ತಕ್ಕ ಪ್ರಮಾಣದಲ್ಲಿ ನಡೆಯುತ್ತಿಲ್ಲ.

ನಗರ ಯೋಜನೆಯಲ್ಲಿ ನಾಗರೀಕರ ಸಕ್ರಿಯ ಪಾಲ್ಗೊಳ್ಳುವಿಕೆ ಮೂಲಕ ನಗರದ ಸರ್ವಾಂಗೀಣ ಬೆಳವಣಿಗೆಗೆ ಬಹುವಾರ್ಷಿಕ ಅಭಿವೃದ್ಧಿ ಯೋಜನೆ ರೂಪು ತಳೆಯುವುದನ್ನು ಖಚಿತಪಡಿಸುವ ಮೂಲಕ ಬೆಂಗಳೂರಿಗೆ ಗತ ವೈಭವವನ್ನು ಮರಳಿ ತಂದುಕೊಡುವುದೇ ಬೃಹತ್ ಬೆಂಗಳೂರು ಹೋರಾಟದ ಉದ್ದೇಶವಾಗಿದೆ. ಹಾಗೂ ತನ್ನ ಯೋಜನೆಗಳು ಮತ್ತು ಕೆಲಸಗಳಿಗೆ ಸರಕಾರವನ್ನು ಉತ್ತರದಾಯಿಯನ್ನಾಗಿ ಮಾಡುವುದರಿಂದ ದುರಾಡಳಿತದಿಂದ ಉದ್ಭವಿಸುವ ಸಮಸ್ಯೆಗಳನ್ನು ನಿವಾರಿಸಬಹುದು. ಜತೆಗೆ ಅಭಿವೃದ್ಧಿ ಯೋಜನೆಯಲ್ಲಿ ಸ್ಥಾಪಿತ ಹಿತಾಸಕ್ತಿಗಳ ಕೈಮೇಲಾಗದಂತೆ ತಡೆಯಬಹುದು.

ಅಪವಿತ್ರ ಮೈತ್ರಿಗೆ ಕಡಿವಾಣ ಹಾಕುವ ಮೂಲಕ ನಗರಾಡಳಿತ ಸಂಸ್ಥೆಗಳು ಮತ್ತು ಸರಕಾರದಲ್ಲಿ ಸುಧಾರಣೆ ತರುವ ಅಗತ್ಯವಿದೆ. ತಪ್ಪು ಹಾದಿಯಲ್ಲಿ ಸಾಗುತ್ತಿದ್ದ ಕರ್ನಾಟಕ ಸರಕಾರವನ್ನು ಸಕಾಲಿಕ ಹಸ್ತಕ್ಷೇಪಗಳ ಮೂಲಕ ಸರಿದಾರಿಗೆ ತಂದು ಜನರು ಗೆಲುವು ಸಾಧಿಸಿದ ಹಲವು ಉದಾಹರಣೆಗಳಿವೆ.

ಅವುಗಳಲ್ಲಿ ಕೆಲವನ್ನು ಈ ಕೆಳಗೆ ಉಲ್ಲೇಖಿಸಿದೆ.

ವಿವಾದಾಸ್ಪದ ಉಕ್ಕಿನ ಮೇಲ್ಸೇತುವೆ ಯೋಜನೆಯ ಕುರಿತಂತೆ ಕಡ್ಡಾಯ ಪರಿಸರ ಪರವಾನಗಿ ಪಡೆಯದಿರುವ ಬಗ್ಗೆ ಕರ್ನಾಟಕ ಸರಕಾರಕ್ಕೆ ಚೆನ್ನೈನ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ(ಎನ್‌ಜಿಟಿ, ಚೆನ್ನೈ) ಛೀಮಾರಿ ಹಾಕಿದ ಇತ್ತೀಚಿನ ಆದೇಶ.ನಗರವಾಸಿಗಳ ವ್ಯಾಪಕ ವಿರೋಧದ ಪರಿಣಾಮವಾಗಿ ಈ ಯೋಜನೆಯನ್ನೇ ಈಗ ಕೈಬಿಡಲಾಗಿದೆ. ಯೋಜನೆ ವಿರುದ್ಧ 2016 ಅಕ್ಟೋಬರ್‌ನಲ್ಲಿ ಸುಮಾರು 8000 ಮಂದಿ ಮಾನವ ಸರಪಳಿ ನಿರ್ಮಿಸಿದ್ದು ದೊಡ್ಡ ಇತಿಹಾಸ. #SteelFlyoverBeda

2016ರ ಮೇ ತಿಂಗಳಲ್ಲಿ ಆದೇಶ ನೀಡಿದ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ, ಕೆರೆಪಾತ್ರಗಳು ಹಾಗೂ ನೀರಿನ ಮೂಲಗಳ ರಕ್ಷಣೆಗೆ ಕಠಿಣ ಷರತ್ತುಗಳನ್ನು ವಿಧಿಸಿದೆ. ಬಫರ್‌ಝೋನ್ ಅಥವಾ ಜಲಾನಯನ ಪ್ರದೇಶಗಳಲ್ಲಿರುವ ಎಲ್ಲ ಒತ್ತುವರಿಯನ್ನೂ ಮುಲಾಜಿಲ್ಲದೇ ತೆರವುಗೊಳಿಸುವಂತೆ ಆದೇಶಿಸಿದೆ. ಇದನ್ನು ಪ್ರಶ್ನಿಸಿ ಸರಕಾರ ಮೇಲ್ಮನವಿ ಸಲ್ಲಿಸಿದರೂ, ಯಾವುದೇ ಪ್ರಯೋಜನವಾಗಿಲ್ಲ. ಕೆರೆ ಮೂಲಗಳ ಒತ್ತುವರಿಯನ್ನು ತೆರವುಗೊಳಿಸುವುದು ಸರಕಾರಕ್ಕೆ ಈಗ ಅನಿವಾರ್ಯವಾಗಿದೆ. ಹಸಿರು ನ್ಯಾಯಾಧೀಕರಣದ ಈ ಆದೇಶ ಬೆಂಗಳೂರಿಗರ ಪಾಲಿಗೆ ದೊಡ್ಡ ಸಾಧನೆಯೇ ಸರಿ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹಣಕಾಸು ದುಸ್ಥಿತಿ ಸಂಬಂಧ ಮಹಾಲೆಕ್ಕ ಪರಿಶೋಧಕರು ನೀಡಿದ ವರದಿಯನ್ನಾಧರಿಸಿ ಸಲ್ಲಿಸಿದ ಅರ್ಜಿ ಸಂಬಂಧ ರಾಜ್ಯ ಹೈಕೋರ್ಟ್, ರಾಜ್ಯ ಸರಕಾರ ಮತ್ತು ಬಿಬಿಎಂಪಿಗೆ ನೋಟಿಸ್ ಜಾರಿ ಮಾಡಿದೆ. ಸರಕಾರದ ಅನುದಾನ ಮತ್ತು ತೆರಿಗೆ ಸಂಗ್ರಹದ ಮೂಲಕ ನಗರದಲ್ಲಿ ಸಾರ್ವಜನಿಕ ಸೌಲಭ್ಯಗಳನ್ನು ನಿರ್ಮಿಸಿ, ನಿರ್ವಹಣೆ ಮಾಡುವುದು ಬಿಬಿಎಂಪಿಯ ಪ್ರಥಮ ಹೊಣೆಗಾರಿಕೆ.

ಬೆಂಗಳೂರಿನ ಸಂಸದರಲ್ಲಿ ಒಬ್ಬನಾದ ನಾನು, ಜಾಗತಿಕವಾಗಿ ಅತೀ ವೇಗವಾಗಿ ಬೆಳೆಯುತ್ತಿರುವ ಒಂದು ನಗರವಾದ ಬೆಂಗಳೂರು ಎದುರಿಸುತ್ತಿರುವ ನಾನಾ ಸಮಸ್ಯೆಗಳ ನಿವಾರಣೆಗೆ ಯೋಜಿತ ಮತ್ತು ಕೌಶಲ್ಯದಿಂದ ಕೂಡಿದ ಕಾರ್ಯಕ್ರಮಕ್ಕಾಗಿ ಗಟ್ಟಿಧ್ವನಿಯಲ್ಲಿ ಒತ್ತಾಯಿಸುತ್ತಾ ಬಂದಿದ್ದೇನೆ. ನಾಗರೀಕ ಕೇಂದ್ರಿತ ನೀತಿನಿರೂಪಣೆಯನ್ನು ಆಧರಿಸಿ ಆಡಳಿತದಲ್ಲಿ ಸುಧಾರಣೆ ತರಲು ಅಧಿಕಾರ ವಿಕೇಂದ್ರೀಕರಣ ತುರ್ತು ಅಗತ್ಯವಿದೆ. ಆಡಳಿತ ಮತ್ತು ಸರಕಾರಿ ಸಂಸ್ಥೆಗಳಲ್ಲಿ ಪೂರ್ಣ ಪಾರದರ್ಶಕತೆ ಮತ್ತು ಉತ್ತರದಾಯಿತ್ವದ ಅಗತ್ಯವಿದೆ ಎಂಬುದು ನನ್ನ ಬಲವಾದ ವಾದ.

ಇತ್ತೀಚಿನ ತಿಂಗಳುಗಳಲ್ಲಿ ಉಕ್ಕಿನ ಮೇಲ್ಸೇತುವೆ ಯೋಜನೆ ವಿರುದ್ಧ ಸ್ಫೋಟಗೊಂಡ ಇತ್ತೀಚಿನ ಜನಾಕ್ರೋಶ ಇದಕ್ಕೆ ಅತ್ಯುತ್ತಮ ಉದಾಹರಣೆ. ತಮ್ಮ ನಗರದ ಅಭಿವೃದ್ಧಿ ಕುರಿತಂತೆ ಏನು ಬೇಕು ಎಂಬುದನ್ನು ಖಚಿತವಾಗಿ ತಿಳಿಸುವ ಹಕ್ಕನ್ನು ಬೆಂಗಳೂರಿಗರು ಈಗಲೂ ಕಾಯ್ದಿರಿಸಿಕೊಂಡಿದ್ದಾರೆ. ನಾವಿಂದು ಏನು ನೋಡುತ್ತಿದ್ದೇವೆಯೋ ಅದಕ್ಕಿಂತ ಉತ್ತಮವಾದದನ್ನು ಪಡೆಯಲು ನಮ್ಮ ಜನರು, ನಗರ ಮತ್ತು ರಾಜ್ಯ ಅರ್ಹರಾಗಿದ್ದಾರೆ. ನಾಗರೀಕರ ಸಹಭಾಗಿತ್ವದೊಂದಿಗೆ ಕೆಲಸ ಮಾಡುವ ಸರಕಾರ ಮತ್ತು ಸಂಸ್ಥೆಗಳನ್ನು ಹೊಂದಲು ಅವರು ಅರ್ಹರೇ ಹೊರತು, ಈಗಿನಂತೆ ಸರಕಾರ ಮತ್ತು ನಿವಾಸಿಗಳ ನಡುವಿನ ಸಂಘರ್ಷ ಪರಿಸ್ಥಿತಿಯನ್ನಲ್ಲ.

ಬೆಂಗಳೂರಿನ ಕುರಿತಾಗಿ ನನಗೊಂದು ಅಮಿತ ಪ್ರೀತಿಯಿದ್ದು, ನಗರಕ್ಕಾಗಿ ಸೇವೆ ಸಲ್ಲಿಸಲು ಉತ್ಸುಕನಾಗಿದ್ದೇನೆ. ಈ ನಗರವನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಹೋರಾಟ ನಡೆಸಲು ನಮ್ಮ ನಗರ ಮೌಲ್ಯಯುತವಾಗಿದೆ ಎಂಬುದು ನನ್ನ ನಂಬಿಕೆ.

# ಬಿಗ್ ಬೆಂಗಳೂರು ಫೈಟ್

## ಲೇಖನಗಳು

# 1

# ವಿಂಗಡಣೆಯೇ ರಾಮಬಾಣವಲ್ಲ

| ಡಿಎನ್‌ಎ | ಜನವರಿ 23, 2013 |
|---|---|

ಬೆಂಗಳೂರು ಎದುರಿಸುತ್ತಿರುವ ಸಮಸ್ಯೆಗಳಿಗೆ ನಗರದ ರಚನೆ ಅಥವಾ ಆಕಾರಕ್ಕಿಂತಲೂ ಮೂಲಭೂತ ವಿಷಯಗಳಾದ ಸಾರ್ವಜನಿಕ ಕ್ಷೇತ್ರಗಳಲ್ಲಿನ ಗುತ್ತಿಗೆಗಳು ಮತ್ತು ಅದಕ್ಕೆ ಅನುಗುಣವಾಗಿ ಯೋಜನೆಗಳನ್ನು ಪೂರ್ಣಗೊಳಿಸುವಂತಹ ವಿಷಯಗಳಲ್ಲಿನ ಮತ್ತು ಸಂಸ್ಥೆಗಳ ಕ್ಷಮತೆಯು ಕಾರಣವಾಗಿದೆ. ಉತ್ತಮ ಆಡಳಿತಕ್ಕಾಗಿ ಬಿಬಿಎಂಪಿಯನ್ನು ಎರಡು ಸಣ್ಣ ವಿಭಾಗಗಳಾಗಿ ವಿಭಜಿಸುವ ಯೋಚನೆಯು ಉತ್ತಮವಾಗಿದ್ದರೂ ಬೆಂಗಳೂರಿನ ಈಗಿನ ಆಡಳಿತದ ಸಮಸ್ಯೆಗಳಿಗೆ ಅದುವೇ ಪರಿಹಾರ ಎಂದು ನಂಬುವುದಾದರೆ, ಅಸ್ತಿತ್ವದಲ್ಲಿರುವ ಸಮಸ್ಯೆಗಳನ್ನು ಸಮಗ್ರವಾಗಿ ತಿಳಿದಿಲ್ಲ ಎಂದೇ ಅರ್ಥ.

ಬೆಂಗಳೂರಿನ ನಾಗರೀಕರು ಎದುರಿಸುತ್ತಿರುವ ಸಮಸ್ಯೆಗಳ ಮೂಲ ಕಾರಣವು ಹಲವು ವರ್ಷಗಳ ನಿರ್ಲಕ್ಷ್ಯತೆ. ಇದನ್ನು ಕೇವಲ ಮೂಲಭೂತವಾದ ಬದಲಾವಣೆಗಳು ಮತ್ತು ಬಿಬಿಎಮ್‌ಪಿಯ ಕಾರ್ಯವೈಖರಿಯಲ್ಲಿ ಬದಲಾವಣೆಯ ಮೂಲಕ ಮಾತ್ರ ಬದಲಾಯಿಸಲು ಸಾಧ್ಯ. ಕಾರ್ಯವೈಖರಿಯಲ್ಲಿ ಮುಖ್ಯವಾಗಿ

ಯೋಜನೆಗಳ ಅಭಾವ, ಒಪ್ಪಂದಗಳಲ್ಲಿ ಅಪಾರದರ್ಶಕತೆ, ಸಾರ್ವಜನಿಕ ಹಣ ಮತ್ತು ಸ್ವತ್ತುಗಳ ದುರುಪಯೋಗ ಮತ್ತು ನಾಗರೀಕರ ಪಾಲ್ಗೊಳ್ಳುವಿಕೆಯ ಕೊರತೆಗಳು ಕಂಡುಬರುತ್ತಿವೆ.

ಬೆಂಗಳೂರನ್ನು ಕೇವಲ ಈ ರೀತಿ ಎರಡು ವಲಯಗಳಾಗಿ ವಿಂಗಡಿಸಿ ನಗರ ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಿಲ್ಲ. ಊಹಿಸಿದಂತೆ, ನಗರವನ್ನು ಚಿಕ್ಕಚಿಕ್ಕ ಘಟಕಗಳಾಗಿ ಮಾಡಿದಲ್ಲಿ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಿದೆ. ಇದೇ ವಾದದೊಂದಿಗೆ ಇತ್ತೀಚೆಗಷ್ಟೇ ಬಿಬಿಎಂಪಿ ವ್ಯಾಪ್ತಿಯನ್ನು ವಿಸ್ತಾರಗೊಳಿಸಲಾಗಿದೆ ಮತ್ತು ಉತ್ತಮ ಆಡಳಿತಕ್ಕಾಗಿ ಈಗಾಗಲೇ ಬಿಬಿಎಂಪಿ ಪ್ರತ್ಯೇಕ ವಾರ್ಡುಗಳಾಗಿ ಗುರುತಿಸಲ್ಪಟ್ಟಿದೆ ಎಂಬುದನ್ನು ನಾವು ನೆನಪಿನಲ್ಲಿಡಬೇಕು.

ಇವು ನಮ್ಮ ನಗರವು ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳಾಗಿದ್ದು ನಗರವನ್ನು ವಿಭಜಿಸುವ ಮೂಲಕ ಇವುಗಳನ್ನು ಪರಿಹರಿಸಲು ಸಾಧ್ಯವಿಲ್ಲ ಎಂಬುದು ಸ್ಪಷ್ಟವಾಗಿದೆ. ನಾವು ಆಡಳಿತವನ್ನು ಮರುಸಂಘಟನೆ ಮತ್ತು ಸುಧಾರಣೆ ಮಾಡುವ ಅಗತ್ಯವೂ ಇದೆ. ಪ್ರತಿಯೊಂದು ಯಶಸ್ವಿ ಆಧುನಿಕ ನಗರದಲ್ಲಿ, ಜನರು ತಮ್ಮ ಮನೆಯ ಸುತ್ತ ಮತ್ತು ಕೆಲಸ ಮಾಡುವ ಸ್ಥಳಗಳ ಸುತ್ತಲ ಅಭಿವೃದ್ಧಿ ವಿಚಾರದಲ್ಲಿ ಮತ್ತು ನಿರ್ದೇಶನದ ವಿಚಾರವನ್ನು ಹೇಳಲು ಶಕ್ತಿಯುತ ಧ್ವನಿಯನ್ನು ಹೊಂದಿರುತ್ತಾರೆ. ಉತ್ತಮ ಯೋಜನೆ ಮತ್ತು ಅನುಷ್ಠಾನದೊಂದಿಗೆ ಬೆಂಗಳೂರನ್ನು ಉತ್ತಮವಾಗಿ ನಿರ್ವಹಿಸಬಹುದು. ಇದರಿಂದಾಗಿ ನಿರ್ವಹಣೆಯಲ್ಲಿ ಮತ್ತು ಆಡಳಿತದಲ್ಲಿ ಸಾರ್ವಜನಿಕರ ವಿಶ್ವಾಸ ಸಹಜವಾಗಿಯೇ ಹೆಚ್ಚಾಗುತ್ತದೆ. ಅಸ್ತಿತ್ವದಲ್ಲಿರುವ ಬಿಬಿಎಂಪಿ ಪ್ರದೇಶಗಳಲ್ಲಿಯೇ ಇದು ನಡೆಯಬಹುದು.

# 2

# ಬಿಕ್ಕಟ್ಟಿನಿಂದ ಬಿಕ್ಕಟ್ಟಿಗೆ: ಸರ್ಕಾರಗಳು ಹಾಗೂ ಮುಖಂಡರು ವಿಫಲವಾದುದು ಹೇಗೆ?

ಡಿಎನ್‌ಎ 21 ಜೂನ್ 2014

ಬೆಂಗಳೂರನ್ನು ಗಾರ್ಡನ್ ಸಿಟಿ, ಐಟಿ ಕ್ಯಾಪಿಟಲ್, ಭಾರತದ ಸಿಲಿಕಾನ್ ವ್ಯಾಲಿ ಹೀಗೆ ಹೇಗೆ ಬೇಕಾದರೂ ಕರೆಯಿರಿ. ಆದರೆ, ಬೆಂಗಳೂರು ತನ್ನ ಶ್ರೀಮಂತ ಸಾಂಸ್ಕೃತಿಕ ಪರಂಪರೆ, ಪ್ರವರ್ಧಮಾನಕ್ಕೆ ಬರುತ್ತಿರುವ ಆರ್ಥಿಕ, ತಾಂತ್ರಿಕ ಮತ್ತು ಉದ್ಯಮಶೀಲ ಶಕ್ತಿಯೊಂದಿಗೆ ಅಭಿವೃದ್ಧಿಕಾಣುವ ಮೂಲಕ ಹೊಸ ಭಾರತದ ನಿರ್ಮಾಣದ ಸಂಕೇತವಾಗಿದೆ. ಆದರೆ ಇಂದು ನಗರವು ಅಸ್ತವ್ಯಸ್ತಗೊಂಡಿರುವುದು ವಿಫಲ ಆಡಳಿತದ ಸಂಕೇತವಾಗಿದೆ.

ಬೆಂಗಳೂರು, ಇಸ್ರೋ ಮೂಲಕ ಚಂದ್ರನಲ್ಲಿಗೆ ರಾಕೆಟ್ ಕಳುಹಿಸುತ್ತಿದೆ, ಪ್ರಪಂಚದಾದ್ಯಂತ ಕಂಪನಿಗಳಿಗೆ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುತ್ತಿದೆ, ಆದರೆ ಇಲ್ಲಿಯ ತ್ಯಾಜ್ಯ ಮತ್ತು ಕಸವನ್ನು ನಿರ್ವಹಿಸಲು ಆಗುತ್ತಿಲ್ಲ. ಮತ್ತೊಂದೆಡೆ, ಅತಿರೇಕದ ಭ್ರಷ್ಟಾಚಾರ, ಪಾರದರ್ಶಕತೆ ಇಲ್ಲದಿರುವುದು, ದೋಷಪೂರಿತ ಗುತ್ತಿಗೆ ವ್ಯವಸ್ಥೆ ಸಮಸ್ಯೆ ಮತ್ತು ಪಟ್ಟಭದ್ರ ಹಿತಾಸಕ್ತಿಗಳು ಹಾಗೂ ನ್ಯಾಯಸಮ್ಮತವಲ್ಲದ ಆಡಳಿತ ಇವೆಲ್ಲವೂ ಜನರಲ್ಲಿ ಆಕ್ರೋಶ ಮೂಡಿಸಿವೆ.

ಕಸದ ಸಮಸ್ಯೆಯ ಬಗ್ಗೆ ಬರೆಯಬೇಕಾದರೆ, ಹಿಂದಿನ ಘಟನೆಗಳೇ ಪುನರಾವರ್ತನೆಯಾದ ಕುತೂಹಲಕಾರಿ ಭಾವನೆಯನ್ನು (ದೇಜಾವು) ತರುತ್ತಿದೆ. ಕೆಲವೇ ತಿಂಗಳುಗಳಲ್ಲಿ ಮತ್ತೆ ಬೇರೆ ಸಮಸ್ಯೆಗಳು ಕಂಡುಬರುತ್ತವೆ. ವಾಹನ ದಟ್ಟಣೆ, ಕಸ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ಸಾರ್ವಜನಿಕ ರಕ್ಷಣೆ, ಗುತ್ತಿಗೆಗಳಲ್ಲಿನ ಭ್ರಷ್ಟಾಚಾರಗಳಂತಹವು ಮೂಲಭೂತ ಸಮಸ್ಯೆಗಳಾದರೆ, ಯೋಜನೆ ಮತ್ತು ಸಾರ್ವಜನಿಕ ಸೇವೆಗಳನ್ನು ನೆರವೇರಿಸುವ ಸಾಂಸ್ಥಿಕ ಕಾರ್ಯಕ್ಷಮತೆಯಂತಹ ಸಮಸ್ಯೆಗಳನ್ನು ಬೆಂಗಳೂರು ಇನ್ನೊಂದೆಡೆ ಎದುರಿಸುತ್ತಿದೆ. ತ್ಯಾಜ್ಯ ನಿರ್ವಹಣೆಯು ಕೇವಲ ಒಂದು ವಿಷಯವು ನಗರ ಬೆಳವಣಿಗೆಯ ಸೂಕ್ತ ಯೋಜನೆ ಇಲ್ಲದಿರುವುದನ್ನು ತೋರಿಸುತ್ತದೆ.

ನಮ್ಮ ನಗರಕ್ಕೆ ಸರಿಯಾದ ಯೋಜನೆ ಎಂಬುದಿಲ್ಲ. ಯಾಕೆ? ಇದು ಸರ್ಕಾರದ ಬಹಳಷ್ಟು ಜನರಿಗೆ ಹೊಂದಿಕೆಯಾಗುತ್ತದೆ ಮತ್ತು ಪಟ್ಟಭದ್ರ ಹಿತಾಸಕ್ತಿಯ ಯೋಜನೆಗಳನ್ನು ಹೊಂದದಿರುವ ಯೋಚನೆಗೆ ಪ್ರಭಾವ ಬೀರುತ್ತದೆ. ಯೋಜನೆಗಳಿಲ್ಲ ಎಂದರೆ ಉತ್ತರದಾಯಿತ್ವ ಇಲ್ಲ ಎಂದರ್ಥ. ಯೋಜನೆಗಳಿಲ್ಲ ಎಂದರೆ ಗುತ್ತಿಗೆಗಳನ್ನು ಮಾಡಿಕೊಳ್ಳಲು ವಿವೇಚನೆಯನ್ನು ಬಳಸುವುದು. ಯೋಜನೆಗಳಿಲ್ಲ ಎಂದರೆ ಪರಿಶೀಲನೆ ಅಥವಾ ಪಾರದರ್ಶಕತೆ ಇಲ್ಲವೆಂದೇ ಅರ್ಥ. ಆಯೋಜಿತವಲ್ಲದ ನಗರದ ಬೆಳವಣಿಗೆಯ ಹೊರೆ ಮತ್ತು ಪರಿಣಾಮ ಉಂಟಾಗಿರುವುದು ನಮ್ಮಿಂದಲೇ. ನಗರವನ್ನು ರೂಪಿಸುವುದು ನಾಗರೀಕರೇ.

ರಾಜಕೀಯ ನಾಯಕತ್ವವಾಗಲೀ ಅಧಿಕಾರಶಾಹಿ ನಾಯಕತ್ವವಾಗಲೀ ನಮ್ಮ ನಗರಾಭಿವೃದ್ಧಿಗೆ ಮತ್ತು ಸಂಬಂಧಿಸಿದ ಸಮಸ್ಯೆಗಳಿಗೆ ಸಮಗ್ರ ಯೋಜನೆಯನ್ನು ಹೊಂದಿಲ್ಲ. ಯೋಜನೆಯನ್ನು ಅಳವಡಿಸಿಕೊಳ್ಳಲು ಮತ್ತು ಅಭಿವೃದ್ಧಿ ಹಾಗೂ ಹೂಡಿಕೆಯ ಮೇಲೆ ಯೋಜಿತ ವಿಧಾನಗಳಿಲ್ಲದಿರುವುದು ಸ್ಪಷ್ಟವಾಗಿದೆ. 2010ರಲ್ಲಿ ಉತ್ತಮ ತಿಳುವಳಿಕೆ ಮತ್ತು ಸದುದ್ದೇಶವಿರುವ ನಾಗರೀಕರು ಅಬೈಡ್(ABIDe) ಜೊತೆ ಕೆಲಸ ಮಾಡಿ, ಬೆಂಗಳೂರು ಯೋಜನೆ – 2020ನ್ನು (ಪ್ಲಾನ್ ಬೆಂಗಳೂರು 2020) ಪ್ರಾರಂಭಿಸಿದರು. ಘನ ತ್ಯಾಜ್ಯ ನಿರ್ವಹಣೆಯೂ ಒಳಗೊಂಡಂತೆ ಬೆಂಗಳೂರಿಗೆ ಸಂಬಂಧಿಸಿದ ಎಲ್ಲಾ ಸಮಸ್ಯೆಗಳ ಮೇಲೆ ಸಮಗ್ರ ದೃಷ್ಟಿಕೋನವುಳ್ಳ ಯೋಜನೆ ಇದಾಗಿತ್ತು. ಪ್ರಸ್ತುತ ವಿಧಾನದಿಂದ ನಗರಕ್ಕೆ ಮತ್ತು ನಗರದ ನಿವಾಸಿಗಳ ಸಮಸ್ಯೆಗಳಿಗೆ, ನಗರಾಡಳಿತದ ಯೋಜನೆ ಮತ್ತು ಸುಧಾರಣೆಗಳ ಅಗತ್ಯತೆಯನ್ನು ಈ ಯೋಜನೆಯು ಎತ್ತಿಹಿಡಿದಿತ್ತು. ಸಮಸ್ಯೆಗಳನ್ನು ತಕ್ಷಣದಲ್ಲಿ ಪರಿಹರಿಸದಿದ್ದರೆ, ಈಗ

ಕಸದ ಸಮಸ್ಯೆ ಬಿಕ್ಕಟ್ಟಾಗಿರುವ ಹಾಗೆ ಎಲ್ಲಾ ಸಮಸ್ಯೆಗಳು ಮತ್ತಷ್ಟು ಕಠಿಣವಾಗುವುವು ಹಾಗೂ ದುಬಾರಿಯಾಗುವವು ಎಂಬುದನ್ನು ತಿಳಿಸಿತ್ತು.

ವರದಿಗಳನ್ನು ಸ್ವೀಕರಿಸಿದ್ದರೂ ಶಿಫಾರಸ್ಸುಗಳನ್ನು ಕಾರ್ಯಗತಗೊಳಿಸಲು ಪ್ರತಿ ಸರ್ಕಾರವೂ ವಿಫಲಗೊಂಡಿದೆ. ಚುನಾವಣಾ ಸಮಯದಲ್ಲಿ ಕೊಡುವ ಭರವಸೆಗಳನ್ನು ಹೊರತುಪಡಿಸಿ, ಬೆಂಗಳೂರಿನ ಬಗ್ಗೆ ಕಾಳಜಿ ವಹಿಸುತ್ತಿದ್ದೇವೆಂದು ಹೇಳುವವರು ಮಾಧ್ಯಮಗಳಲ್ಲಿ ಅಥವಾ ಬೇರೆಡೆಯಲ್ಲಿ ನಮ್ಮ ನಗರಾಡಳಿತವು ಇಂತಹ ಸಮಸ್ಯೆಗಳನ್ನು ಎದುರಿಸುತ್ತಿದೆ ಎಂಬ ಬಗ್ಗೆ ಮಾತನಾಡುವುದೇ ಇಲ್ಲ. ನಾಯಕತ್ವದ ಕೊರತೆ, ದೂರದೃಷ್ಟಿ ಮತ್ತು ಯೋಜನೆ ರೂಪಿಸುವುದರಲ್ಲಿನ ವಿಫಲತೆಗಳ ಫಲಿತಾಂಶವಾಗಿ ಉಂಟಾಗಿರುವ ಅವ್ಯವಸ್ಥೆಯನ್ನು ನಾಗರೀಕರು ಭರಿಸುವಂತಾಗಿದೆ.

ಕಸದ ಬಿಕ್ಕಟ್ಟು ಉಲ್ಬಣಗೊಳ್ಳುತ್ತಿದ್ದಂತೆಯೇ ಸ್ವಲ್ಪ ಕಾಲ ಮಾಧ್ಯಮಗಳು ಅವುಗಳನ್ನು ವೈಭವೀಕರಿಸುವುದರಿಂದ ಮತ್ತು ಸಮಸ್ಯೆಯನ್ನು ನಿಭಾಯಿಸುವ ಸಲಹೆಗಳು ಪುನಃ ಪುನಃ ಬರುವುದರಿಂದ ಅವು ಮತ್ತೆ ಮತ್ತೆ ನಮ್ಮನ್ನೇ ಸುತ್ತಿಕೊಳ್ಳುತ್ತಿವೆ.

ನಗರಕ್ಕೆ ಅತಿ ಅವಶ್ಯಕವಾಗಿ ಬೇಕಾಗಿರುವುದು ಆಡಳಿತದಲ್ಲಿ ಸುಧಾರಣೆ ಮತ್ತು ಇದರ ಅಭಿವೃದ್ಧಿಗೆ ಯೋಜನೆಗಳನ್ನು ಹೊಂದಿದ ವಿಧಾನ. ಸರ್ಕಾರವು ಮೆಟ್ರೋಪಾಲಿಟನ್ ಪ್ಲಾನಿಂಗ್ ಕಮಿಷನ್ (ಎಂಪಿಸಿ) ಅನ್ನು ಸ್ಥಾಪಿಸಿದರೆ ಮಾತ್ರ ಜನರ ಪಾಲ್ಗೊಳ್ಳುವಿಕೆಯ ನಿಜವಾದ ಉದ್ದೇಶವನ್ನು ಪ್ರತಿಬಿಂಬಿಸಬಹುದು. ಈ ರೀತಿ ಮರುಸ್ಥಾಪನೆಗೊಂಡ ಎಂಪಿಸಿಯು ಬಹುವಾರ್ಷಿಕ ಶಾಸನಬದ್ಧ ದೃಷ್ಟಿಕೋನದ ಯೋಜನೆ ಮತ್ತು ಸುಧಾರಣೆಗಳನ್ನು ಜಾರಿಗೆ ತರಬೇಕು.

ಉತ್ತಮ ಆಡಳಿತದ ವಾಗ್ದಾನ ಮಾಡಿ ಗೆದ್ದು ಬಂದ ಸಿದ್ದರಾಮಯ್ಯನವರ ಸರ್ಕಾರ, ನಗರವನ್ನೂ ನಾಗರೀಕರನ್ನೂ ತಾವು ಅವನತಿಯ ಕೂಪಕ್ಕೆ ತಳ್ಳುತ್ತಿರುವುದನ್ನು ಮನಗಾಣಬೇಕು.

ನಮ್ಮ ನಗರವು ನಾಶವಾಗುತ್ತಿರುವಾಗ ನಾಗರೀಕರು ಪ್ರಶ್ನಿಸದೇ ಇರುವುದಿಲ್ಲ. ಸರ್ಕಾರ ಮತ್ತು ಚುನಾಯಿತ ಪ್ರತಿನಿಧಿಗಳು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸದೇ ಇದ್ದಲ್ಲಿ ರಾಜಕೀಯ-ಆಡಳಿತಗಳ ವಿರುದ್ಧ ದೇಶದ ಬೇರೆಡೆಯಲ್ಲಿ ನೋಡಿದಂತಹ ಬಂಡಾಯ ಮತ್ತು ಆಂದೋಲನವನ್ನು ನಿರೀಕ್ಷಿಸಬಹುದು.

ಮಾಧ್ಯಮ ಮತ್ತು ನಾಗರೀಕರು ಈ ಬಿಕ್ಕಟ್ಟನ್ನು ಪರಿಹರಿಸುವ ಚರ್ಚೆಯಲ್ಲಿ ಮಹತ್ವದ ಪಾತ್ರವನ್ನು ವಹಿಸಿದರಷ್ಟೇ ಸಾಲದು. ಜೊತೆಗೇ, ನಗರದ ಸಮಗ್ರ ಅಭಿವೃದ್ಧಿಗೆ, ಧೀರ್ಘಾವಧಿಯ ದೃಷ್ಟಿಕೋನಕ್ಕೆ ರಾಜಕೀಯ ನಾಯಕತ್ವವನ್ನೂ 'ತೀಕ್ಷ್ಣ'ಗೊಳಿಸಬೇಕು. ಮತ್ತೊಮ್ಮೆ ನಾವು ಹೆಮ್ಮೆ ಪಡುವಂತಹ ಬೆಂಗಳೂರನ್ನು ಪುನರ್‌ಸ್ಥಾಪಿಸೋಣ. ಇದನ್ನು ಮಾಡಬಹುದು ಮತ್ತು ಮಾಡಲೇಬೇಕು.

# 3

# ಬೆಂಗಳೂರಿಗೆ ಚುನಾವಣೆಯ ಸಾಂವಿಧಾನಿಕ ಹಕ್ಕನ್ನು ನಿರಾಕರಿಸಬೇಡಿ

**ಟೈಮ್ಸ್ ಆಫ್ ಇಂಡಿಯಾ** 8 ಏಪ್ರಿಲ್ 2015

ಕೆಲ ವಾರಗಳ ಹಿಂದಿನಿಂದ ಸಿದ್ದರಾಮಯ್ಯ ಅವರ ಸರ್ಕಾರವು 2015ರ ಮೇ ತಿಂಗಳಲ್ಲಿ ನಡೆಯಬೇಕಿದ್ದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಚುನಾವಣೆಯನ್ನು ತಡಮಾಡಲು ಅಥವಾ ಮುಂದೂಡಲು ಪ್ರಯತ್ನ ಮಾಡುತ್ತಿದೆ. ಇಂತಹ ಕ್ರಮವು ಬೆಂಗಳೂರಿಗರಿಗೆ ಪ್ರಜಾಪ್ರಭುತ್ವದ ಚುನಾಯಿತ ನಗರ ಕಾರ್ಪೋರೇಟರ್‌ಗಳನ್ನು ಹೊಂದುವ ಅವಕಾಶವನ್ನು ನಿರಾಕರಿಸುತ್ತಿದೆ, ಬದಲಿಗೆ ನಗರಾಡಳಿತದ ಮೇಲೆ ಸಿಎಂ ಹಾಗೂ ರಾಜ್ಯ ಸರ್ಕಾರದ ಹಿಡಿತವಿರುವಂತೆ ಮಾಡುತ್ತಿದೆ. ಇದು ಅಧಿಕಾರಶಾಹಿಯ, ವಿವೇಚನೆಯಿಲ್ಲದ, ರಾಜಾರೋಷ ಭ್ರಷ್ಟಾಚಾರದ ಆಡಳಿತವು ಮುಂದುವರೆಯಬಹುದೆಂಬ ಗ್ರಹಿಕೆಯನ್ನು ಬಲಪಡಿಸುತ್ತದೆ!

ನಾಗರೀಕರಿಗೆ ಮತದಾನದ ಹಕ್ಕನ್ನು ಕೊಡದೇ, ಪ್ರಸ್ತುತ ಇರುವ ಕಾರ್ಪೋರೇಟರ್ ಬಗ್ಗೆ ಮಾತನಾಡಲು ಹಾಗೂ ಹೊಸಬರನ್ನು ಆಯ್ಕೆಮಾಡಲು ಅವರಿಗಿರುವ

ಮೂಲಭೂತ ಹಕ್ಕನ್ನೇ ನಿರಾಕರಿಸುತ್ತಿದೆ ಎಂಬುದನ್ನು ಮತ್ತೆ ಹೇಳುವ ಅವಶ್ಯಕತೆಯೇ ಇಲ್ಲ. ಇದು ಸಂವಿಧಾನದ 74ನೇ ತಿದ್ದುಪಡಿಯ ಆಶಯದ ವಿರುದ್ಧವಾಗಿದೆ.

ರಾಜಕೀಯದ ಪರದೆಯನ್ನು ಸರಿಸಿ ನೋಡಿದರೆ, ಚುನಾವಣೆಯನ್ನು ಏಕೆ ತಡಮಾಡದೇ ನಡೆಸಬೇಕೆಂಬುದಕ್ಕೆ ಮೂರು ಮೂಲಭೂತ ಕಾರಣಗಳಿವೆ.

ಇದು ಸಂವಿಧಾನದ 74ನೇ ತಿದ್ದುಪಡಿಯ ಆಶಯ ಮತ್ತು ಸಂವಿಧಾನದ ಆದೇಶಕ್ಕೆ ಅನುಗುಣವಾಗಿದ್ದು, ಚುನಾಯಿತ ಸಭೆಯನ್ನು ನಿರಾಕರಿಸುವ ಕ್ರಮವು 74ನೇ ತಿದ್ದುಪಡಿಯ ಆಶಯದ ವಿರುದ್ಧವಾಗಿದೆ.

ಕಳೆದ 5 ವರ್ಷದಲ್ಲಿ ನಿಗಮದ ಕಾರ್ಯಕ್ಷಮತೆಯ ಬಗ್ಗೆ ತೀರ್ಪು ಕೊಡುವ ಅವಕಾಶ ಜನರಿಗಿದೆ. ಚುನಾವಣೆಯು ಕಾರ್ಪೋರೇಟರ್‌ಗಳ ಕಾರ್ಯವೈಖರಿಯ ಬಗ್ಗೆ ಜನಮತ ಕೊಡುವುದಾಗಿದೆ. ಜನರಿಗೆ, ಅವರ ಆಸಕ್ತಿಗೆ ಸರಿಯಾಗಿ ಕೆಲಸ ಮಾಡುವ ಕಾರ್ಪೋರೇಟರ್‌ಗಳನ್ನು ಪುನಃ ಚುನಾಯಿಸಲು ಮತ್ತು ಬೆಂಬಲಿಸಲು ಹಾಗೆಯೇ ಕಾರ್ಯಕ್ಷಮತೆ ಇಲ್ಲದವರನ್ನು ತೆಗೆದುಹಾಕುವ ಹಕ್ಕಿದೆ.

ರಾಜಕೀಯವು ಯುವ ಪೀಳಿಗೆಗೆ ಆಸಕ್ತಿದಾಯಕ ಕ್ಷೇತ್ರವೆನಿಸುತ್ತಿದೆ. ದೆಹಲಿ ಅಸೆಂಬ್ಲಿ ಚುನಾವಣೆಯು ತೋರಿಸಿದಂತೆ ವಿವಿಧ ಕ್ಷೇತ್ರಗಳಲ್ಲಿರುವ ಜನರು ಸಾರ್ವಜನಿಕ ಸೇವೆಗಳಲ್ಲಿ ತೊಡಗಿಸಿಕೊಳ್ಳಲು ರಾಜಕೀಯವನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಈ ಹೊಸ ಆಕಾಂಕ್ಷಿಗಳಿಗೆ ಪ್ರಜಾಪ್ರಭುತ್ವದ ವಿಧಿವಿಧಾನದಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡಬೇಕು.

2 ವರ್ಷಗಳಿಂದ ಈ ಸರ್ಕಾರವು ನಗರದ ಸಮಸ್ಯೆಗಳನ್ನು ಪರಿಹರಿಸಲು ನಿಜವಾದ ಪ್ರಯತ್ನವನ್ನು ಪ್ರಾರಂಭಿಸಿದ್ದು ಅಷ್ಟರಲ್ಲೇ ಇದೆ. ಮೆಟ್ರೋಪಾಲಿಟನ್ ಪ್ಲಾನಿಂಗ್ ಕಮಿಷನ್ ಅನ್ನು ರೂಪಿಸುವ ಪ್ರಯತ್ನವೂ ವಿಳಂಬವಾಗಿದೆ ಮತ್ತು ಸ್ವತಂತ್ರ ಎಂಪಿಸಿಯನ್ನು ರಚನೆ ಮಾಡುವುದು ದೂರವೇ ಉಳಿದಿದೆ. ಇದು ಎಮ್‌ಪಿಸಿಯು ಯಾವುದೇ ತಜ್ಞರನ್ನೂ ಹಾಗೂ ಎಮ್‌ಪಿಸಿಯು ಸ್ವತಂತ್ರ ಸದಸ್ಯರನ್ನು ಹೊಂದಿಲ್ಲ. ಸಂಸ್ಥೆಯಲ್ಲಿ ಯಾರು ಇರಬಾರದಿತ್ತೋ ಅವರಿದ್ದಾರೆ. ಇದಕ್ಕಿಂತಲೂ ಗಂಭೀರ ವಿಷಯವೆಂದರೆ, ಎಂಪಿಸಿ ಒಂದು ಬಾರಿಯೂ ಸಭೆ ಸೇರಿಲ್ಲ!

ಪ್ರಜಾಪ್ರಭುತ್ವದ ವಿಧಾನದಲ್ಲಿ ಮಂದಗತಿಯ ಹತಾಶೆಯಿಂದ ಕೂಡಿರುವ ಪ್ರಯತ್ನವನ್ನು ಕೈಬಿಟ್ಟು ಮೇ 30ರೊಳಗೆ ಚುನಾವಣೆಗಳನ್ನು ನಡೆಸಬೇಕೆಂದು ಸರ್ಕಾರಕ್ಕೆ ಉಚ್ಚ ನ್ಯಾಯಾಲಯವು ನಿರ್ದೇಶಿಸಬೇಕಾಗಿದೆ! ಮೂರು ವಿಭಾಗಗಳನ್ನಾಗಿ

ವಿಭಜಿಸುವುದು ಪಕ್ಷದ ಒಂದು ಭಾಗ, ಪಕ್ಷವು ಅದನ್ನು ಗೌರವಿಸುತ್ತದೆ ಎಂಬುದು ಸ್ಪಷ್ಟವಾಗಿದೆ ಎಂದು ಸರ್ಕಾರದಲ್ಲಿರುವವರು ಹೇಳುತ್ತಿರುವುದು ಅಸಂಬದ್ಧವಾಗಿದೆ. ಇದೀಗ ನಿಧಾನವಾಗಿ ಈ ಕ್ರಮ ಕೈಗೊಳ್ಳಲು ಪ್ರಯತ್ನಿಸುವುದಕ್ಕಿಂತ, ಇದನ್ನು ಮೊದಲೇ ಜಾರಿಗೊಳಿಸುವುದನ್ನು ಸರ್ಕಾರವು ಏಕೆ ಖಚಿತಪಡಿಸಿಕೊಳ್ಳಲಿಲ್ಲ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇದೀಗ ನಗರದ ಬಗ್ಗೆ ಕಳವಳವನ್ನು ವ್ಯಕ್ತಪಡಿಸುತ್ತಿರುವ ಸರ್ಕಾರವು 6 ತಿಂಗಳ ಮೊದಲೇ ಮೂರು ವಿಭಾಗಗಳನ್ನಾಗಿ ವಿಭಜಿಸುವುದನ್ನು ಏಕೆ ತಿಳಿಸಲಿಲ್ಲ?

**ನಾಗರೀಕರ ಅಭಿಪ್ರಾಯವನ್ನು ಯಾರೂ ಕೇಳುವುದಿಲ್ಲ.**

ನಗರದ ನೆರೆಹೊರೆಗಳ ಮೇಲೆ ಗಂಭೀರವಾದ ಪರಿಣಾಮವನ್ನುಂಟುಮಾಡುವ ಈ ಕ್ರಮದ ಬಗ್ಗೆ ಸರ್ಕಾರವು ನಾಗರೀಕರ ಜೊತೆ ಯಾವ ಸಮಾಲೋಚಿಸಲೂ ಇಲ್ಲ. ವಿಶೇಷವಾಗಿ ಈ ಕ್ರಮವನ್ನು ಸಮಾಲೋಚಿಸಲು ಕೇವಲ ಮಾತಿನ ಉಪಚಾರ ಮಾಡುವ ಮೂಲಕ ಈ ಬದಲಾವಣೆ ಬಗ್ಗೆ ಸಮಾಲೋಚಿಸಲು ರಚಿಸಲಾದ 3 ಸದಸ್ಯರ ಬಿಬಿಎಮ್‌ಪಿ ಪುನರ್‌ರಚನಾ ಸಮಿತಿಯ ಶಿಫಾರಸುಗಳನ್ನು ಸಂಪೂರ್ಣವಾಗಿ ಕಡೆಗಣಿಸಲಾಯಿತು. ಸದ್ಭಾವನೆಯ ನಾಗರೀಕರು, ನಿವಾಸಿಗರ ಕ್ಷೇಮಾಭಿವೃದ್ಧಿ ಸಂಘಗಳು ಮತ್ತು ಸರ್ಕಾರೇತರ ಸಂಘಟನೆಗಳು ಸಮಿತಿಗೆ ಮನವಿಗಳನ್ನು ಸಲ್ಲಿಸಿದ್ದಾರೆ. ಆದರೆ, ಮೊದಲನೆಯದಾಗಿ ಸಮಿತಿಯನ್ನು ರಚಿಸಿದ ಸರ್ಕಾರವೇ ಅವುಗಳನ್ನು ಪರಿಗಣಿಸಲಿಲ್ಲ!

ಮಹಿಳಾ ಕಾರ್ಪೋರೇಟರ್‌ಗಳಿಗೆ ಸಾಕಷ್ಟು ಸಂಖ್ಯೆಯ ಪ್ರತಿನಿಧಿತ್ವವನ್ನು ನೀಡುವ ಸೋಗಿನಲ್ಲಿ ಸರ್ಕಾರವು 50 ಪ್ರತಿಶತ ಸೀಟುಗಳನ್ನು ಮಹಿಳೆಯರಿಗಾಗಿ ಮೀಸಲಿಡುವ ತ್ವರಿತವಾದ ತೋರಿಕೆಯ ನಿರ್ಧಾರವನ್ನು ಮಾಡಿತು. ಈ ಮೀಸಲಾತಿ ಹೊಂದಿರುವ ಕ್ಷೇತ್ರಗಳನ್ನು ಗುರುತಿಸುವ ತಾತ್ಕಾಲಿಕ ಸ್ವಭಾವವು ಸರ್ಕಾರದಲ್ಲಿನ ಕೆಲವರ ಕುತಂತ್ರವನ್ನು ತೋರಿಸುತ್ತದೆ. ಮೀಸಲಾತಿ ಪಟ್ಟಿಯಿಚಿದ ಮೇಲ್ನೋಟಕ್ಕೆ ಅರ್ಥವಾಗುವುದೇನೆಂದರೆ, ಮೀಸಲಾತಿ ಕ್ಷೇತ್ರಗಳಲ್ಲಿನ ಕಾರ್ಪೋರೇಟರ್‌ಗಳು ವಿರೋಧ ಪಕ್ಷದವರಾಗಿದ್ದಾರೆ. ಈ ಕ್ರಮವು, ಯಾವ ಕಾರ್ಪೋರೇಟರ್‌ಗಳು ಚೆನ್ನಾಗಿ ಕೆಲಸ ಮಾಡಿರುತ್ತಾರೋ ಅವರ ಪುನರಾಯ್ಕೆಗೆ ಮತ ಚಲಾಯಿಸುವ ನಾಗರೀಕರ ಹಕ್ಕನ್ನು ಹತ್ತಿಕ್ಕುತ್ತದೆ. ಇದು ಸರ್ಕಾರವು ಎರಡೂ ರೀತಿಯಲ್ಲಿ ಜಯಗಳಿಸುವಂಥ ಕ್ರಮವಾಗಿರುದನ್ನು ಖಾತ್ರಿಪಡಿಸುತ್ತದೆ. ಮೀಸಲಾತಿ ಪಟ್ಟಿಯನ್ನು ಪ್ರಶ್ನಿಸಿ ಯಾರಾದರೂ ನ್ಯಾಯಾಲಯದ ಮೊರೆ ಹೊಕ್ಕರೆ, ನ್ಯಾಯಾಲಯದ

ಕಾರ್ಯವಿಧಾನಗಳಿಂದ ಚುನಾವಣೆಯು ಮತ್ತೂ ನಿಧಾನವಾಗುತ್ತದೆ. ಅಂತಿಮವಾಗಿ ಸರ್ಕಾರವು ತನ್ನ ಕಾರ್ಯಸೂಚಿಯನ್ನು ಮತ್ತಷ್ಟು ಬಲಗೊಳಿಸಲು ಅನುವು ಮಾಡಿಕೊಟ್ಟಂತಾಗುತ್ತದೆ.

**ಬೆಂಗಳೂರಿಗೆ ಬೇಕಾಗಿರುವುದು ಸುಧಾರಣೆ ಮತ್ತು ಪಾರದರ್ಶಕತೆಯೇ ಹೊರತು ಮೂರು ವಿಭಾಗಗಳಲ್ಲ.**

ಬಿಬಿಎಂಪಿಯು ಈಗಾಗಲೇ 198 ವಾರ್ಡುಗಳಾಗಿ ಆಡಳಿತಾತ್ಮಕ ಘಟಕಗಳಲ್ಲಿ ವಿಭಾಗಗೊಂಡಿದೆ. ಒಂದು ಪ್ರಾಮಾಣಿಕ ಸರ್ಕಾರವು ಸಾರ್ವಜನಿಕ ಸೇವೆ ಮತ್ತು ಮೂಲಭೂತ ಸೌಲಭ್ಯಗಳು ಪ್ರತಿ ವಾರ್ಡಿಗೆ ನೇರವಾಗಿ ದೊರಕಿದೆ ಎಂಬುದನ್ನು ಖಾತ್ರಿಪಡಿಸಿಕೊಳ್ಳುವುದಕ್ಕೆ ಗಮನವನ್ನು ಕೇಂದ್ರೀಕರಿಸಬೇಕು. ರಾಜಾರೋಷವಾದ ಭ್ರಷ್ಟಾಚಾರ, ಖಾಸಗಿ ಪುಷ್ಟೀಕರಣಕ್ಕಾಗಿ ಗುತ್ತಿಗೆ ವ್ಯವಸ್ಥೆಯ ದುರ್ಬಳಕೆ, ನಾಗರೀಕ ವೆಚ್ಚದಲ್ಲಿ ಪಟ್ಟಭದ್ರ ಹಿತಾಸಕ್ತಿಗಳಿಗೆ ಅನುಕೂಲವಾಗುವಂತಹ ವಿವೇಚನಾರಹಿತ ಆಡಳಿತ, ನಗರ ಸಂಸ್ಥೆಗಳ ಉತ್ತರದಾಯಿತ್ವದ ಕೊರತೆ ಮತ್ತು ಚುನಾಯಿತ ಪ್ರತಿನಿಧಿಗಳಿಗೆ ನೀತಿಸಂಹಿತೆಯ ಕೊರತೆ– ಹೀಗೆ ಬೆಂಗಳೂರಿನ ನಿಜವಾದ ಸಮಸ್ಯೆಗಳ ಮೇಲೆ ಗಮನ ಕೇಂದ್ರೀಕರಿಸಬೇಕೇ ಹೊರತು ನಗರವನ್ನು ಸಣ್ಣ ಸಣ್ಣ ಘಟಕಗಳಾಗಿ ವಿಭಾಗಿಸಿದರೆ ಸಮಸ್ಯೆಯನ್ನು ನಿವಾರಿಸಲು ಸಾಧ್ಯವಿಲ್ಲ. ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುತ್ತಿರುವ ರೀತಿಗಿಂತಲೂ ಸರ್ಕಾರದ ವಿಭಜನಾ ನೀತಿಯು ಅಪಾಯಕಾರಿಯಾಗಿದೆ. ಇದು ಆಡಳಿತದ ಖರ್ಚುವೆಚ್ಚಗಳನ್ನು ಹೆಚ್ಚಿಸುತ್ತದೆ ಮತ್ತು ಪಟ್ಟಭದ್ರ ಹಿತಾಸಕ್ತಿಗಳಿಗೆ ಇನ್ನಷ್ಟು ಅವಕಾಶ ನೀಡುತ್ತದೆ.

ಬೆಂಗಳೂರಿನ ನಾಗರೀಕರು ಎದುರಿಸುತ್ತಿರುವ ಸಮಸ್ಯೆಗಳ ಮೂಲ ಕಾರಣವು ಹಲವು ವರ್ಷಗಳ ನಿರ್ಲಕ್ಷ್ಯತೆ. ಇದನ್ನು ನಗರ ಅಭಿವೃದ್ಧಿ ಯೋಜನೆಯಡಿಯಲ್ಲಿನ ಎಮ್‌ಪಿಸಿ ಮೂಲಕ ಜನರ ಅಭಿಪ್ರಾಯಗಳನ್ನು ಪರಿಗಣಿಸುವುದೂ ಸೇರಿದಂತೆ, ನಗರ ಮಹಾಸಭೆಯು ತನ್ನ ನಾಗರೀಕರ ಸೇವೆಯಲ್ಲಿ ಮೂಲಭೂತವಾದ ಬದಲಾವಣೆಗಳನ್ನು ಮಾಡುವ ಮೂಲಕ ಮಾತ್ರ ಸಾಧಿಸಬಹುದು.

ಮೂರು ಭಾಗಗಳಾಗಿ ವಿಭಜಿಸುವುದು ಬಹಳ ದೋಷಪೂರಿತ ಮತ್ತು ಇದರಿಂದ ಇನ್ನೂ ಹಲವು ಸಮಸ್ಯೆಗಳು ಎದುರಾಗುತ್ತವೆ.

ಈ ವಿಭಜನೆಯು ಮೂರು ಅಂಗಗಳನ್ನು ರಚಿಸುತ್ತದೆ. ಇದು ಅಧಿಕ ಆಡಳಿತ ಖರ್ಚುವೆಚ್ಚವನ್ನು ಹೆಚ್ಚಿಸುವುದಷ್ಟೇ ಅಲ್ಲದೆ ಪರಿಣಾಮಗಳನ್ನು ಅರ್ಥ ಮಾಡಿಕೊಳ್ಳದೆ ಬೆಂಗಳೂರನ್ನು ಮೂರು ವಿವಿಧ ಆರ್ಥಿಕ ವಿಭಾಗಗಳಾಗಿ ಮಾಡುತ್ತದೆ. ಈ ಹೊಸ

ಪಾಲಿಕೆಗಳು ಆರ್ಥಿಕವಾಗಿ ಮಾಡಬಹುದಾದ ಮತ್ತು ಮಾಡಬಾರದ ಕ್ರಮಗಳ ಸಂಘಟನೆಯಾಗಿರುತ್ತವೆ. ಅಧಿಕ ಸಂಪನ್ಮೂಲಗಳನ್ನು ಹೊಂದಿರುವ ಪಾಲಿಕೆಗಳು ಶ್ರೀಮಂತವಾಗಿದ್ದರೆ, ಸಂಪನ್ಮೂಲರಹಿತ ಪಾಲಿಕೆಗಳು ನಾಗರೀಕರಿಗೆ ಮೂಲಭೂತ ಸೌಕರ್ಯವನ್ನೂ ಕೊಡಲಾಗುವುದಿಲ್ಲ. ಉದಾಹರಣೆಗೆ ನವದೆಹಲಿಯನ್ನು ಪರಿಗಣಿಸೋಣ. ದೆಹಲಿ ಪಾಲಿಕೆಯನ್ನು ಇದೇ ರೀತಿ 2011ರಲ್ಲಿ ಮೂರು ಭಾಗಗಳಾಗಿ ವಿಭಜಿಸಲಾಗಿತ್ತು. ಆದರೆ ಈಗ ಅಸಮತೋಲನ ಆದಾಯವನ್ನು ಹೊಂದಿರುವ ನಿಗಮಗಳನ್ನು ಈಗ ಮತ್ತೆ ಒಂದಾಗಿಸಲು ಯೋಚಿಸಲಾಗುತ್ತಿದೆ. ಬೆಂಗಳೂರು ನಗರವನ್ನೂ ಕೂಡಾ ತರಾತುರಿಯಲ್ಲಿ ಮೂರು ಭಾಗಗಳಾಗಿ ವಿಭಜಿಸಿದರೆ ಇದೇ ರೀತಿಯ ಭವಿಷ್ಯವನ್ನು ನೋಡಬಹುದು.

ಮೂರು ಭಾಗಗಳಾಗಿ ವಿಭಜಿಸುವುದು, ನಗರ ಎದುರಿಸುತ್ತಿರುವ ಯಾವುದೇ ಸಮಸ್ಯೆ ಅಥವಾ ಸವಾಲುಗಳಿಗೆ ಪರಿಹಾರವಲ್ಲ. ಇದರ ಉದ್ದೇಶವು ಕೇವಲ ನಿಜವಾದ ರಾಜಕೀಯದ ಉದ್ದೇಶವನ್ನು ಅಡಗಿಸುವುದಾಗಿದೆ – ಅದೇನೆಂದರೆ ಬಿಬಿಎಮ್‌ಪಿ ಚುನಾವಣೆಯನ್ನು ನಿಧಾನವಾಗಿಸುವುದು.

ನಾನು ಈ ಮೂಲಕ ಮಾನ್ಯ ರಾಜ್ಯಪಾಲರಲ್ಲಿ ಮನವಿ ಮಾಡುವುದೇನೆಂದರೆ, ಸರ್ಕಾರಕ್ಕೆ ನ್ಯಾಯಾಲಯದ ನಿರ್ಧಾರವನ್ನು ಗೌರವಿಸುವಂತೆ ನಿರ್ದೇಶಿಸಲು ಮತ್ತು ಬೆಂಗಳೂರಿನ ಜನರಿಗೆ ಈಗಿನ ಕಾರ್ಪೋರೇಟರ್‌ಗಳ ಭವಿಷ್ಯ ನಿರ್ಧರಿಸಲು ಹಾಗೂ ಸೂಕ್ತ ಕಾರ್ಪೋರೇಟರ್‌ಗಳನ್ನು ಆಯ್ಕೆಮಾಡಲು ಅನುಕೂಲವಾಗುವಂತೆ ಸಕಾಲದಲ್ಲಿ ಚುನಾವಣೆ ನಡೆಯುವಂತೆ ನೋಡಿಕೊಳ್ಳಬೇಕು. ಇದು ಕೇವಲ ರಾಜಕೀಯಕ್ಕೆ ಸೀಮಿತವಾಗಿಲ್ಲ, ಇದು ಬೆಂಗಳೂರಿನಲ್ಲಿ ಪ್ರಜಾಪ್ರಭುತ್ವವನ್ನು ರಕ್ಷಿಸಲು ಮತ್ತು ಚುನಾವಣೆಯನ್ನು ನಿಧಾನ ಮಾಡುವುದನ್ನು ವಿರೋಧಿಸುವ ಹೋರಾಟವಾಗಿದೆ!

# 4

# ರಾಜಕೀಯವು ಪ್ರಜಾಸತ್ತೆ ಮತ್ತು ಸಂವಿಧಾನವನ್ನು ಗೆಲ್ಲಲು ಸಾಧ್ಯವಿಲ್ಲ: ಮುಕ್ತ, ನ್ಯಾಯಸಮ್ಮತ ಮತ್ತು ಸಕಾಲಿಕ ಚುನಾವಣೆಗಳು ಸಂವಿಧಾನದ ಮೂಲಭೂತ ಸಂರಚನೆಯ ಭಾಗವಾಗಿದ್ದು ಪ್ರಜಾಸತ್ತೆಯ ತಿರುಳೆನಿಸಿವೆ

ಟೈಮ್ಸ್ ಆಫ್ ಇಂಡಿಯಾ 16 ಏಪ್ರಿಲ್ 2015

ಬಿಬಿಎಮ್‌ಪಿಯನ್ನು ಮೂರು ಭಾಗಗಳಾಗಿ ವಿಂಗಡಿಸುವ ತಂತ್ರದ ಮೂಲಕ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಮ್‌ಪಿ) ಚುನಾವಣೆಯನ್ನು ನಿಧಾನಿಸುವ ಸಿದ್ದರಾಮಯ್ಯ ಸರ್ಕಾರದ ಪ್ರಯತ್ನವನ್ನು ನಗರದ ಜನತೆಯು ಆಶ್ಚರ್ಯ ಮತ್ತು ಹೆಚ್ಚುತ್ತಿರುವ ಕೋಪದಿಂದ ಗಮನಿಸುತ್ತಿದ್ದಾರೆ. ಬೆಂಗಳೂರನ್ನು ಚುನಾಯಿತ ಕೌನ್ಸಿಲ್ ಇಲ್ಲದೆ ನೇರವಾಗಿ ಆಡಳಿತ ಮತ್ತು ನಿಯಂತ್ರಣ ಮಾಡುವ ಉಪಾಯ ಸರ್ಕಾರದ್ದಾಗಿದ್ದು ನಾಗರೀಕರು ಮತ್ತು ಸಂವಿಧಾನಕ್ಕಿಂತ ರಾಜಕೀಯವನ್ನು ಮೇಲಾಗಿಸುವ ಒಂದು ಷಡ್ಯಂತ್ರವಾಗಿದೆ. ಸ್ಥಳೀಯ ಸರ್ಕಾರಕ್ಕಾಗಿ ಚುನಾವಣೆ ಮತ್ತು ಮತ ಹಾಕುವುದು, ಸಂವಿಧಾನದ 74ನೇ ತಿದ್ದುಪಡಿಯ ಪ್ರಕಾರ ಸಾಂವಿಧಾನಿಕವಾಗಿ ಕಡ್ಡಾಯವಾಗಿದೆ.

ವರ್ತಮಾನದಲ್ಲಿ ಸರ್ಕಾರವು ಬಿಬಿಎಮ್‌ಪಿ ಚುನಾವಣೆಯನ್ನು ಮುಂದೆ ಹಾಕಲು ನಿರ್ಧರಿಸಲು, ಶಾಸಕಾಂಗದ ಅಧಿವೇಶನವನ್ನು ಕರೆಯಲು ಪ್ರಯತ್ನಿಸುತ್ತಿರುವುದಾಗಿ

ಸುದ್ದಿಯಿದೆ. ಮನವಿ ಪ್ರಕ್ರಿಯೆಯು ಪೂರ್ಣಗೊಳ್ಳುವ ಮೊದಲೇ ನ್ಯಾಯಾಂಗದ ನಿರ್ಧಾರವನ್ನು ರದ್ದುಗೊಳಿಸಲು ಕಾನೂನುರೀತ್ಯಾ ಪ್ರಯತ್ನಿಸುತ್ತಿರುವುದನ್ನು ಗಮನಿಸಿದರೆ, ಇದು ಸಂವಿಧಾನ ಮತ್ತು ಸಾಂವಿಧಾನಿಕ ಪ್ರಜಾಪ್ರಭುತ್ವಕ್ಕೆ ರಾಜ್ಯ ಸರ್ಕಾರವು ತೋರುವ ಅಗೌರವದ ಚಿಹ್ನೆಯಾಗಿದೆ.

## ಸರ್ವೋಚ್ಚ ನ್ಯಾಯಾಲಯದ ನಿರ್ಧಾರ

ಸರ್ವೋಚ್ಚ ನ್ಯಾಯಾಲಯವು 1975ರಲ್ಲಿಯೇ ಇಂದಿರಾ ನೆಹರೂ ಗಾಂಧಿ ಮತ್ತು ರಾಜ್ ನಾರಾಯಣ್ ಅವರ ಪ್ರಕರಣದಲ್ಲಿ ಉಚಿತ, ನ್ಯಾಯೋಚಿತ ಮತ್ತು ಸಮಯೋಚಿತ ಚುನಾವಣೆಯು ಸಂವಿಧಾನದ ಮೂಲಭೂತ ರಚನೆಯ ಅಂಗವಾಗಿದೆ ಎಂದು ಘೋಷಿಸಿದೆ. ಪರಿಚ್ಛೇದ 243–ಯ ಪ್ರಕಾರ ಯಾವುದೇ ಪುರಸಭೆಯ ಐದು ವರ್ಷದ ಕಾಲಾವಧಿಯು ಮುಗಿಯುವ ಮೊದಲೇ ಚುನಾವಣೆಯನ್ನು ಪೂರ್ಣಗೊಳಿಸಬೇಕು. ಆದ್ದರಿಂದ ಸಕಾಲಿಕ ಚುನಾವಣೆಯು ಸಾಂವಿಧಾನಿಕ ಪ್ರಜಾಪ್ರಭುತ್ವದ ಮೂಲಭೂತ ಸಿದ್ಧಾಂತವಾಗಿದೆ ಮತ್ತು ಇದು ಯಾವುದೇ ಆಡಳಿತ ಅಥವಾ ಶಾಸಕಾಂಗಕ್ಕೆ ಸಾರ್ವಜನಿಕರ ಮೂಲಭೂತ ಸಾಂವಿಧಾನಿಕ ಹಕ್ಕಾದ ಚುನಾವಣೆಯನ್ನು ನಿರಾಕರಿಸುವ ಅಧಿಕಾರವನ್ನು ಕೊಡುವುದಿಲ್ಲ.

ಮಾರ್ಚ್ 30, 2015ರಂದು ಕರ್ನಾಟಕದ ಉಚ್ಚ ನ್ಯಾಯಾಲಯವು ಮೇ 30, 2015ರ ಒಳಗಾಗಿ ಬಿಬಿಎಂಪಿ ಚುನಾವಣೆಯ ಎಲ್ಲಾ ಕ್ರಮಗಳನ್ನು ಕೈಗೆತ್ತಿಕೊಳ್ಳಬೇಕು ಮತ್ತು ಪೂರೈಸಬೇಕು ಎಂದು ಆದೇಶ ಹೊರಡಿಸಿತು. ನಗರವನ್ನು ಮೂರು ಭಾಗಗಳಾಗಿ ವಿಂಗಡಿಸಬೇಕೆಂಬ ವಿಷಯವೇ ಬಿಬಿಎಂಪಿ ಚುನಾವಣೆಯನ್ನು ಮುಂದೂಡಲು ಕಾರಣ ಎಂಬುದನ್ನು ನಿರ್ದಿಷ್ಟವಾಗಿ ಉಚ್ಚ ನ್ಯಾಯಾಲಯವು ತಳ್ಳಿಹಾಕಿತು. ರಾಜ್ಯವು ವಿಭಾಗೀಯ ಪೀಠಕ್ಕೆ ಸಲ್ಲಿಸಿದ ಮೇಲ್ಮನವಿಗೆ ಮಧ್ಯಂತರ ಆದೇಶ ನೀಡಲು ಪೀಠವು ನಿರಾಕರಿಸಿತು. ಇದರಿಂದಾಗಿ, ಸಂವಿಧಾನಾತ್ಮಕ ಆದೇಶದಂತೆ ಚುನಾವಣೆಯನ್ನು ನಡೆಸದೇ ಹೊರತು ರಾಜ್ಯಕ್ಕೆ ಬೇರಾವುದೂ ದಾರಿಯೂ ಉಳಿದಿಲ್ಲ. ಅಂತಿಮವಾಗಿ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ರಿಟ್ ಮನವಿಯನ್ನು ಪರಿಗಣಿಸಬೇಕಾಗಿದೆ. ನ್ಯಾಯಾಲಯವು ಮೇಲ್ಮನವಿಯನ್ನು ಪರಿಗಣಿಸುವ ಮೊದಲೇ ರಾಜ್ಯವು ನ್ಯಾಯಾಂಗದ ಆದೇಶವನ್ನು ಸುಗ್ರೀವಾಜ್ಞೆಯ ಮೂಲಕ ಅತಿಕ್ರಮಿಸಲು ಯತ್ನಿಸಿರುವುದು ಪ್ರತ್ಯಕ್ಷವಾಗಿ ಕಾಣಿಸುವಂತಹ ಅಸಂವಿಧಾನಿಕ ಕಾರ್ಯವಾಗಿದೆ.

## ರಾಜ್ಯದಲ್ಲಿ ಸಂವಿಧಾನಿಕ ಆಯೋಜನೆಯ ವಿಫಲತೆ

ಸಂವಿಧಾನದ ಮೂಲ ಪುರುಷರು ಇಂತಹ ಸಂದರ್ಭಗಳನ್ನು ಮೊದಲೇ ಊಹಿಸಿದ್ದರಿಂದ ಸಂವಿಧಾನಿಕ ಆಯೋಜನೆಯ ವಿಫಲತೆಯು ತಲೆದೋರಿದಾಗ ಅದನ್ನು ಎದುರಿಸಲು ಯೋಜನೆಯನ್ನೂ ರೂಪಿಸಿದ್ದರು. ಇಂತಹ ಸಮಸ್ಯೆಗಳನ್ನು ಎದುರಿಸುವಾಗ ಪರಿಚ್ಛೇದ 365ರ ಪ್ರಕಾರ ರಾಷ್ಟ್ರಪತಿ ಆಳ್ವಿಕೆಯನ್ನು ಆದೇಶಿಸುವುದು ಅಗತ್ಯವೇನಿಲ್ಲ. ಒಂದು ರೀತಿಯಲ್ಲಿ ಅದನ್ನು ಮಾಡಿದ್ದೇ ಆದರೆ ಅದು ಒಂದು ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದಂತೆ ಆಗುತ್ತದೆ.

ಪರಿಚ್ಛೇದ 234–ಯು ಪ್ರಕಾರ, ಸ್ಥಳೀಯ ಆಯೋಗಗಳ ಮೇಲೆ ಚುನಾವಣೆಯನ್ನು ನಡೆಸಲು ರಾಜ್ಯ ಸರ್ಕಾರ ವಿಫಲವಾದರೆ, ರಾಜ್ಯವು ಸಂವಿಧಾನದ ಉದ್ದೇಶವನ್ನು ಅನುಸರಿಸುತ್ತಿಲ್ಲ ಅಥವಾ ತನಗೆ ತಾನೇ ಸಂವಿಧಾನಕ್ಕೆ ಬದ್ಧನಾಗಿರಲು ಆಗದಂತಹ ಪರಿಸ್ಥಿತಿಗೆ ಬಂದಿದೆ ಎಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ. ಸಂವಿಧಾನದ ಪರಿಚ್ಛೇದ 243–ಯ ಆದೇಶವಿದ್ದರೂ ಬಿಬಿಎಂಪಿ ಚುನಾವಣೆಯನ್ನು ನಡೆಸಲು ಕರ್ನಾಟಕ ರಾಜ್ಯ ಸರ್ಕಾರವು ನಿರ್ಧರಿಸಿಲ್ಲ. ಪರಿಚ್ಛೇದ 356ರ ಪ್ರಕಾರ ಬಿಬಿಎಂಪಿ ಚುನಾವಣೆಯನ್ನು ಆಯೋಜಿಸಲು ಸರ್ಕಾರದ ನಿರ್ದಿಷ್ಟ ಕೆಲಸಗಳಲ್ಲಿ ರಾಷ್ಟ್ರಪತಿಯವರು ಭಾಗವಹಿಸಬಹುದು/ಭಾಗವಹಿಸಲೇಬೇಕು ಎಂಬ ಸನ್ನಿವೇಶವನ್ನು ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶ ಒಂದು ಹೊಸ ಸಂದರ್ಭವನ್ನು ಸೃಷ್ಟಿಸಿದೆ. ತಕ್ಷಣವೇ ಬಿಬಿಎಂಪಿ ಚುನಾವಣೆಯನ್ನು ನಡೆಸಲು ಪರಿಚ್ಛೇದ 356ರಲ್ಲಿ ರಾಷ್ಟ್ರಪತಿಯವರು ನಿರ್ದೇಶಿಸಬಹುದು. ಮತ್ತು ಮುಕ್ತ ಹಾಗೂ ನ್ಯಾಯೋಚಿತವಾದ ಚುನಾವಣೆಯ ಎಲ್ಲಾ ವಿಧಾನಗಳೂ ಮೇ 30, 2015ರ ಒಳಗಾಗಿ ಮುಗಿಯಬೇಕೆಂದು ಅವರು ನಿರ್ದೇಶನ ನೀಡಬಹುದು. ಈ ನಿರ್ದೇಶನವು ಕರ್ನಾಟಕದ ಉಚ್ಚ ನ್ಯಾಯಾಲಯದ ಆದೇಶಕ್ಕೆ ಸರಿ ಸಮಾನವಾಗಿ ತೋರುತ್ತದೆ. ಇದರಿಂದಾಗಿ, ಸಕಾಲಿಕ ಚುನಾವಣೆಗೆ ನಾಗರೀಕರ ಸಂವಿಧಾನಿಕ ಹಕ್ಕನ್ನು ನಿರಾಕರಿಸುತ್ತಿಲ್ಲ ಎಂಬುದನ್ನು ಖಚಿತಪಡಿಸುತ್ತದೆ.

ಬಿಬಿಎಂಪಿ ಚುನಾವಣೆಯು ಬಹಳ ಮುಖ್ಯವಾದುದು. ಬಿಬಿಎಂಪಿಯು ಕಳೆದ 5 ವರ್ಷಗಳಲ್ಲಿ ಏನು ಮಾಡಿದೆ ಎಂಬುದು ಚುನಾವಣೆಯ ಮೂಲಕ ಜನಾದೇಶವಾಗಿರುತ್ತದೆ. ಯಾರು ಚೆನ್ನಾಗಿ ಕೆಲಸ ಮಾಡಿರುತ್ತಾರೋ ಅವರನ್ನು ಪುನಃ ಆಯ್ಕೆ ಮಾಡಲು ಮತ್ತು ಕೆಲಸದಲ್ಲಿ ವಿಫಲತೆಯನ್ನು ತೋರಿದ ಪ್ರತಿನಿಧಿಗಳನ್ನು ತೆಗೆದುಹಾಕುವಂತೆ ನಿರ್ಧರಿಸಲು ಬೆಂಗಳೂರಿಗರಿಗೆ ಒಂದು ಅವಕಾಶ ದೊರೆಯಲೇಬೇಕು!

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸರ್ಕಾರದ ಮನವಿ ಇನ್ನೂ ಉಚ್ಚ ನ್ಯಾಯಾಲಯದಲ್ಲಿದೆ. ತುರ್ತುಸ್ಥಿತಿಯಲ್ಲಿ ಅಸೆಂಬ್ಲಿ ಅಧಿವೇಶನವನ್ನು ನಡೆಸಲು ಮಾಡಿದ ರಾಜಕೀಯದಾಟದ ವರದಿಯನ್ನು ಕೈಬಿಟ್ಟು ಕಾನೂನನ್ನು ಗೌರವಿಸುವ ಸರ್ಕಾರ ಏನು ಮಾಡುತ್ತದೆಯೋ ಅದನ್ನು ಮಾಡಬೇಕು. ಹಾಗೆಂದರೆ, ಉಚ್ಚ ನ್ಯಾಯಾಲಯದ ಆದೇಶದಂತೆ ಮತ್ತು ಸಂವಿಧಾನ ಕ್ರಮವು ತಿಳಿಸುವಂತೆ ಮೇ 30ರ ಒಳಗಾಗಿ ಚುನಾವಣೆಯನ್ನು ನಡೆಸಬೇಕು. ಮುಕ್ತ, ನ್ಯಾಯೋಚಿತ ಮತ್ತು ಸಕಾಲಿಕ ಚುನಾವಣೆಯು ಸಂವಿಧಾನದ ಮೂಲಭೂತ ಸಂರಚನೆ ಮತ್ತು ಪ್ರಜಾಪ್ರಭುತ್ವದ ಪ್ರಗತಿಯ ಕೊಂಡಿಯಾಗಿದೆ!

# 5

# ನಮ್ಮಲ್ಲಿ ಹೆಚ್ಚಿನವರು ಮತ ಚಲಾಯಿಸದಿರುವಾಗ ನಾವು ಒಳ್ಳೆಯ ಕಾರ್ಪೊರೇಟರುಗಳು ಮತ್ತು ಆಡಳಿತವಿರಬೇಕೆಂದು ನಿರೀಕ್ಷಿಸುವುದಾದರೂ ಹೇಗೆ?

ಟೈಮ್ಸ್ ಆಫ್ ಇಂಡಿಯಾ 18 ಜೂನ್ 2015

ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾದ ಬಿ.ವಿ. ನಾಗರತ್ನ ಅವರಿಗೆ ಮೊದಲಿಗೆ ಧನ್ಯವಾದಗಳು. ಅವರ ಮಧ್ಯಸ್ಥಿಕೆಯಿಂದಾಗಿ, ರಾಜಕೀಯ ಅಧಿಕಾರಿಗಳು "ನ್ಯಾಯಾಂಗ ನಿಂದನೆ" ಎಂಬುದರ ಮೂಲಕ ಬಿಬಿಎಂಪಿ ಚುನಾವಣೆಯನ್ನು ಮುಂದೂಡುತ್ತಿದ್ದಾರೆಂದು ಬೆಳಕಿಗೆ ಬಂದಿದೆ. ಈಗ ನಾವು ಬಿಬಿಎಂಪಿ ಚುನಾವಣೆಯನ್ನು ಜುಲೈ ತಿಂಗಳ ಕೊನೆಯ ಒಳಗಾಗಿ ನಿರೀಕ್ಷಿಸಬಹುದು.

ಚುನಾವಣೆಗಾಗಿ ರಾಜಕೀಯ ಪಕ್ಷಗಳು ಬೆಂಗಳೂರಿಗೆ ಹಲವಾರು ಯೋಜನೆಗಳ ಭರವಸೆ ನೀಡುವುದನ್ನೂ ನಿರೀಕ್ಷಿಸಬಹುದು. ಆದರೆ, ನಮಗೆಲ್ಲಾ ಬೇಕಾಗಿರುವುದು ನಗರವು ಎದುರಿಸುತ್ತಿರುವ ಸಮಸ್ಯೆಗಳ ಕಠಿಣ ವಾಸ್ತವತೆಯನ್ನು ಅರಿಯುವುದು: ಅಮಾಯಕ ಮಕ್ಕಳು ತೆರೆದ ಕಾಲುವೆಗಳಲ್ಲಿ ತೇಲಿಹೋಗಿ ಜೀವವನ್ನೇ ಬಲಿಕೊಟ್ಟಾಗ, ಜೀವ ಮತ್ತು ನಷ್ಟದ ಬಗ್ಗೆ ತೋರಿದ ನಿರ್ಲಕ್ಷ್ಯವು ಉತ್ತರದಾಯಿತ್ವದಲ್ಲಿ ಆಡಳಿತವು ಸೊನ್ನೆ ಎಂಬುದನ್ನು ತೋರಿಸುತ್ತದೆ. ನಿಲುಗಡೆಗಾಗಿ ಮೀಸಲಿಟ್ಟ ಜಾಗವನ್ನು ಮಾಲ್‌ಗಳನ್ನಾಗಿ ಪರಿವರ್ತಿಸುವುದು, ಉದ್ದೇಶಪೂರ್ವಕವಾಗಿಯೇ ಭೂ ಅತಿಕ್ರಮಣ

ಮಾಡುವುದು ಅಥವಾ ಸಾವಿರಾರು ಕೋಟಿ ಬೆಲೆ ಬಾಳುವ ಭೂಮಿಯನ್ನು ರಾಜಕೀಯ ಲಾಭಕ್ಕಾಗಿ ಬಿಟ್ಟುಬಿಡುವುದು; ರಿಯಲ್ ಎಸ್ಟೇಟ್ ಯೋಜನೆಗಳು ಕೆರೆಗಳನ್ನು ಅತಿಕ್ರಮಿಸುತ್ತಿರುವುದು, ಸಾರ್ವಜನಿಕ ಹಣವನ್ನು 'ಯೋಜನೆ' ಹೆಸರಿನಲ್ಲಿ ಪೋಲು ಮಾಡುತ್ತಿರುವುದು ಯಾರಿಗೂ ಸಮ್ಮತವಾಗಿಲ್ಲ; ವಾಸಯೋಗ್ಯ ಪ್ರದೇಶಗಳ ಕಾನೂನುಬಾಹಿರ ವಾಣಿಜ್ಯೀಕರಣವನ್ನು ಅನುಮೋದಿಸುವ ಮೂಲಕ ಪಟ್ಟಭದ್ರ ಹಿತಾಸಕ್ತಿಗಳಿಗೆ ಅನುಕೂಲವಾಗುವಂತೆ ಆಡಳಿತಾತ್ಮಕ ವಿವೇಚನೆಯ ದುರ್ಬಳಕೆಯನ್ನು ಮತ್ತು ನಗರಾಡಳಿತದ ಎಲ್ಲಾ ಕ್ಷೇತ್ರಗಳಲ್ಲಿ ಭ್ರಷ್ಟಾಚಾರದ ಹಿತಾಸಕ್ತಿಗಳನ್ನು ಮತ್ತು ಭ್ರಷ್ಟಾಚಾರವನ್ನು ಹರಡಿದೆ. ನಡೆಯಬೇಕಾದ ಕೆಲಸಗಳ ಅಸ್ತವ್ಯಸ್ತತೆ ಮತ್ತು ತ್ವರಿತ ಪರಿಹಾರಗಳ ಮಧ್ಯೆ ಪಟ್ಟಭದ್ರ ಹಿತಾಸಕ್ತಿಗಳು ಸ್ಥಳವನ್ನು ಸೃಷ್ಟಿಸಿವೆ. ಆದರೆ, ರಾಜಕೀಯ ಮತ್ತು ಪಟ್ಟಭದ್ರ ಹಿತಾಸಕ್ತಿಯಲ್ಲಿಯೂ ಆಯ್ದ ರೀತಿಯಲ್ಲಿ 'ತಜ್ಞರ' ಪ್ರಯತ್ನಗಳನ್ನು ಹವ್ಯಾಸದಂತೆ ನೋಡಲಾಗುತ್ತಿದೆ.

ಇದೆಲ್ಲವೂ, ಸರ್ಕಾರ/ಸಂಸ್ಥೆಗಳ ಮೂಲ ಪ್ರಕ್ರಿಯೆಗಳನ್ನು ನೆರವೇರಿಸಲು ಸಾಧ್ಯವಾಗದಿರುವುದರಿಂದ ನಾಗರೀಕರನ್ನು ಅಸಹಾಯಕ ಸ್ಥಿತಿಗೆ ತಳ್ಳುತ್ತಿದೆ ಅಥವಾ ಕಾನೂನಾತ್ಮಕವಾಗಿ ಹೋರಾಟ ಮಾಡುವಂತಹ ಸ್ಥಿತಿಗೆ ಕೊಂಡೊಯ್ಯುತ್ತಿದೆ ಎಂದೇ ಹೇಳಬಹುದು. ಇದರಿಂದಾಗಿ, ನಗರದ ಅಭಿವೃದ್ಧಿ ನೆಲಕಚ್ಚುತ್ತಿದೆ. ಸರ್ಕಾರದ ವಿರುದ್ಧ ಸಾರ್ವಜನಿಕ ಹಿತಾಸಕ್ತಿ ದಾವೆಗಳು ಮತ್ತು ಪ್ರಕರಣಗಳು ಗಣನೀಯವಾಗಿ ಏರಿಕೆಯಾಗಿದ್ದು, ಇತ್ತೀಚೆಗೆ ಕೆರೆ ಆವರಣ ಅತಿಕ್ರಮಣ ಅಥವಾ ಭೂ ಕಬಳಿಕೆಯು ಗಮನಾರ್ಹವಾಗಿದೆ.

ಆದರೆ ನಮ್ಮ ಪ್ರಜಾಪ್ರಭುತ್ವವು ಮತ್ತು ಸಂವಿಧಾನದ 74ನೆ ತಿದ್ದುಪಡಿಯು, ಸಾರ್ವಜನಿಕ ಹಿತಾಸಕ್ತಿ ದಾವೆಗಳು ಹಾಗೂ ಸರ್ಕಾರೇತರ 'ತಜ್ಞ'ರಿಂದಾಗಿ ಉತ್ತಮ ಸರ್ಕಾರವು ನಡೆಯಬೇಕೆಂಬ ಆಶಯವನ್ನು ಎಂದೂ ಹೊಂದಿರಲಿಲ್ಲ. ಚುನಾಯಿತ ಪ್ರತಿನಿಧಿಗಳು ಸೂಕ್ತವಾಗಿ ಕ್ರಮ ಕೈಗೊಳ್ಳಬೇಕೆಂಬುದು ಹಾಗು ನಮ್ಮ ನಗರ ಮತ್ತು ಆಡಳಿತವನ್ನು ಬಲಗೊಳಿಸಲಿ ಎಂಬುದು ಅವರ ಉದ್ದೇಶವಾಗಿತ್ತು.

ಬದಲಾವಣೆಗಳಿಗೆ ಸಮಸ್ಯೆಗಳು ವೇಗವರ್ಧಕಗಳಿದ್ದಂತೆ. ಆದರೆ, ನಾವು ಅದನ್ನು ಅರ್ಥಮಾಡಿಕೊಳ್ಳಲು ಸಮಯ ತೆಗೆದುಕೊಂಡಾಗ ಬದಲಾವಣೆಯು ಸರಿಯಾದ ಬದಲಾವಣೆಯೇ ಆಗಿಬಿಡುತ್ತದೆ. ಹಾಗಾಗಿ, ಉತ್ತಮ, ಸ್ವಚ್ಛ ಸರ್ಕಾರವನ್ನು ಪಡೆಯಲು ಅರ್ಹರಾಗಿರುವ ನಮಗೆ ಮುಂಬರುವ ಬಿಬಿಎಂಪಿ ಚುನಾವಣೆಯು ಒಂದು ಪ್ರಮುಖ ಹಂತವಾಗಿದೆ.

**ಉತ್ತಮ ನಾಗರೀಕ ಕೇಂದ್ರಿತ ಸರ್ಕಾರ ಮಾತ್ರ ಬೆಂಗಳೂರನ್ನು ಸ್ಮಾರ್ಟ್ ಸಿಟಿಯನ್ನಾಗಿಸುತ್ತದೆ.**

ಬೆಂಗಳೂರಿನ ಕೊಳಕು ವಾಸ್ತವತೆಯ ನಿಜವಾದ ಮೌಲ್ಯಮಾಪನವು ಈ ಕೆಳಗಿನ ಕಾರಣಗಳನ್ನು ನೀಡುತ್ತದೆ.

**ಮೊದಲಿಗೆ,** ಮುಂಬಯಿಯಂತಹ ನಗರದ ವೇಗದ ಬೆಳವಣಿಗೆಯನ್ನು ಬೆಂಗಳೂರಿನವರು ಅನುಸರಿಸುತ್ತಿದ್ದಾರೆ – ಉತ್ತಮ ಆಡಳಿತ ಹೊಂದಿದ ನಗರದಿಂದ ಗೊಂದಲದ ಗೂಡಾಗಿರುವ ನಗರ ಪ್ರದೇಶಕ್ಕೆ ರೂಪಾಂತರಗೊಳ್ಳುವುದು, ಕಟ್ಟಡ ನಿರ್ವಾಹಕರು, ಗುತ್ತಿಗೆದಾರರು, ಅಧಿಕಾರಿಗಳು, ರಾಜಕೀಯ ಸಂಬಂಧಿಗಳು ಪ್ರಜೆಗಳಿಗೆ ಮತ್ತು ನಾಗರೀಕರಿಗೆ ಸರಿಯಾದ ಸ್ಥಳವಿಲ್ಲದಂತೆ ಕೆಲಸಗಳನ್ನು ನಡೆಸುತ್ತಿದ್ದಾರೆ.

**ಎರಡನೆಯದಾಗಿ,** ಹಣದ ಕೊರತೆ ಇಲ್ಲದಿರುವುದು – ನಗರಾಭಿವೃದ್ಧಿ ಸಮಸ್ಯೆಯನ್ನು ಪರಿಹರಿಸಲು ಪ್ರತಿ ವರ್ಷ ಪ್ರತಿ ನಗರಕ್ಕೆ ಯೋಜನೆಯನ್ನು ಸಿದ್ಧಪಡಿಸಿ ಹಣವನ್ನು ನೀಡುವುದು ಜೆಎನ್‌ಎನ್‌ಯುಆರ್‌ಎಮ್‌ನ ವೈಫಲ್ಯವನ್ನು ತೋರಿಸುತ್ತದೆ. ಜೆಎನ್‌ಎನ್‌ಯುಆರ್‌ಎಮ್ ಉದ್ದೇಶವು ಬೆಂಗಳೂರಿಗೆ ವಿಭಿನ್ನವಾಗಿರುವ ಮತ್ತು ವಿಶಿಷ್ಟವಾಗಿರುವ ಪ್ರತೀ ನಗರದ ಮಧ್ಯಮ ಅವಧಿಯ ಅಭಿವೃದ್ಧಿ ಮತ್ತು ಬೆಳವಣಿಗೆಯ ನೀಲಿನಕ್ಷೆ  ರಚಿಸುವುದಾಗಿದೆ. ಹಾಗೆಯೇ, ಸಾರ್ವಜನಿಕ ಮತ್ತು ಖಾಸಗಿ ಹೂಡಿಕೆಗಳ ಕಟ್ಟಡಗಳ ಮೇಲಿನ ನೀಲಿನಕ್ಷೆಗೆ ಚಾಲನೆ ನೀಡುತ್ತದೆ. ಇದು ನಗರದಲ್ಲಿ ಉತ್ತಮ ಆರ್ಥಿಕ ಮತ್ತು ಆದಾಯದ ನಿರ್ಮಾಣದ ಮೇಲೆ ನಿರ್ಮಿಸಲ್ಪಟ್ಟಿದೆ. ಬೆಂಗಳೂರಿನ ಆರ್ಥಿಕ ವ್ಯವಸ್ಥೆಯು ಅವ್ಯವಸ್ಥೆಯಲ್ಲಿದೆ. ಅತಿರೇಕದ ಆದಾಯ ಸೋರಿಕೆ ಮತ್ತು ಆಸ್ತಿ ಕಳ್ಳತನದಿಂದಾಗಿ ಸಾರ್ವಜನಿಕ ಸೇವೆ ಮತ್ತು ಮೂಲಭೂತ ಸೌಕರ್ಯಗಳಿಗಾಗಿ ಹೂಡಿಕೆ ಮಾಡಲು ಸಾಧ್ಯವಾಗುತ್ತಿಲ್ಲ.

**ಮೂರನೆಯದಾಗಿ,** ನಿಜಕ್ಕೂ ನಗರಾಡಳಿತದಲ್ಲಿ ಕೊರತೆ ಇರುವುದು ಕಾಣಿಸುತ್ತದೆ. ನಂತರದಲ್ಲಿ ಭ್ರಷ್ಟಾಚಾರ. ಇವುಗಳನ್ನು ತಡೆಯಬೇಕಿದೆ.

ಸಂವಿಧಾನದಲ್ಲಿ ಪ್ರಸ್ತುತ ಇರುವ 74ನೇ ತಿದ್ದುಪಡಿಯು ಪರಿಪೂರ್ಣವಾಗಿಲ್ಲ. ಅನೇಕ ಕಡೆಗಳಲ್ಲಿ ಅಸ್ಪಷ್ಟವಾಗಿದೆ. ಇದು ನಿರ್ದಿಷ್ಟವಾಗಿರುವಂತೆ ಮಾಡುವ ಅನಿವಾರ್ಯತೆ ಇದೆ. ಪ್ರಸ್ತುತ, ಅತಿರೇಕದ ಭ್ರಷ್ಟಾಚಾರ ಮತ್ತು ಹಿತಾಸಕ್ತಿಗಳ ಸಂಘರ್ಷಗಳನ್ನೊಳಗೊಂಡು ಪಾಲಿಕೆಯ ಆಡಳಿತವು ಅತ್ಯಂತ ಕೆಟ್ಟದಾಗಿದೆ. ಬೆಂಗಳೂರಿನಲ್ಲಿ ಯಾವುದೇ ಕಾರ್ಯನಿರತ ಸಂಸ್ಥೆಗಳಿಲ್ಲ. ಬಹುತೇಕ ಎಲ್ಲವೂ

ರಾಜಕೀಯ ಅಥವಾ ಸ್ವ ಹಿತಾಸಕ್ತಿಯಿಂದ ಆವರಿಸಲ್ಪಟ್ಟಿವೆ. 14ನೇ ಹಣಕಾಸು ಆಯೋಗದಲ್ಲಿ ಎಲ್ಲಾ ಸ್ಥಳೀಯ ಸಂಸ್ಥೆಗಳಿಗೆ ಕೇಂದ್ರ ತೆರಿಗೆಯಿಂದ ಸುಮಾರು 2,48,000 ಕೋಟಿಗಳ ಹಣ ನೇರವಾಗಿ ದೊರೆಯುತ್ತದೆ. ಇದರಿಂದ ಉತ್ತಮ ಆಡಳಿತದ ಕೊರತೆ ಮತ್ತು ಭ್ರಷ್ಟಾಚಾರವು ಇನ್ನೂ ಹೆಚ್ಚಿನ ಸಮಸ್ಯೆಯಾಗಿ ಕಂಡುಬರುತ್ತದೆ. ಈ ಎಲ್ಲಾ ಹಣವನ್ನೂ ಭ್ರಷ್ಟಾಚಾರಿಗಳ ಕೈಗೆ ಕೊಟ್ಟರೆ ಏನಾಗಬಹುದೆಂದು ಊಹಿಸಿ!

ಬೆಂಗಳೂರು ಸ್ಮಾರ್ಟ್ ಸಿಟಿಯಾಗಲು ಉತ್ತಮ ಆಡಳಿತ ಹೊಂದಿದ ನಗರವಾಗಿರಬೇಕು ಮತ್ತು ಬಿಬಿಎಂಪಿಯಲ್ಲಿ ಬದಲಾವಣೆ ಹಾಗೂ ಸುಧಾರಣೆಗಳನ್ನು ತರುವಂತಹ ಕಾರ್ಯಬದ್ಧ ಕಾರ್ಪೋರೇಟರ್‌ಗಳು ಇರಬೇಕು. ನಾವು ನಮ್ಮ ನಗರವನ್ನು ಉಳಿಸಬೇಕೆಂದರೆ, ನಮ್ಮ ನಗರದ ರಾಜಕೀಯ ಮತ್ತು ಆಡಳಿತದ ಮಾದರಿಯು ಬದಲಾಗಬೇಕು. ಉತ್ತಮ ಆಡಳಿತ ನೀಡುವ ವಾಗ್ದಾನದೊಂದಿಗೆ ಚುನಾಯಿತರಾದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಾಡಿದುದ್ದು ಅಷ್ಟರಲ್ಲೇ ಇದೆ. ಹಿಂದಿನ ಬಿಬಿಎಂಪಿಯು ಉತ್ತಮ ಕಾರ್ಪೋರೇಟರ್‌ಗಳನ್ನು ಹೊಂದಿದ್ದರೂ, ಭ್ರಷ್ಟಾಚಾರ ಹಾಗೂ ಲಜ್ಜೆಗೆಟ್ಟ ಹಿತಾಸಕ್ತಿಯ ಸಂಘರ್ಷದಿಂದಾಗಿಯೇ ಹೆಚ್ಚು ಕುಖ್ಯಾತಿ ಪಡೆಯಿತು.

ಬಹಳ ದೀರ್ಘ ಕಾಲದಿಂದಲೂ ರಾಜಕೀಯ ಮತ್ತು ಇತರ ಬಲಗಳು ನಗರ ಮತ್ತು ನಾಗರೀಕರನ್ನು ನೈಜ ಬೆದರಿಕೆ ಹಾಗೂ ವಿವಿಧ ರೀತಿಯ ನೈಜ ದೂರುಗಳೊಂದಿಗೆ ವಿಚಲಿತಗೊಂಡಿವೆ. ಮೂರು ವಿಭಾಗಗಳನ್ನು ಮಾಡಲು ಮುಂದುವರೆಯುತ್ತಿರುವುದು ಇದಕ್ಕೆ ಮತ್ತೊಂದು ಉದಾಹರಣೆ.

ಅಥವಾ ಉಚಿತ ವೈ-ಫೈ.

ಭ್ರಷ್ಟಾಚಾರದ ಸಮಸ್ಯೆ ಮತ್ತು ಮೂಲಭೂತ ವಿಷಯಗಳಲ್ಲಿ ಹಾಗೂ ಸಾರ್ವಜನಿಕ ಸೇವೆಗಳಲ್ಲಿ ಹೂಡಿಕೆ ಇಲ್ಲದಿರುವ ಸಮಸ್ಯೆಯನ್ನು ಉಚಿತ ವೈ-ಫೈ ಅಥವಾ ಮೂರು ವಿಭಾಗಗಳಾಗಿ ವಿಂಗಡಿಸುವುದರಿಂದ ಸರಿಪಡಿಸಲಾಗುವುದು ಎನ್ನುವಂತಿದೆ! ಈ ಪರಿಹಾರಗಳು ನಗರದ ಮೂಲ ಸಮಸ್ಯೆಯಾದ ಕೆಟ್ಟ ಮತ್ತು ವಿಫಲ ಆಡಳಿತವನ್ನು ಯಾವುದೇ ರೀತಿಯಲ್ಲಿ ಪರಿಹರಿಸುವುದಿಲ್ಲ. ಇದನ್ನು ನಾವು ಪರಿಗಣಿಸದಿದ್ದರೆ, ನಾವು ಕೇವಲ ಕಂದಾಯದಾರರ ಮತ್ತು ಸಾರ್ವಜನಿಕ ಹಣವನ್ನು ಈ ಪರಿಹಾರಗಳಿಗಾಗಿ ವ್ಯರ್ಥ ಮಾಡುತ್ತೇವೆ. ಆಡಳಿತದ ಸುಧಾರಣೆ ಮತ್ತು ಭ್ರಷ್ಟಾಚಾರ ನಿರ್ಮೂಲನೆಯು ಇವೆಲ್ಲಕ್ಕಿಂತಾ ಅತ್ಯವಶ್ಯಕ.

ಯಾವುದೇ ನಗರಗಳ ಭವಿಷ್ಯವು ಖಾಸಗಿ ಬಂಡವಾಳದಾರರ ಮೂಲಗಳಿಂದ ಬರುವ ಹೆಚ್ಚಿನ ಹೂಡಿಕೆ ಮತ್ತು ಸಾರ್ವಜನಿಕ ಹಣದ ಉತ್ತಮ ನಿರ್ವಹಣೆಯ ಮೇಲೆ ಅವಲಂಬಿತವಾಗಿದೆ. ಇದಕ್ಕೆ ರಾಜಕೀಯ ಬದಲಾವಣೆಯು ನಮ್ಮ ನಗರಕ್ಕೆ ಅತಿ ಮುಖ್ಯ ಪರಿಹಾರವಾಗಿದ್ದು, ರಾಜಕೀಯ ಬದಲಾವಣೆಯು ಜನಸಾಮಾನ್ಯರು ತಮ್ಮ ಈಗಿನ ಅವಶ್ಯಕತೆಗಳು ಮತ್ತು ದೀರ್ಘ ಕಾಲದ ನಂಬಿಕೆಗಳ ಆಧಾರದ ಮೇಲೆ ಒಂದಾದರೆ ಮಾತ್ರ ಸಾಧ್ಯವಾಗುತ್ತದೆ.

ಆದರೆ ದುರದೃಷ್ಟವಶಾತ್ ನಮ್ಮ ನಗರದ ಅತಿ ಮುಖ್ಯ ಚುನಾವಣೆಯಾದ ಬಿಬಿಎಮ್‌ಪಿ ಚುನಾವಣೆಯಲ್ಲಿ 56% ಬೆಂಗಳೂರಿಗರು ಮತ ಚಲಾಯಿಸಲಿಲ್ಲ. ಅದರಲ್ಲಿ ಮಧ್ಯಮ ವರ್ಗ ಮತ್ತು ಯುವಕರ ಸಂಖ್ಯೆ ಇನ್ನೂ ಹೆಚ್ಚು. ಈ ಮುಂಬರುವ ಬಿಬಿಎಮ್‌ಪಿ ಚುನಾವಣೆಯು ನಮ್ಮ ಉತ್ತಮ ಕಾರ್ಪೋರೇಟರ್‌ಗಳು ಮತ್ತು ಸರ್ಕಾರದ ಹುಡುಕಾಟಕ್ಕೆ ಒಂದು ಮುಖ್ಯ ಘಟ್ಟವಾಗಬಹುದು. ಬೆಂಗಳೂರು ನಗರವು ತನ್ನ ನಾಗರೀಕರು ಮತ್ತು ನಿವಾಸಿಗಳಿಗೆ ಒಂದು ಉತ್ತಮ ನಗರವಾಗಿ ಬೆಳೆಯಲೇಬೇಕು. ಈ ಸಮಯವು ನಮ್ಮಲ್ಲಿ ಹೆಚ್ಚಿನ ಜನರು ನಮ್ಮ ನಗರದ ಭವಿಷ್ಯವನ್ನು ರೂಪಿಸುವಲ್ಲಿ ಸಕ್ರಿಯ ಆಸಕ್ತಿ ಬೆಳೆಸಿಕೊಳ್ಳುವ ಕಾಲವಾಗಿದೆ. ನಿಮ್ಮ, ನನ್ನ ಹಾಗೂ ಈ ನಗರದ ರಾಜಕೀಯ ವ್ಯವಸ್ಥೆಯ ಬದಲಾವಣೆಗಾಗಿ ದಯವಿಟ್ಟು ಮತ ಹಾಕಲು ನೊಂದಾಯಿಸಿಕೊಳ್ಳಿ ಮತ್ತು ಈ ಚುನಾವಣೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ. ನಮ್ಮ ಬೆಂಗಳೂರಿನ ಉತ್ತಮ ಮತ್ತು ಸ್ವಚ್ಛ ಕಾರ್ಪೋರೇಟರ್‌ಗಳು ಮತ್ತು ಆಡಳಿತದ ಹುಡುಕಾಟವನ್ನು, ಕೇವಲ ನಮ್ಮ ಮತ ಮಾತ್ರ ತೋರಿಸಬಲ್ಲದು.

# 6

# ಚುನಾವಣೆ ಪ್ರಕ್ರಿಯೆಯನ್ನು ಅದುಮಲು ಯತ್ನಿಸುತ್ತಿರುವ ಸರ್ಕಾರ

ಡೆಕ್ಕನ್ ಕ್ರೋನಿಕಲ್ ಜುಲೈ 6, 2015

ಬಿಬಿಎಮ್‌ಪಿ ಚುನಾವಣಾ ಪ್ರಕ್ರಿಯೆಯನ್ನು ನಡೆಸಲು ಮತ್ತು ಪೂರ್ಣಗೊಳಿಸಲು ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿದ 8 ವಾರಗಳ ಸಮಯವನ್ನು ಜಿಲ್ಲಾ ಉಸ್ತುವಾರಿ ಸಚಿವರನ್ನೊಳಗೊಂಡಂತೆ ರಾಜ್ಯ ಸರ್ಕಾರ ಮತ್ತು ಕೆಲವು ಮಂತ್ರಿಗಳು ದುರುಪಯೋಗಪಡಿಸಿಕೊಳ್ಳುವುದನ್ನು ಗಮನಿಸಿದಾಗ ನನಗೆ ಆಶ್ಚರ್ಯವಾಗುತ್ತದೆ. ಇದೇ ರಾಜಕೀಯ ಮತ್ತು ಇದು ಸ್ಪಷ್ಟವಾಗಿ ನ್ಯಾಯಾಲಯಕ್ಕೆ ವಂಚಿಸುವ ಪ್ರಯತ್ನವಾಗಿದೆ. ಕರ್ನಾಟಕ ಸರ್ಕಾರವು ಚುನಾವಣೆಯನ್ನು ನಡೆಸಲು ಹೆಚ್ಚಿನ ಸಮಯ ಕೊಡುವಂತೆ ಸರ್ವೋಚ್ಚ ನ್ಯಾಯಾಲಯಕ್ಕೆ ಮನವಿ ಮಾಡಿದೆ. ಹೆಚ್ಚಿನ ಸಮಯ ಕೊಡುವ ಸಂದರ್ಭದಲ್ಲಿ, ಸರ್ವೋಚ್ಚ ನ್ಯಾಯಾಲಯವು ಕರ್ನಾಟಕ ಉಚ್ಚ ನ್ಯಾಯಾಲಯದ ನಿರ್ಣಯವಾದ ಈಗಿನ ವಾರ್ಡ್‌ಗಳಲ್ಲಿ ಚುನಾವಣೆ ಮಾಡುವಂತೆ ರಾಜ್ಯ ಸರ್ಕಾರ ಮತ್ತು ರಾಜ್ಯ ಚುನಾವಣಾ ಆಯೋಗಕ್ಕೆ ನಿರ್ದೇಶಿಸಿದ ತೀರ್ಪನ್ನು ಎತ್ತಿ ಹಿಡಿದಿದೆ.

ಸರ್ವೋಚ್ಚ ನ್ಯಾಯಾಲಯವು 8 ವಾರಗಳ ಕಾಲಾವಕಾಶವನ್ನು ನೀಡಿತು. ಈ ಕಾಲಾವಕಾಶವನ್ನು ಬಿಬಿಎಂಪಿ ಚುನಾವಣಾ ಪ್ರಕ್ರಿಯೆಗಳನ್ನು ಪ್ರಾರಂಭಿಸಲು ಅಂದರೆ, ಮತದಾರರ ಪಟ್ಟಿ ತಯಾರಿಸುವುದು, ನವೀಕರಿಸುವುದು ಮತ್ತು ಇತರ ಪ್ರಕ್ರಿಯೆಗಳನ್ನು ಕೈಗೆತ್ತಿಕೊಳ್ಳುವುದಕ್ಕೆ ಬಳಸಿಕೊಳ್ಳಬಹುದು. ಈ 8 ವಾರಗಳ ಕಾಲಾವಕಾಶದಲ್ಲಿ ಮೂರು ವಿಭಾಗಗಳ ವಿಭಜನೆಯ ಕಾರ್ಯವನ್ನು ತ್ವರಿತವಾಗಿ ಮುಂದುವರೆಸಿ ಚುನಾವಣೆಯನ್ನು ಸಂಪೂರ್ಣವಾಗಿ ತೆಗೆದುಹಾಕುವ ಯೋಚನೆಯನ್ನು ಕರ್ನಾಟಕ ಸರ್ಕಾರದ ಮಂತ್ರಿಗಳೇನಾದರೂ ಮಾಡಿದ್ದಲ್ಲಿ, ಇದು ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ನಿಂದನೆ ಮಾಡಿದ ಹಾಗೆ ಆಗುತ್ತದೆ. ಹಾಗೆಯೇ ಸಂವಿಧಾನಾತ್ಮಕ ಆದೇಶಗಳನ್ನೂ ಸಂಪೂರ್ಣವಾಗಿ ನಿರ್ಲಕ್ಷಿಸಿದಂತಾಗುತ್ತದೆ.

ರಾಜ್ಯ ಚುನಾವಣಾ ಆಯೋಗವು, ಸಂವಿಧಾನ ಮತ್ತು ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಮುಕ್ತ ಹಾಗೂ ನ್ಯಾಯೋಚಿತವಾಗಿ ಬಿಬಿಎಂಪಿ ಚುನಾವಣೆಯನ್ನು ನಡೆಸುವ ಜವಾಬ್ದಾರಿ ಹೊಂದಿರುವುದನ್ನು ಖಚಿತಪಡಿಸಬೇಕು.

ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದೆ ಎಂದು ಖಚಿತಪಡಿಸಿಕೊಳ್ಳಲು ನಾನು ರಾಜ್ಯ ಚುನಾವಣಾ ಆಯೋಗವನ್ನು ಒತ್ತಾಯಿಸುತ್ತಿದ್ದೇನೆ. ಹಾಗೆಯೇ ಚುನಾವಣೆಗೆ ಹೊಸ ದಿನಾಂಕಗಳನ್ನು ಆದಷ್ಟು ಮುಂಚಿತವಾಗಿಯೇ ನಿಗದಿಪಡಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಸ್ಪಷ್ಟವಾದ ಆದೇಶಗಳ ಹೊರತಾಗಿಯೂ, ಸರ್ಕಾರವು ಚುನಾವಣಾ ಪ್ರಕ್ರಿಯೆಗೆ ಅಸ್ಪಷ್ಟವಾದುದನ್ನು ಮತ್ತು ಪರಿಭ್ರಮಣೆಯನ್ನು ಪ್ರಚೋದಿಸಲು ಪ್ರಯತ್ನಿಸಿದರೆ, ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ವ್ಯಾಪ್ತಿಯನ್ನು ಮತ್ತಷ್ಟು ನಿರ್ದೇಶನ ಹಾಗೂ ಸ್ಪಷ್ಟತೆಗಾಗಿ ನಾನು ಕೇಳಿಕೊಳ್ಳುತ್ತೇನೆ.

# 7

# ಬೆಳ್ಳಂದೂರು ಕೆರೆಯನ್ನು ಕೊಲ್ಲುತ್ತಿರುವ ಸರ್ಕಾರದ ನಿರ್ಲಕ್ಷ್ಯ

ಡೆಕ್ಕನ್ ಕ್ರೋನಿಕಲ್ ನವೆಂಬರ್ 5, 2015

ಬೆಳ್ಳಂದೂರು ಕೆರೆ ನಾಶವಾಗಿರುವುದು ನಮ್ಮ ನಗರಕ್ಕೆ ಅತ್ಯಂತ ಅವಮಾನಕರ ಮತ್ತು ಇಲ್ಲಿ ಯಾವುದೂ ಸರಿ ಇಲ್ಲವೆಂಬುದನ್ನು ಎತ್ತಿ ತೋರಿಸುತ್ತಿದೆ. ದಶಕಗಳಿಂದಲೂ ನಮ್ಮ ನಗರದ ಭಾಗವಾಗಿದ್ದ ಈ ಕೆರೆಯು ನಿಧಾನವಾಗಿ ನಾಶ ಹೊಂದಿದೆ. ಆಡಳಿತಾತ್ಮಕ ಮತ್ತು ರಾಜಕೀಯದ ನಿರಾಸಕ್ತಿಯ ಪರಿಣಾಮವಾಗಿ ನಮ್ಮ ನಗರದ ಅಭಿವೃದ್ಧಿಯ ಕುಸಿತಕ್ಕೆ ಇದು ಉದಾಹರಣೆಯಾಗಿ ಎದ್ದು ಕಾಣಿಸುತ್ತಿದೆ.

ಬೆಂಗಳೂರಿನ ಅತಿ ದೊಡ್ಡ ಕೆರೆಯು ಬೆಂಕಿ ಮತ್ತು ಕಲುಷಿತ ನೊರೆಯಿಂದ ಕೂಡಿದೆ. ಒಂದು ಕಾಲದಲ್ಲಿ ಹಲವಾರು ಹಳ್ಳಿಗಳಿಗೆ ಜೀವಸೆಲೆಯಾಗಿ, ಅಂತರ್ಜಲದ ಅತ್ಯುತ್ತಮ ಸಂಪನ್ಮೂಲವಾಗಿದ್ದ ಈ ಕೆರೆ ಈಗ, ಸ್ಥಳೀಯರಿಗೆ ಶಾಪವಾಗಿ ಪರಿಣಮಿಸಿದೆ. ಬುರುಗು ಹಾಗು ಬೆಂಕಿಯ ಜ್ವಾಲೆಯ ಮೇಲೆ ನಿರಾಸಕ್ತಿ ಒಂದೆಡೆಯಾದರೆ, ಅಸಹ್ಯತರಿಸುವ, ಲಜ್ಜೆಗೆಟ್ಟ, ಶಿಕ್ಷೆಯಿಲ್ಲದ ಕಾನೂನು ಮತ್ತು ಮಾರ್ಗದರ್ಶನಗಳು ಮತ್ತೊಂದೆಡೆ. ಸರ್ಕಾರಿ ಏಜೆನ್ಸಿಗಳ ಉದಾಸೀನತೆಯಿಂದಾಗಿ ಬೆಳ್ಳಂದೂರು ಕೆರೆಯು ಕೊಳಚೆ ನೀರಿನ ಆಗರವಾಗಿದೆ. ನಿಯಂತ್ರಣ ಏಜೆನ್ಸಿಗಳಾಗಲೀ

ಅಥವಾ ಖಾಸಗಿ ವ್ಯಕ್ತಿಗಳಾಗಲೀ ಮತ್ತು ಕಾರ್ಪೋರೇಟ್‌ಗಳಾಗಲೀ ಯಾರೂ ಇದಕ್ಕೆ ಹೊಣೆಗಾರಿಕೆಯನ್ನು ಹೊರುತ್ತಿಲ್ಲ ಬದಲಾಗಿ, ಇರುವ ಕಾನೂನನ್ನೂ ಉಲ್ಲಂಘಿಸುತ್ತಿದ್ದಾರೆ. ವಿವಿಧ ಸರ್ಕಾರಿ ಕಾರ್ಯಗಳು ಸಾಮಾನ್ಯವಾಗಿ ಹಣ ನೀಡುವ ಅಥವಾ ಹಣದ ಕೊಡುಗೆಯನ್ನು ಕೊಡುವ ಬಗ್ಗೆ ಮಾತನಾಡುತ್ತವೆಯೇ ಹೊರತು ಶಿಕ್ಷೆಗೆ ಗುರಿಪಡಿಸುವುದರ ಬಗ್ಗೆ ಒಂದೇ ಒಂದು ಪದವನ್ನೂ ಉಚ್ಚರಿಸುವುದಿಲ್ಲ. ಆ ಪ್ರದೇಶದ ನಿವಾಸಿಗಳು ಮತ್ತು ನಾಗರೀಕರು ಇಂತಹ ಘೋಷಣೆಗಳನ್ನು ಕೇಳಿಯೇ ಆನಂದಿಸಬೇಕು. ಇದನ್ನು ನಿಲ್ಲಿಸಲು ಇದೇ ಸರಿಯಾದ ಸಮಯ. ಸರ್ಕಾರವು ತಕ್ಷಣವೇ ಕೆರೆಯನ್ನು ಸ್ವಚ್ಛಗೊಳಿಸಬೇಕು. ಈ ಸ್ಥಿತಿಗೆ ಕಾರಣವೇನು ಮತ್ತು ಯಾರು ಇದಕ್ಕೆ ಜವಾಬ್ದಾರರು ಎಂಬುದನ್ನು ಶೀಘ್ರವೇ ವಿಚಾರಣೆ ನಡೆಸಬೇಕು. ಇದನ್ನು ಈಗಲೇ ನಾವು ಮಾಡದಿದ್ದಲ್ಲಿ ಇಂತಹ ಸಂದರ್ಭಗಳು ಪುನಃ ಬೇರೆ ಕಡೆಗಳಲ್ಲಿಯೂ ಉಂಟಾಗುತ್ತದೆ.

**ಕೆರೆಯ ವಿಷಯದಲ್ಲಿ ಗಾಬರಿಗೊಳಿಸುವ ಸತ್ಯಗಳು:**

ಕೆರೆ ಅಭಿವೃದ್ಧಿ ನಿಗಮವು ಬೆಳ್ಳಂದೂರು ಕೆರೆಯ ನೀರನ್ನು ಪರೀಕ್ಷಿದಾಗ, ಹೆಚ್ಚಿನ ಮಾಲಿನ್ಯಕಾರಕಗಳು ಮತ್ತು ರಾಸಾಯನಿಕಗಳೊಂದಿಗೆ ನೀರಿನ ಗುಣಮಟ್ಟವು ನಿರಂತರವಾಗಿ ಕ್ಷೀಣಿಸುತ್ತಿರುವುದು ಕಂಡುಬಂದಿದೆ. ಬೆಂಕಿ ಕಾಣಿಸುವುದಕ್ಕೆ ಏನು ಕಾರಣ? ವಾಸ್ತವವಾಗಿ ಕೈಗಾರಿಕಾ ತ್ಯಾಜ್ಯವೇ ಇದಕ್ಕೆ ಪ್ರಮುಖ ಕಾರಣ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ಗೆ ಸಂಪರ್ಕ ಹೊಂದಿರುವ ಸೆಂಟರ್ ಫಾರ್ ಎಕಾಲಾಜಿಕಲ್ ಸೈನ್ಸಸ್ (ಸಿಇಎಸ್)ನ ಪ್ರೊಫೆಸರ್ ಟಿ.ವಿ. ರಾಮಚಂದ್ರ ಅವರ ಸಂಶೋಧನೆಯು, ಬೆಂಗಳೂರಿನ ಜಲಸಂಪನ್ಮೂಲಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಸಂಸ್ಕರಿಸದ ಕೈಗಾರಿಕಾ ತ್ಯಾಜ್ಯಗಳು ಸೇರುವುದರಿಂದ ಬುರುಗು ರಚನೆಯಾಗುತ್ತಿದೆ ಎಂದು ತಿಳಿಸುತ್ತದೆ. ಹಾಗೆಯೇ ಬೆಳ್ಳಂದೂರು ಕೆರೆಯಲ್ಲಿ ಕಂಡುಬರುವ ಬೆಂಕಿಯು ಕೈಗಾರಿಕಾ ತ್ಯಾಜ್ಯಗಳು ಮತ್ತು ಫಾಸ್ಫೇಟ್‌ನ ಮಿಶ್ರಣದಿಂದಾಗಿ ಉಂಟಾಗುತ್ತಿದೆ ಎಂದು ತಿಳಿಸಿದ್ದಾರೆ.

"ಹಲವಾರು ರಾಜ್ಯ ಸಂಸ್ಥೆಗಳು, ಅವುಗಳ ನಡುವಿನ ಸಮನ್ವಯದ ಕೊರತೆ ಮತ್ತು ಹೊಣೆಗಾರಿಕೆಯ ಸಂಪೂರ್ಣ ಕೊರತೆಯಿರುವ ನಿಷ್ಕ್ರಿಯ ವ್ಯವಸ್ಥೆಯು ಸಮಸ್ಯೆಯನ್ನು ತಂದೊಡ್ಡುತ್ತದೆ" ಎಂದು ಅವರು ಒತ್ತಿ ಹೇಳಿದ್ದಾರೆ.

1973 ರಿಂದ 2007ರ ನಡುವೆ ಬೆಂಗಳೂರಿನಲ್ಲಿ ನಿರ್ಮಾಣ ಪ್ರದೇಶವು 466% ಏರಿಕೆಯಾದರೆ, 51 ಕ್ರಿಯಾತ್ಮಕ ತೇವಾಂಶವುಳ್ಳ ಪ್ರದೇಶಗಳು ಅದೇ ಅವಧಿಯಲ್ಲಿ

17ಕ್ಕೆ ಕುಸಿದಿದೆ. ಕೆರೆಗಳ ಸಂಖ್ಯೆಯೂ 159ರಿಂದ 93ಕ್ಕೆ ಇಳಿದಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಬೆಳ್ಳಂದೂರು–ಅಗರ ಕೆರೆಗಳ ವಲಯದಲ್ಲಿ ಯೋಜಿಸಲಾದ ಬೃಹತ್ ವಾಣಿಜ್ಯ ಯೋಜನೆಯು ಅನೇಕ ರೀತಿಯಲ್ಲಿ ನಿಯಮಗಳನ್ನು ಉಲ್ಲಂಘಿಸುತ್ತಿದೆ. ಅನೇಕ ಪ್ರದೇಶಗಳನ್ನು ಸೂಕ್ಷ್ಮ ಪ್ರದೇಶಗಳೆಂದು ಘೋಷಿಸಲಾಗಿ ಎಲ್ಲಾ ವಲಯಗಳಿಗೆ ಅನುಸರಿಸುವ ನಿಯಮಗಳನ್ನು ರಚಿಸಿದ್ದರೂ ಅದಕ್ಕೆ ಹೊರತಾಗಿ ನಿಯಮಗಳ ಉಲ್ಲಂಘನೆ ನಡೆಸುತ್ತಿರುವುದು ಮತ್ತು ಅನುಮೋದನೆಗಳನ್ನು ನೀಡುತ್ತಿರುವುದು ವಿಪರ್ಯಾಸ. ಮಾಸ್ಟರ್ ಪ್ಲಾನ್ ಝೋನಿಂಗ್ ನಕ್ಷೆಗಳು ಹಲವಾರು ವಿಷಯಗಳನ್ನು ಬಹಿರಂಗಪಡಿಸುತ್ತವೆ. 'ಯೋಜನೆಗೆ ಒಳಪಟ್ಟ ಪ್ರದೇಶಗಳು ಸಾರ್ವಜನಿಕ ಬಳಕೆಗೆ, ಕಣಿವೆ ಮತ್ತು ಬೆಳ್ಳಂದೂರು ಕೆರೆ ಹಾಗೂ ಸುತ್ತಲಿನ ಪ್ರದೇಶ ಮತ್ತು ಕಾಲುವೆಗಳನ್ನು ಒಳಗೊಂಡಿದೆ'. ವಾಸ್ತವವಾಗಿ ಇಲ್ಲಿ ಯಾವುದನ್ನೂ ಖಾಸಗೀ ಉದ್ಯಮಗಳ ಅಭಿವೃದ್ಧಿಗೆ ಅವಕಾಶ ಮಾಡಿಕೊಡುವಂತಿಲ್ಲ. ಆದರೆ, ರಹಸ್ಯ ಕಾರಣಗಳಿಂದಾಗಿ ರಾಜ್ಯ ಸರಕಾರಿ ಸಂಸ್ಥೆಗಳು ಮೂಕಪ್ರೇಕ್ಷಕರಾಗಿ ಕುಳಿತಿವೆ! ಅದೃಷ್ಟವಶಾತ್, ನ್ಯಾಯಾಲಯಗಳು, ವಿಶೇಷವಾಗಿ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ (ಎನ್‌ಜಿಟಿ) ಮಧ್ಯಸ್ಥಿಕೆ ವಹಿಸಿ 2ನೇ ನವೆಂಬರ್ 2015ಕ್ಕೆ ಆದೇಶವೊಂದನ್ನು ಹೊರಡಿಸಿತು. ಮತ್ತಷ್ಟು ಆದೇಶಗಳು ಬರುವ ತನಕ ಜಲ ಪ್ರದೇಶಗಳ ಸುತ್ತಲೂ ಎಂಟು ಯೋಜನೆಗಳ ನಿರ್ಮಾಣ ಕಾರ್ಯಗಳನ್ನು ಸ್ಥಗಿತಗೊಳಿಸಲು ಆದೇಶಿಸಿತು. ಈ ರೀತಿಯಲ್ಲಿ ನ್ಯಾಯಾಲಯವು ಮತ್ತು ನ್ಯಾಯಾಧಿಕರಣವು ನಗರದ ಪರವಾಗಿ ಆದೇಶ ನೀಡಿತು.

ಬೆಳ್ಳಂದೂರು ಕೆರೆಯ ಸಮಸ್ಯೆಯು ಕೇವಲ ಪರಿಸರಕ್ಕೆ ಮಾತ್ರ ಹಾನಿಯುಂಟುಮಾಡುತ್ತಿಲ್ಲ. ಸಾರ್ವಜನಿಕರ ಆರೋಗ್ಯದ ಮೇಲೂ ನೇರವಾಗಿ ಪರಿಣಾಮ ಬೀರುತ್ತಿದೆ. ನಿವಾಸಿಗಳಿಗೆ ಉಸಿರಾಟದ ತೊಂದರೆ ದಿನೇ ದಿನೇ ಹೆಚ್ಚುತ್ತಿದೆ, ಚರ್ಮದ ಖಾಯಿಲೆಯಿಂದ ಬಳಲುವಂತಾಗಿದೆ. ಅಷ್ಟೇ ಅಲ್ಲದೆ, ಗಬ್ಬು ವಾಸನೆಯಿಂದ ಕೂಡಿದ ಗಾಳಿಯನ್ನೇ ಉಸಿರಾಡುತ್ತಾ ಬದುಕುವಂತಾಗಿದೆ. ಇದರ ಪರಿಣಾಮವಾಗಿ ಬೆಂಗಳೂರು ನಾಗರೀಕರ ಹತಾಶೆಯ ಮಟ್ಟ ಏರುತ್ತಿದೆ. ಸಮಸ್ಯೆಯನ್ನು ಪರಿಹರಿಸಲು ಆಡಳಿತ ವರ್ಗದ ಗಮನ ಸೆಳೆಯಲು ಆಗಾಗ ಚಳುವಳಿಗಳನ್ನು ಮಾಡಲಾಗುತ್ತಿದೆ ಮತ್ತು ಸಾರ್ವಜನಿಕ ಹಿತಾಸಕ್ತಿಯ ದಾವೆಗಳನ್ನು ಹಾಕಲಾಗುತ್ತಿದೆ.

ಸಂಚಿತಾ ಝಾ ಅವರು ಮುಖ್ಯಮಂತ್ರಿಗಳಿಗೆ ಕಳುಹಿಸಿದ change.org ದಾವೆಯು ನಾಗರೀಕರ ಹತಾಶೆಯ ಮಟ್ಟ ಎಷ್ಟಾಗಿದೆ ಎಂಬುದಕ್ಕೆ ಒಂದು ಉದಾಹರಣೆಯಾಗಿದೆ.

ಇಂತಹ ಕಾರ್ಯಕ್ಕೆ ನಾನೂ ಬೆಂಬಲಿಸುತ್ತೇನೆ ಎಂದು ಬರೆದ ಸಾವಿರಾರು ಜನರ ಸಹಿಯನ್ನು ಸಂಗ್ರಹಿಸಲಾಗಿದೆ. "ಬೆಳ್ಳಂದೂರು ಕೆರೆಯನ್ನು ಸ್ವಚ್ಛಗೊಳಿಸಿ" ಎಂದು ನಾಗರೀಕರು ಒತ್ತಾಯಿಸಿದ್ದಾರೆ.

ಅತ್ಯುತ್ತಮ ಕಂಪನಿಗಳ, ಬಾಹ್ಯಾಕಾಶಕ್ಕೆ ನೌಕೆಗಳನ್ನು ಕಳುಹಿಸುತ್ತಿರುವ ಮತ್ತು ಸ್ಟಾರ್ಟ್ ಅಪ್‌ಗಳ ತವರಾಗಿರುವ ಈ ನಗರ ಹೀಗೇಕೇ ಬಳಲುತ್ತಿದೆ? ಬೆಳ್ಳಂದೂರು ಕೆರೆಯನ್ನೂ ಒಳಗೊಂಡಂತೆ ನಮ್ಮ ನಗರದ ಬೆಳವಣಿಗೆಗೆ ಮತ್ತು ಅಭಿವೃದ್ಧಿಗೆ ಅಡ್ಡಿಯಾಗಿರುವ ಸವಾಲುಗಳನ್ನು ಎದುರಿಸಲು ನಮ್ಮ ಸರ್ಕಾರವೇಕೆ ಬದ್ಧತೆಯನ್ನು ಸಾಮರ್ಥ್ಯವನ್ನು ತೋರಿಸುತ್ತಿಲ್ಲ? ಈ ಪರಿಸ್ಥಿತಿಗೆ ಕಾರಣರಾರು? ಕೆರೆಗೆ ಕಲುಷಿತ ದ್ರವಗಳ ನಿರಂತರ ಹರಿವನ್ನು ನಿಲ್ಲಿಸಲು ಅಥವಾ ಕೆರೆಯ ಸುತ್ತಲಿನ ಜಾಗವನ್ನು ಮತ್ತು ಅದಕ್ಕೆ ಹತ್ತಿರದಲ್ಲಿರುವ ಸ್ಟಾರ್ಮ್ ವಾಟರ್ ಡ್ರೈನ್ಸ್‌ಗಳಲ್ಲಿ (ಎಸ್‌ಡಬ್ಲ್ಯೂಡಿ) ಭೂ ಅತಿಕ್ರಮಣವನ್ನು ಮಾಡುತ್ತಿರುವ ರಿಯಲ್ ಎಸ್ಟೇಟ್ ಕಂಪನಿಗಳನ್ನು ತಡೆಯಲು ಸರ್ಕಾರ ಏನು ಮಾಡುತ್ತಿದೆ? ಸಮಸ್ಯೆಯ ನಂತರ ತಾತ್ಕಾಲಿಕ ಪರಿಹಾರಕ್ಕಾಗಿ ರಾಸಾಯನಿಕಗಳನ್ನು ಸಿಂಪಡಿಸುವುದು ಮತ್ತು ಬಲೆಯಿಂದ ಮುಚ್ಚುವುದರಿಂದ ಬೆಳ್ಳಂದೂರು ಕೆರೆಯನ್ನು ಉಳಿಸಲು ಆಗುವುದಿಲ್ಲ. ಸಮಸ್ಯೆಯನ್ನು ತಕ್ಷಣ ಪರಿಹರಿಸಲು ರೂ. 250 ಕೋಟಿಯನ್ನು ಕೇಂದ್ರ ಸರ್ಕಾರದಿಂದ ಕೇಳಿದರೆ ಅದು ಸರಿಯಾದ ಕ್ರಮವೆನಿಸುವುದಿಲ್ಲ. ಸಮಸ್ಯೆಗೆ ಇದೊಂದೇ ಪರಿಹಾರವೆಂದಾದರೆ, ಕೊಳಚೆ ಸಂಸ್ಕರಣಾ ಘಟಕಗಳಿಗೆ ಹಣ ಸಹಾಯಕ್ಕಾಗಿ ಏಕಿಷ್ಟು ಸಮಯ ಬೇಕಾಯಿತು?

ಬೆಳ್ಳಂದೂರು ಕೆರೆ ನಮ್ಮ ನಗರದ ರಾಜಾರೋಷ ದುರುಪಯೋಗದ ಮತ್ತೊಂದು ಚಿಹ್ನೆ. ನಾನು ಮತ್ತೆ ಮತ್ತೆ ಹೇಳುತ್ತಿರುವುದೇನೆಂದರೆ ನಮ್ಮ ಕೆರೆ, ನೀರು ಮತ್ತು ಸಾರ್ವಜನಿಕ ಆರೋಗ್ಯವನ್ನೊಳಗೊಂಡಂತೆ ಇರುವ ಸವಾಲುಗಳಿಗೆ ಯೋಜನಾಬದ್ಧ ವಿಧಾನವು ನಮಗೆ ಬೇಕು. ಇವೆಲ್ಲವೂ ಒಂದಕ್ಕೊಂದು ಹೊಂದಿಕೊಂಡಂತೆ ಇರುವ ಸಮಸ್ಯೆಗಳು. ಆದ್ದರಿಂದ ಸಂಘಟಿತ ರೀತಿಯಲ್ಲಿ ವ್ಯವಹರಿಸಬೇಕು. ಬೆಂಗಳೂರು ಅಭಿವೃದ್ಧಿಗೆ ಸರ್ಕಾರದಲ್ಲಿಯೇ ಇರುವ ಒಬ್ಬ ಸಚಿವರನ್ನು ಪೂರ್ಣ ಪ್ರಮಾಣದ ಜವಾಬ್ದಾರಿಯುತ ಸ್ಥಾನಕ್ಕೆ ಆಯ್ಕೆಮಾಡಬೇಕು. ಹಾಗಾದಲ್ಲಿ, ಬೆಂಗಳೂರಿಗೆ ಹೊಣೆಗಾರಿಕೆಯ ಸಮಸ್ಯೆಯನ್ನು ಪರಿಹರಿಸಲು ಉತ್ತಮ ಹೆಜ್ಜೆ ಇಟ್ಟಂತಾಗುತ್ತದೆ. ಈಗ ಬೆಂಗಳೂರಿಗೆ ಜವಾಬ್ದಾರರಾಗಿರುವ ವಿವಿಧ ಏಜೆನ್ಸಿಗಳ ನಡುವೆ ಹೊಣೆಗಾರಿಕೆಯನ್ನು ತಪ್ಪಿಸಿಕೊಳ್ಳುವುದು ನಿಲ್ಲುತ್ತದೆ. ಇದರಿಂದ, ನಾಗರೀಕರು ಸ್ಪಷ್ಟ ಜವಾಬ್ದಾರಿಯುತ ಸರ್ಕಾರವನ್ನು ನೋಡಬಹುದು. ಬೆಂಗಳೂರಿನ ಹೊಸ

ಸಚಿವರಾದ ಕೆ.ಜೆ. ಜಾರ್ಜ್ ಅವರು ದಶಕಗಳಿಂದ ನಮ್ಮ ನಗರವನ್ನು ಕಡೆಗಣಿಸಿದ್ದಾರೆ ಮತ್ತು ದುರ್ಬಳಕೆ ಮಾಡಿಕೊಂಡಿದ್ದಾರೆ. ಈಗಲಾದರೂ ಅವರ ಕಾರ್ಯವನ್ನು ಬೆಳ್ಳಂದೂರು ಕೆರೆಯಿಂದಲಾದರೂ ಪ್ರಾರಂಭಿಸುತ್ತಾರೆಂದು ನಾನು ನಂಬಿದ್ದೇನೆ.

# 8

# ಸುಂದರವೂ ಅಲ್ಲ, ಸ್ವಚ್ಛವೂ ಅಲ್ಲ: ಬೆಂಗಳೂರು ಆಗುತ್ತಿದೆ ಜೀವಿಸಲಾಗದ ನಗರ

ದ ನ್ಯೂಸ್ ಮಿನಿಟ್ ಏಪ್ರಿಲ್ 12, 2016

ಗುಣಮಟ್ಟದ ಎಲ್ಲಾ ಮಾನದಂಡಗಳಲ್ಲಿಯೂ ಬೆಂಗಳೂರು ನಗರ ತನ್ನ ಸ್ಥಾನವನ್ನು ಕಳೆದುಕೊಳ್ಳುತ್ತಿದೆ. ಮುಂದುವರೆದು ನೋಡಿದಾಗ ಶುದ್ಧ ನಗರಗಳ ಪಟ್ಟಿಯಲ್ಲಿ 7 ಸ್ಥಾನದಲ್ಲಿದ್ದ ನಗರ 38ನೇ ಸ್ಥಾನಕ್ಕೆ ಕುಸಿದಿದೆ.

ಇದು ಆಡಳಿತವು ಬಹು ಕಾಲದಿಂದಲೂ ಸಮಸ್ಯೆಯನ್ನು ನಿರ್ಲಕ್ಷಿಸಿದ ಸೂಚನೆಯಾಗಿದೆ. ಈ ರೀತಿಯ ಸಂಶಯಾಸ್ಪದ ಭಿನ್ನತೆಯು ಮತ್ತೊಂದು ವೈಫಲ್ಯವನ್ನು ಅನುಸರಿಸುತ್ತದೆ. ಅದೆಂದರೆ, ಅಗ್ರ ಸ್ಥಾನದಲ್ಲಿರುವ 100 ಸ್ಮಾರ್ಟ್ ನಗರಗಳ ಪಟ್ಟಿಯಲ್ಲಿ ನಮ್ಮ ನಗರವನ್ನು ಪರಿಗಣಿಸಲಾಗದು. ನಮ್ಮ ನಗರವು ಸ್ಪರ್ಧೆಯಲ್ಲಿ ಎಣಿಕೆ ಮಾಡಲು ಕೂಡಾ ಅರ್ಹವಾಗಿಲ್ಲ.

"ಉದ್ಯಾನ ನಗರಿ" ಮತ್ತು "ಕೆರೆಗಳ ನಗರ" ಎಂದೇ ಖ್ಯಾತಿ ಗಳಿಸಿದ್ದ ಬೆಂಗಳೂರು ಹತಾಶೆಗೊಂಡ ನಾಗರೀಕರ ಜೊತೆ ಅಭಿವೃದ್ಧಿಯಲ್ಲಿ ವೇಗವಾಗಿ ಕುಸಿಯುತ್ತಿದೆ. ಈ ಹಿಂದಿನ ಶೀರ್ಷಿಕೆಗಳಿಗೆ ವ್ಯತಿರಿಕ್ತವಾಗಿ ಪ್ರಸಕ್ತ ಜನಪ್ರಿಯವಾಗಿರುವುದು "ಕಸದ ನಗರ" ಅಥವಾ "ರಸ್ತೆಹೊಂಡಗಳ ನಗರ" ಎಂದು!

ನಗರದ ನಾಗರೀಕರು ಸತತವಾಗಿ ನಿರಾಶಾದಾಯಕ ಮತ್ತು ಭ್ರಷ್ಟ ಆಡಳಿತಗಳಿಂದ ದ್ರೋಹವನ್ನು ಅನುಭವಿಸುತ್ತಿದ್ದಾರೆ. ಮಹಾನಗರದ ಜನತೆಗೆ ನಂಬಿಕೆಯೇ ಇಲ್ಲವಾಗಿರುವುದು ನಗರಕ್ಕೆ ಕಪ್ಪು ಚುಕ್ಕೆಯಾಗಿದೆ. ಭ್ರಷ್ಟಾಚಾರ ಮತ್ತು ಹೊಣೆಗಾರಿಕೆಯಿಲ್ಲದಿರುವುದು ಈಗ ಬೆಂಗಳೂರಿನ ಇನ್ನೊಂದು ಹೆಸರಾಗಿದೆ. ಅಮೂಲ್ಯ ಕೆರೆ ದಡಗಳನ್ನು ನಿರ್ಲಜ್ಜ ಗೃಹ ಸಮಾಜಗಳು ಆಕ್ರಮಿಸಿಕೊಂಡಿವೆ, ಭ್ರಷ್ಟ ಗುತ್ತಿಗೆದಾರರು ನೋಡಿಕೊಳ್ಳುವ ದುರಸ್ತಿಯಾಗಬೇಕಾದ ರಸ್ತೆಗಳು ನಗರದಾದ್ಯಂತ ಹರಡಿವೆ, ಕಂದಾಯದಾರರ ಮತ್ತು ಸಾರ್ವಜನಿಕ ಹಣವನ್ನು ಕೋಟಿಗಟ್ಟಲೆ ಸುರಿದರೂ ಕಸದ ಸಮಸ್ಯೆಯು ನಿವಾರಣೆಯಾಗುವುದಿಲ್ಲ, ಮತ್ತು ರಾಜ್ಯದ ವಿವಿಧ ಘಟಕಗಳು ವರ್ಷಕ್ಕೊಮ್ಮೆಯೂ ತಮ್ಮ ಹಣಕಾಸಿನ ವ್ಯವಹಾರವನ್ನು ಲೆಕ್ಕಪರಿಶೋಧನೆ ನಡೆಸದೆಯೇ ಕೆಲಸ ಮಾಡುತ್ತವೆ. ದುರಾಡಳಿತ ಮತ್ತು ದುರ್ಬಳಕೆಯು ಎಲ್ಲಾ ಕಡೆಯೂ ಕಂಡುಬರುತ್ತಿದೆ!

2014–15ರ ಬಜೆಟ್‌ನಲ್ಲಿ ನಗರ ಮಹಾಸಭೆ ಬಿಬಿಎಮ್‌ಪಿಗೆ ರಸ್ತೆ ಮೂಲಸೌಕರ್ಯ ಯೋಜನೆಗಳಿಗೆ 2,160 ಕೋಟಿ ಹಣ ಕೊಡಲಾಗಿತ್ತು. ಖಾತೆಯ ಪ್ರಕಾರ 1,000 ಕೋಟಿಯ ಯೋಜನೆಗಳನ್ನು ಅನುಮೋದಿಸಲಾಗಿದೆ. ಇದರಲ್ಲಿ 461 ಕೋಟಿಯನ್ನು ಹೇಗೆ ಉಪಯೋಗಿಸಲಾಗಿದೆ ಎನ್ನುವುದಕ್ಕೆ ಯಾವುದೇ ವಿವರವಿಲ್ಲ. 2015–16ರಲ್ಲಿ ಬಿಬಿಎಮ್‌ಪಿಯು ರಸ್ತೆ ಮತ್ತು ಒಳಚರಂಡಿ ನಿರ್ವಹಣೆಗೆ 1882 ಕೋಟಿ ನಿಗದಿಪಡಿಸಿತ್ತು. ಕೆಟ್ಟ ರಸ್ತೆಗಳು ಮತ್ತು ತೆರೆದ ಒಳಚರಂಡಿಗಳು ಇನ್ನೂ ಜನರ ಜೀವವನ್ನು ಬಲಿ ತೆಗೆದುಕೊಳ್ಳುತ್ತಿರುವಾಗ, ಹಣವೆಲ್ಲಿ ಹೋಯಿತು?

ಬಿಬಿಎಮ್‌ಪಿಯು ಅಧಿಕ ಮೊತ್ತವನ್ನು ಘನ ತ್ಯಾಜ್ಯ ನಿರ್ವಹಣೆಗೆ ಉಪಯೋಗಿಸುತ್ತದೆ. 415 ಕೋಟಿಯನ್ನು 2015–16ರ ಬಜೆಟ್‌ನಲ್ಲಿ ನಿಗದಿಪಡಿಸಲಾಗಿತ್ತು, ಆದರೆ ಬೆಂಗಳೂರಿನ ಕಸದ ಸಮಸ್ಯೆಯನ್ನು ನೋಡಿದರೆ, ಈ ಹಣ ಏನಾಯಿತು ಎಂದು ಯಾರಿಗೂ ತಿಳಿದಿಲ್ಲ.

ಬೆಂಗಳೂರಿನ ಜನರು ಇನ್ನೊಂದು ವಿಷಯದಲ್ಲಿ ಕಷ್ಟ ಅನುಭವಿಸುತ್ತಿದ್ದಾರೆ. ನಗರದ ಕೆರೆಗಳು ಬತ್ತಿ ಹೋಗುತ್ತಿವೆ ಮತ್ತು ಶೀಘ್ರವಾಗಿ ಅವುಗಳನ್ನು ಪುನರ್ಜೀವಗೊಳಿಸಬೇಕಿದೆ. ಭಾರತೀಯ ವಿಜ್ಞಾನ ಕೇಂದ್ರ, ಬೆಂಗಳೂರಿನಲ್ಲಿರುವ ಪ್ರೊಫೆಸರ್ ಟಿವಿ ರಾಮಚಂದ್ರ ಅವರ – ಬೆಂಗಳೂರಿನ ಕೆರೆಗಳ ದುಸ್ಥಿತಿ ಎಂಬ ವರದಿಯ ಪ್ರಕಾರ "ಬೆಂಗಳೂರಿನ ನಾಗರೀಕರು ಇಲ್ಲಿನ ಬೆಳವಣಿಗೆಗೆ ಅತ್ಯಂತ ನಂಬಿಕೆಯಿಂದ ಅವಕಾಶ ಮಾಡಿಕೊಟ್ಟರು. ಆದರೆ ಈ ನಂಬಿಕೆಗೆ

ಅವರು ಪಡೆಯುತ್ತಿರುವ ಪ್ರತಿಫಲವೆಂದರೆ – ಕಲ್ಮಶಗೊಂಡ ಗಾಳಿ, ನೀರು ಮತ್ತು ಭೂಮಿಯಾಗಿದೆ. ಹಲವು ಅರೆಸರ್ಕಾರಿ ಸಂಸ್ಥೆಗಳು ತಮ್ಮ ಅನಿಯಂತ್ರಿತ ಯೋಜನೆಗಳಿಂದ, ಅಸಮರ್ಥ ಸಂಸ್ಥೆಗಳಿಂದ ಮತ್ತು ನಿರ್ಲಕ್ಷ್ಯದ ಕೈಗಾರಿಕೆಗಳಿಂದ ಉದ್ಯಾನ ನಗರಿಯು ಇಂದು ಬದುಕಲಸಾಧ್ಯವಾದ ನಗರಿಯಾಗಿದೆ. ಭಾರತದ ಸಂವಿಧಾನದ ಪ್ರಕಾರ ಸ್ವಚ್ಛ ಗಾಳಿ, ನೀರು ಮತ್ತು ವಾತಾವರಣವು ನಾಗರೀಕನ ಮೂಲಭೂತ ಹಕ್ಕಾಗಿದೆ (ಪರಿಚ್ಛೇದ–21)"

ನಗರದ ಅತಿ ದೊಡ್ಡ ಕೆರೆಯಾದ ಬೆಳ್ಳಂದೂರು ಕೆರೆಯು ಬೆಂಗಳೂರು ನಗರವನ್ನು ಜಾಗತಿಕ ಮಟ್ಟದಲ್ಲಿ ಕೆಟ್ಟ ಕಾರಣಗಳಿಗೆ ಪ್ರಸಿದ್ಧಿ ಮಾಡಿದೆ. ಒಂದು ಕಾಲದಲ್ಲಿ ಜಲಚರಗಳಿಂದ ಜೀವಂತವಾಗಿದ್ದ ಕೆರೆಯು ಈಗ ಚರಂಡಿಯ ಕೊಳಚೆ ಸಂಗ್ರಹಣಾ ಕೇಂದ್ರವಾಗಿದೆ. ಬೆಳ್ಳಂದೂರು ಕೆರೆಯು ಕಳೆದ 20 ವರ್ಷಗಳಿಂದ ನಿರ್ಲಕ್ಷತೆ ಮತ್ತು ಕಳಪೆ ನಿರ್ವಹಣೆಯ ಪ್ರತಿಫಲವಾಗಿದೆ. ಬೆಂಗಳೂರಿನಲ್ಲಿ ಹೆಚ್ಚಿನ ಚರ್ಚೆಯು ರಸ್ತೆಗಳು ಮತ್ತು ವಾಹನ ದಟ್ಟಣೆಯ ಬಗ್ಗೆಯಾದರೂ, ಈ ಕೆರೆಯ ಮತ್ತು ನಗರದ ಇತರ ಕೆರೆಯ ಮಾಲಿನ್ಯವು ಸಾರ್ವಜನಿಕರ ಆರೋಗ್ಯ ಮತ್ತು ವಾತಾವರಣದ ಮೇಲೆ ಅಪಾಯಕಾರಿ ಪರಿಣಾಮ ಹೊಂದಿದೆ. ಇದರ ಬೆಲೆಯನ್ನು ಮುಂದಿನ ಪೀಳಿಗೆ ತೆರಬೇಕಾಗುತ್ತದೆ.

ಬೆಂಗಳೂರಿನ ನಾಗರೀಕರು ಮತ್ತು ಆಡಳಿತ ವರ್ಗದವರು ಸಾರಿಗೆಯ ಸಮಸ್ಯೆಗಳಿಂದ ಹೊರಬಂದು ತಮ್ಮ ಗಮನವನ್ನು ವಿಷಮಯವಾಗುತ್ತಿರುವುದ ಕೆರೆಗಳು ಬಗ್ಗೆ ಹರಿಸಬೇಕು. ಯಾಕೆಂದರೆ, ಸಾರಿಗೆ ಸಮಸ್ಯೆಗಳು ಕೆಲವು ಗಂಟೆಗಳ ವಿಳಂಬದಿಂದ ತಾತ್ಕಾಲಿಕ ಅನಾನುಕೂಲತೆಗಳನ್ನು ಉಂಟುಮಾಡಿದರೂ, ಕೆರೆಗಳ ನಾಶವು ನಗರದ ಬಹುಮುಖ್ಯ ವಾತಾವರಣವನ್ನು ಹಾಳುಗೆಡಹುತ್ತವೆ ಮತ್ತು ನಗರವನ್ನು ಶಾಶ್ವತವಾಗಿ ಉಪಯೋಗಿಸಲು ಬಾರದಂತೆ ನಾಶ ಮಾಡುತ್ತದೆ.

ಇದನ್ನು ಕೇವಲ ನಗರದ ಈಗಿನ ದುಃಸ್ಥಿತಿ ಎಂದು ಪರಿಗಣಿಸಬಾರದು. ಇದನ್ನು ಸರ್ಕಾರವು ಬಹಳ ಗಂಭೀರವಾಗಿ ಯೋಚಿಸಬೇಕಾದಂತಹ ಒಂದು ಸೂಚನೆ ಎಂದು ಪರಿಗಣಿಸಬೇಕು. ಬೆಂಗಳೂರಿನ ಜನಸಂಖ್ಯೆಯು 2001–2001ರ ನಡುವೆ 10 ವರ್ಷಗಳಲ್ಲಿ 30 ಲಕ್ಷದಷ್ಟು ಅಥವಾ 47% ಹೆಚ್ಚಾಗಿದೆ. ಆದರೆ ಇದರ ಸಾಮಾಜಿಕ ಸ್ಥಿತಿಗತಿ ಅಧೋಗತಿಯತ್ತ ಸಾಗಿದೆ. ಇದು ಇನ್ನೂ ಕೆಳಗೆ ಹೋಗಲಾರದು ಮತ್ತು ಆಡಳಿತವು ಎಚ್ಚೆತ್ತು ತಾನು ಮಾಡಬೇಕಾದ ಕೆಲಸಗಳನ್ನು ಮಾಡಲೇಬೇಕಾದ ಸಮಯವಾಗಿದೆ.

ನಾನು ಈ ಮೊದಲೇ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರಲ್ಲಿ ನಗರಕ್ಕೆ ಸೂಕ್ತವಾದ ದೀರ್ಘಕಾಲಿನ ಯೋಜನೆಯನ್ನು ತಯಾರಿಸುವಂತೆ ಮನವಿ ಮಾಡಿದ್ದೆ. ಬೆಂಗಳೂರಿಗೆ ಆರ್ಥಿಕ ಯೋಜನೆಗಳು ಒಳಗೊಂಡಂತೆ, ಒಂದು ದೀರ್ಘಕಾಲಿನ ಯೋಜನೆಯ ಅವಶ್ಯಕತೆ ಇದೆ. ಬೆಂಗಳೂರು ಅಭಿವೃದ್ಧಿ ನಿಗಮವು (ಬಿಡಿಎ) ಒಂದು ಯೋಜನೆ ತಯಾರಿಸುತ್ತಿದೆ. ಆದರೆ ಈ ಪ್ರಕ್ರಿಯೆಯು ಪಾರದರ್ಶಕವಾಗಿರಬೇಕು ಮತ್ತು ನಾಗರೀಕರು ಮತ್ತು ಸರ್ಕಾರೇತರ ಸಂಘಟನೆಗಳನ್ನು ಒಳಗೊಂಡಿರಬೇಕು. ನಂತರ ಇದನ್ನು ಬೆಂಗಳೂರು ಮಹಾನಗರ ಯೋಜನಾ ಮಂಡಳಿಯ ಮುಂದಿಡಬೇಕು ಮತ್ತು ಇರದ ಕುರಿತು ಪಾರದರ್ಶಕವಾಗಿ ಚರ್ಚೆ ಮಾಡಬೇಕು.

ನಗರದ ಹಲವು ಸವಾಲುಗಳಾದ ವಾಹನ ದಟ್ಟಣೆ ಮತ್ತು ಸಾರ್ವಜನಿಕ ಸೇವೆಗಳ ಜೊತೆಯಲ್ಲಿ ಕಂಡುಬರುತ್ತಿರುವ ವಾತಾವರಣ ಮತ್ತು ಸಾರ್ವಜನಿಕ ಆರೋಗ್ಯಕ್ಕಾಗುತ್ತಿರುವ ಸರಿಪಡಿಸಲಾಗದ ಹಾನಿಯ ತೊಂದರೆಗಳಿಗೆ ಭಾರತದ ಎಲ್ಲಾ ಇತರ ನಗರಗಳಿಗಿಂತ ಶೀಘ್ರವಾಗಿ ಬೆಂಗಳೂರು ನಗರವು ಎಚ್ಚೆತ್ತುಕೊಳ್ಳಬೇಕು.

# 9

# ನಿರ್ಲಕ್ಷ್ಯ ಮತ್ತು ಭ್ರಷ್ಟಾಚಾರದ ವಿರುದ್ಧ ಬೆಂಗಳೂರಿನ ವಿಜಯ

| | |
|---|---|
| ಟೈಮ್ಸ್ ಆಫ್ ಇಂಡಿಯಾ | 5 ಮೇ 2016 |

ಅಭೂತಪೂರ್ವ ತೀರ್ಪಿನಲ್ಲಿ, ರಾಷ್ಟ್ರೀಯ ಹಸಿರು ನ್ಯಾಯಾಧಿಕರಣವು (ಎನ್‌ಜಿಟಿ) ಬೆಂಗಳೂರನ್ನು ಕೊಲ್ಲುತ್ತಿರುವ ನಿರ್ಲಕ್ಷ್ಯ ಮತ್ತು ಭ್ರಸಷ್ಟಾಚಾರದ ವಿರುದ್ಧ ಹೋರಾಡುತ್ತಿರುವ ನಾಗರೀಕರು ಮತ್ತು ಸರ್ಕಾರೇತರ ಸಂಸ್ಥೆಗಳಿಗೆ ದೊಡ್ಡಮಟ್ಟದ ಉತ್ತೇಜನ ನೀಡಿದೆ. ಪರಿಸರವಾದಿಗಳು ಪಟ್ಟಭದ್ರ ಹಿತಾಸಕ್ತಿಯ ವಿರುದ್ಧ ಜನ ವಿಜಯವನ್ನು ಸಾಧಿಸಿದ ಕ್ಷಣವಿದು.

ಭ್ರಷ್ಟ ಅಧಿಕಾರಿಗಳು ಮತ್ತು ಬಿಲ್ಡರುಗಳ ಕಪಿಮುಷ್ಠಿಯಿಂದ ಕೆರೆಯನ್ನು ಉಳಿಸುವ ಬೆಂಗಳೂರಿಗರ ಹೋರಾಟದ ವಿಜಯವನ್ನು ಎನ್‌ಜಿಟಿಯ ಈ ತೀರ್ಪು ಸೂಚಿಸುತ್ತದೆ.

ಬೆಂಗಳೂರನ್ನು ರಕ್ಷಿಸಲು ಈ ಒಳ್ಳೆಯ ಹೋರಾಟವನ್ನು ಸಂಘಟಿಸಿದ ನಮ್ಮ ಬೆಂಗಳೂರು ಫೌಂಡೇಶನ್, ಫಾರ್ವರ್ಡ್ ಫೌಂಡೇಶನ್ ಮತ್ತು ನಿವಾಸಿಗರ ಕ್ಷೇಮಾಭಿವೃದ್ಧಿ ಸಂಸ್ಥೆಗಳಿಗೆ ನನ್ನ ಅಭಿನಂದನೆಗಳು. ಇದು ಯೋಗ್ಯವಾದ

ಮತ್ತು ಜಯ ಸಾಧಿಸಬೇಕಾದ ಹೋರಾಟವಾಗಿತ್ತು. ಬೆಂಗಳೂರಿನ ಕೆರೆಗಳಿಗಾಗಿ ನಮ್ಮ ಹೋರಾಟವು ಕೇವಲ ಸುಂದರವಾದ ಜಲ ಸಂಪನ್ಮೂಲಗಳನ್ನು ಮರುಪಡೆಯುವುದರ ಬಗ್ಗೆ ಅಷ್ಟೇ ಅಲ್ಲ. ಇದು ಪರಿಸರ, ನೀರು, ಸುಸ್ಥಿರತೆ ಮತ್ತು ಸಾರ್ವಜನಿಕ ಆರೋಗ್ಯಕ್ಕಾಗಿ ಹೋರಾಟವಾಗಿದೆ. ಇದು, ಬೆಳ್ಳಂದೂರು ಕೆರೆ ಉಳಿಸುವ ಇತ್ತೀಚಿನ ಪ್ರಯತ್ನಗಳ ಜೊತೆಗೆ, ನಗರ ಮತ್ತು ಸರ್ಕಾರವು ತನ್ನ ಭವಿಷ್ಯಕ್ಕಾಗಿ ಹೇಗೆ ಯೋಜಿಸುತ್ತದೆ ಎಂಬುದರ ದಿಶೆಯಲ್ಲಿನ ಬದಲಾವಣೆಯನ್ನು ಸೂಚಿಸುತ್ತದೆ.

ಈ ತೀರ್ಪು ಮತ್ತೊಂದು ಪ್ರಮುಖ ಬದಲಾವಣೆಯನ್ನು ಸೂಚಿಸುತ್ತದೆ. ಬಹಳ ಕಾಲದಿಂದ, ನಾಗರೀಕರು ಮತ್ತು ಸರ್ಕಾರೇತರ ಸಂಸ್ಥೆಗಳು ನಮ್ಮ ನಗರಗಳ ಭೂಮಿ, ಕೆರೆಗಳು ಮತ್ತು ಸಂಪನ್ಮೂಲಗಳ ಅತಿಯಾದ ಲೂಟಿಗೆ ಅಸಹಾಯಕ ಪ್ರೇಕ್ಷಕರಾಗಿದ್ದರು. ನಾಗರೀಕರ ದೃಷ್ಟಿಕೋನ ಮತ್ತು ಹಕ್ಕುಗಳಿಗೆ ಸಂಬಂಧಿಸಿ ಸಣ್ಣ ಬೆಲೆ ತೆರುವ ಸಮಯ ಸರಕಾರದಲ್ಲಿರುವವರು ಹಾಗೂ ಕೆಲವು ಬಿಲ್ಡರುಗಳು/ಗುತ್ತಿಗೆದಾರರದ್ದಾಗಿದೆ. ಇವರ ನಡುವಿನ ಸಂಬಂಧವಂತೂ ಎದ್ದುರಾಚುವಂಥದ್ದು ಮತ್ತು ಲಜ್ಜೆಗೆಟ್ಟದ್ದು. ಈ ತೀರ್ಪು ಬದಲಾವಣೆಗಳನ್ನು ತರಲಿದೆ. ಇದೀಗ ದೊರೆತ ಸಂದೇಶವೆಂದರೆ ನಾಗರೀಕರು ಹಕ್ಕುಗಳನ್ನು ಹೊಂದಿದ್ದಾರೆ ಮತ್ತು ಆ ಹಕ್ಕುಗಳು ಮತ್ತು ಕಾನೂನುಗಳನ್ನು ಉಲ್ಲಂಘಿಸುವವರಿಗೆ ಬೆಲೆ ಕೊಡಲು ಸಾಧ್ಯವೇ ಇಲ್ಲ.

ಈ ನಿರ್ದಿಷ್ಟ ಬೃಹತ್ ವಾಣಿಜ್ಯ ಯೋಜನೆಯು ಬೆಳ್ಳಂದೂರು–ಅಗರ ಕೆರೆ ಅಚ್ಚುಕಟ್ಟು ಪ್ರದೇಶದ ಅಗರ ಕೆರೆ ಪಕ್ಕದ ಕಣಿವೆಯ ಸರಿಸುಮಾರಾಗಿ 80 ಎಕರೆ ಪ್ರದೇಶವನ್ನು ಅತಿಕ್ರಮಿಸಿದ್ದು, ರಾಜಕಾಲುವೆಗೆ ಸಂಪರ್ಕಗೊಂಡ ಅಚ್ಚುಕಟ್ಟು ಪ್ರದೇಶ ಮತ್ತು ತೇವಯುಕ್ತ ಪ್ರದೇಶಗಳು ಸೇರಿದಂತೆ ಒಟ್ಟಾರೆ ಪರಿಸರ ವ್ಯವಸ್ಥೆಯ ಅವನತಿಗೆ ಕಾರಣವಾಗಿತ್ತು.

ರಾಜ್ಯ ಸರ್ಕಾರ ಮತ್ತು ನಗರದ ಸಂಸ್ಥೆಗಳ ಅಧಿಕಾರಿಗಳು ನಿಗೂಢವಾದ ರೀತಿಯಲ್ಲಿ ಮೌನವಾಗುಳಿದರು, ಮತ್ತು ಪ್ರಾಯಶಃ ಆದುದ್ದಾಗಿದೆ ಎಂದು ಹೊಂದಿಕೊಂಡಿದ್ದರು. ಇತ್ತೀಚಿನ ದಿನಗಳಲ್ಲಿ ರೂಢಿಯಾಗಿರುವಂತೆ, ಹಕ್ಕುಗಳ ಮತ್ತು ಭ್ರಷ್ಟಾಚಾರ ವಿಷಯಗಳ ಬಗ್ಗೆ ನಾಗರೀಕರನ್ನು ಪಾರುಮಾಡಲು ನ್ಯಾಯಾಲಯಗಳು ಮತ್ತು ನ್ಯಾಯಾಂಗ ವ್ಯವಸ್ಥೆ ಮತ್ತು ನನ್ನಂಥ ಸಂಸದರು ಮುಂದಾಗಬೇಕಾಗಿದೆ.

ನ್ಯಾಯಾಧೀಶರ ಮೇಲೆ ನಾಗರೀಕರು ಇಟ್ಟಿರುವ ನಂಬಿಕೆಗೆ ಅನುಗುಣವಾಗಿ ಎನ್‌ಜಿಟಿ ನಿಜವಾಗಿಯೂ ವರ್ತಿಸಿದೆ. ಮೊದಲನೆಯದಾಗಿ, ಬೆಂಗಳೂರಿನಲ್ಲಿ

ಕೆರೆಯ ಸುತ್ತಲಿನ ಕಟ್ಟಡಗಳು ಮತ್ತು ರಾಜಕಾಲುವೆಗಳಿಗೆ ಅಧಿಕ ಮಿತಿಯನ್ನು ಸ್ಥಾಪಿಸಲಾಗಿದೆ ಮತ್ತು ಎಲ್ಲಾ ಪರಿಸರ ಅನುಮತಿಗಳನ್ನು ಮತ್ತು ಅನುಮೋದನೆ ನೀಡಿರುವ ಯೋಜನೆಗಳನ್ನು ರದ್ದುಪಡಿಸಲಾಗಿದ್ದು ಬಿಲ್ಡರುಗಳಿಗೆ ಹಾಗೂ ಶಾಮೀಲಾಗಿರುವ ಅಧಿಕಾರಿಗಳಿಗಿಬ್ಬರಿಗೂ ಭಾರೀ ದಂಡ ವಿಧಿಸಲಾಗಿದೆ.

ಒಂದು ಹೆಜ್ಜೆ ಮುಂದೆ ಹೋಗಿ, ಇತರ ಉಲ್ಲಂಘಿಸಿದ ಯೋಜನೆಗಳು ಇಂತಹ ಬಫರ್ ವಲಯಗಳಲ್ಲಿದ್ದಲ್ಲಿ ಅವುಗಳನ್ನೂ ನಾಶಗೊಳಿಸುವಂತೆ ಸೂಚಿಸಿದೆ. ಈ ಎಲ್ಲ ವರ್ಷಗಳಲ್ಲಿ, ನಮ್ಮ ಕೆರೆಗಳು ಮತ್ತು ಜಲ ಮೂಲಗಳು ಸರ್ಕಾರದ ಅಧಿಕಾರಿಗಳ ಮತ್ತು ಬಿಲ್ಡರುಗಳ ನಡುವಿನ ಅಪರಾಧದ ಸಂಬಂಧದಿಂದಾಗಿ ಅದೃಶ್ಯವಾಗುತ್ತ ಬಂದಿವೆ. ಇದಕ್ಕಾಗಿ ಕಾನೂನು ಪ್ರಕ್ರಿಯೆಯ ಮೂಲಕ ಈ ಹೋರಾಟವನ್ನು ಮಾಡಲು ಮತ್ತು ನ್ಯಾಯವನ್ನು ಪಡೆದುಕೊಳ್ಳಲು ಒಂದು ನಿಶ್ಚಯವನ್ನುಳ್ಳ ಜನಸಮೂಹದ ಕೇಂದ್ರೀಕೃತ ಪ್ರಯತ್ನದ ಅಗತ್ಯವಿತ್ತು. ನನ್ನಿಂದ ಸ್ವಲ್ಪ ಸಹಾಯ ಪಡೆದ ಸಮಾನಮನಸ್ಕ ನಾಗರೀಕರು ಮತ್ತು ಕೆಲವು ಸರ್ಕಾರೇತರ ಸಂಸ್ಥೆಗಳು ಇದನ್ನು ಸಾಧಿಸಿದವು. ಬೆಂಗಳೂರಿನ ಜಲಸಂಪನ್ಮೂಲಗಳ ಸಂರಕ್ಷಣೆಯಲ್ಲಿ ಈ ವಿಜಯವು ಹೆಗ್ಗುರುತೆನಿಸಿತು.

ನಾನು ಹೆಚ್ಚು ಹೆಚ್ಚು ಎನ್‌ಜಿಒಗಳು ಮತ್ತು ನಾಗರೀಕರಿಗೆ ಸಾಮಾನ್ಯ ವೇದಿಕೆಗೆ ಬರಲು ಪ್ರೋತ್ಸಾಹಿಸುತ್ತೇನೆ. ಏಕೆಂದರೆ ಹೀಗೆ ಒಟ್ಟಿಗೆ ಕೆಲಸ ಮಾಡುವ ಮೂಲಕ ಬೆಂಗಳೂರನ್ನು ರಕ್ಷಿಸಲು ಮತ್ತು ಮರಳಿ ಪಡೆಯಲು ನಾವು ನಡೆಸುತ್ತಿರುವ ದೊಡ್ಡ ಹೋರಾಟದಲ್ಲಿ ಫಲಿತಾಂಶಗಳನ್ನು ಪಡೆಯಲು ನಮ್ಮಿಂದ ಸಾಧ್ಯವಾಗುತ್ತದೆ ಎಂಬುದಕ್ಕೆ ನಮಗೆ ಪುರಾವೆ ದೊರೆತಿದೆ. ಈ ವಿಷಯಕ್ಕೆ ಸಂಬಂಧಿಸಿ ಪ್ರಮುಖ ಮೈಲಿಗಲ್ಲನ್ನು ನಾವು ತಲುಪಿದ್ದೇವೆ. ಅಕ್ರಮಗಳು ಸಾಬೀತಾಗಿವೆ. ಇದೀಗ ನಿಜವಾದ ಹಂತವೆಂದರೆ ಇದರಲ್ಲಿ ಭಾಗಿಗಳಾಗಿರುವ ಸರ್ಕಾರದ ಎಲ್ಲರ ವಿರುದ್ಧ ಕ್ರಮ ಜರುಗಿಸುವುದು. ಮತ್ತು ನಮ್ಮ ನಗರದ ಜನರನ್ನು ಮೋಸಗೊಳಿಸಲು ಅಪರಾಧ ಪಿತೂರಿಯಿದೆಯೇ ಎಂಬುದನ್ನು ತನಿಖೆ ಮಾಡುವುದು. ಕೆರೆಯ ಬಫರ್ ವಲಯ ಮತ್ತು ಅಚ್ಚುಕಟ್ಟು ಪ್ರದೇಶಗಳಲ್ಲಿ ನಿರ್ಮಾಣ ಮಾಡಲು ಅನುಮತಿ ನೀಡುವ ಮೂಲಕ ಈ ರೀತಿಯ ಪರಿಸರ ವಿಪತ್ತಿಗೆ ಕಾರಣರಾಗಿರುವ ಎಲ್ಲಾ ಭ್ರಷ್ಟ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಲು ಅನುಮತಿಗಾಗಿ ಕೋರುತ್ತಿದ್ದೇವೆ. ಈ ಘಟನೆಗಳು ಪುನರಾವರ್ತಿತವಾಗುವುದಿಲ್ಲ ಎಂದು ಖಚಿತಪಡಿಸಿಕೊಳ್ಳಲು ಅವರನ್ನು ಶಿಕ್ಷಿಸಬೇಕು.

ಎನ್‌ಜಿಟಿ ತೀರ್ಪು ಬೆಂಗಳೂರಿಗೆ ನಿಜಕ್ಕೂ ಒಂದು ದೊಡ್ಡ ಸಾಧನೆಯಾಗಿದೆ – ಕೆರೆಯ ಸ್ಥಳಗಳಲ್ಲಿ ಅಕ್ರಮ ನಿರ್ಮಾಣದ ಕಟ್ಟಡಗಳನ್ನು ನಿರ್ಮಿಸುವವರ ಮೇಲೆ ನಾಗರೀಕರು ಜಯವನ್ನು ಪಡೆದಿದ್ದಾರೆ. ನೀಲ್ ಆರ್ಮ್‌ಸ್ಟ್ರಾಂಗ್ ಅವರ ಮಾತನ್ನೇ ಬೇರೆ ಪದಗಳಲ್ಲಿ ಹೇಳಬಹುದು – ಬೆಂಗಳೂರಿಗಾಗಿ ನಮ್ಮ ಹೋರಾಟದಲ್ಲಿ ಒಂದು ಸಣ್ಣ ಹೆಜ್ಜೆ, ಆದರೆ ನಮ್ಮ ಕೆರೆಗಳನ್ನು ರಕ್ಷಿಸುವತ್ತ ದೈತ್ಯ ಹೆಜ್ಜೆ!

# 10

# ಎಂಪಿಸಿಯ ಸಾಂವಿಧಾನಿಕ ಮಾನ್ಯತೆಯನ್ನು ಹತ್ತಿಕ್ಕಬೇಡಿ: ಎಂಪಿಸಿಯಲ್ಲಿನ ದೂರದರ್ಶಿತ್ವ ಸಮೂಹಕ್ಕೆ ಸದಸ್ಯರನ್ನು ನೇಮಿಸಿ

ಬೆಂಗಳೂರು ಮಿರರ್ 11 ನೇ ಮೇ 2016

ಕರ್ನಾಟಕದ ಮುಖ್ಯಮಂತ್ರಿಯವರ ಬೆಂಗಳೂರಿನ ಬ್ಲೂ ಪ್ರಿಂಟ್ ಆ್ಯಕ್ಷನ್ ಗ್ರೂಪ್‌ನ (ಬಿಬಿಪಿಎಜಿ) ಸಂವಿಧಾನವು ನಿಜ ಅರ್ಥದಲ್ಲಿ ನಮ್ಮ ಮುಖ್ಯಮಂತ್ರಿಯವರ ಹರ್ಷದಾಯಕ, ಅರಿವಿನ ಕ್ಷಣವಾಗಿದೆ. ಅನೇಕರಿಗೆ, ಇದು ಬೆಂಗಳೂರಿನ 'ದೂರದರ್ಶಿತ್ವ'ಕ್ಕಾಗಿ ಉನ್ನತ ಮಟ್ಟದ ಗುಂಪುಗಳನ್ನು ರಚಿಸುವ ಮುಖ್ಯಮಂತ್ರಿಗಳ ಎಂದಿನ ಸಂಪ್ರದಾಯವಾಗಿದೆ. ಎಸ್.ಎಂ. ಕೃಷ್ಣರ ಬಿಎಟಿಎಫ್, ಬಿಎಸ್ ಯಡಿಯೂರಪ್ಪ ಅವರ ಅಬೈಡ್(ABIDe) (ನಾನು ಸಂಚಾಲಕನಾಗಿದ್ದೆ) ರಚಿಸಿದ್ದರು ಮತ್ತು ಈಗ ಸಿ.ಎಂ. ಸಿದ್ದರಾಮಯ್ಯ ಅವರ ಬಿಬಿಪ್ಯಾಗ್ ರಚಿಸಿದ್ದಾರೆ. ಆದರೆ ಈ ಎಲ್ಲಾ ದೃಷ್ಟಿಕೋನಗಳು ಮತ್ತು ದೂರದೃಷ್ಟಿಯುಳ್ಳವರ ಹೊರತಾಗಿಯೂ, ಬೆಂಗಳೂರು ದುರಾಡಳಿತದ, ಅಲಕ್ಷ್ಯದ ಮತ್ತು ಅತಿ ಭ್ರಷ್ಟಾಚಾರದ ಕೆಳಮಟ್ಟದ ಸುರುಳಿಯಲ್ಲಿ ಮುಂದುವರಿದಿದೆ.

ಕೆರೆಗಳು ಸಾಯುತ್ತಿವೆ, ಅಂತರ್ಜಲ ಕಣ್ಮರೆಯಾಗುತ್ತಿದೆ, ಕಸ ರಾಶಿಬೀಳುತ್ತಿದೆ, ಸಾರ್ವಜನಿಕ ಆರೋಗ್ಯ ಮಟ್ಟ ಕ್ಷೀಣಿಸುತ್ತಿದೆ, ಭೂಮಿಯ ಅತಿಕ್ರಮಣವಾಗುತ್ತಿದೆ/

ನೀಡಲಾಗುತ್ತಿದೆ, ತೆರಿಗೆ ಆದಾಯದ ಸೋರಿಕೆ ನಿರಾತಂಕವಾಗಿ ಮುಂದುವರಿದಿದೆ.

ಹಾಗಾಗಿ ಈ ದೂರದರ್ಶಿತ್ವ ಗುಂಪಿನ ರಚನೆಯು ನಮ್ಮ ಮುಖ್ಯಮಂತ್ರಿಯು ಬೆಂಗಳೂರಿನ ಅವನತಿ, ದುರಾಡಳಿತ ಮತ್ತು ಭ್ರಷ್ಟಾಚಾರದಿಂದ ಎಚ್ಚರಗೊಂಡಿದ್ದಾರೆ ಎಂಬುದರ ಸೂಚನೆಯಾಗಿದೆ. ನಾನು ಇದನ್ನು ಸ್ವಾಗತಿಸುತ್ತೇನೆ.

ಆದರೂ ಇದು ಒಂದು ದೋಷಪೂರಿತ ನಿರ್ಧಾರ ಮತ್ತು ಕಾನೂನಿನ ಉಲ್ಲಂಘನೆಯಾಗಿದೆ. ಸಂವಿಧಾನದ 74 ನೇ ತಿದ್ದುಪಡಿಯು ಪಾರದರ್ಶಕ, ಸಮಾಲೋಚನಾತ್ಮಕ ವಿಧಾನದಲ್ಲಿ ಯೋಜನಾ ಕ್ರಿಯೆಯ ಜವಾಬ್ದಾರಿ ಹೊಂದಿರುವ ಶಾಸನಬದ್ಧ ಸಂಸ್ಥೆಯಾದ ಮೆಟ್ರೊಪಾಲಿಟನ್ ಪ್ಲಾನಿಂಗ್ ಕಮಿಟಿಯನ್ನು (ಎಂಪಿಸಿ) ರಚಿಸಲು ನಗರಗಳಿಗೆ ಆದೇಶಿಸುತ್ತದೆ. ನಾನು, ಕೇಂದ್ರ ಸರ್ಕಾರ ಸೇರಿದಂತೆ ಹಲವು ಜನರಿಂದ ಒತ್ತಡಕ್ಕೊಳಗಾದ ಕರ್ನಾಟಕ ಸರ್ಕಾರವು 2014– 2015 ರಲ್ಲಿ ಎಂಪಿಸಿ ರಚಿಸಿದೆ. ಎಂಪಿಸಿ ಸ್ವತಂತ್ರವಾಗಿದ್ದು ಹೊರಗಿನ ಪರಿಣತರನ್ನು ಹೊಂದಿರಬೇಕೆಂಬ ನನ್ನ ಮನವಿಗಳ ಹೊರತಾಗಿಯೂ ಬಿಬಿಎಂಪಿಯ ಮತ್ತು ಇತರ ಕೆಲವು ಅಧಿಕಾರಿಗಳಿಂದ ಹಾಗೂ ಕಾರ್ಪೊರೇಟರುಗಳಿಂದ ತುಂಬಿದೆ. ಎಂಪಿಸಿ ಹೊರಗಿನ ನಾಗರೀಕರ ಭಾಗವಹಿಸುವಿಕೆ ಹೊಂದಿರಬೇಕು, ಆದರೆ ಇದು ನಡೆದಿಲ್ಲ. ಈ ಎಲ್ಲ ತಿಂಗಳುಗಳಲ್ಲಿ ಎಂಪಿಸಿ ಒಮ್ಮೆ ಕೂಡ ಸಭೆ ಕರೆದಿಲ್ಲ!

ಇದು ಅಷ್ಟೊಂದು ಅತಿರೇಕದವಲ್ಲದಿದ್ದರೆ ಹಾಸ್ಯಾಸ್ಪದವಂತೂ ಆಗಿದೆ.

ಈಗ ಈ ವಿಷನ್ ಗ್ರೂಪ್ (ದೂರದರ್ಶಿತ್ವ ಗುಂಪು) ಬರುತ್ತದೆ. ಎಂಪಿಸಿ ಎದುರು ಅದರ ಪಾತ್ರ ಏನು? ಇದು ಸಂವಿಧಾನಾತ್ಮಕ ಸಂಸ್ಥೆಯ ಪಾತ್ರವನ್ನು ತಗ್ಗಿಸುತ್ತಿದೆ ಮತ್ತು ಅದನ್ನು ನಿರುಪಯುಕ್ತವಾಗಿ ಮಾಡುತ್ತಿದೆ, ಅಲ್ಲವೇ? ಸಾಂವಿಧಾನಿಕ ಸ್ವಾಮ್ಯದ ಬಗ್ಗೆ ಇತ್ತೀಚಿನ ದಿನಗಳಲ್ಲಿ ಎದುರಾಳಿಗಳ ಮೇಲೆ ಹರಿಹಾಯುತ್ತಿರುವ ಒಂದು ರಾಜಕೀಯ ಪಕ್ಷದ ಮುಖ್ಯಮಂತ್ರಿಯ ಮಟ್ಟಿಗೆ ಇದು ಪರಿಸ್ಥಿತಿಯ ವ್ಯಂಗ್ಯ. ಈ ವಿಷನ್ ಗ್ರೂಪ್, ನಗರಕ್ಕೆ ಮಾಸ್ಟರ್ ಪ್ಲಾನ್ ರಚಿಸಲು ಮತ್ತು ಯೋಜನೆಗಳ ಅನುಷ್ಠಾನ ಮಾಡಲು ಜವಾಬ್ದಾರವಾದ ಮೆಟ್ರೋಪಾಲಿಟನ್ ಪ್ಲಾನಿಂಗ್ ಕಮಿಟಿಗೆ (ಎಂಪಿಸಿ) ಸಂವಿಧಾನಾತ್ಮಕವಾಗಿ ನೀಡಲಾದ ಮಹತ್ವವನ್ನು ಕಡಿಮೆಗೊಳಿಸುತ್ತದೆ. ಹಾಗಾಗಿ ಪ್ರಸಿದ್ಧ ನಾಗರೀಕರನ್ನು ನಗರಕ್ಕೆ ಸೇವೆ ಸಲ್ಲಿಸುವಲ್ಲಿ ತೊಡಗಿಸಲು ನಾನು ವಿರೋಧಿಸುವುದಿಲ್ಲ. ಆದರೆ ಪ್ರಮುಖವಾದ ವ್ಯಕ್ತಿಗಳಿಂದ ಈ ಅರೆಕಾಲಿಕ ಲೋಕೋಪಕಾರವು ಎಂಪಿಸಿ ಸಂಸ್ಥೆಯ ಸಾಂಸ್ಥಿಕ ಜವಾಬ್ದಾರಿ ಮತ್ತು ಯೋಜನಾ ಕಾರ್ಯಚಟುವಟಿಕೆಯ ಜವಾಬ್ದಾರಿಗೆ ಪರ್ಯಾಯವಲ್ಲ ಎಂಬುದನ್ನು ನಾವು

ಸ್ಪಷ್ಟವಾಗಿ ಅರಿತಿರಬೇಕು. ಯೋಜನೆಯನ್ನು ಪಾರದರ್ಶಕವಾಗಿ ರೂಪಿಸಬೇಕು ಮತ್ತು ಸಾರ್ವಜನಿಕರ ಪೂರ್ಣ ನೋಟದಲ್ಲಿರಬೇಕು. ಯೋಜನೆಗಳು ಹಾದಿಯ ಒಂದೇ ಮಗ್ಗುಲನ್ನು ನಿರ್ವಹಿಸಬೇಕು, ಆದರೆ ನಮ್ಮ ಬೆಳೆಯುತ್ತಿರುವ ಮತ್ತು ಕುಸಿಯುತ್ತಿರುವ ನಗರ ಮತ್ತು ಎಲ್ಲಾ ನಿವಾಸಿಗಳು ಎದುರಿಸುತ್ತಿರುವ ಎಲ್ಲಾ ಸಮಸ್ಯೆಗಳ ಮೇಲೆ ಒಟ್ಟಾರೆ ಗಮನ ಕೇಂದ್ರೀಕರಿಸಬೇಕು. ವಾರ್ಡ್ ಸಮಿತಿಗಳು, ನಾಗರೀಕರು, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಸ್ಥೆಗಳು ಮತ್ತು ಸರ್ಕಾರೇತರ ಸಂಸ್ಥೆಗಳಿಗೆ ಎಂಪಿಸಿ ನಿರ್ದಿಷ್ಟ ಪಾತ್ರವನ್ನು ವಹಿಸುತ್ತದೆ. ಸಂವಿಧಾನದ 243ಝೆಡ್ಇ ವಿಧಿಯು ನಗರಕ್ಕೆ ಅಭಿವೃದ್ಧಿ ಯೋಜನೆಗಳನ್ನು ರೂಪಿಸಲು ಸಾಂವಿಧಾನಿಕ ಅಂಗವಾಗಿ ಎಂಪಿಸಿಯನ್ನು ರಚಿಸುವಂತೆ ಸ್ಪಷ್ಟವಾಗಿ ಆದೇಶಿಸುತ್ತದೆ.

ಮುಂದೆ ಸಾಗಬೇಕಾದ ಮಾರ್ಗ ಯಾವುದು? ಇದೀಗ ಸರ್ಕಾರವು ಎಚ್ಚರಗೊಂಡಿದೆ ಮತ್ತು ಬೆಂಗಳೂರಿನ ಬಗ್ಗೆ ಆಸಕ್ತಿ ತೋರಿಸಿದೆ, ಆದರೆ ಈಗ ಅದು ಎಂಪಿಸಿ ನಿರ್ಮಿಸಲು ಮತ್ತು ಅದರ ಸಾಮರ್ಥ್ಯವನ್ನು ಹೆಚ್ಚಿಸಲು ಆದ್ಯತೆ ನೀಡಬೇಕು. ಈ ವಿಷನ್ ಗ್ರೂಪಿನ ಸದಸ್ಯರನ್ನು ಎಂಪಿಸಿಗೆ ನಾಮನಿರ್ದೇಶನ ಮಾಡಬಹುದು ಅಥವಾ ವಿಷನ್ ಗ್ರೂಪ್ ಅನ್ನು ಎಂಪಿಸಿಗೆ ಸಲಹಾ ಸಮಿತಿಯನ್ನಾಗಿ ಮಾಡಬಹುದು. ನಮ್ಮ ನಗರದ ಯೋಜನಾ ಸಮಸ್ಯೆಗಳಿಗೆ ಶಾಶ್ವತವಾದ ಪರಿಹಾರವನ್ನು ಕಂಡುಕೊಳ್ಳುವ ಸರಿಯಾದ ಮಾರ್ಗವಿದು. ಇದನ್ನು ಮಾಡದಿದ್ದರೆ, ಈ ನಿರ್ಧಾರ, ಮತ್ತು ಗುಂಪಿನ ಕಾರ್ಯಚಟುವಟಿಕೆಯು 74 ನೇ ತಿದ್ದುಪಡಿಯನ್ನು ಉಲ್ಲಂಘಿಸುತ್ತದೆ.

ಇದರ ಜೊತೆಗೆ, ಸರ್ಕಾರವು ನಾಗರೀಕ ಪ್ರಾತಿನಿಧ್ಯವನ್ನು ವಿಶಾಲಗೊಳಿಸಬೇಕು ಮತ್ತು 'ದೊಡ್ಡ' ಹೆಸರುಗಳು ಮತ್ತು ವ್ಯವಹಾರಗಳಿಗೆ ಮಾತ್ರ ನಿರ್ಬಂಧಿಸಬಾರದು. ಬೆಂಗಳೂರು ಒಂದು ಸಕ್ರಿಯ ನಾಗರೀಕ ಸಮಾಜ, ಸರ್ಕಾರೇತರ ಸಂಸ್ಥೆಗಳು ಮತ್ತು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳನ್ನು ಹೊಂದಿದೆ. ಅವರೆಲ್ಲ ಎಂಪಿಸಿ ಅಥವಾ ಈ ಹೊಸ ಎಂಪಿಸಿಯ ಸಲಹಾ ಸಮೂಹದಲ್ಲಿ ಉತ್ತಮವಾಗಿ ಪ್ರತಿನಿಧಿಸಲ್ಪಡಬೇಕು.

ಬೆಂಗಳೂರು ಗಂಭೀರ ಬಿಕ್ಕಟ್ಟನ್ನು ಎದುರಿಸುತ್ತಿದ್ದು, ಅದು ಬದುಕಲಸಾಧ್ಯವೆನಿಸುವ ನಗರವಾಗುವ ಹಾದಿಯಲ್ಲಿದೆ. ಪ್ರತಿವರ್ಷ, ಸರ್ಕಾರಗಳು ಮತ್ತು ನಗರದ ಉಸ್ತುವಾರಿ ವಹಿಸುವವರು ಭರವಸೆಗಳನ್ನು ನೀಡುತ್ತಾರೆ ಮತ್ತು ಅವುಗಳನ್ನು ಮುರಿಯುತ್ತಾರೆ. ವಿನಾಯಿತಿಗಿಂತಲೂ ಕಾನೂನು ನಿಯಮಗಳನ್ನು ಮುರಿಯುವುದೇ ನಿಯಮ ಎಂಬಂತಾಗಿದ್ದು, ಭ್ರಷ್ಟಾಚಾರವು ವ್ಯಾಪಕವಾಗಿ ಹರಡಿದೆ. ಸಾರ್ವಜನಿಕ ಜೀವನ ಮತ್ತು ಸೇವೆಗೆ ಉದಾಸೀನ ಮತ್ತು ಸಾರ್ವಜನಿಕ ಹಣ ಮತ್ತು ಆಸ್ತಿಗಳ ದುರುಪಯೋಗ ಸಾಮಾನ್ಯ ನಿಯಮವಾಗಿದ್ದು, ಇವೆಲ್ಲವುಗಳ ಒಂದು ಸಂಸ್ಕೃತಿಯನ್ನು ರಚಿಸಿದೆ.

ರಾಜಕೀಯ ಮತ್ತು ಅಧಿಕಾರಶಾಹಿ ವರ್ಗದ ಜನರು ಯೋಜನೆಯನ್ನು ಹೊಂದಿರಲು ಇಷ್ಟಪಡುವುದಿಲ್ಲ ಅಥವಾ ಯೋಜನೆಯನ್ನು ತಾವೇ ಸ್ವತಃ ನಿಯಂತ್ರಿಸಲು ಬಯಸುತ್ತಾರೆ ಎಂಬುದನ್ನು ಎಲ್ಲರೂ ತಿಳಿದಿದ್ದಾರೆ, ಏಕೆಂದರೆ ಅವರು ಬಳಸುವ ಅತೀವವಾದ ವಿವೇಚನಾ ಶಕ್ತಿ ವ್ಯಾಪಕ ಭ್ರಷ್ಟಾಚಾರಕ್ಕೆ ಕಾರಣವಾಗುತ್ತದೆ. ಆದ್ದರಿಂದ ನನಗೆ ಮತ್ತು ಇತರರಿಗೆ, ಎಂಪಿಸಿಯನ್ನು ಸಂರಕ್ಷಿಸುವ ಮತ್ತು ನಿರ್ಮಿಸುವ ಈ ವಿಷಯವು ನಮ್ಮ ನಗರಕ್ಕೆ ನಂಬಿಕೆಯ ಒಂದು ವಿಧಿಯಾಗಿದೆ. ಬೆಂಗಳೂರಿನ ತೀವ್ರ ಆಡಳಿತ ಕೊರತೆಯ ಬಗ್ಗೆ ನನ್ನ ಕಳವಳವನ್ನು ವ್ಯಕ್ತಪಡಿಸುವ ಮೂಲಕ 2013 ರಿಂದ 2015 ರವರೆಗೆ ಮುಖ್ಯಮಂತ್ರಿಯವರಿಗೆ ಅನೇಕ ಪತ್ರಗಳು ಮತ್ತು ಮಧ್ಯಸ್ಥಿಕೆಗಳ ನಂತರ ಎಂಪಿಸಿಯನ್ನು ಇಷ್ಟವಿಲ್ಲದಿದ್ದರೂ ಸರ್ಕಾರ ರಚನೆ ಮಾಡಬೇಕಾಯಿತು.

ಸರಕಾರವು ನಿಜವಾದ ಸಾರ್ವಜನಿಕ ಸಮಾಲೋಚನೆ ಪ್ರಕ್ರಿಯೆಯ ಮೂಲಕ ರೂಪುಗೊಂಡ ಹೊಸ ಸಮಗ್ರ, ಬಹು-ವರ್ಷದ ಯೋಜನೆಯನ್ನು ರೂಪಿಸುವ ಅಗತ್ಯವಿದೆ. ಯೋಜನೆಯು ನಗರದ ಶಾಸನಬದ್ಧ ಯೋಜನೆ ರೂಪಿಸುವಿಕೆಯ ಮೂಲಭೂತ ಸಮಸ್ಯೆಗಳನ್ನು ಬಗೆಹರಿಸಬೇಕು ಮತ್ತು ಪ್ರತಿನಿಧಿ ಗುಂಪುಗಳು, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಟನೆಗಳ ಮೂಲಕ ನಾಗರೀಕರ ಧ್ವನಿಯನ್ನು ಒಳಗೊಂಡಿರಬೇಕು.

ನಮ್ಮ ನಗರದ ಕುಸಿತವನ್ನು ನಿಲ್ಲಿಸಬೇಕಾಗಿದೆ ಮತ್ತು ನಗರಾಭಿವೃದ್ಧಿ ನವೀಕರಣದ ಒಂದು ಹೊಸ ಅವಧಿಯನ್ನು ನಮ್ಮ ನಗರ ಮತ್ತು ಅದರ ಅರ್ಹ ಶ್ರಮಿಕ ನಾಗರೀಕರಿಗೆ ನೀಡಬೇಕಿದೆ. ಅನೇಕ ವರ್ಷಗಳ ಶೋಷಣೆಗಳನ್ನು ಹಿಮ್ಮೆಟ್ಟಿಸಲು ಮತ್ತು ನಮ್ಮ ನಗರವನ್ನು ರಾಜ್ಯ ಮತ್ತು ದೇಶದ ಹೂಡಿಕೆಗಳಿಗೆ ಒಂದು ರಹದಾರಿಯಾಗಿ ಮಾಡಲು ಇದು ಏಕೈಕ ಮಾರ್ಗವಾಗಿದೆ.

ಬೆಂಗಳೂರಿನ ಕೆಲವು ಪ್ರಖ್ಯಾತ ನಾಗರೀಕರ ಗುಂಪನ್ನು ನಮ್ಮ ಬೆಂಗಳೂರಿಗೆ ಸೇವೆ ಸಲ್ಲಿಸಲು ಆಹ್ವಾನಿಸಲು ನಮ್ಮ ಸಿಎಂ ತಡವಾಗಿಯಾದರೂ ಎಚ್ಚರಗೊಂಡಿದ್ದಕ್ಕೆ ನನ್ನ ಸ್ವಾಗತ. ಆದರೆ ಸಾಂವಿಧಾನಿಕ ಸಂಸ್ಥೆಯನ್ನು ದುರ್ಬಲಗೊಳಿಸುವ ಮೂಲಕ ಅಥವಾ ಅಂಥ ಸಂಸ್ಥೆಗೆ ಬದಲಿಯಾಗಿ ಇದನ್ನು ರೂಪಿಸದಂತೆ ನಾನು ಎಚ್ಚರಿಸುತ್ತೇನೆ. ಬೆಂಗಳೂರಿನ ನಾಗರೀಕರು ತಪ್ಪಿನ ವಿರುದ್ಧ ಹೋರಾಡಲು ಕಲಿತರು ಮತ್ತು ನಿರಂತರ ಹೋರಾಡುತ್ತಾರೆ.

# 11

# ಗುತ್ತಿಗೆದಾರರ ರಾಜಕಾರಣಿಗಳ ಲಾಭಕ್ಕೆ ಉಕ್ಕಿನ ಮೇಲ್ಸೇತುವೆ ಯೋಜನೆ

ಡೆಕ್ಕನ್ ಹೆರಾಲ್ಡ್ 6 ಅಕ್ಟೋಬರ್ 2016

ನಮ್ಮ ಬೆಂಗಳೂರಿನ ನಾಗರೀಕನಾಗಿ ಮತ್ತು ನಗರದ ಸಂಸತ್ ಸದಸ್ಯನಾಗಿ ಈ ಉಕ್ಕಿನ ಮೇಲ್ಸೇತುವೆ ಯೋಜನೆಯನ್ನು ಸಂಪೂರ್ಣವಾಗಿ ಗುತ್ತಿಗೆದಾರ ರಾಜಕೀಯ ಚಾಲಿತ ಎಂದು ಉಲ್ಲೇಖಿಸುವಲ್ಲಿ ನನಗೆ ಯಾವುದೇ ಹಿಂಜರಿಕೆಯಿಲ್ಲ ಮತ್ತು ಉದ್ದೇಶಿತ ಯೋಜನೆಯು ನಾಗರೀಕ ಚಾಲಿತವಾಗಲಿ ಅಥವಾ ಯೋಜನಾ ಚಾಲಿತವಾಗಲಿ ಆಗಿಲ್ಲ. ಸಾಂವಿಧಾನಿಕವಾಗಿ ರಚಿಸಿರುವ ಬೆಂಗಳೂರಿನ ಮೆಟ್ರೋಪಾಲಿಟನ್ ಪ್ಲಾನಿಂಗ್ ಕಮಿಟಿಯ (ಬಿಎಂಪಿಸಿ) ಮುಂದೆ ಈ ಯೋಜನೆಯನ್ನು ಇರಿಸಲಾಗಿಲ್ಲ ಮತ್ತು ಸಾರ್ವಜನಿಕ ಹಣದ ದುರುಪಯೋಗದೊಂದಿಗೆ ಬೆಂಗಳೂರಿನ ಮೇಲೆ ಹೊರಿಸಲಾಗುತ್ತಿರುವ ಈ ಯೋಜನಾರಹಿತ ಹೊರೆಯ ಬಗ್ಗೆ ಸಾರ್ವಜನಿಕ ಡೊಮೇನಿನಲ್ಲಿ ಯಾವುದೇ ಪರಿಣಾಮದ ಅಧ್ಯಯನದ ಮಾಹಿತಿಯೂ ಲಭ್ಯವಿಲ್ಲ.

ಇದೇಕೆ ಎಂದು ನಾಗರೀಕರ ಪರವಾಗಿ ನಾನು ಕೇಳುತ್ತೇನೆ. ಬಿಡಿಎಯು ಕೆಲವು ತಿಂಗಳ ಹಿಂದೆ ನಡೆದಿದೆ ಎಂದು ಹೇಳುವ ಸುಳ್ಳು ಸಾರ್ವಜನಿಕ ಸಮಾಲೋಚನೆಯ ಫಲಿತಾಂಶವೇನು? ಯೋಜನೆಯು ತ್ವರೆ, ವಿನ್ಯಾಸ, ನಿರ್ವಹಣೆಯ ಸಮಸ್ಯೆಗಳು,

ಸೌಂದರ್ಯಶಾಸ್ತ್ರ ಮತ್ತು ನಮ್ಮ ನಗರದ ಸೌಂದರ್ಯ ಮತ್ತು ಅದರ ಪರಂಪರೆ ಕಟ್ಟಡಗಳು, ಪರಿಸರ ಅವುಗಳ ಮೇಲೆ ಪರಿಣಾಮದ ಬಗ್ಗೆ ಅನೇಕ ಉತ್ತರಿಸದ ಪ್ರಶ್ನೆಗಳೊಂದಿಗೆ ಸಂಶಯಾಸ್ಪದ ಉದ್ದೇಶವನ್ನು ತೋರಿಸುತ್ತದೆ.

**ಯೋಜನೆಯ ಪ್ರತಿಯೊಂದು ಪ್ರಮುಖ ಅಂಶಗಳ ಬಗ್ಗೆ ಉತ್ತರಗಳು ಸಾರ್ವಜನಿಕವಾಗಿ ಲಭ್ಯವಾಗುವಂತೆ ಮಾಡಬೇಕು:**

1. ವಿವರವಾದ ಯೋಜನಾ ವರದಿ (ಡಿಪಿಆರ್) ಸೇರಿದಂತೆ ಯೋಜನೆ ಮತ್ತು ವೆಚ್ಚದಂತಹ ಯೋಜನೆಗಳ ವಿವರಗಳು.
2. ಅಂಥ ಸ್ವಾಧೀನತೆಯ ಸ್ಥಿತಿಯೊಂದಿಗೆ ಭೂಮಿಯ ವಿವರಗಳು (ಸಾರ್ವಜನಿಕ ಮತ್ತು ಖಾಸಗಿ) ಅಗತ್ಯವಾಗುತ್ತವೆ.
3. ಪರಿಸರ ಮತ್ತು ಪರಂಪರೆಯನ್ನು ಒಳಗೊಂಡಂತೆ ವಿವಿಧ ಪರಿಣಾಮ ಅಧ್ಯಯನಗಳ ವಿವರಗಳು – ಮಾಧ್ಯಮ ವರದಿಗಳು 800 ಅಥವಾ ಹೆಚ್ಚು ಪೂರ್ಣವಾಗಿ ಬೆಳೆಯುವ ಮರಗಳನ್ನು ಕತ್ತರಿಸುವುದನ್ನು ಸೂಚಿಸುತ್ತದೆ.
4. ಭವಿಷ್ಯದ ನಿರ್ಮಾಣಗಳು ಮತ್ತು ಎಲಿವೇಟೆಡ್ ಕಾರಿಡಾರುಗಳೊಂದಿಗೆ ಸಂಬಂಧ ಕಲ್ಪಿಸುವ ಜೊತೆಗೆ ಯಾವುದೇ ಅಸ್ತಿತ್ವದಲ್ಲಿರುವ ಕಾಂಕ್ರೀಟ್ ಮೇಲ್ಸೇತುವೆಗಳಂತೆ ನಿರ್ಮಾಣ ಮಾಡುವ ಬದಲಿಗೆ ಏಕೆ ಉಕ್ಕಿನ ಮೇಲ್ಸೇತುವೆ ನಿರ್ಮಿಸಲಾಗುತ್ತಿದೆ ಮತ್ತು ಅವುಗಳ ಕಾರಣಗಳನ್ನು ಸಮರ್ಥಿಸುವ ವಿವರಗಳು.
5. ಅಸ್ತಿತ್ವದಲ್ಲಿರುವ ಮೂಲಸೌಕರ್ಯ/ಕೆಡವಲಾಗುವ ಪಾರಂಪರಿಕ ಕಟ್ಟಡಗಳ ವಿವರಗಳು
6. ಈ ಯೋಜನೆಯು ಮಾಸ್ಟರ್ ಪ್ಲ್ಯಾನ್ ಭಾಗವಲ್ಲ, ಆದರೆ ಮಾಸ್ಟರ್ ಪ್ಲಾನ್ ಅಡಿಯಲ್ಲಿ ಕೈಗೊಳ್ಳಬೇಕಾದ ಅನೇಕ ಇತರ ಕಾರ್ಯಗಳನ್ನು ಕೈಗೊಳ್ಳಲಾಗುವುದಿಲ್ಲ. ಈ ಯೋಜನೆಯ ಪರಿಣಾಮವಾಗಿ ಮಾಸ್ಟರ್ ಪ್ಲಾನಿಗೆ ಇಂತಹ ಪರಿಷ್ಕರಣೆ ಮಾಡಿದ ನಂತರ ಆ ಪ್ರದೇಶದಲ್ಲಿ ಮಾಸ್ಟರ್ ಪ್ಲ್ಯಾನಿನ ಉಳಿದ ಭಾಗಗಳ ಮೇಲೆ ಯಾವ ಪರಿಣಾಮ ಬೀರುತ್ತದೆ?

ಆಡಳಿತ ಮತ್ತು ನಾಗರೀಕ ಸಂಸ್ಥೆಗಳು ನಾಗರೀಕರ ಅಭಿಪ್ರಾಯವನ್ನು ಕೋರಬೇಕು ಮತ್ತು ಗೌರವಿಸಬೇಕು ಹಾಗೂ ಪರಿಸರವಾದಿಗಳು, ನಗರ ಯೋಜಕರು,

ಪರಿಸರವಿಜ್ಞಾನಿಗಳು, ಸಾರಿಗೆ ತಜ್ಞರು ಮತ್ತು ನಾಗರೀಕರಿಂದ ಬಲವಾದ ವಿರೋಧವನ್ನು ಗುರುತಿಸಬೇಕು. ನಗರದ ಜನರು ನಗರದ ಅಭಿವೃದ್ಧಿ ಯೋಜನೆಗಳಿಗೆ ಸಂಬಂಧಿಸಿ ತಮ್ಮ ಹಕ್ಕನ್ನು ಚಲಾಯಿಸಲು ಬಯಸುತ್ತಿದ್ದಾರೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ನಮ್ಮ ಜನರು, ನಮ್ಮ ನಗರ ಮತ್ತು ರಾಜ್ಯವು ಇಂದು ನಾವು ನೋಡುವುದಕ್ಕಿಂತ ಉತ್ತಮ ಸೌಲಭ್ಯಗಳಿಗೆ ಅರ್ಹವಾಗಿದೆ. ಕರ್ನಾಟಕ ಸರಕಾರ ಮತ್ತು ಅದರ ಸಂಸ್ಥೆಗಳು ಸಾರ್ವಜನಿಕ ಹಣವನ್ನು ಬಳಸಿಕೊಳ್ಳುವಾಗ ಇವುಗಳ ಬಳಕೆ/ದುರ್ಬಳಕೆಗೆ ಜವಾಬ್ದಾರರಾಗಿರಬೇಕು.

# 12

# ವಂಚಕರಿಗೆ ಪುರಸ್ಕಾರ ಬೇಡ: ಅಕ್ರಮ ಸಕ್ರಮ ಬಡವರಿಗೆ ನೆರವಾಗಲಿ, ಕಾನೂನು ಉಲ್ಲಂಘಿಸುವವರಿಗೆ ಮತ್ತು ಹಪಾಹಪಿಯ ಬಿಲ್ಡರುಗಳಿಗಲ್ಲ

| ಟೈಮ್ಸ್ ಆಫ್ ಇಂಡಿಯಾ | 15ನೇ ಡಿಸೆಂಬರ್ 2016 |
|---|---|

ಅಕ್ರಮ ಸಕ್ರಮ ಅನೇಕ ರಾಜಕೀಯ ಘೋಷವಾಕ್ಯಗಳಂತೆಯೇ ಆಗುತ್ತಿದೆ – ಭ್ರಷ್ಟಾಚಾರವನ್ನು ಬಡವರಿಗೆ ಸಹಾಯ ಮಾಡುವ ಕಾರ್ಯಕ್ರಮದಂತೆ ಬಿಂಬಿಸಲಾಗುತ್ತಿದೆ. ನಮ್ಮ ರಾಜ್ಯ ಮತ್ತು ದೇಶ ಇದನ್ನು ಈ ಹಿಂದೆ ಹಲವು ಬಾರಿ ಕಂಡಿವೆ.

ನಮ್ಮ ಬೆಂಗಳೂರು ಅವನತಿಯತ್ತ ಸಾಗಿದೆ – ಸರ್ಕಾರದಲ್ಲಿರುವವರ ಮತ್ತು ಬಿಲ್ಡರುಗಳು, ಗುತ್ತಿಗೆದಾರರನ್ನು ಒಳಗೊಂಡ ಪಟ್ಟಭದ್ರ ಹಿತಾಸಕ್ತಿಗಳ ಅನಿಯಂತ್ರಿತವಾದ ಮತ್ತು ಅಸ್ಖಲಿತವಾದ ಸಂಬಂಧದಿಂದ ಇದು ಸಹಾಯ ಪಡೆಯುತ್ತಿದೆ. ಇದರ ಪುರಾವೆಗಳು ಎಲ್ಲೆಡೆ ಗೋಚರಿಸುತ್ತಿವೆ – ರಿಯಲ್ ಎಸ್ಟೇಟ್ ಮತ್ತು ಗುತ್ತಿಗೆಗಳಲ್ಲಿ ಹಿತಾಸಕ್ತಿ ಹೊಂದಿರುವ ಬಲಾಢ್ಯ ರಾಜಕಾರಣಿಗಳು ಮತ್ತು ಸರ್ಕಾರಿ ಅಧಿಕಾರಿಗಳ ಮೇಲೆ ಇತ್ತೀಚಿನ ದಾಳಿಗಳು ದೊಡ್ಡ ಪ್ರಮಾಣದಲ್ಲಿ ನಗದು ಮತ್ತು ಚಿನ್ನದ ವಶಕ್ಕೆ ಕಾರಣವಾಗಿವೆ – ಈ ಸಂಕೇತಗಳು ನಮ್ಮ ಸುತ್ತ ಎಲ್ಲೆಡೆ ಇವೆ.

ಸಾರ್ವಜನಿಕ ಹಣ ಮತ್ತು ಭೂಮಿಗೆ ಸಂಬಂಧಪಟ್ಟ ಈ ಮೈತ್ರಿಯು ಬೆಂಗಳೂರಿನ ಭ್ರಷ್ಟ ರಾಜಕಾರಣದ ಮೂಲವಾಗಿದೆ. ಅಕ್ರಮ ಸಕ್ರಮದ ಮೂಲಕ ಸರ್ಕಾರ ಭ್ರಷ್ಟಾಚಾರದ ಈ ಸಂಸ್ಕೃತಿಯನ್ನು ಸಕ್ರಿಯವಾಗಿ ಪುರಸ್ಕರಿಸಿದಂತಾಗುತ್ತದೆ. ಪ್ರಸ್ತುತ ರೂಪದಲ್ಲಿ ಅದರ ಸಂದೇಶವೆಂದರೆ ನ್ಯಾಯವನ್ನು ಉಲ್ಲಂಘಿಸುವುದು ಕಾನೂನು ಪಾಲಿಸುವುದಕ್ಕಿಂತ ಪ್ರಯೋಜನಕಾರಿಯಾಗಿದೆ ಎಂಬುದು! ಅಕ್ರಮ ಸಕ್ರಮದ ಪುನರ್ವಿಮರ್ಶೆ ಪ್ರಸ್ತಾಪವನ್ನು ಪರಿಗಣಿಸಲು ಸರ್ಕಾರವನ್ನು ನಾನು ಪದೇ ಪದೇ ಒತ್ತಾಯಿಸಿದೆ. ಇದು ಬಡವರಿಗೆ ಮಾತ್ರ ಲಾಭ ಮಾಡಿಕೊಡಬೇಕೆಂದು ಬಿಲ್ಡರುಗಳಿಗೆ ಲಾಭ ನೀಡಬಾರದೆಂದು ಹೇಳಿದೆ. ಹೀಗಾಗಿ ಇದರಿಂದ ಲಾಭ ಮಾಡುವ ರಾಜಕಾರಣಿಗಳು ಎಲ್ಲಾ ಅನಧಿಕೃತ ನಿರ್ಮಾಣಗಳು ನಗರದ ಬಡವರ ನಿವಾಸಗಳಾಗಿವೆ ಎಂದು ಪ್ರತಿಪಾದಿಸುತ್ತಾರೆ. ವಾಸ್ತವವೇನೆಂದರೆ, ಅವತಾರದಲ್ಲಿ ಅಕ್ರಮ ಸಕ್ರಮವು ಇಂದಿನ ಅವತಾರದಲ್ಲಿ ರಿಯಲ್ ಎಸ್ಟೇಟ್ ಡೆವಲಪರುಗಳ ಹಾಗೂ ಉನ್ನತ ಆದಾಯದ ಕಾನೂನು ಉಲ್ಲಂಘಿಸುವ ವ್ಯಕ್ತಿಗಳ ಎಲ್ಲ ಕಾನೂನುಬಾಹಿರ ಕ್ರಮಗಳನ್ನು ಕಾನೂನುಬದ್ಧಗೊಳಿಸುತ್ತದೆ; ಕಾನೂನಿನ ಆಳ್ವಿಕೆಗೆ ಇದು ವಿರುದ್ಧವಾಗಿದ್ದು ಕಾನೂನು ಪಾಲಿಸುವ ನಾಗರೀಕರನ್ನು ಪುರಸ್ಕರಿಸುವುದು ಮತ್ತು ಕಾನೂನುಬಾಹಿರರನ್ನು ಶಿಕ್ಷಿಸುವುದು ಸರಿಯಾದ ಕ್ರಮವಾಗಿದೆ.

**ಉದ್ದೇಶಪೂರ್ವಕವಾಗಿ ಅಸ್ಪಷ್ಟವಾಗಿ ಉಳಿಯುವ ಹಲವಾರು ಸಮಸ್ಯೆಗಳಿವೆ –**

1. ಮನೆ ಮಾಲೀಕರು ದಂಡನೆಗೆ ಒಳಗಾಗುತ್ತಾರೆ, ಆದರೆ ಬಿಲ್ಡರುಗಳು ಮತ್ತು ಅಭಿವರ್ಧಕರು ಶಿಕ್ಷೆ ತಪ್ಪಿಸಿಕೊಳ್ಳುತ್ತಾರೆ;
2. ಸರ್ಕಾರದಲ್ಲಿನ ನಿರ್ಲಕ್ಷ್ಯ ಅಥವಾ ಉದ್ದೇಶಪೂರ್ವಕವಾದ ಅನುಮತಿ/ ವ್ಯತ್ಯಾಸಗಳಿಂದ ಪ್ರಯೋಜನ ಪಡೆಯುವವರ ವಿರುದ್ಧ ಕ್ರಿಮಿನಲ್ ಕ್ರಮ ಏಕೆ ಜರುಗಿಸಬಾರದು?
3. ಈ ಸಕ್ರಮಗೊಳಿಸುವಿಕೆಯ ಲೆಕ್ಕಪರಿಶೋಧನೆ ಮಾಡುವುದು ಹೇಗೆ;
4. ಭ್ರಷ್ಟಾಚಾರ ಮತ್ತು ಕಾನೂನಿನ ಉಲ್ಲಂಘನೆಯು ಯಾರಿಗೂ ಅಪಾಯಕಾರಿಯಾಗುವುದಿಲ್ಲ ಎಂಬ ಸಂದೇಶವನ್ನು ಸರಕಾರವೇ ಖುದ್ದಾಗಿ ಕಳುಹಿಸುವುದಾದಲ್ಲಿ ಭ್ರಷ್ಟಾಚಾರವನ್ನು ತಡೆಯುವವರಾದರೂ ಯಾರು?
5. ಕೊನೆಗೆ, ದೊಡ್ಡ ಪ್ರಶ್ನೆ ಎಂದರೆ ಕಾನೂನು ಉಲ್ಲಂಘನೆಯನ್ನು ಪ್ರೋತ್ಸಾಹಿಸುವ ಸಂಸ್ಕೃತಿಯನ್ನು ರಚಿಸಲಾಗುವುದಾದರೆ ಮತ್ತು ಉಲ್ಲಂಘನೆಗಾರರನ್ನು,

> ಅಪರಾಧಿಗಳನ್ನು ರಕ್ಷಿಸಲು ಹೊಸ ಕ್ಷಮಾದಾನ ಯೋಜನೆಗಳು ಹೊರಬರುವುದಾದಲ್ಲಿ ನಾಗರೀಕರು ಕಾನೂನನ್ನು ಪಾಲಿಸುವುದೇಕೆ?

ಬಡವರಿಗೆ ಸಹಾಯ ಮಾಡುವ ಉದ್ದೇಶದ ಬಗ್ಗೆ ಸರ್ಕಾರವು ನಿಜವಾಗಿಯೂ ಗಂಭೀರವಾಗಿದ್ದರೆ, ಅದು ಅಕ್ರಮ ಸಕ್ರಮ ಯೋಜನೆಯ ಬಗ್ಗೆ ಮರುಪರಿಶೀಲಿಸಬೇಕು ಮತ್ತು ಕಳಪೆ ಮತ್ತು ನಿಜವಾದ ಯೋಗ್ಯವಾದ ಪ್ರಯೋಜನವನ್ನು ಮಾತ್ರ ಖಚಿತಪಡಿಸಿಕೊಳ್ಳಲು ಬಲವಾದ ಅರ್ಹತಾ ಮಾನದಂಡವನ್ನು ರೂಪಿಸಬೇಕು. ಪುನರ್ನಿರ್ಮಾಣದ ಯೋಜನೆಯು ನಮ್ಮ ನಗರದಲ್ಲಿನ ಬಡವರ ವಸತಿ ಸಾಮರ್ಥ್ಯಗಳಲ್ಲಿನ ಅಂತರವನ್ನು ನೇರವಾಗಿ ಪರಿಹರಿಸುವ ಬಡವರ ಮನೆಗಳ ನಿರ್ಮಾಣದ ಒಂದು ಕಾರ್ಯಕ್ರಮವನ್ನು ರೂಪಿಸುವಂತೆ ಮಾಡಬೇಕು. ಉಲ್ಲಂಘನೆ ಮಾಡಿದವರಿಗೆ, ಬಿಲ್ಡರುಗಳು ಮತ್ತು ದೋಷವೆಸಗಿದ ಅಧಿಕಾರಿಗಳಿಬ್ಬರಿಗೂ ಶಿಕ್ಷೆ ವಿಧಿಸುವ ಕ್ರಮಗಳ ಮೂಲಕ ಬಲವಾದ ಕಾನೂನುಪಾಲನೆಯನ್ನು ಖಾತರಿಪಡಿಸುವ ಒಂದು ಪರಿಷ್ಕೃತ ಶಾಸನವನ್ನು ರಚಿಸಬೇಕು.

ಅಲ್ಲದೇ ಸರ್ಕಾರವು ಇದರಿಂದ ಆದಾಯ ಬರುತ್ತದೆ ಎಂದು ಸಮರ್ಥಿಸಿಕೊಳ್ಳುವುದು ಹಾಸ್ಯಾಸ್ಪದವಾಗಿದೆ. ಅತಿರೇಕದ ಆದಾಯದ ಸೋರಿಕೆಗಳು, ನಕಲಿ ಮತ್ತು ದರ ಏರಿಸಲಾದ ಗುತ್ತಿಗೆಗಳು, ಮತ್ತು ಭೂಮಿಯನ್ನು ವಿತರಿಸುವುದು – ಅಕ್ರಮ ಸಕ್ರಮವು ಸಂಪನ್ಮೂಲಗಳ ಕ್ರೋಢೀಕರಣಕ್ಕಾಗಿ ಎಂದು ವಾದಿಸುವುದು ಎಲ್ಲ ಒಂದು ತಮಾಷೆಯಾಗಿದೆ. ಸರಕಾರವು ಸಂಪನ್ಮೂಲಗಳನ್ನು ಒಟ್ಟುಗೂಡಿಸುವ ಬಗ್ಗೆ ಗಂಭೀರವಾಗಿದ್ದರೆ, ಕರಾರಿನ ಸುಧಾರಣೆ, ಸಾರ್ವಜನಿಕ ಸ್ವತ್ತುಗಳ ಬಳಕೆ ಮತ್ತು ಸಿಎಜಿ ವರದಿ ಮಾಡಿದ ತೆರಿಗೆ ಸೋರಿಕೆಗಳನ್ನು ತಪ್ಪಿಸುವ ಮೂಲಕ ಅದು ಕ್ರಮ ಕೈಗೊಳ್ಳಬಹುದಿತ್ತು. ಬಹುಶಃ ಭ್ರಷ್ಟಾಚಾರದ ಹಣವನ್ನು ಹಿಂದಿರುಗಿಸಲು ಇತ್ತೀಚೆಗೆ ಬಂಧಿಸಿದ ಕೆಲವು ಮುಖ್ಯ ಎಂಜಿನಿಯರುಗಳನ್ನು ಸರಕಾರವು ಕೇಳಬಹುದು – ಅದು ನಗರದ ಅಭಿವೃದ್ಧಿಗಾಗಿ ಹಣವನ್ನು ಸಂಗ್ರಹಿಸಲು ವೇಗದ ಮತ್ತು ಉತ್ತಮ ಮಾರ್ಗವಾಗಿದೆ. ಕಾನೂನುಬಾಹಿರ ಕೃತ್ಯಗಳನ್ನು ಕಾನೂನುಬದ್ಧಗೊಳಿಸುವುದು, ಸರ್ಕಾರಗಳಿಂದ ಹಣವನ್ನು ಸಂಗ್ರಹಿಸುವುದು – ಇದನ್ನೇ 'ಬನಾನಾ ರಿಪಬ್ಲಿಕ್' ಮಾಡುವುದು. ಜಗತ್ತಿನ ಕೆಲವು ದೇಶಗಳು ಇದನ್ನು ಮಾಡುತ್ತವೆ. ಆದರೆ ನಮ್ಮ ಬೆಂಗಳೂರು ಇದನ್ನು ಅನುಸರಿಸಬೇಕೇ?

ಅಕ್ರಮ ಸಕ್ರಮ ಖಂಡಿತವಾಗಿಯೂ ಬಡವರಿಗೆ ಸಹಾಯ ಮಾಡುತ್ತದೆ. ಆದರೆ ನಮಗೆ ಸ್ಪಷ್ಟವಾಗಿ ತಿಳಿದಿರಲಿ, ಬಿಲ್ಡರುಗಳನ್ನು ಪಾರುಮಾಡಲು, ಶ್ರೀಮಂತರು ಮತ್ತು

ಶಕ್ತಿಯುತರನ್ನು ಕಾನೂನಿನಡಿಯಲ್ಲಿ ಶಿಕ್ಷೆಗೆ ಒಳಪಡುವ ಬದಲು ಈಗ ಆರ್ಥಿಕವಾಗಿ ಪ್ರಯೋಜನ ಪಡೆಯುವಂತೆ ಈ ಯೋಜನೆಯನ್ನು ವಿನ್ಯಾಸಗೊಳಿಸಲಾಗಿದೆ. ಅನೇಕ ವಿಧಗಳಲ್ಲಿ, ಅಕ್ರಮ ಸಕ್ರಮವು ಆಡಳಿತದ ವೈಫಲ್ಯದ ಸಂಕೇತವಾಗಿದೆ ಮತ್ತು ಆಳವಾದ ಪಟ್ಟಭದ್ರ ಹಿತಾಸಕ್ತಿಗಳು ಆಡಳಿತದ ಪ್ರತಿಯೊಂದು ಭಾಗವನ್ನು ಹೇಗೆ ತುಕ್ಕುಹಿಡಿಸಿವೆ ಎಂಬುದಕ್ಕೆ ಸಾಕ್ಷಿಯಾಗಿವೆ.

# 13

# ಹೊಸ ವರ್ಷದ ಮುನ್ನಾದಿನ ಬೆಂಗಳೂರಲ್ಲಿ ಸೃಷ್ಟಿಯಾದ ರೌರವ ನರಕ

ಬೆಂಗಳೂರು ಮಿರರ್ 3 ನೇ ಜನವರಿ 2017

3 ವರ್ಷಗಳ ಹಿಂದೆ ಡಿಸೆಂಬರ್ 2013 ರಲ್ಲಿ ಯುವತಿ ಜ್ಯೋತಿ ಸಿಂಗ್ ಭಯಂಕರವಾದ ಅಪರಾಧಕ್ಕೆ ಬಲಿಯಾದರು, ನಮ್ಮೆಲ್ಲರ ನೆನಪುಗಳಲ್ಲಿ ನಿರ್ಭಯಾ ಎಂದೇ ಆಕೆ ಜೀವಂತವಾಗಿದ್ದಾಳೆ. ಅದು ದೆಹಲಿ, ಇದು ಬೆಂಗಳೂರು. ಇಲ್ಲಿ ಹೊಸ ವರ್ಷ ಹೊತ್ತುತರುವ ಸುಲಭವಾದ ಸಂತೋಷವನ್ನು ಸವಿಯುವ ಬದಲು ಅನೇಕ ಮಹಿಳೆಯರು ಸಾಮೂಹಿಕ ಕಿರುಕುಳದ ಭೀತಿಯನ್ನು ಎದುರಿಸಬೇಕಾಯಿತು.

ನಿರ್ಭಯಾ ಘಟನೆಯಲ್ಲಿ ಅಪರಾಧದಿಂದ ಗಮನವನ್ನು ಬೇರೆಡೆ ಸೆಳೆಯಲು ರಾಜಕಾರಣಿಗಳು ಮತ್ತು ಅಧಿಕಾರಿಗಳು ಧಾವಿಸಿದಂತೆಯೇ ಇಂದು ಸರಕಾರವು ಮಹಿಳೆಯನ್ನು ಅವರು ಧರಿಸುವ ಉಡುಪಿಗಾಗಿ ದೂಷಿಸುತ್ತಿದೆ ಮತ್ತು ಅವರ ಮೇಲೆ ಮಾಡಲಾದ ಅಪರಾಧಗಳಿಗೆ ಸಂತ್ರಸ್ತರನ್ನು ದೂಷಿಸುವ ಪ್ರತಿ ಇತರ ಸಾಧ್ಯತೆಗಳನ್ನು ಹುಡುಕಲಾಗುತ್ತಿದೆ. ನಿರೀಕ್ಷಿಸಿದಂತೆಯೇ ನಿಮ್ಮಲ್ಲಿ ಕೆಲವರು ಇದನ್ನು 'ಹೊರಗಿನವರು ಮತ್ತು ಊರಿನವರ' ಸಂಘರ್ಷದ ಚರ್ಚೆಯನ್ನಾಗಿ ಅಥವಾ ಇನ್ನೂ ಕೆಟ್ಟದ್ದೆಂದರೆ ಬಡವರ ವಿರುದ್ಧ ಶ್ರೀಮಂತರು ಎಂಬಂಥ ಚರ್ಚೆಯನ್ನಾಗಿ ಮಾಡಿಕೊಳ್ಳಲು

ಪ್ರಯತ್ನಿಸಿದಿರಿ. ಸಂಭವಿಸಿದ ಅಪರಾಧದ ಜವಾಬ್ದಾರಿಯನ್ನು ಹೊತ್ತುಕೊಳ್ಳುವ ಬದಲು ಅದರಿಂದ ತಪ್ಪಿಸಿಕೊಳ್ಳುವ ಎಲ್ಲಾ ದುರದೃಷ್ಟಕರ ಪ್ರಯತ್ನಗಳು ನಡೆದವು.

ಆದರೆ ಅದೇನೇ ಇರಲಿ – ಸರ್ಕಾರದಿಂದ ನಿರೀಕ್ಷಿತ ಪ್ರತಿಕ್ರಿಯೆಯು ನಾಗರೀಕರತ್ತ ಸರ್ಕಾರಕ್ಕಿರಬೇಕಾದ ಹೊಣೆಗಾರಿಕೆ ಮತ್ತು ಉತ್ತರದಾಯಿತ್ವವನ್ನು ಎಂದೋ ಕೈಚೆಲ್ಲಿದೆ. ಸತ್ಯವನ್ನು ಈ ಸರ್ಕಾರದ ಗಮನಕ್ಕೆ ತರಬೇಕು ಮತ್ತು ನಾವೆಲ್ಲರೂ ಗಮನಿಸಬೇಕು.

ಪ್ರಾರಂಭದಲ್ಲಿ, ಮುಖ್ಯಮಂತ್ರಿ ಮತ್ತು ಅವರ ಸರಕಾರವು ಮರೆತುಹೋಗಿರುವ ಸರಳವಾದ ಆದರೆ ಮುಖ್ಯವಾದ ಸತ್ಯವನ್ನು ನೆನಪಿನಲ್ಲಿಟ್ಟುಕೊಳ್ಳುವುದು ಅಗತ್ಯವಾಗಿದೆ – ಚುನಾಯಿತ ಸರ್ಕಾರ, ಅದರ ಸಚಿವರು ಮತ್ತು ಪೊಲೀಸರು ಇವರೆಲ್ಲರೂ ಕಾನೂನು ಮತ್ತು ಸುವ್ಯವಸ್ಥೆ ಒದಗಿಸಲು, ಎಲ್ಲ ನಾಗರೀಕರನ್ನೂ ರಕ್ಷಿಸಲು ಜವಾಬ್ದಾರರಾಗಿದ್ದಾರೆ. ಇದು ತನ್ನನ್ನು ತಾನು ಗೌರವಿಸುವ ಚುನಾಯಿತ ರಾಜ್ಯ ಸರ್ಕಾರದ ಮೇಲೆ ಹೇರಿದ ಸಾಂವಿಧಾನಿಕ ಆದೇಶ ಮತ್ತು ಜವಾಬ್ದಾರಿಯಾಗಿದೆ. ಈ ಜವಾಬ್ದಾರಿ ನಿಸ್ಸಂಶಯವಾಗಿ ಪ್ರತಿ ವ್ಯಕ್ತಿ, ಮಹಿಳೆ, ಮಗು ಮತ್ತು ಹಿರಿಯ ನಾಗರೀಕರನ್ನು ಒಳಗೊಳ್ಳುತ್ತದೆ. ಆದಾಗ್ಯೂ, ಅವರ ಕರ್ತವ್ಯಗಳನ್ನು ಎಲ್ಲರೂ ಮರೆಯುವುದು ಈ ಸರ್ಕಾರದೊಂದಿಗೆ ಆಗಾಗ್ಗೆ ಪುನರಾವರ್ತನೆಯಾಗುತ್ತಿರುವಂತೆ ತೋರುತ್ತಿದೆ.

ಗೃಹ ಸಚಿವರಿಗೆ ನಾನು ಗೌರವಪೂರ್ವಕವಾಗಿ ನೆನಪಿಸುವ ಅಂಶವೇನೆಂದರೆ ಸಂವಿಧಾನದಲ್ಲಿ ಅಥವಾ ಈ ರಾಜ್ಯದ ಕಾನೂನಿನಲ್ಲಿ ಲಿಂಗ ಅಥವಾ ಡ್ರೆಸ್ ಕೋಡ್ ಆಧಾರದ ಮೇಲೆ ರಕ್ಷಣೆ ಒದಗಿಸುವ ಪೋಲಿಸರ ಜವಾಬ್ದಾರಿಗೆ ವಿನಾಯಿತಿ ಒದಗಿಸುವ ಯಾವುದೇ ಅಂಶವೂ ಇಲ್ಲ. ಭಾರತ ಸೌದಿ ಅರೇಬಿಯಾ ಅಲ್ಲ ಮತ್ತು ಬೆಂಗಳೂರು ಅಲ್ಲಿರುವ ನಗರವಲ್ಲ. ಎಲ್ಲಾ ನಾಗರೀಕರಿಗೆ ಹಕ್ಕುಗಳನ್ನು ಒದಗಿಸುವ ಸಾಂವಿಧಾನಿಕ ಪ್ರಜಾಪ್ರಭುತ್ವದ ಭಾಗವಾಗಿದೆ. ಅವರಿಗೆ ಮತ್ತು ಹೊಸ ಪೋಲಿಸ್ ಆಯುಕ್ತರಿಗೆ ನಾನು ಮತ್ತಷ್ಟು ಗಮನಸೆಳೆಯಲು ಬಯಸುತ್ತೇನೆ – 31 ನೇ ಡಿಸೆಂಬರ್ ರಾತ್ರಿ ಈ ಅಪರಾಧಗಳು ನಡೆದಿವೆ. ಅಪರಾಧ ದಂಡಸಂಹಿತೆಯಲ್ಲಿ ಆ ರಾತ್ರಿ ಉಲ್ಲಂಘಿಸಲಾದ ಎಲ್ಲಾ ಕಾನೂನುಗಳನ್ನು ವ್ಯಾಪಕವಾಗಿ ಗಮನಿಸಬಹುದು. ಅವುಗಳೆಂದರೆ ಮಹಿಳೆಯರ ಮಾನಹರಣ, ಅತ್ಯಾಚಾರಯತ್ನ ಮುಂತಾದುವುಗಳನ್ನು ಒಳಗೊಂಡಂತೆ ಸೆಕ್ಷನ್ 294, 354, 509 ರ ಉಲ್ಲಂಘನೆ.

ಈ ಅಪರಾಧಗಳನ್ನು ತನಿಖೆ ಮಾಡಿ, ಅಪರಾಧಿಗಳನ್ನು ಗುರುತಿಸಿ ಕಾನೂನು ಕ್ರಮ ಕೈಗೊಳ್ಳಬೇಕು.

ತನಿಖೆಯನ್ನು ಪ್ರಾರಂಭಿಸುವ ಸಲುವಾಗಿ ಪೊಲೀಸರಿಗೆ ದೂರು ಸಲ್ಲಿಸಲು ಸಂತ್ರಸ್ತರು ಹೋಗಬೇಕು ಎಂಬ ಪೋಲಿಸ್ ಕಮಿಷನರ್ ಹೇಳಿಕೆ ಆಘಾತಕಾರಿ, ಅಸೂಕ್ಷ್ಮವಾದುದು ಮತ್ತು ವೃತ್ತಿಪರವಾಗಿ ಸ್ವೀಕಾರಾರ್ಹವಲ್ಲದ್ದು. ವಿಶೇಷವಾಗಿ, ಟಿವಿ ಮತ್ತು ಮುದ್ರಣ ಮಾಧ್ಯಮಗಳು ಅಪರಾಧದ ತುಣುಕನ್ನು ಹೊಂದಿರುವಾಗ ಸ್ವಯಂಪ್ರೇರಿತ ದೂರು ದಾಖಲಿಸುವ ಅಧಿಕಾರ ಪೋಲಿಸರಿಗಿದೆ. ಒಂದು ಸಂಸ್ಥೆಯಾಗಿ ಬೆಂಗಳೂರಿನ ಪೋಲಿಸರ ವೃತ್ತಿಪರ ವಿಶ್ವಾಸಾರ್ಹತೆ ಮತ್ತು ಖ್ಯಾತಿಗೆ ಹಾಗೂ ನಮ್ಮ ನಗರವಾಗಿ ಬೆಂಗಳೂರಿಗೆ ಈ ಅಪರಾಧಗಳಿಗೆ ಪ್ರಾಮಾಣಿಕವಾದ ವೃತ್ತಿಪರ ಪ್ರತಿಕ್ರಿಯೆ ಅಗತ್ಯ. ರಾಜಕೀಯ ನಾಯಕತ್ವ ಮತ್ತು ಪ್ರಸಕ್ತ ಸರಕಾರ ಶೀಘ್ರದಲ್ಲೇ ಇತಿಹಾಸವಾಗುವುದು. ಆದರೆ ಪೋಲಿಸ್ ಸಂಸ್ಥೆಯು ಶಾಶ್ವತವಾಗಿದ್ದು ಇದು ಕಾರ್ಯನಿರ್ವಹಿಸಿ ಜನರ ವಿಶ್ವಾಸವನ್ನು ಮರಳಿ ಪಡೆಯಬೇಕಾಗಿದೆ.

ಬೆಂಗಳೂರಿನ ಮತ್ತು ಅದರ ನಾಗರೀಕರತ್ತ ಈ ಸರ್ಕಾರದ ಉದಾಸೀನತೆ ಮತ್ತು ನಿರ್ಲಕ್ಷ್ಯದ ಚಿಹ್ನೆಗಳನ್ನು ಕಡೆಗಣಿಸಲು ಸಾಧ್ಯವೇ ಇಲ್ಲ. ಮಕ್ಕಳ ಸುರಕ್ಷತೆ, ಪರಿಸರ, ವಲಯ ವಿಂಗಡಣೆ ಕಾನೂನುಗಳು ಹೀಗೆ ಪಟ್ಟಿಯು ಅಂತ್ಯವಿಲ್ಲದೆ ಹೋಗುತ್ತದೆ – ಆದರೆ ಮಕ್ಕಳ ಸುರಕ್ಷತೆ ಹೊರತುಪಡಿಸಿ, ಇತರ ಹೆಚ್ಚಿನವುಗಳಲ್ಲಿ ಯಾರೂ ಸಂತ್ರಸ್ತರಿಲ್ಲ ಎಂದು ನೀವು ಪರಿಗಣಿಸಬಹುದು. ಆದಾಗ್ಯೂ, ಮಕ್ಕಳು, ಮಹಿಳೆಯರು ಮತ್ತು ಹಿರಿಯರ ವಿರುದ್ಧ ಅಪರಾಧಗಳ ವಿಷಯಕ್ಕೆ ಬಂದಾಗ – ಅದರ ಕರ್ತವ್ಯಗಳನ್ನು ಪೂರ್ಣಗೊಳಿಸುವುದಕ್ಕಾಗಿ ಮತ್ತು ಅವರನ್ನು ರಕ್ಷಿಸುವುದಕ್ಕಾಗಿ ಸರಕಾರವು ಶೂನ್ಯ–ಸಹಿಷ್ಣುತೆಯ ವಿಧಾನವನ್ನು ಹೊಂದಿರಬೇಕು ಎಂದು ನಿರೀಕ್ಷಿಸಲಾಗುತ್ತದೆ. ಅನೇಕ ಮುಗ್ಧ ಹುಡುಗಿಯರು ಘಾಸಿ ಅನುಭವಿಸುವುದರೊಂದಿಗೆ, ಲೈಂಗಿಕ ಕಿರುಕುಳ ಅನುಭವಿಸುವುದನ್ನು 2016ರ ಡಿಸೆಂಬರ್ 31 ರಂದು ಅದು ತಡಿಯಲು ವಿಫಲವಾಗಿತ್ತು.

ಮಾನ್ಯ ಮುಖ್ಯಮಂತ್ರಿಗಳೇ, ಗೌರವಪೂರ್ವಕವಾಗಿ ಹೇಳುವುದೆಂದರೆ ನೀವು ಎಲ್ಲರಿಗೂ ನಿರಾಸೆ ಮಾಡಿದಿರಿ!

ದೊಡ್ಡ ಪ್ರಶ್ನೆಗಳು ಉಳಿದುಕೊಂಡಿವೆ – ಈ ಅಪರಾಧಗಳನ್ನು ತನಿಖೆ ಮಾಡಲು ಸರಕಾರ ಏಕೆ ವಿಳಂಬ ಮಾಡುತ್ತಿದೆ? ಹೊಸ ವರ್ಷದ ಸಂಭ್ರಮಾಚರಣೆಯಲ್ಲಿ

ತಮ್ಮ ಜನರ ಸುರಕ್ಷತೆಯ ಬಗ್ಗೆ ಪೊಲೀಸರಿಗೆ ಸ್ಪಷ್ಟ ನಿರ್ದೇಶನಗಳನ್ನು ಸರ್ಕಾರ ಏಕೆ ನೀಡಲಿಲ್ಲ? ಶಾಸಕರು ಮತ್ತು ಮಂತ್ರಿಗಳ ಮಕ್ಕಳ ಪುನರಾವರ್ತಿತ ಅಪರಾಧದ ನಿದರ್ಶನಗಳನ್ನು ಕಂಡ ಪೊಲೀಸರು ಕ್ರಮ ಜರುಗಿಸಲು ಹೆದರುವಂತಾಗಿದೆಯೇ? ತಮ್ಮ ಸುರಕ್ಷತೆಯ ಬಗ್ಗೆ ಮತ್ತು ಗೂಂಡಾಗಿರಿಯ ಬಗ್ಗೆ ಮಹಿಳೆಯರು ತಾವೆ ಚಿಂತಿಸಬೇಕಾಗುವ ನಗರವಾಗುತ್ತಿದೆಯೇ?

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನನ್ನ ವಿನಂತಿ – ನಿಮ್ಮ ಅಧಿಕಾರಾವಧಿಯ ಕೊನೆಯಲ್ಲಿ ನಿಮ್ಮನ್ನು ಮತ್ತು ನಿಮ್ಮ ಸರ್ಕಾರವನ್ನು ನೀವು ಜಾಗೃತಗೊಳಿಸಿಕೊಳ್ಳಿ. ಅಕ್ರಮ–ಸಕ್ರಮ, ಉಕ್ಕಿನ ಮೇಲ್ಸೇತುವೆ ಮುಂತಾದ ಇತರ 'ಆಸಕ್ತಿದಾಯಕ' ಯೋಜನೆಗಳಿಂದ ಸ್ವಲ್ಪ ಸಮಯ ಮಾಡಿಕೊಳ್ಳಿ ಮತ್ತು ನಮ್ಮ ನಗರವು ನಮ್ಮ ಮಹಿಳೆಯರಿಗೆ ಸುರಕ್ಷಿತವಾಗಿದೆಯೇ ಎಂದು ತಿಳಿದುಕೊಳ್ಳಲು ಪ್ರಯತ್ನಿಸಿ.

# 14

# ಕಾನೂನು ಉಲ್ಲಂಘಿಸುವವರಿಗೆ ಮತ್ತು ಹಪಾಹಪಿಯ ಬಿಲ್ಡರುಗಳಿಗೆ ನೆರವಾಗುವ ಅಕ್ರಮ ಸಕ್ರಮಕ್ಕೆ 'ನೋ' ಎಂದ ಸುಪ್ರೀಂ ಕೋರ್ಟ್

ಡೆಕ್ಕನ್ ಕ್ರಾನಿಕಲ್ 16 ಜನವರಿ 2017

ಅಕ್ರಮ ಸಕ್ರಮ ಯೋಜನೆಗೆ ಸುಪ್ರೀಂ ಕೋರ್ಟ್ ಶುಕ್ರವಾರ ತಡೆಯಾಜ್ಞೆ ನೀಡಿರುವುದು ಸೂಕ್ತವಾಗಿ ಈ ಹೊಸ ವರ್ಷದ ಆರಂಭದಲ್ಲಿ ಒಂದು ಪ್ರಮುಖ ಗೆಲುವಾಗಿದ್ದು ಭರವಸೆಯ ಮತ್ತು ವಿಜಯೋತ್ಸವದ ಸಂಕೇತವನ್ನು ಬೆಳಗಿಸುತ್ತದೆ. ಟ್ವಿಟ್ಟರ್‌ನಲ್ಲಿ ಯಾರೋ ನನಗೆ ಟ್ವೀಟ್ ಮಾಡಿದ್ದಾರೆ: "@rajeev_mp ಸುಪ್ರೀಂ ಕೋರ್ಟಿನ ಅಕ್ರಮ ಸಕ್ರಮ ವಿರುದ್ಧದ ನಿಮ್ಮ ಹೋರಾಟ ಬೆಂಗಳೂರಿನ ಕಾನೂನು ಪಾಲಿಸುವ ನಾಗರೀಕರ ಬೆಂಬಲವನ್ನು ಹೊಂದಿದೆ". ನಾಗರೀಕರು ತಮ್ಮ ನಗರಕ್ಕೆ ಬೆಂಬಲವಾಗಿ ನಿಂತಿದ್ದಾರೆ ಮತ್ತು ನ್ಯಾಯಾಲಯದ ತೀರ್ಪನ್ನು ಸ್ವಾಗತಿಸುತ್ತಿದ್ದಾರೆ ಎಂಬುದನ್ನು ಇದು ಸ್ಪಷ್ಟಪಡಿಸುತ್ತದೆ.

ಕರ್ನಾಟಕದಲ್ಲಿನ ಪ್ರಸ್ತುತ ಭ್ರಷ್ಟ ರಾಜಕೀಯ ನಿರೂಪಣೆಗೆ ಅಕ್ರಮ ಸಕ್ರಮ ಅನ್ವರ್ಥಕ ಪದ ಎಂಬುದು ಸಾಬೀತಾಗಿದೆ. ಸಾರ್ವಜನಿಕ ಹಣ ಮತ್ತು ಭೂಮಿಗೆ ಸಂಬಂಧಪಟ್ಟ ಈ ಮೈತ್ರಿಯು ಬೆಂಗಳೂರಿನ ಭ್ರಷ್ಟ ರಾಜಕಾರಣದ ಮೂಲವಾಗಿದೆ. ಪ್ರಸ್ತುತ

ರೂಪದಲ್ಲಿ ಅದರ ಸಂದೇಶವೆಂದರೆ ನ್ಯಾಯವನ್ನು ಉಲ್ಲಂಘಿಸುವುದು ಕಾನೂನು ಪಾಲಿಸುವುದಕ್ಕಿಂತ ಪ್ರಯೋಜನಕಾರಿಯಾಗಿದೆ ಎಂಬುದು!

ಕರ್ನಾಟಕ ಸರಕಾರವು 1991ರ ನಗರ ಪ್ರದೇಶದ ಅನಧಿಕೃತ ನಿರ್ಮಾಣಗಳ ಸಕ್ರಮಗೊಳಿಸುವಿಕೆ ಕಾಯಿದೆಯನ್ನು ಜಾರಿಗೆ ತಂದಿತು. ಆದರೆ ಅಂಥ ಏರ್ಪಾಟನ್ನು ಅಕ್ರಮ ಸಕ್ರಮಕ್ಕಾಗಿ ಪದೇ ಪದೇ ಬಳಕೆ ಮಾಡುವುದು ನಿಯಮಿತ ಯೋಜನೆಗಳನ್ನು ಮತ್ತು ಯೋಜಿತ ನಗರಾಭಿವೃದ್ಧಿಯ ಉದ್ದೇಶವನ್ನು ಸೋಲಿಸುವ ಕ್ರಮವಾಗಿವೆ. ಡೆವಲಪರುಗಳು ಮತ್ತು ಗುತ್ತಿಗೆದಾರರಿಂದ ಅಪರಾಧದ ಮಾರ್ಪಾಟುಗಳು ಈಗ ಬೆಂಗಳೂರಿನ ದಿನನಿತ್ಯದ ಕಥೆಯಾಗಿದ್ದು ಇವು ಕಾನೂನಿಗೆ ಅತೀತವಾಗಿ ವ್ಯವಹಾರ ನಡೆಸುತ್ತಿವೆ.

ಬಡವರಿಗೆ ಲಾಭದಾಯಕವಾಗುವ ಪುನರ್ವಸತಿ ಪ್ರಸ್ತಾಪವನ್ನು ಪರಿಗಣಿಸುವ ಬದಲು, ಸರ್ಕಾರವು ಎಲ್ಲಾ ಅಕ್ರಮ ನಿರ್ಮಾಣಗಳು ಬಡವರ ಮನೆಗಳಾಗಿವೆ ಎಂಬ ವ್ಯಾಖ್ಯಾನ ನೀಡಿದೆ. ಆದರೆ ವಾಸ್ತವದಲ್ಲಿ ಇದು ತಪ್ಪುದಾರಿಗೆಳೆಯುವ ಏರ್ಪಾಟಾಗಿದ್ದು ಡೆವಲಪರುಗಳು ಮತ್ತು ಹೆಚ್ಚಿನ ಆದಾಯದ ಮಾಲೀಕರ ಎಲ್ಲಾ ಕಾನೂನುಬಾಹಿರ ಕೃತ್ಯಗಳನ್ನು ಕಾನೂನುಬದ್ಧಗೊಳಿಸುವುದಕ್ಕೆ ಒಂದು ಸಾಧನವಾಗಿದೆ.

**ಕೆಳಗಿನ ಪ್ರಶ್ನೆಗಳಿಗೆ ಹೆಚ್ಚುವರಿಯಾಗಿ ಉತ್ತರ ದೊರೆತಿಲ್ಲ ಮತ್ತು ಇವುಗಳತ್ತ ಗಮನ ಹರಿಸುವುದು ಮುಖ್ಯವಾಗಿದೆ:**

1. ಮನೆ ಮಾಲೀಕರು ದಂಡನೆಗೆ ಒಳಗಾಗುತ್ತಾರೆ, ಆದರೆ ಬಿಲ್ಡರುಗಳು ಮತ್ತು ಡೆವಲಪರುಗಳು ಶಿಕ್ಷೆ ತಪ್ಪಿಸಿಕೊಳ್ಳುವುದೇಕೆ?

2. ಸರ್ಕಾರದಲ್ಲಿನ ನಿರ್ಲಕ್ಷ್ಯ ಅಥವಾ ಉದ್ದೇಶಪೂರ್ವಕವಾದ ಅನುಮತಿ/ ವ್ಯತ್ಯಾಸಗಳಿಂದ ಪ್ರಯೋಜನ ಪಡೆಯುವವರ ವಿರುದ್ಧ ಕ್ರಿಮಿನಲ್ ಕ್ರಮ ಏಕೆ ಜರುಗಿಸಬಾರದು?

3. ಈ ಸಕ್ರಮಗೊಳಿಸುವಿಕೆಯ ಲೆಕ್ಕಪರಿಶೋಧನೆ ಮಾಡುವುದು ಹೇಗೆ?

4. ಭ್ರಷ್ಟಾಚಾರ ಮತ್ತು ಕಾನೂನಿನ ಉಲ್ಲಂಘನೆಯನ್ನು ಉತ್ತೇಜಿಸುವಂತಹ ಸಂಸ್ಕೃತಿಯನ್ನು ರಚಿಸುವ ಮೂಲಕ ಭ್ರಷ್ಟಾಚಾರದಿಂದ ಯಾರಿಗೂ ಅನಾನುಕೂಲವಿಲ್ಲ ಎಂಬ ಸಂದೇಶವನ್ನು ಸರ್ಕಾರ ನೀಡುತ್ತಿದೆಯೇ?

5. ಅಂತಿಮವಾಗಿ, ಕಾನೂನು ಉಲ್ಲಂಘಿಸುವವರನ್ನು ಮತ್ತು ಅಪರಾಧಿಗಳನ್ನು ರಕ್ಷಿಸುವುದಕ್ಕಾಗಿ ಹೊಸ ಕ್ಷಮಾದಾನ ಯೋಜನೆಗಳನ್ನು ಸರ್ಕಾರ ಜಾರಿಗೆ ತರುವುದಾದಲ್ಲಿ ಜನರು ಕಾನೂನನ್ನು ಪಾಲಿಸುವುದೇಕೆ?

ಅಂತಿಮವಾಗಿ, ಯೋಜನೆಯಿಂದ ಸರ್ಕಾರದ ಆದಾಯವನ್ನು ಹೆಚ್ಚಿಸಬಹುದು ಎಂಬ ಸಮರ್ಥನೆಯು ತಮಾಷೆಯಾಗಿದೆ, ಅದರಲ್ಲೂ ಆದಾಯದ ಸೋರಿಕೆಗಳು, ಗಾತ್ರ ಹೆಚ್ಚಿಸಿಕೊಂಡಿರುವ ಒಪ್ಪಂದಗಳು ಮತ್ತು ಭ್ರಷ್ಟ ಪಕ್ಷಗಳಿಗೆ ಭೂಮಿ ವಿತರಣೆಯು ಸಾಮಾನ್ಯ ಪರಿಪಾಠವಾಗಿದೆ. ಸರ್ಕಾರವು ತನ್ನ ಸಂಪನ್ಮೂಲಗಳನ್ನು ಕಾಪಾಡುವ ಮತ್ತು ಗುತ್ತಿಗೆ ವ್ಯವಸ್ಥೆ, ಸಾರ್ವಜನಿಕ ಸೊತ್ತುಗಳ ಬಳಕೆಗೆ ಸುಧಾರಣೆ ತರುವ, ತೆರಿಗೆ ಸೋರಿಕೆಗಳನ್ನು ತಪ್ಪಿಸುವ ಮೂಲಕ ಗಂಭೀರವಾಗಿ ಕೆಲಸ ಮಾಡಬೇಕು, ಇವೆಲ್ಲವೂ ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಅವರು ಮಾಡಿರುವ ವರದಿಯ ಪ್ರಮುಖ ಭಾಗವಾಗಿವೆ.

ಸರ್ಕಾರವು ಬಡವರಿಗೆ ಸಹಾಯ ಮಾಡಲು ನಿಜವಾಗಿಯೂ ಬಯಸಿದರೆ, ಅರ್ಹತೆಗೆ ಆಧರಿಸಿ ಪ್ರಯೋಜನವಾಗುವ ಮಾನದಂಡವನ್ನು ಸೃಷ್ಟಿಸಲು ಅಕ್ರಮ ಸಕ್ರಮವನ್ನು ಮರುವಿನ್ಯಾಸ ಮಾಡಬೇಕು. ಕಾಯಿದೆ ಉಲ್ಲಂಘನೆ ಮಾಡುವ ಬಿಲ್ಡರುಗಳು ಮತ್ತು ತಪ್ಪಿತಸ್ಥ ಅಧಿಕಾರಿಗಳಿಗಿಬ್ಬರಿಗೂ ದಂಡನಾತ್ಮಕ ಕ್ರಮಗಳನ್ನು ಸಹ ಖಾತ್ರಿಪಡಿಸಿಕೊಳ್ಳಬೇಕು. ಹಾಗೆ ಮಾಡುವುದರಿಂದ ಮಾತ್ರ ಪಟ್ಟಭದ್ರ ಹಿತಾಸಕ್ತಿಗಳ, ನಿರ್ಮಾಣಗಾರರ ಮತ್ತು ಗುತ್ತಿಗೆದಾರರ ಅಪವಿತ್ರ ಮೈತ್ರಿಯನ್ನು ತೆಗೆದುಹಾಕಬಹುದು.

ಇದು ಪ್ರಜಾಪ್ರಭುತ್ವ ಆಡಳಿತದ ಸರಳ ಮೂಲಭೂತ ತತ್ತ್ವದ ಸುತ್ತ ಬೆಂಗಳೂರನ್ನು ಒಗ್ಗೂಡಿಸುವ ಸಮಯ ಮತ್ತು ಕಾನೂನನ್ನು ಎತ್ತಿಹಿಡಿಯುವ, ಪಾಲನೆಮಾಡುವ ನಾಗರೀಕ ಸಂಸ್ಕೃತಿಯನ್ನು ಬೆಳೆಸುವುದು ಸರ್ಕಾರದ ಕರ್ತವ್ಯವಾಗಿದೆ. ಅಕ್ರಮ ಸಕ್ರಮ ನಮ್ಮ ಬೆಂಗಳೂರನ್ನು ದುರ್ಬಳಕೆ ಮಾಡಿಕೊಳ್ಳುವ ಬಿಲ್ಡರುಗಳಿಗೆ ಹಾಗೂ ಅವರ ರಾಜಕಾರಣಿ ಸ್ನೇಹಿತರಿಗೆ ಪ್ರಯೋಜನ ನೀಡುವಂತಿಲ್ಲ, ಬದಲಿಗೆ ಬಡವರು ಮಾತ್ರ ಇದರ ಪ್ರಯೋಜನ ಪಡೆಯಬೇಕು.

# 15

# ಉಕ್ಕಿನ ಮೇಲ್ಸೇತುವೆ ಯೋಜನೆಯಲ್ಲಿ ರಾಜಾರೋಷದ ಭ್ರಷ್ಟಾಚಾರ: ಯಾವುದೇ ರಾಜಕಾರಣಿ ಕೂಡ ತಾನು ಪ್ರಾಮಾಣಿಕ ಎಂದು ಹೇಳಿಕೊಳ್ಳಲಾರ

ಬೆಂಗಳೂರು ಮಿರರ್ 14 ಫೆಬ್ರವರಿ 2017

ಇತ್ತೀಚಿನ ವರದಿಗಳ ಪ್ರಕಾರ ಕಾಂಗ್ರೆಸ್ ಎಂಎಲ್ಸಿ, ಕಾಂಗ್ರೆಸ್ ಸಚಿವರು, ಕಾಂಗ್ರೆಸ್ ನಾಯಕಿ, ಕಾಂಗ್ರೆಸ್ ಶಾಸಕ ಮತ್ತು ಉನ್ನತ ನಾಯಕತ್ವದೊಂದಿಗೆ ಸಂಬಂಧ ಹೊಂದಿರುವ ಮಧ್ಯಮ ಮಟ್ಟದ ಅಧಿಕಾರಿಗಳನ್ನು ಕರ್ನಾಟಕದ ಮೂಲವನ್ನು ಹೊಂದಿರದ ನಗದು ಮತ್ತು ಆದಾಯದ ದಾಖಲೆಯೊಂದಿಗೆ ಬಂಧಿಸಲಾಗಿದೆ. ಎಲ್ಲರೂ ನಮ್ಮ ನಗರ ಮತ್ತು ರಾಜ್ಯಗಳ ವ್ಯಾಪಕವಾದ ಲೂಟಿಗಳಲ್ಲಿ ಪ್ರಮುಖ ಪಾತ್ರಗಳನ್ನು ನಿರ್ವಹಿಸುತ್ತಿರುವವರೇ. ಆದರೆ ಬೆಂಗಳೂರಿನವರಿಗೆ ಹೆಚ್ಚಿನ ಆಸಕ್ತಿಕರ ವಿಷಯವೆಂದರೆ ಎಂಎಲ್ಸಿಯವರನ್ನು ಬಂಧಿಸಲಾಗಿದ್ದು ಅವರಿಂದ ವಶಪಡಿಸಿಕೊಂಡ ಒಂದು ಡೈರಿ "ಮೇಲ್ಸೇತುವೆಯಿಂದ ಪಡೆದಿರುವ ರೂ. 65 ಕೋಟಿ" ಎಂಬ ಉಲ್ಲೇಖ ಹೊಂದಿದೆ.

ಈಗ ಸರಳವಾದ ಸತ್ಯ ಎಲ್ಲವನ್ನೂ ವಿವರಿಸುತ್ತದೆ. ಮುಖ್ಯಮಂತ್ರಿ ಮತ್ತು ಅವರ ಮರುಸ್ಥಾಪನೆಗೊಂಡ ಬೆಂಗಳೂರು ಸಚಿವ ಮತ್ತು ರಿಯಲ್ ಎಸ್ಟೇಟ್ ಉದ್ಯಮಿ ಕೆ.ಜೆ ಜಾರ್ಜ್ ಅವರು ಯದ್ವಾತದ್ವಾವಾಗಿ ಯೋಜನೆಯನ್ನು ತಳ್ಳುವ ಪ್ರಯತ್ನದಲ್ಲಿದ್ದಾರೆ.

ಅಧಿಕಗೊಳಿಸಿದ ವೆಚ್ಚಗಳು, ಪರಿಸರ ಪ್ರಭಾವದ ಮೌಲ್ಯಮಾಪನವಿಲ್ಲದಿರುವುದು, ಸಾರ್ವಜನಿಕ ಸಮಾಲೋಚನೆಗಳ ಒಂದು ಠಕ್ಕುತನ ಮತ್ತು ಹಗರಣ, ಸಾವಿರಾರು ಬೆಂಗಳೂರಿಗರ ವಿರೋಧ, ಮಾಧ್ಯಮಗಳ ಪ್ರತಿಭಟನೆ ಇತ್ಯಾದಿ ಎದುರಿಸುತ್ತಿರುವ ಯೋಜನೆಯಿದು. ಸಾವಿರಾರು ಬೆಂಗಳೂರಿಗರು ಈ ಯೋಜನೆ ಮತ್ತು ಸಾರ್ವಜನಿಕ ಹಣದ ದುರುಪಯೋಗವನ್ನು ಪ್ರತಿಭಟಿಸಿದ್ದಾರೆ. ಆದರೆ ಎಲ್ಲವನ್ನೂ ಕಡೆಗಣಿಸಲಾಗಿರು ಏಕೆಂಬುದು ಈಗ ತಿಳಿದಿದೆ!

ಮುಖ್ಯಮಂತ್ರಿ ಮತ್ತು ಬಿ.ಡಿ.ಎ ಕಮಿಷನರ್ ಅವರಿಗೆ 2016 ರ ಜೂನ್ ತಿಂಗಳಲ್ಲಿ ಒಂದು ಪತ್ರ ಬರೆದು ಅಪಾರದರ್ಶಕವಾದ ರೀತಿಯಲ್ಲಿ ಈ ಯೋಜನೆಯನ್ನು ಉಗ್ರವಾಗಿ ಪ್ರಸ್ತಾಪಿಸಲಾಗುತ್ತಿದೆ ಎಂದು ಮೊಟ್ಟಮೊದಲ ಬಾರಿ ಬೊಟ್ಟುಮಾಡಿದವನು ನಾನೇ. ಇದು ಬೆಂಗಳೂರಿಗೆ ಬೇಕಾದ ಯೋಜನೆಯಲ್ಲ, ಬದಲಿಗೆ ಗುತ್ತಿಗೆದಾರರ ನೆರವಿನಿಂದ ಚುನಾವಣೆಗಾಗಿ ಹಣವನ್ನು ಸಂಗ್ರಹಿಸುವ ಮಾರ್ಗ ಎಂದು ಆಗಲೇ ಹೇಳಿದ್ದೆ.

ನಾನು ಮತ್ತು ಬೆಂಗಳೂರಿನ ಕೆಲವರು ಮೊದಲಿನಿಂದಲೂ ಇದೇ ವಿಷಯವನ್ನು ಪ್ರತಿಪಾದಿಸುತ್ತ ಬಂದಿದ್ದು ಈ ವಿಷಯದಲ್ಲಿ ನಮ್ಮ ಆಲೋಚನೆ ಸುಳ್ಳಾಗಿಲ್ಲ. ಉಕ್ಕಿನ ಮೇಲ್ಸೇತುವೆಯು ಜನರ ಹಿತಕ್ಕಾಗಿ ಎಂದು ಬಿಂಬಿಸಲು ಪ್ರಯತ್ನಿಸುವ ಮೂಲಕ ನಗರವನ್ನು ಹಾಗೂ ನಗರದ ಜನರನ್ನು ವಂಚಿಸುತ್ತಿರುವ ಲಜ್ಜೆಗೆಟ್ಟ ರಾಜಕಾರಣಿಗಳು ನಗರವನ್ನು ದುರ್ಬಳಕೆ ಮಾಡುವ ಒಂದು ನಾಚಿಕೆಗೇಡಿನ ಮಾರ್ಗವಾಗಿದೆ.

ಸರಕಾರ ಮತ್ತು ಕಾಂಗ್ರೆಸ್ಸಿನಿಂದ ಬರುತ್ತಿರುವ ಪ್ರತಿಕ್ರಿಯೆಯು ಬಹಿರಂಗವಾಗಿ ಎಲ್ಲವನ್ನೂ ಹೇಳುತ್ತಿದೆ. ಭ್ರಷ್ಟಾಚಾರದ ಆರೋಪಕ್ಕೆ ಪ್ರತಿಕ್ರಿಯೆಯಾಗಿ ಡೈರಿಯೊಂದು ಇದೆ ಎಂಬುದನ್ನು ನಿರಾಕರಿಸಲಾಗುತ್ತಿಲ್ಲ. ಬದಲಾಗಿ ಸೀಡಿಯೊಂದಿಗೆ ಬಿಜೆಪಿಯ ನಾಯಕರ ಬಗ್ಗೆ ಕೆಲವು ಆರೋಪಗಳನ್ನು ಎದುರಿಸುವುದರ ಮೂಲಕ ಅದನ್ನು ದೂರವಿಡುವ ಕ್ಷುಲ್ಲಕ, ಅಸಮರ್ಪಕ ಪ್ರಯತ್ನ ನಡೆಯಿತು. ಸಾರ್ವಜನಿಕ ಹಣದ ವಿಷಯದಲ್ಲಿ ಭ್ರಷ್ಟಾಚಾರ ಮತ್ತು ದುರುಪಯೋಗದ ಆರೋಪವು ಎರಡು ರಾಜಕೀಯ ಪಕ್ಷಗಳ ನಡುವಿನ ಚರ್ಚೆಗೆ ಸೀಮಿತವಾದ ವಿಷಯವಾಗಿದೆ ಎಂಬಂತೆ ಬಿಂಬಿಸಲಾಯಿತು. ಭ್ರಷ್ಟಾಚಾರ ಮತ್ತು ಸಾರ್ವಜನಿಕ ಹಣದ ದುರುಪಯೋಗದ ಆರೋಪವು ಬೆಂಗಳೂರಿನ ಮತ್ತು ಕರ್ನಾಟಕದ ಜನರಿಗೆ ಆಳವಾದ ಹಿತಾಸಕ್ತಿಯ ವಿಷಯವಾಗಿದೆದೆ ಎಂದು ಈ ನಾಯಕರು ಮತ್ತು ಅವರ ಅಧಿಕಾರಿಗಳು ನೆನಪಿಸಿಕೊಳ್ಳಬೇಕಾಗಿದೆ.

ಭ್ರಷ್ಟಾಚಾರ ಎರಡು ಬಣದ ರಾಜಕೀಯ ನಾಯಕರ ನಡುವೆ ಆಡುವ ರಾಜಕೀಯ ಪಿಂಗ್–ಪಾಂಗ್ ಅಲ್ಲ. ಸಾರ್ವಜನಿಕ ಸೇವಕರು ಅವರು ಸೇವೆ ಸಲ್ಲಿಸುವ ನಾಗರೀಕರಿಗೆ ಮತ್ತು ಸಮುದಾಯಗಳಿಗೆ ನಿಸ್ಸಂಶಯವಾಗಿ ಜವಾಬ್ದಾರರಾಗಿದ್ದಾರೆ ಮತ್ತು ಅವರ ಧರ್ಮದರ್ಶಿಗಳಾಗಿದ್ದಾರೆ. ಅದಕ್ಕಾಗಿಯೇ ನಮ್ಮ ಅನೇಕ ಕಾನೂನುಗಳಲ್ಲಿ ಭ್ರಷ್ಟಾಚಾರ ತಡೆಗಟ್ಟುವಿಕೆ ಕಾಯ್ದೆಯೂ ಇದೆ. ಸಾರ್ವಜನಿಕ ಸೇವಕರನ್ನು ಪ್ರಾಮಾಣಿಕರನ್ನಾಗಿಡುವುದು ಮತ್ತು ಪ್ರಾಮಾಣಿಕರಲ್ಲದವರನ್ನು ಸೆರೆಮನೆಯಲ್ಲಿಡುವುದು ಇದರ ಉದ್ದೇಶವಾಗಿದೆ. ಈ ಸರ್ಕಾರದ ನಡವಳಿಕೆ 2014ರ ಹೊತ್ತಿಗೆ ಭ್ರಷ್ಟಾಚಾರ ಮಾಡಿ ಒದ್ದೋಡಿಸಲ್ಪಟ್ಟ ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರವನ್ನು ಹೋಲುತ್ತದೆ.

ಅಲ್ಲಿ ಕೂಡ ಕಾಮನ್ವೆಲ್ತ್, 2 ಜಿ, ಕಲ್ಲಿದ್ದಲು, ಇಸ್ರೋ ಮುಂತಾದ ಹಗರಣಗಳು ಕಲ್ಮಾಡಿ, ಸಿಬಲ್, ಚಿದಂಬರಮ್ ಮುಂತಾದ ನಾಯಕರ ಕೊರಳಿಗೆ ಸುತ್ತಿಕೊಂಡವು. ಆ ಸಂದರ್ಭದಲ್ಲಿ ಆಗಿನ ಸಿಎಜಿ ಸೇರಿದಂತೆ ಹಗರಣಗಳನ್ನು ಬಹಿರಂಗಪಡಿಸುವವರಿಗೆ ಬೆದರಿಕೆಯೊಡ್ಡುವ ತಂತ್ರಗಳನ್ನು ಬಳಸಲಾಯಿತು. ಕಪಿಲ್ ಸಿಬಲ್ ಪ್ರಸಿದ್ಧ ಶೂನ್ಯ ನಷ್ಟ ಸಿದ್ಧಾಂತವು ಆ ಪ್ರಯತ್ನದ ಒಂದು ಭಾಗವಾಗಿತ್ತು. ಇಲ್ಲಿ ಕೂಡಾ ಬೇರೆಡೆ ಗಮನ ಸೆಳೆಯಲು ಮತ್ತು ಬೆದರಿಕೆ ಒಡ್ಡಲು ಎಲ್ಲ ರೀತಿಯ ಪ್ರಯತ್ನಗಳು ನಡೆದವು. ಆದರೆ ಅವು ಯಶಸ್ವಿಯಾಗಿಲ್ಲ.

ಕ್ರಿಮಿನಲ್ ಪ್ರಾಸಿಕ್ಯೂಷನ್ ಸಂದರ್ಭದಲ್ಲಿ ಈ ಡೈರಿ ಹೆಚ್ಚು ಸ್ಪಷ್ಟವಾದ ಮೌಲ್ಯವನ್ನು ಹೊಂದಿರಲು ಕಾರಣವೇನೆಂದರೆ ಅದನ್ನು ಒಬ್ಬ ಎಂಎಲ್‌ಸಿಯಿಂದ ವಶಪಡಿಸಿಕೊಳ್ಳಲಾಗಿದೆಯೇ ಹೊರತು ಮೂರನೇ ವ್ಯಕ್ತಿಯಿಂದಲ್ಲ. ಹೀಗಾಗಿ ಇದು ಜೈನ್ ಮತ್ತು ಸಹಾರಾ ಪ್ರಕರಣಗಳಿಗಿಂತ ಭಿನ್ನವಾಗಿದೆ. ಲೋಕಾಯುಕ್ತ ಮತ್ತು ಇತರ ತನಿಖಾ ಸಂಸ್ಥೆಗಳು ಡೈರಿಯ ಈ ವರದಿಯ ಬಗ್ಗೆ ಸ್ವಯಂಪ್ರೇರಿತವಾದ ತನಿಖೆಯನ್ನು ಕೈಗೊಳ್ಳಬೇಕು. ಆದಾಯ ತೆರಿಗೆ ಇಲಾಖೆಯಿಂದ ಅವರು ವಿವರಗಳನ್ನು ಪಡೆಯಬೇಕು. ಡೈರಿ ವಿಷಯಗಳು ಮಾಧ್ಯಮ ವರದಿಗಳನ್ನು ದೃಢಪಡಿಸಿದರೆ ಇಡೀ ಉಕ್ಕಿನ ಮೇಲ್ಸೇತುವೆ ಯೋಜನೆಯನ್ನು ಅವರು ತನಿಖೆ ಮಾಡಬೇಕು ಮತ್ತು ಕಾನೂನು ಕ್ರಮ ಕೈಗೊಳ್ಳಬೇಕಾದ ಅಗತ್ಯವನ್ನು ಗುರುತಿಸಬೇಕು. ಈ ಸರಕಾರಕ್ಕೆ ಯುಪಿಎ ಪ್ರಕರಣದಂತೆಯೇ ಅಂತ್ಯ ಸಮೀಪದಲ್ಲಿದೆ.

ಈಗಿನಿಂದ ಪ್ರಾರಂಭಿಸಿ 2018ರಲ್ಲಿ ನಡೆಯಲಿರುವ ಚುನಾವಣೆಯ ವರೆಗೆ, ರಾಜ್ಯವನ್ನು ಮತ್ತು ರಾಜ್ಯದ ಜನರನ್ನು ಲೂಟಿ ಮಾಡುವುದನ್ನು ತಪ್ಪಿಸುವುದಕ್ಕಾಗಿ ಸರ್ಕಾರದ ಎಲ್ಲ ಇಲಾಖೆಗಳು ತಮ್ಮ ಯಾವುದೇ ಅಥವಾ ಎಲ್ಲಾ ಒಪ್ಪಂದಗಳು

ಮತ್ತು ವಾಣಿಜ್ಯ ವ್ಯವಹಾರಗಳನ್ನು ಬಹಿರಂಗಪಡಿಸಬೇಕು ಎಂದು ನಾನು ಮುಖ್ಯಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ. ಈ ಸರಕಾರದ ಅಧಿಕಾರಿಗಳು ಮತ್ತು ರಾಜಕಾರಣಿಗಳು ಕಳೆದ ಹಲವು ವರ್ಷಗಳಿಂದ ಈ ನಗರವನ್ನು ಹಾಗೂ ರಾಜ್ಯವನ್ನು ಲೂಟಿ ಮಾಡುವ ಆಟ ಆಡುತ್ತಿದ್ದಾರೆ ಮತ್ತು ರಾಜ್ಯವು ಇವುಗಳಿಗೆ ತಕ್ಕ ಶಿಕ್ಷೆಯನ್ನು ನೀಡುತ್ತದೆ ಎಂಬುದರಲ್ಲಿ ನನಗೆ ಯಾವುದೇ ಸಂದೇಹವಿಲ್ಲ.

ರಾಜಕಾರಣಿಗಳು ಸೇರಿದಂತೆ 2ಜಿ, ಕೋಲ್ಗೇಟ್ ಮತ್ತು ಇತರ ಹಗರಣಗಳ ಫಲಾನುಭವಿಗಳ ವಿರುದ್ಧ ವಂಚನೆಗಾಗಿ ಕಾನೂನು ಕ್ರಮ ಕೈಗೊಳ್ಳಲಾಗಿದೆ ಮತ್ತು ನಮ್ಮ ಪಕ್ಕದ ರಾಜ್ಯ ತಮಿಳುನಾಡಿನಲ್ಲಿ ಶಶಿಕಲಾರಂಥ ಉದಾಹರಣೆಗಳಿವೆ. ಇಲ್ಲಿಯೂ ಮಂತ್ರಿಗಳು, ಅಧಿಕಾರಿಗಳು ಮತ್ತು ವ್ಯಾಪಾರಿಗಳು ಸಾರ್ವಜನಿಕ ಹಣ ಮತ್ತು ಆಸ್ತಿಗಳ ಲೂಟಿ ಮತ್ತು ದುರುಪಯೋಗದ ಕುರಿತು ಪರಿಗಣಿಸಬೇಕಾದ ಅಗತ್ಯವಿದೆ. ಅಸ್ತಿತ್ವದಲ್ಲಿರುವ ಭ್ರಷ್ಟಾಚಾರ ತಡೆಗಟ್ಟುವಿಕೆ ಕಾಯಿದೆಗೆ ಹೆಚ್ಚುವರಿಯಾಗಿ, ಸರಕಾರ ಮತ್ತು ಅವರ ದ್ಯಮಗಳಿಂದ ಅಂತಹ ಭ್ರಷ್ಟಾಚಾರವನ್ನು ನಿರ್ದಿಷ್ಟವಾಗಿ ತಡೆಗಟ್ಟುವ ಹೊಸ ಕಾನೂನುಗಳಿವೆ. ನಾನು ಮತ್ತು ಹಲವರು ಈ ಕ್ರಮದ ಜಾರಿಯನ್ನು ಖಚಿತಪಡಿಸಿಕೊಳ್ಳಲು ದೃಢನಿಶ್ಚಯಮಾಡಿದ್ದೇವೆ. ಅಧಿಕಾರಶಾಹಿ ಅಥವಾ ರಾಜಕೀಯ ನಾಯಕ ಇಂತಹ ಭ್ರಷ್ಟಾಚಾರವು ನಡೆಯುತ್ತಿರುವಾಗ ತಾನು ಪ್ರಾಮಾಣಿಕ ಎಂದು ಹೇಳಿಕೊಳ್ಳಲು ಸಾಧ್ಯವಿಲ್ಲ. ಒಂದು ಮಾತನ್ನು ಇಲ್ಲಿ ಉಲ್ಲೇಖಿಸಬೇಕಾಗಿದೆ – ಶವರ್ ತೆಗೆದುಕೊಳ್ಳುವಾಗ ಯಾರೂ ರೇನ್ ಕೋಟ್ ಧರಿಸಿ ನಿಲ್ಲಲಾರರು ಎಂಬುದು.

# 16

# ನೀರಿನಲ್ಲಿ ಹೊಗೆ ಮತ್ತು ಗಾಳಿಯಲ್ಲಿ ಬೆಂಕಿ

| ಎನ್‌ಡಿಟಿವಿ ಬ್ಲಾಗ್ | 18 ಫೆಬ್ರವರಿ 2017 |
|---|---|

ಬೆಳ್ಳಂದೂರು ಕೆರೆಗೆ ಬೆಂಕಿ ಹೊತ್ತಿಕೊಂಡಿರುವುದು ಮತ್ತು ವಿಷಕಾರಿ ಹೊಗೆಯನ್ನು ಊದುತ್ತಿರುವುದು ಬೆಂಗಳೂರಿನ ನಾಗರೀಕರನ್ನು ಹಿಂಬಾಲಿಸುತ್ತಿರುವ ಪುನರಾವರ್ತಿತ ದುಃಸ್ವಪ್ನದ ಮತ್ತೊಂದು ಘಟನೆಯಾಗಿದೆ. ಕೈಗಾರಿಕಾ ಹೊರಸೂಸುವಿಕೆಯಿಂದಾಗಿ ಎರಡು ವರ್ಷಗಳ ಹಿಂದೆ ಬೆಂಕಿಯ ಎರಡು ಪ್ರತ್ಯೇಕ ಘಟನೆಗಳು ನೀರಿನಲ್ಲಿ ಉಂಟಾಗಿದ್ದು ಅವು ಬಿಬಿಸಿಯ ಗಮನವನ್ನು ಸಹ ಸೆಳೆದವು – ಪರಿಸರದ ಕುರಿತು, ನಿರ್ದಿಷ್ಟವಾಗಿ ನಗರದ ಕೆರೆಗಳಿಗೆ ಸಂಬಂಧಿಸಿ ಸರ್ಕಾರದ ಅಲಕ್ಷ್ಯದ ಎಲ್ಲ ಗೋಚರ ಉದಾಹರಣೆಗಳಿವು.

ಬೆಳ್ಳಂದೂರು ಕೆರೆಯು ಬೆಂಗಳೂರಿನ ಅತಿದೊಡ್ಡ ಕೆರೆಯಾಗಿದ್ದು 891.9 ಎಕರೆಗಳ ವಿಸ್ತೀರ್ಣ ಹೊಂದಿದೆ. ಕೋರಮಂಗಲ ಮತ್ತು ಚಲ್ಲಘಟ್ಟ ಕಣಿವೆ ಪ್ರದೇಶಗಳ ಮಳೆನೀರು ಹರಿಯುವುದಕ್ಕೆ ಅಗತ್ಯ ಮೂಲಸೌಕರ್ಯ ಹಾಗೂ ಪರಿಸರ ವ್ಯವಸ್ಥೆಯನ್ನು ಸಂರಕ್ಷಿಸುವಲ್ಲಿ ಅತ್ಯಗತ್ಯವಾಗಿದೆ.

ದುರದೃಷ್ಟವಶಾತ್, ಈ ಕೆರೆಯು ಈಗ ನಗರದ ಅತ್ಯಂತ ಕಲುಷಿತ ಕೆರೆಗಳಲ್ಲಿ ಒಂದಾಗಿರುವ ಕುಖ್ಯಾತಿ ಹೊಂದಿದೆ.

ಪ್ರಸಕ್ತ ಕಂಡುಬರುತ್ತಿರುವ ಕೆರೆಗಳ ಮಾಲಿನ್ಯ ಮತ್ತು ಅತಿಕ್ರಮಣಗಳ ಸಮಸ್ಯೆ ಬೆಂಗಳೂರಿನಲ್ಲಿ ಹೊಸದೇನಲ್ಲ. ಕೆರೆಗಳು ಮತ್ತು ಮಳೆನೀರಿನ ಒಳಚರಂಡಿಗಳ ಪ್ರದೇಶಗಳಲ್ಲಿ ಅತಿರೇಕದ ನಗರೀಕರಣ ಮತ್ತು ಜನಸಾಂದ್ರತೆ ಹೆಚ್ಚಳವು ಕಾನೂನು ಮತ್ತು ನಿಯಮಗಳ ನಿಯಂತ್ರಣ ಜಾರಿಗೊಳಿಸುವಿಕೆಯನ್ನು ಹೊಂದಿಲ್ಲ. ಬದಲಿಗೆ ಉದ್ದೇಶಪೂರ್ವಕ ನಿರ್ಲಕ್ಷ್ಯದ ಸಂಸ್ಕೃತಿಯು ಪ್ರವರ್ಧಮಾನಕ್ಕೆ ಬಂದಿದೆ. ನಗರೀಕರಣ ಮತ್ತು ಜನಸಾಂದ್ರತೆ ಹೆಚ್ಚಳ ಬೆಂಗಳೂರಿನಂತಹ ಬೆಳೆಯುತ್ತಿರುವ ನಗರದ ಭಾಗವೇ ಆಗಿದೆ.

ಆದಾಗ್ಯೂ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯೂಎಸ್‌ಎಸ್‌ಬಿ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನಂತಹ ನಗರದ ಅಧಿಕಾರಿಗಳು ಈ ಕ್ಷಿಪ್ರ ಮತ್ತು ವ್ಯಾಪಕ ಬೆಳವಣಿಗೆಯನ್ನು ಪರಿಹರಿಸಲು ಮತ್ತು ಸೇವೆಗಳ ಮೂಲಸೌಕರ್ಯವನ್ನು ರಚಿಸಲು ಸಜ್ಜುಗೊಳ್ಳಬೇಕು. ಸರಳವಾಗಿ ಇವುಗಳನ್ನು ಮಾಡದೇ ಇದ್ದಲ್ಲಿ ಕೈಗಾರಿಕಾ ತ್ಯಾಜ್ಯಗಳನ್ನು ಚರಂಡಿಗಳಲ್ಲಿ ಹಾಗೂ ಕೆರೆಗಳಲ್ಲಿ ಸುರಿಯುವಂತಾಗುತ್ತದೆ.

ಕೊಳಚೆನೀರನ್ನು ಬಿಡುವುದಕ್ಕೂ ಮುನ್ನ ಅವುಗಳನ್ನು ಸಂಸ್ಕರಿಸುವುದಕ್ಕೆ ಕೊಳಚೆನೀರಿನ ಸಂಸ್ಕರಣಾ ಘಟಕಗಳು (ಎಸ್‌ಟಿಪಿಗಳು) ಅವಶ್ಯಕವಾಗಿದ್ದು, ಇವು ತಕ್ಕುದಾದ ಗಾತ್ರದ್ದಾಗಿರುವುದಿಲ್ಲ, ಕೆಲಸ ಮಾಡುವಂತಿರುವುದಿಲ್ಲ ಇಲ್ಲವೇ ಓವರ್ ಲೋಡ್ ಆಗಿರುತ್ತವೆ.

ಸರ್ಕಾರದ ಸಂಸ್ಥೆಗಳು ಮತ್ತು ಚುನಾಯಿತ ಪ್ರತಿನಿಧಿಗಳು ನಿರ್ಲಕ್ಷ್ಯ ಮತ್ತು ಅತಿ ಭ್ರಷ್ಟಾಚಾರದ ಸಂಸ್ಕೃತಿಯಿಂದಾಗಿ ಈ ರೀತಿಯ ಪರಿಸರದ ದೃಷ್ಟಿಯಿಂದ ಮಹತ್ವದ್ದಾಗಿರುವ ಯೋಜನೆಗಳಿಂದ ಸಾರ್ವಜನಿಕ ಹಣವನ್ನು ಬೇರೆಡೆಗೆ ತಿರುಗಿಸಲಾಗುತ್ತಿದೆ. ನಗರದ ವಿಐಪಿಗಳಿಂದ ಟ್ರಾಫಿಕ್ ಬಗ್ಗೆ ಅಗಾಧವಾದ ಕೊರೆತಕ್ಕೆ ಉತ್ತರವೇ ಉಕ್ಕಿನ ಮೇಲ್ಸೇತುವೆಯಂಥ ಯೋಜನೆಗಳು. ಇಂಥ ಯೋಜನೆಗಳಿಗೆ ಸಾರ್ವಜನಿಕ ಹಣ ಲಭ್ಯವಿರುತ್ತದೆ, ಅದೇ ಇತರ ಯೋಜನೆಗಳು ಹಣವನ್ನು ಹುಡುಕಲು ಹೋರಾಡಬೇಕಾಗುತ್ತದೆ. ಬೆಂಗಳೂರು ನೀರು ಮತ್ತು ಚರಂಡಿ ಮಂಡಳಿಯಂತಹ (ಬಿಡಬ್ಲ್ಯೂಎಸ್‌ಎಸ್‌ಬಿ) ನಗರದ ಸಂಸ್ಥೆಗಳ ಹೊಣೆಗಾರಿಕೆಯ

ಕೊರತೆಯಿಂದ ನಗರದ ಕೆರೆ ಮತ್ತು ಅಂತರ್ಜಲದ ಪರಿಸರ ವ್ಯವಸ್ಥೆಯನ್ನು ವ್ಯಾಪಕವಾಗಿ ನಾಶಗೊಳಿಸುವುದನ್ನು ತಪ್ಪಿಸಲು ಯಾರೂ ಎಂದಿಗೂ ಮುಂದಾಗಿಲ್ಲ. ಒಂದು ಕಡೆ, ಸರಕಾರವು ಬೆಂಗಳೂರಿನಲ್ಲಿ ಕುಡಿಯುವ ನೀರಿನ ನೈಸರ್ಗಿಕ ಮೂಲಗಳಾಗಬಹುದಾದ ಕೆರೆ ನೀರು ಹಾಗೂ ಅಂತರ್ಜಲ ನಾಶಗೊಳ್ಳುವುದನ್ನು ಮೂಕವಾಗಿ ನೋಡುತ್ತಿದ್ದು ಇನ್ನೊಂದೆಡೆ ಕಾವೇರಿ ನದಿಯಿಂದ ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡಲು ಕೋಟಿಗಟ್ಟಲೆ ಹಣ ಪೋಲು ಮಾಡುತ್ತಿದೆ. ಕೊನೆಗೂ ಕೋಲಾಹಲದ ನಂತರ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಕೆರೆಗಳ ಪುನರುಜ್ಜೀವನಕ್ಕೆ ಆದೇಶಿಸಿದೆ.

ಆದಾಗ್ಯೂ, ಕೆರೆಗಳ ಸುತ್ತ ಬೇಲಿ ನಿರ್ಮಾಣಕ್ಕಾಗಿ 3.30 ಕೋಟಿ ರೂ.ಗಳನ್ನು ಸರಕಾರ ಮಂಜೂರು ಮಾಡಿದ್ದರೂ ಬಿಡಿಎ ಕಾರ್ಯವನ್ನು ಇನ್ನೂ ಪೂರ್ಣಗೊಳಿಸಿಲ್ಲ. ಹೀಗಾಗಿ ಕೆರೆಗಳ ಸುತ್ತಲಿನ ಭೂಮಿಯನ್ನು ಒತ್ತುವರಿ ಮಾಡಿಕೊಳ್ಳಲಾಗುತ್ತಿದೆ. ಕೆರೆ ಕಾರ್ಯಕರ್ತರು ಹೇಳುವಂತೆ, ಕೆರೆಯ 2/3 ನೇ ಭಾಗವನ್ನು ಮಾತ್ರ ಬೇಲಿಯಿಂದ ಸುತ್ತುವರಿಯಲಾಗಿದೆ, ಆದರೆ 918 ಮೀಟರ್ ಇನ್ನೂ ತೆರೆದಿದೆ. ಸಿಎಜಿ ತನ್ನ 2015ರ ವರದಿಯಲ್ಲಿ, ನಿಧಿಯನ್ನು ಮಂಜೂರು ಮಾಡಿದ್ದರೂ ಸಹ ಬೆಳ್ಳಂದೂರು ಕೆರೆಯ ಪುನರುಜ್ಜೀವನ ಮತ್ತು ಸಂರಕ್ಷಣೆಗೆ ವಿಫಲವಾಗಿರುವುದಕ್ಕಾಗಿ ಕೆರೆ ಅಭಿವೃದ್ಧಿ ಪ್ರಾಧಿಕಾರವನ್ನು (ಎಲ್‌ಡಿಎ) ದೂಷಿಸಿದೆ.

ನಾನು ಈ ಸಮಸ್ಯೆಯನ್ನು ಎತ್ತಿಹೇಳುವುದರಲ್ಲಿ ಮುಂಚೂಣಿಯಲ್ಲಿದ್ದೇನೆ ಮತ್ತು ಪರಿಸರ ವಿಜ್ಞಾನದ ದೃಷ್ಟಿಯಿಂದ ಸೂಕ್ಷ್ಮ ವಲಯವೆಂದು ಘೋಷಿಸಿದ ಹೊರತಾಗಿಯೂ ಸರ್ಕಾರಿ ಸಂಸ್ಥೆಗಳು ಮತ್ತು ಬಿಲ್ಡರುಗಳು ನಿಯಮಗಳ ಉಲ್ಲಂಘನೆಗೆ ಸಮೀಪ ಸಾಕ್ಷಿಯಾಗಿದ್ದೇನೆ. Change. org ಸೇರಿದಂತೆ ಸಾಮಾನ್ಯ ನಾಗರೀಕರು ಸರ್ಕಾರದ ಬಗ್ಗೆ ಪದೇ ಪದೇ ಆತಂಕ ಹಾಗೂ ನಿರಾಶೆಯನ್ನು ವ್ಯಕ್ತಪಡಿಸಿರುತ್ತಾರೆ. ಸಂಗೀತಾ ಝಾ ಅವರ ಓರ್ಜಿ ಅರ್ಜಿಯು ಸಾವಿರಾರು ಸಹಿಗಳನ್ನು ಸಂಗ್ರಹಿಸಿದ್ದಲ್ಲದೇ ನನ್ನ ಬೆಂಬಲವನ್ನು ಹೊಂದಿತ್ತು. ಮೇ 2015 ರಲ್ಲಿ ನಾನು ಸಂಸತ್ತಿನಲ್ಲಿ ಈ ವಿಚಾರವನ್ನು ಎತ್ತಿದ್ದೇವೆ ಮತ್ತು ಬೆಂಗಳೂರಿನಲ್ಲಿ ಕೆರೆಗಳು ಮತ್ತು ರಾಜಕಾಲುವೆಗಳ ಅವನತಿಯ ಬಗ್ಗೆ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆಯ ಸಚಿವರಿಗೆ ವಿವರವಾದ ಕೋರಿಕೆಯನ್ನು ನೀಡಿದೆ. ಈ ಪತ್ರದ ಮೂಲಕ, ರಾಷ್ಟ್ರೀಯ ಹಸಿರು ನ್ಯಾಯಾಧಿಕರಣಕ್ಕೆ (ಎನ್ ಜಿ ಟಿ) ನಿರ್ದೇಶನಗಳನ್ನು ಜಾರಿಗೊಳಿಸಲು ಮತ್ತು ರಾಜಕಾಲುವೆಗಳ (ಚಂಡಮಾರುತ–

ನೀರಿನ ಬರಿದಾಗುವಿಕೆಗಳು) ಸುತ್ತಲೂ ಇರುವ ಬಫರ್ ವಲಯಗಳನ್ನು ಕೂಡ ಒಳಗೊಳ್ಳುವುದಕ್ಕೆ ಪರಿಶೀಲಿಸಲು ನಾನು ಸಚಿವಾಲಯಕ್ಕೆ ಮನವಿ ಮಾಡಿದೆ. ಎನ್ ಜಿ ಟಿ ನಿರ್ದೇಶನಗಳ ಕಟ್ಟುನಿಟ್ಟಾದ ಅನುಷ್ಠಾನವು ನಗರವು ಉದ್ಯಾನಗಳು ಮತ್ತು ಸರೋವರಗಳ ನಗರವೆಂಬುದನ್ನು ಖಚಿತಪಡಿಸುತ್ತದೆ ಮತ್ತು ಇದರಿಂದ ನಾಗರೀಕರು ಪರಿಸರ ನಾಶದ ಭಯವಿಲ್ಲದೇ ಬದುಕಬಹುದು. ಈ ವಿಷಯವನ್ನು ಪರಿಹರಿಸದೇ ಇರುವುದರಿಂದ ಪರಿಸರಕ್ಕೆ ಮಾತ್ರವಲ್ಲದೆ ಸಾರ್ವಜನಿಕ ಆರೋಗ್ಯದ ಮೇಲೂ ಕೆಟ್ಟ ಪರಿಣಾಮಗಳಾಗುತ್ತವೆ.

ಸಾರ್ವಜನಿಕ ಪ್ರತಿಭಟನೆಗೆ ಪ್ರತಿಕ್ರಿಯಿಸಿ, ಅಕ್ಟೋಬರ್ 2016 ರಲ್ಲಿ ರಾಜ್ಯ ಸರ್ಕಾರವು ಕೆರೆಗಳ ಪುನರುಜ್ಜೀವನಕ್ಕಾಗಿ ಸ್ಥಿತಿಗತಿಗಳನ್ನು ವಿಶ್ಲೇಷಿಸಲು ಮತ್ತು ಶಿಫಾರಸುಗಳನ್ನು ಮಾಡಲು ಪರಿಣಿತ ಸಮಿತಿಯನ್ನು ನೇಮಿಸಿತು. ಸಮಿತಿಯ ನೇಮಕಾತಿ ನಾಗರೀಕರ ನಡುವೆ ಬದಲಾವಣೆಯ ಭರವಸೆ ಮೂಡಿಸಿತು. ಆದರೆ ಇತ್ತೀಚಿನ ಬೆಳವಣಿಗೆಗಳು ಇಂಥ ಭರವಸೆ ದೂರವಾಗಲು ಕಾರಣವಾಗಿದೆ. ಪರಿಣಿತರ ಸಮಿತಿ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ಸರ್ಕಾರವು ತನ್ನ ನಿದ್ರೆಯಿಂದ ಮತ್ತು ನಿರ್ಲಕ್ಷ್ಯದಿಂದ ಎಚ್ಚರಗೊಳ್ಳಬೇಕಾಗಿದೆ ಮತ್ತು ಸಾರ್ವಜನಿಕ ಸಮಾಲೋಚನೆಗಳ ನಂತರ ಶಿಫಾರಸುಗಳ ಮೇಲೆ ಕ್ರಮ ಕೈಗೊಳ್ಳುವುದನ್ನು ಮುಂದುವರಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಬೇಕಿದೆ. ಬೆಳ್ಳಂದೂರು ಸರೋವರದ ಪ್ರಸ್ತುತ ಸ್ಥಿತಿಯು ಅನೇಕ ವಿಧಗಳಲ್ಲಿ ನಮ್ಮ ನಗರದ ರಾಜಾರೋಷ ದುರ್ಬಳಕೆ, ನಿರ್ಲಕ್ಷ್ಯವನ್ನು ಹಾಗೂ ದುರ್ಬಲ ಆಡಳಿತವನ್ನು ಪ್ರತಿನಿಧಿಸುತ್ತದೆ. ಸುದೀರ್ಘ ಇತಿಹಾಸ ಮತ್ತು ಪರಂಪರೆಯನ್ನು ಹೊಂದಿರುವ ಹೆಮ್ಮೆಯ ಸುಂದರವಾದ ನಗರವನ್ನು ನಿಧಾನವಾಗಿ ಜೀವಿಸಲಾಗದ ನಗರದ ಅಸ್ತವ್ಯಸ್ತತೆಗೆ ತಿರುಗಿಸಿ, ಶ್ರಮಶೀಲ ನಾಗರೀಕರು ಮತ್ತು ಅವರ ಕುಟುಂಬಗಳಿಗೆ ಬದುಕಿನ ಸವಾಲುಗಳನ್ನು ತಂದಿದೆ.

ಚುನಾವಣೆಗಿಂತ ಮುಂಚಿತವಾಗಿ ಕೆಲವು ತಿಂಗಳುಗಳ ಅವಧಿಯಷ್ಟೇ ಉಳಿದಿರುವಂತೆ ರಾಜ್ಯ ಸರ್ಕಾರವು ತನ್ನ ಕೊನೆಯ ಹಂತಲ್ಲಿದೆ. ದುಃಖಕರ ವಿಷಯವೆಂದರೆ ಕಳೆದ 4 ವರ್ಷಗಳಲ್ಲಿ ಕಾರ್ಯನಿರ್ವಹಿಸದ ಸರಕಾರವು ಈಗ ಎಲ್ಲವನ್ನೂ ಮಾಡಿಬಿಡುತ್ತದೆ ಎಂದು ನಾನು ನಿರೀಕ್ಷಿಸುವುದಿಲ್ಲ.

ಆದರೆ ಬೆಂಗಳೂರಿಗೆ ಇನ್ನೂ ಹೆಚ್ಚಿನ ಅರ್ಹತೆಯಿದೆ!

# ಬಿಗ್ ಬೆಂಗಳೂರು ಫೈಟ್

## ಭಾಷಣಗಳು

# 1

# ಮಾದರಿ ನಗರಪಾಲಿಕೆ ಮತ್ತು ಬೆಂಗಳೂರಿನ ಆಡಳಿತ

| ರೋಟ್ರಾಕ್ಟ್, ಬೆಂಗಳೂರು | ಮಾರ್ಚ್ 1, 2009 |
|---|---|

ಎಲ್ಲರಿಗೂ ಶುಭ ಮುಂಜಾನೆ. ರೋಟ್ರಾಕ್ಟ್‌ನ ಈ ಶುಭ ಸಮಾರಂಭದಲ್ಲಿ ಈ ಬೆಳ್ಳಂಬೆಳಗ್ಗೆ ಮಾತನಾಡಲು ನನಗೆ ಆಹ್ವಾನ ನೀಡಿದ್ದಕ್ಕೆ ಧನ್ಯವಾದಗಳು.

ಇಂದಿನ ಸಮಾರಂಭದ ಮುಖ್ಯ ಉದ್ದೇಶವೆಂದರೆ ಮಾದರಿ ನಗರಪಾಲಿಕೆ ಮತ್ತು ಬೆಂಗಳೂರಿನ ಆಡಳಿತ ಕುರಿತಂತೆ ಚರ್ಚೆ ನಡೆಸುವುದು ಎಂಬುದು ನನಗೆ ಅರಿವಾಗಿದೆ. ಇದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ನಗರದ ಇತಿಹಾಸವನ್ನು ಅವಲೋಕಿಸಿ ಹೇಳುವುದಾದರೆ ಬೆಂಗಳೂರು ಒಂದು ಸಂಕೀರ್ಣ ಘಟ್ಟದಲ್ಲಿ ಸಾಗುತ್ತಿದೆ. ಅಭಿವೃದ್ಧಿ ಎಂಬ ಅಡ್ಡಹಾದಿಯಲ್ಲಿ ನಾವು ನಿಂತಿದ್ದೇವೆ. ನಾವು ಹೇಗೆ ಮುಂದುವರಿಯಬೇಕು ಎಂಬ ನಿಟ್ಟಿನಲ್ಲಿ ಸರಿಯಾದ ಪಥ ಅನುಸರಿಸುವುದು ನಮ್ಮ ಮುಂದಿರುವ ಸವಾಲು. ಒಂದೊಮ್ಮೆ ತಪ್ಪು ಹಾದಿ ತುಳಿದರೆ ನಾವು ಇನ್ನಷ್ಟು ಕೋಲಾಹಲ, ಅರಾಜಕತೆ, ಭ್ರಷ್ಟಾಚಾರದ ಅಂಧಕೂಪದಲ್ಲಿ ಬೀಳುವುದು ನಿಶ್ಚಿತ. ಕಳೆದ ಕೆಲವು ದಶಕಗಳಿಂದ ಆಗಿರುವುದು ಇದೇ.

ನಮ್ಮ ಪ್ರಜಾತಂತ್ರವನ್ನು ಆಚರಿಸುವ ಹಾಗೂ ಈ ಕುರಿತು ಹೆಮ್ಮೆ ಪಡುವ ಹಲವು ವ್ಯಕ್ತಿಗಳಿದ್ದಾರೆ. ಇಂತಹವರಲ್ಲಿ ನಾನೂ ಒಬ್ಬ. ಆದೇ ವೇಳೆ ನಮ್ಮ ಪ್ರಜಾತಂತ್ರ ಇನ್ನಷ್ಟು ಆತ್ಮಾವಲೋಕನ ಮಾಡಿಕೊಂಡು ಹೆಚ್ಚು ಸ್ಥಿರವಾಗಿ ಮುನ್ನೆಡೆಯುವ ಅಗತ್ಯವಿದೆ ಎಂದು ನಾನು ಭಾವಿಸುತ್ತೇನೆ. ಪ್ರಜಾತಂತ್ರದ ಮೂಲ ಆಶಯವನ್ನು ನಾವು ಈಡೇರಿಸಬೇಕಿದೆ. ಉದಾಹರಣೆಗೆ: ರಾಜಕಾರಣ ಜನರ ಸೇವೆಯಾಗಬೇಕು ಹಾಗೆಯೇ ಸರಕಾರ ಜನರದ್ದಾಗಬೇಕು. ಜನರಿಂದ, ಜನರಿಗಾಗಿ ಮತ್ತು ಜನರಿಗೋಸ್ಕರ ಇರಬೇಕು. ದುರದೃಷ್ಟವಶಾತ್, ಕಳೆದ ಹಲವು ದಶಕಗಳಿಂದ ನಮ್ಮನ್ನಾಳುವ ಕೆಲವೇ ಮಂದಿ ರಾಜಕೀಯ, ಅಧಿಕಾರಿಗಳು ಅದರಿಂದ ಬರುವ ಲಾಭವನ್ನು ತಮ್ಮ ಸ್ವಂತಕ್ಕೆ ಬಳಸಿಕೊಂಡು ಸಂವಿಧಾನದ ಮೂಲ ಆಶಯಗಳನ್ನೇ ಗಾಳಿಗೆ ತೂರಿದ್ದಾರೆ. ಆಡಳಿತವೆಂಬುದು ಈಗ ಜನಪರವಾಗಿ ಉಳಿದಿಲ್ಲ. ಹೌದು, ಅಧಿಕಾರವೇನೋ ಜನರ ಕೈಯಲ್ಲೇ ಇದೆ. ಅದು ಪ್ರತಿ ಐದು ವರ್ಷಗಳಿಗೊಮ್ಮೆ ಚುನಾವಣೆ ನಡೆಯುವಾಗ ಮಾತ್ರ. ಸರಕಾರಗಳ ಆಡಳಿತದಲ್ಲಿ ಹೆಚ್ಚಿನ ಉತ್ತರದಾಯಿತ್ವ ಹಾಗೂ ಪಾರದರ್ಶಕತೆ ಇಲ್ಲದಿದ್ದರೆ ಪ್ರಜಾತಂತ್ರ ಕೆಲಸ ಮಾಡದು. ಒಂದು ದೇಶವಾಗಿ ನೋಡಿದಾಗ ಸದ್ಯ ಉಂಟಾಗಿರುವ ಆರ್ಥಿಕ ಹಾಗೂ ಭದ್ರತಾ ಬಿಕ್ಕಟ್ಟಿಗೆ ನಮ್ಮ ಸರಕಾರಗಳನ್ನು ನಾವು ಸರಿಯಾಗಿ ಪ್ರಶ್ನಿಸಿ ಅವರನ್ನು ಉತ್ತರದಾಯಿಗಳನ್ನಾಗಿ ಮಾಡದಿರುವುದೇ ಪ್ರಮುಖ ಕಾರಣ. ಈ ಕೆಲಸವನ್ನು ನಾವು ಅಚ್ಚುಕಟ್ಟಾಗಿ ಮಾಡಿದ್ದರೆ, ನಾವು ಇನ್ನೂ ಉತ್ತಮ ಪರಿಸ್ಥಿತಿಯಲ್ಲಿ ಇರಬಹುದಿತ್ತು.

ಕಳೆದೊಂದು ದಶಕದಿಂದ ಬೆಂಗಳೂರು ಕ್ಷಿಪ್ರ ಗತಿಯಲ್ಲಿ ಬೆಳೆಯುತ್ತಿದೆ. ಆದರೆ, ಇದಕ್ಕೊಂದು ಸರಿಯಾದ ದಿಕ್ಕುದಿಸೆಯಿಲ್ಲ. ಬೆಂಗಳೂರಿಗಾಗಿ ರೂಪಿಸುತ್ತಿರುವ ಯೋಜನೆಗಳು ಸಂಕುಚಿತ ಇಲಾಖಾ ಮಟ್ಟದ ಯೋಜನೆಗಳಾಗಿವೆ. ಇದರಲ್ಲಿ ಒಂದು ಸಮಗ್ರತೆ, ಸಮತೋಲತೆ ಹಾಗೂ ಸಮನ್ವತೆ ಇಲ್ಲ. ಇಲಾಖೆಗಳ ನಡುವೆ ಸಮನ್ವತೆ ಕೊರತೆಯ ಪರಿಣಾಮವನ್ನು ಇಂದು ನಾವು ಅನುಭವಿಸುತ್ತಿದ್ದೇವೆ. ಇದು ಸಂಚಾರ ದಟ್ಟಣೆ, ಸಾರಿಗೆ ವ್ಯವಸ್ಥೆ, ನಗರದ ಬಡವರ ಬವಣೆ ಹೀಗೆ ಪ್ರತಿಯೊಂದರಲ್ಲೂ ಇದನ್ನು ಕಾಣಬಹುದು. ನಮ್ಮ ಆಡಳಿತದ ಮಾದರಿ ಸ್ಪಂದನಶೀಲತೆ ಅಥವಾ ಜನಕೇಂದ್ರಿತವಾಗಿಲ್ಲದಿರುವುದೇ ಇದಕ್ಕೆಲ್ಲಾ ಕಾರಣ. ಕೆಲವೇ ತಿಂಗಳ ಹಿಂದೆ ಅಬೈಡ್‌ನ ಸಂಚಾಲಕರಾಗಿ ನಾವು ಬೆಂಗಳೂರನ್ನು ಮರು ನಿರ್ಮಿಸುವ ರೂಪುರೇಷೆಗಳನ್ನು ಸಿದ್ಧಪಡಿಸಿದಾಗ ನಮ್ಮ ನಗರಕ್ಕೆ ಒಂದು ನಿಖರವಾದ ಯೋಜನಾ ದಾಖಲೆಗಳೇ ಇಲ್ಲವೆಂಬುದು ಬೆಳಕಿಗೆ ಬಂತು. ಕಳೆದ ಹಲವಾರು ವರ್ಷಗಳಿಂದ ನಮ್ಮ ಸರಕಾರದೊಳಗಿರುವ ನಾನಾ ಸಚಿವಾಲಯಗಳು ಮತ್ತು ಇಲಾಖೆಗಳು

ಅಭಿವೃದ್ಧಿಯ ಹೆಸರಿನಲ್ಲಿ ತೆರಿಗೆದಾರರ ಕೋಟ್ಯಂತರ ಹಣವನ್ನು ಖರ್ಚು ಮಾಡಿವೆ. ಆದರೆ, ಒಂದೇ ಒಂದು ಇಲಾಖೆ ಬಳಿ ನಮ್ಮ ನಗರ ಹೇಗಿರಬೇಕು ಎಂಬ ಕುರಿತ ಸ್ಪಷ್ಟ ಕಲ್ಪನೆ ಇಲ್ಲ.

ಇದನ್ನೆಲ್ಲಾ ಗಮನಿಸಿದಾಗ 2020ರ ಹೊತ್ತಿಗೆ ಬೆಂಗಳೂರು ಹೇಗಿರಬೇಕು ಎಂಬ ಕುರಿತು ಒಂದು ಸಮಗ್ರ ಯೋಜನೆ ರೂಪಿಸುವುದು ನಮ್ಮ ಮೊದಲ ಕೆಲಸವಾಗಿದೆ. ಮುಂದಿನ ದಶಕದಲ್ಲಿ ನಮ್ಮ ನಗರ ಹೇಗಿರಬೇಕು, ಇದನ್ನು ಹೇಗೆ ಬೆಳೆಸಬೇಕು ಎಂಬ ಯೋಜನೆ ಇದಾಗಿರಬೇಕು. ನಗರಕ್ಕೆ ಅಗತ್ಯವಾದ ಹಲವು ಅಂಶಗಳ ಅಗತ್ಯ ಮತ್ತು ಬೇಡಿಕೆಗಳನ್ನು ಪೂರೈಸುವಂತಹ ಬೆಳವಣಿಗೆ ಅದಾಗಿರಬೇಕು. ಸಾರಿಗೆ (ರಸ್ತೆ, ಸಂಚಾರ ದಟ್ಟಣೆ ನಿರ್ವಹಣೆ ಒಳಗೊಂಡಂತೆ) ನಗರ ಬಡವರು, ನೀರು ಮತ್ತು ನೈರ್ಮಲ್ಯ, ಆರೋಗ್ಯ, ಶಿಕ್ಷಣ, ಭದ್ರತೆ, ಪರಂಪರೆ ಹಾಗೂ ಪರಿಸರ ಮತ್ತು ಆಡಳಿತವೆಂದು ನಾವಿದನ್ನು ಪಟ್ಟಿ ಮಾಡಬೇಕು.

ನಗರವನ್ನು ಮರು ರೂಪಿಸುವಾಗ ನಾಗರೀಕರು ಮತ್ತು ಖಾಸಗಿ ವ್ಯಕ್ತಿಗಳ ಹೆಚ್ಚಿನ ಪಾಲ್ಗೊಳ್ಳುವಿಕೆಯನ್ನು ಖಾತ್ರಿಪಡಿಸಬೇಕು ಎಂಬುದು ನನಗೆ ತುಂಬಾ ಸ್ಪಷ್ಟವಾಗಿದೆ. ಆದರೆ, 80 ಲಕ್ಷಕ್ಕಿಂತಲೂ ಹೆಚ್ಚಿನ ಜನಸಂಖ್ಯೆ ಹೊಂದಿರುವ ಮತ್ತು ಅಷ್ಟೇ ಕ್ಷಿಪ್ರಗತಿಯಲ್ಲಿ ಬೆಳೆಯುತ್ತಿರುವ ಮಹಾನಗರದ ಯೋಜನೆ ರೂಪಿಸುವುದಕ್ಕೆ ಹೆಚ್ಚಿನ ಜ್ಞಾನ ಮತ್ತು ಕೌಶಲ್ಯದ ಅಗತ್ಯವಿದೆ ಎಂಬುದು ತುಂಬಾ ಸ್ಪಷ್ಟ. ಇದೊಂದು ಬಿಡುವಿನ ಕಾಲದ ಕೆಲಸವಂತೂ ಖಂಡಿತಾ ಅಲ್ಲ. ಇದಕ್ಕೆ ಹೆಚ್ಚಿನ ಕೌಶಲ್ಯ, ಬುದ್ಧಿವಂತಿಕೆ ಹಾಗೂ ಅನುಭವದ ಅಗತ್ಯವಿದೆ.

ಇದಕ್ಕಾಗಿ ನಾವು ನ್ಯೂಯಾರ್ಕ್ ಮತ್ತು ಲಂಡನ್‌ನ ಅನುಭವವನ್ನು ಪಡೆದುಕೊಳ್ಳಬಹುದು. ಅವು ಕೂಡಾ ಬೆಂಗಳೂರಿನಂತಹ ನಗರಗಳಾಗಿದ್ದರೂ ನೀತಿ ನಿರೂಪಣೆ, ಸಾರ್ವಜನಿಕ ಸೇವೆ ಹಾಗೂ ಜನಕೇಂದ್ರಿತ ಆಡಳಿತ ಕ್ಷೇತ್ರಗಳಲ್ಲಿ ಪ್ರಚಂಡ ಸಾಮರ್ಥ್ಯ ಹೊಂದಿವೆ. ಅಬೈಡ್‌ನ ಮೊದಲ ತಂಡ ಲಂಡನ್ ಯಾತ್ರೆಯಿಂದ ಇತ್ತೀಚೆಗಷ್ಟೇ ಮರಳಿದೆ. ಈ ಅಧ್ಯಯನ ಪ್ರವಾಸಕ್ಕೆ ನಾವು ಖಾಸಗಿಯಾಗಿಯೇ ಹಣ ಹೊಂಚಿಕೊಳ್ಳುತ್ತಿದ್ದೇವೆ. ಸರಕಾರದಿಂದ ಬಿಡಿಗಾಸನ್ನೂ ಪಡೆಯುತ್ತಿಲ್ಲ.

ಜನಸಂಖ್ಯೆ ಬೆಳವಣಿಗೆಯನ್ನು ಗಮನದಲ್ಲಿರಿಸಿಕೊಂಡು ನಾವು ' ಪ್ಲಾನ್ ಬೆಂಗಳೂರು 2020' ಯೋಜನೆ ಆರಂಭಿಸಿದ್ದೇವೆ. ಇದೇ ರೀತಿ ಮುಂದುವರಿದರೆ ಬೆಂಗಳೂರಿನ ಜನಸಂಖ್ಯೆ ಈಗಿನ ಸರಿಸುಮಾರು ಒಂದು ಕೋಟಿಯಿಂದ 1.6 ಅಥವಾ 1.7 ಕೋಟಿಗೆ ಮುಟ್ಟಬಹುದು.ನಗರದ ಕೇಂದ್ರ ಭಾಗದಲ್ಲಿ ಮತ್ತು ಹೊರಭಾಗದಲ್ಲಿ

ಈಗ ಬೆಳೆಯುತ್ತಿರುವ ರೀತಿ ಸರ್ವಥಾ ತಾಳಿಕೊಳ್ಳುವಂತಹದ್ದಲ್ಲ. ಆದ್ದರಿಂದ ಬೆಂಗಳೂರಿನ ಜನಸಂಖ್ಯೆಯನ್ನು 80 ಲಕ್ಷದೊಳಗೆ ಕಾಯ್ದುಕೊಂಡು, ಬೆಂಗಳೂರು ವಲಯದ ಆಸುಪಾಸಿನಲ್ಲಿ ಹಲವು ಹೊಸ ನಗರಗಳನ್ನು ನಿರ್ಮಿಸಿ ಅಲ್ಲಿ 60ರಿಂದ 80 ಲಕ್ಷ ಜನರಿಗೆ ಉದ್ಯೋಗಾವಕಾಶ, ವಸತಿ ಮತ್ತಿತರ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕಿದೆ.ಬೇಡಿಕೆಗನುಗುಣವಾಗಿ ಪೂರೈಕೆ ಮಾದರಿಯನ್ನಾಧರಿಸಿ ಮೂಲಸೌಕರ್ಯ ಹಾಗೂ ಸಂಪರ್ಕ ವ್ಯವಸ್ಥೆಯನ್ನು ನಿರ್ಮಿಸಬೇಕು. ಇದೆಲ್ಲವೂ ಭೌಗೋಳಿಕ ಸಂರಚನೆಗೆ ಅನುಗುಣವಾಗಿರಬೇಕು. ದಕ್ಷಿಣದಲ್ಲಿ ಬಿಡದಿ, ಉತ್ತರದಲ್ಲಿ ದೇವನಹಳ್ಳಿ ಸಮೀಪ ಉಪನಗರಗಳನ್ನು ನಿರ್ಮಿಸುವ ಯೋಜನೆ ಇದೆ. ಇತರ ಭಾಗಗಳ ಯೋಜನೆಯನ್ನು ಬಿಎಂಆರ್‌ಡಿಎ ರೂಪಿಸಲಿದೆ. ಈ ಎಲ್ಲ ಉಪನಗರಗಳನ್ನೂ ಉನ್ನತ ಸಾಮರ್ಥ್ಯದ ಸಿಗ್ನಲ್‌ಮುಕ್ತ ಕಾರಿಡಾರ್ ಮೂಲಕ ಬೆಸೆಯಬೇಕಿದೆ.

ಸಾರಿಗೆ, ನಗರ ಬಡವರು, ಭದ್ರತೆ ಮತ್ತು ಆಡಳಿತ ಈ ನಾಲ್ಕು ಅಂಶಗಳನ್ನು ಆಧರಿಸಿ 'ಪ್ಲಾನ್ ಬೆಂಗಳೂರು 2020' ರೂಪು ತಳೆಯುತ್ತಿದ್ದು, ಸಾರ್ವಜನಿಕರ ಅವಗಾಹನೆಗೆ ಇದು ಲಭ್ಯವಿದೆ. ಯೋಜನೆಯನ್ನು ಸಾರ್ವಜನಿಕರ ಅವಗಾಹನೆಗೆ ತೆರೆದ ಬಳಿಕ ನಾಗರೀಕರಿಂದ ಇದುವರೆಗೆ 15000ಕ್ಕೂ ಹೆಚ್ಚು ಪ್ರತಿಕ್ರಿಯೆ ಬಂದಿದೆ. ಇದು ನಮ್ಮನ್ನು ಇನ್ನಷ್ಟು ಉತ್ತೇಜಿಸಿದೆ. 'ಪ್ಲಾನ್ ಬೆಂಗಳೂರು 2020' ಯೋಜನೆಯನ್ನು ಜನರು abidebengaluru.com ಮತ್ತು bengaluruvedike.org ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು. ಈ ಯೋಜನೆಯನ್ನು ಜಾರಿಗೊಳಿಸುವ ಭರವಸೆ ನನಗಿದೆ.

ಈ ಎಲ್ಲಾ ಯೋಜನೆಗಳಿಗೆ ನಾವು ಬಜೆಟ್ ಮತ್ತು ಹಣಕಾಸು ಅನುದಾನವನ್ನು ಪಡೆದಿದ್ದೇವೆ. ಇವುಗಳನ್ನು 6, 12, 18 ಹಾಗೂ 24 ತಿಂಗಳುಗಳ ಗಡುವಿನೊಂದಿಗೆ ಪೂರ್ಣಗೊಳಿಸುತಿದ್ದೇವೆ. ಪ್ರತಿಯೊಂದು ಯೋಜನೆಯನ್ನೂ ನಿಗದಿತ ಕಾಲಮಿತಿಯೊಳಗೆ ಪೂರೈಸುವ ಗುರಿ ಇದೆ.ಬೆಂಗಳೂರಿಗೆ ಸಂಬಂಧಿಸಿದ ಇಲಾಖೆಗಳು ಮತ್ತು ಸಂಸ್ಥೆಗಳು ಹುಟ್ಟಿದಾರಂಭದಿಂದ ಬೆಳೆಸಿಕೊಂಡು ಬಂದಿರುವ ಮನಸ್ಥಿತಿಯನ್ನು ಬದಲಿಸುವುದು ಸುಲಭವೇನೂ ಅಲ್ಲ. ಆದರೆ, ಕೆಲಸದ ಕುರಿತಾದ ನಮ್ಮ ಬದ್ಧತೆ ಮತ್ತು ಇಚ್ಛಾಶಕ್ತಿಯಿಂದ ಇದನ್ನು ಸಾಧಿಸುವ ವಿಶ್ವಾಸ ನಮಗಿದೆ. ನಮಗೆ ರಾಜಕೀಯ ನಾಯಕತ್ವ ಮತ್ತು ಬೆಂಗಳೂರು ನಗರವಾಸಿಗಳ ಸಂಪೂರ್ಣ ಬೆಂಬಲವಿದೆ. ನಾವು ಕೈಗೊಳ್ಳುವ ಎಲ್ಲಾ ಕೆಲಸಗಳ ವಿವರಗಳನ್ನೂ ಶೀಘ್ರದಲ್ಲೇ nammabengaluru.in ಮೂಲಕ ಸಾರ್ವಜನಿಕರಿಗೆ ತೆರೆದಿಡಲಾಗುವುದು. ಅಷ್ಟೇ

ಅಲ್ಲ ಅತ್ಯುತ್ತಮ ಯೋಜನೆಗೆ 2009 ಮೇ ತಿಂಗಳಿನಿಂದ 'ಅಬೈಡ್ ನಮ್ಮ ಬೆಂಗಳೂರು ಅವಾರ್ಡ್2009' ನೀಡಲಾಗಿದೆ.

ಇಷ್ಟೆಲ್ಲಾ ಕೆಲಸಗಳ ಹೊರತಾಗಿಯೂ ನಮ್ಮ ಪ್ರಯತ್ನವನ್ನು ಇದೇ ಹುರುಪಿನಲ್ಲಿ ಮುಂದುವರಿಸಿಕೊಂಡು ಹೋಗಲು ಸಾಧ್ಯವೇ ಎಂಬ ಪ್ರಶ್ನೆ ನನ್ನನ್ನು ಕಾಡುತ್ತಿದೆ. ಉದಾಹರಣೆಗೆ: ಈ ಸರಕಾರದ ಬಳಿಕ ಮುಂದೇನಾಗಲಿದೆ. ಸರಕಾರಕ್ಕೆ ಇದೇ ರೀತಿ ನಾಗರೀಕರಿಂದ ಮಾರ್ಗದರ್ಶನ ಮುಂದುವರಿಯುವುದನ್ನು ಖಚಿತಪಡಿಸಲು ನಾವೇನು ಮಾಡಬೇಕು? ಇದಕ್ಕೆ ಉತ್ತರ ತುಂಬಾ ಸರಳ– ನಾಗರೀಕ ಕೇಂದ್ರಿತ ಆಡಳಿತಕ್ಕೆ ಕಾನೂನು ಮೂಲಕ ಸಾಂಸ್ಥಿಕ ರೂಪ ನೀಡಬೇಕಿದೆ.

ಆಡಳಿತದ ಕುರಿತಂತೆ ಇನ್ನಷ್ಟು ವಿಷಯ ಹೇಳಬೇಕಿದೆ. ಮೂಲಸೌಕರ್ಯ ಹಾಗೂ ಸೇವೆಗಳನ್ನು ಪೂರೈಸುವ ಇಂದಿನ ವ್ಯವಸ್ಥೆ ಹೆಚ್ಚು ಕೇಂದ್ರೀಕೃತವಾಗಿದ್ದು, ಇಂದಿನ ಅಗತ್ಯಕ್ಕೆ ಹೊಂದಿಕೊಳ್ಳದು ಎಂಬುದು ತುಂಬಾ ಸ್ಪಷ್ಟ. ನಮ್ಮ ನಿಗಮಗಳು ಹಾಗೂ ನಾನಾ ಸಂಸ್ಥೆಗಳ ಆಡಳಿತ ಮಾದರಿಯೂ ಹಲವು ಕಟ್ಟುಪಾಡುಗಳಿಂದ ಬಂಧಿತವಾಗಿದ್ದು, ಇಂದಿನ ನಿರೀಕ್ಷೆಗೆ ತಕ್ಕಂತಿಲ್ಲ. ಒಂದು ಆಧುನಿಕ ನಗರವಾಗಿ ನಾವು ಸರ್ವಾಂಗೀಣ ಬೆಳವಣಿಗೆ ಹೊಂದಬೇಕು. ಪ್ರತಿಯೊಬ್ಬ ನಗರವಾಸಿಗೂ ಗೌರವಯುತವಾಗಿ ಬದುಕುವ ಅವಕಾಶ ಕಲ್ಪಿಸಬೇಕು. ಈ ಹಾದಿಗೆ ಅಡಚಣೆಯಾಗುವ ಬದಲು ಪೂರಕ ಸೌಕರ್ಯ ಕಲ್ಪಿಸುವ ಸರಕಾರ ನಮ್ಮದಾಗಬೇಕು. ಚುನಾಯಿತ ಮಂಡಳಿ ಅಥವಾ ಅದಿಲ್ಲದ ಹೊರತಾಗಿಯೂ ಆಡಳಿತ ಮತ್ತು ನಗರಾಡಳಿತದ ನಡುವೆ ಸ್ವಲ್ಪ ಭಿನ್ನತೆ ಇದೆ. ಇದು ನಮಗೆ ಎಚ್ಚರಿಕೆ ಗಂಟೆಯಾಗಬೇಕು. ಒಂದೊಮ್ಮೆ ಪ್ರಾತಿನಿಧಿಕ ಪ್ರಜಾತಂತ್ರ ವಿಫಲವಾಯಿತೆಂದರೆ ಅದಕ್ಕೆ ಚುನಾಯಿತ ಪುರಪಿತೃಗಳು, ಆಡಳಿತಾತ್ಮಕ ಹಾಗೂ ಸಾಂಸ್ಥಿಕ ವಿನ್ಯಾಸಕಾರರ ಉತ್ತರದಾಯಿತ್ವದ ಕೊರತೆ ಹಾಗೂ ಪಾರದರ್ಶಕತೆ ಮತ್ತು ಮಾಹಿತಿಗಳ ಕೊರತೆಯೇ ಪ್ರಮುಖ ಕಾರಣ.

ಕರ್ನಾಟಕ ನಗರಪಾಲಿಕ ಕಾಯಿದೆಯ ಅನುಸಾರ ಎಲ್ಲ ನಗರ ಹಾಗೂ ಸ್ಥಳೀಯ ಮಂಡಳಿಗಳು ರೂಪು ತಳೆದು ಕೆಲಸ ಮಾಡುತ್ತಿವೆ. ಆದರೆ, ಬೆಂಗಳೂರು, ಮುಂಬಯಿ, ದಿಲ್ಲಿಯಂತಹ ಮಹಾನ್ ನಗರಗಳಿಗೆ ಪ್ರತ್ಯೇಕವಾದ ಕಾನೂನಿನ ಅಗತ್ಯವಿದೆ. ಈ ಕುರಿತು ಪದೇಪದೇ ಚರ್ಚೆಗಳಾಗುತ್ತವೆಯೇ ಹೊರತು, ರಾಜಕೀಯ ನಾಯಕರು ಇದಕ್ಕೊಂದು ಪರಿಹಾರ ಕಂಡುಕೊಳ್ಳುವ ಪ್ರಾಮಾಣಿಕ ಪ್ರಯತ್ನವನ್ನೇ ಮಾಡುತ್ತಿಲ್ಲ. ಜನರು ಮತ್ತು ಮಾಧ್ಯಮಗಳೂ ಈ ಕುರಿತು ಗಂಭೀರ ಚರ್ಚೆ ನಡೆಸುತ್ತಿಲ್ಲ. ಐತಿಹಾಸಿಕ ಕಾರಣಗಳು ಏನೇ ಇರಲಿ. ಈಗಂತೂ

ನಾವು ನಗರ ಆಡಳಿತದಲ್ಲಿನ ಲೋಪಗಳನ್ನು ತೊಡೆದು ಹಾಕಲು ಒಂದು ಹೊಸ ಕಾನೂನು ರೂಪಿಸುವ ಅಗತ್ಯವಿದೆ. ಎಚ್. ಡಿ. ಕುಮಾರಸ್ವಾಮಿ ಅವರ ಸರಕಾರವು ಬೆಂಗಳೂರಿನ ಆಡಳಿತದ ಕುರಿತಂತೆ ವರದಿ ಸಲ್ಲಿಸಲು ಕಸ್ತೂರಿರಂಗನ್ ಸಮಿತಿ ರಚಿಸಿದ್ದು, ಅದು ತನ್ನ ವರದಿಯನ್ನೂ ಸಲ್ಲಿಸಿದೆ. ಬೆಂಗಳೂರು ನಗರ ಆಡಳಿತ ಸಂಸ್ಥೆಗಳ ಪುನರ್ರಚನೆಗೆ ಕುರಿತಂತೆ ಹಲವು ಮಹತ್ವದ ವಿಷಯಗಳ ಮೇಲೆ ಕಸ್ತೂರಿ ರಂಗನ್ ವರದಿ ಬೆಳಕು ಚೆಲ್ಲಿದೆ. ಬೆಂಗಳೂರು ನಗರದ ಮಹಾಪೌರ(ಮೇಯರ್) ರನ್ನು ನೇರವಾಗಿ ಚುನಾಯಿಸುವ ಅಗತ್ಯವಿದೆ ಎಂಬ ಸಲಹೆಯಂತೂ ತುಂಬಾ ಮೌಲ್ಯಯುತವಾದದ್ದು. ನಮ್ಮ ನಗರ ಆಡಳಿತದ ಮಾದರಿ ರೂಪಿಸುವಾಗ ಕಸ್ತೂರಿ ರಂಗನ್ ವರದಿಯಲ್ಲಿನ ಸಲಹೆಯನ್ನು ಅಬೈಡ್ ಗಂಭೀರವಾಗಿ ಪರಿಗಣಿಸಲಿದೆ. ಅದೇ ವೇಳೆ ನಾವು ಲಂಡನ್, ನ್ಯೂಯಾರ್ಕ್ ಮುಂತಾದ ವಿಶ್ವದ ಮಹಾನಗರಗಳ ಮಾದರಿಗಳನ್ನೂ ತೆಗೆದುಕೊಳ್ಳಲಿದ್ದೇವೆ. ಆಡಳಿತ ಮಾದರಿ ರೂಪಿಸುವಾಗ ನಾವು ಪ್ರಮುಖವಾಗಿ ರಾಜಕೀಯ ನಾಯಕತ್ವ ಹಾಗೂ ಆಡಳಿತಾಂಗ ಮತ್ತು ಸಾಂಸ್ಥಿಕ ಎಂದು ಎರಡು ವಿಭಾಗಗಳಾಗಿ ವಿಂಗಡಿಸಲಿದ್ದೇವೆ. ಅದರಿಂದ ಆಗುವ ಲಾಭವೆಂದರೆ ಒಂದು ವಿಫಲವಾದರೂ ಮತ್ತೊಂದು ಯಶಸ್ವಿಯಾಗುವ ಸಾಧ್ಯತೆ ಇರುತ್ತದೆ. ಭಾರತದ ಮಟ್ಟಿಗೆ ಹೇಳುವುದಾದರೆ ಇಂತಹ ಸಾಹಸದಲ್ಲಿ ಅಪಾಯವಂತೂ ಇದ್ದೇ ಇದೆ. ಚುನಾಯಿತ ಪ್ರತಿನಿಧಿಗಳು ತಮ್ಮ ವೈಫಲ್ಯದ ಹೊಣೆಯನ್ನು ಸಾಂಸ್ಥಿಕ ಹಾಗೂ ಆಡಳಿತ ಸಂಸ್ಥೆಗಳ ಮೇಲೆ ಹೇರುತ್ತಾರೆ. ಈ ವಿಷಯ ನಿಮಗೆ ಅರ್ಥವಾಗಬೇಕೆಂದರೆ ಭ್ರಷ್ಟಾಚಾರ ಪ್ರಕರಣಗಳಲ್ಲಿ ಎಷ್ಟು ಸರಕಾರಿ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಶಿಕ್ಷೆಯಾಗಿದೆ ಎಂಬುದನ್ನು ಗಮನಿಸಬಹುದು.

ಇದನ್ನೆಲ್ಲಾ ಒಟ್ಟಾರೆಯಾಗಿ ಪರಿಗಣಿಸಿ ನಾವು ಒಂದು ಬೆಂಗಳೂರು ವಲಯ ಆಡಳಿತ ಕಾಯಿದೆ–2009 ಎಂಬ ಕರಡು ವಿಧೇಯಕವನ್ನು ರೂಪಿಸಿದ್ದೇವೆ. ಇದೂ ಕೂಡ ಅಬೈಡ್ ಬೆಂಗಳೂರು ವೆಬ್‌ಸೈಟ್‌ನಲ್ಲಿ ಲಭ್ಯವಿದೆ. ಇದೊಂದು ರಚನಾತ್ಮಕ ಮೂಲ ದಾಖಲೆಯಾಗಿದೆ. ಇದು ರಾಜಕೀಯ ನಾಯಕತ್ವವನ್ನು ನಿರ್ಧರಿಸಲಿದೆ. ಬಜೆಟ್ ಅನ್ನು ವಿಕೇಂದ್ರೀಕರಿಸಿ ಪ್ರಜಾತಂತ್ರ ಮತ್ತು ಆಡಳಿತವನ್ನು 50 ಸಾವಿರ ಜನಸಂಖ್ಯೆಗೆ ಸೇವೆ ಮಾಡುವ ವಾರ್ಡ್ ಮಟ್ಟಕ್ಕೆ ಇಳಿಸಲಾಗಿದೆ. ಪ್ರತಿಯೊಂದು ವಾರ್ಡ್ ಪ್ರಜಾತಾಂತ್ರಿಕ ಘಟಕಗಳಾಗಲಿದ್ದು ವಾರ್ಡ್ ಸಮಿತಿಗಳು ಆಡಳಿತಾತ್ಮಕ ಘಟಕಗಳಾಗಲಿವೆ. ಎಂಜಿನಿಯರ್ ಉಸ್ತುವಾರಿಯಲ್ಲಿ ವಾರ್ಡ್ ಕಚೇರಿಗಳು ಕಾರ್ಯನಿರ್ವಹಿಸಲಿವೆ. ಉದ್ಯಾನವನ, ಶಾಲೆಗಳಂತಹ ಸ್ಥಳೀಯ ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳನ್ನು ನಿರ್ಧರಿಸುವ ಅಧಿಕಾರಗಳನ್ನು ಸ್ಥಳೀಯರಿಗೆ

ನೀಡುವ ಉದ್ದೇಶವನ್ನು ಹೊಸ ಕಾಯಿದೆ ಹೊಂದಿದೆ. ವಸತಿ ಪ್ರದೇಶಗಳಲ್ಲಿ ಬಾರ್, ಪಬ್‌ಗಳನ್ನು ಸ್ಥಾಪಿಸುವ ವಿಷಯಗಳನ್ನೂ ಕೆಲವು ವಿಶೇಷಾಧಿಕಾರಗಳೊಂದಿಗೆ ಸ್ಥಳೀಯರಿಗೆ ನೀಡಲು ಉದ್ದೇಶಿಸಲಾಗಿದೆ. ಸರಕಾರದಿಂದ ಭೂಬ್ಯಾಂಕ್ ನಿರ್ವಹಣೆಯನ್ನು ಕಾಯಿದೆ ಕಡ್ಡಾಯಗೊಳಿಸಲಿದ್ದು, ಇದರಿಂದ ಭೂಮಿ ಬಳಕೆ, ಗುತ್ತಿಗೆ, ಗುತ್ತಿಗೆ ನಿರ್ವಹಣೆ ಮೊದಲಾದ ವಿಷಯಗಳಲ್ಲಿ ಪಾರದರ್ಶಕತೆ ತರಲು ಸಾಧ್ಯವಾಗಲಿದೆ.

ನಾಗರೀಕ ಕೇಂದ್ರಿತ ವ್ಯವಸ್ಥೆಯ ಬಗ್ಗೆ ನಗರ ಯೋಜನಾ ತಜ್ಞರು ವ್ಯಾಪಕ ಪ್ರಶಂಸೆ ವ್ಯಕ್ತಪಡಿಸಿದ್ದು, ಇದೊಂದು ದೂರಗಾಮಿ ಪರಿಣಾಮ ಬೀರುವಂತಹದ್ದು ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಆದರೆ, ನೂತನ ಕರಡು ಕಾಯಿದೆಯನ್ನು ಜನಸಾಮಾನ್ಯರು ಹೆಚ್ಚು ಹೆಚ್ಚು ಅಧ್ಯಯನ ನಡೆಸಿ ಅರ್ಥ ಮಾಡಿಕೊಳ್ಳುವುದು ಅಗತ್ಯ ಎಂಬುದು ನನ್ನ ಸ್ವಂತ ಅಭಿಪ್ರಾಯ. ಏಕೆಂದರೆ ಇದರ ಜಾರಿಯಿಂದ ಅವರ ಜೀವನ ಹಾಗೂ ನಗರದ ಮೇಲೆ ಪರಿಣಾಮ ಬೀರಲಿದೆ. ಮುಂದಿನ ದಿನಗಳಲ್ಲಿ ಹೊಸ ಕಾಯಿದೆಯ ಬಗ್ಗೆ ರಾಜಕಾರಣಿಗಳು ಮತ್ತು ಅಧಿಕಾರಿಗಳಿಂದ ಒಪ್ಪಿಗೆ ಪಡೆಯುವ ದಿಸೆಯಲ್ಲಿ ಅಬೈಡ್ ಕಾರ್ಯಪ್ರವೃತ್ತವಾಗಲಿದೆ.

ಕೆಲವು ದಿನಗಳ ಹಿಂದೆ ಪ್ರಣಬ್ ಮುಖರ್ಜಿ ಸಂಸತ್ತಿನಲ್ಲಿ ಮಂಡಿಸಿದ ಬಜೆಟ್ ಬಗ್ಗೆ ನಾನು ನೀಡಿದ ಪ್ರತಿಕ್ರಿಯೆ ಹೀಗಿತ್ತು. ಸದ್ಯದ ಆರ್ಥಿಕ ಹಾಗೂ ಭದ್ರತಾ ಬಿಕ್ಕಟ್ಟು ದಿಢೀರ್‌ನೆ ತಲೆದೋರಿದೆ ಎಂಬ ನಂಬಿಕೆ ಮನೆಮಾಡಿತ್ತು. ಭಾರತೀಯ ಬೆಳವಣಿಗೆ ಸೂತ್ರವು ಎಂತಹಾ ಪರಿಸ್ಥಿತಿಯನ್ನೂ ತಾಳಿಕೊಂಡು ಮುನ್ನಡೆಯುವ ಸಾಮರ್ಥ್ಯ ಹೊಂದಿದೆ ಎಂಬುದು ನಮ್ಮ ಅತಿರೇಖದ ನಂಬಿಕೆಯಾಗಿತ್ತು ಎಂಬುದು ನಮಗೆ ಕಾಲ ಸರಿದಂತೆ ಅರಿವಿಗೆ ಬಂದಿದೆ. ಆರ್ಥಿಕ ಬೆಳವಣಿಗೆಗೆ ಸಾರ್ವಜನಿಕ ಹೂಡಿಕೆಯೊಂದೇ ಪರಿಹಾರವಲ್ಲ, ಆಡಳಿತ ಸುಧಾರಣೆ, ರಚನಾತ್ಮಕ ಬದಲಾವಣೆ ಜತೆಗೆ ಹೂಡಿಕೆಯಿಂದ ಬರಬಹುದಾದ ಫಲಿತಾಂಶ ಕುರಿತು ಗಮನ ಹರಿಸುವ ಮಾದರಿ ಬೆಳವಣಿಗೆ ವಿಧಾನವನ್ನು ರೂಪಿಸಿಕೊಳ್ಳಬೇಕಿದೆ. ಇದೇ ಸೂತ್ರ ಬೆಂಗಳೂರಿನ ಬೆಳವಣಿಗೆಗೂ ಅನ್ವಯವಾಗುತ್ತದೆ. ಇದು ಹಣ ಮತ್ತು ಯೋಜನೆಗೆ ಮಾತ್ರ ಸಂಬಂಧಿಸಿದ ವಿಷಯವಲ್ಲ. ಆಡಳಿತ ಹಾಗೂ ರಚನಾತ್ಮಕ ಸುಧಾರಣೆಗೂ ಸಂಬಂಧಿಸಿದೆ.

ಇತ್ತೀಚೆಗೆ ನಡೆದ ಅಮೆರಿಕ ಚುನಾವಣೆ ಪ್ರಚಾರದ ವೇಳೆ ಮಾಜಿ ಅಧ್ಯಕ್ಷ ಬರಾಕ್ ಒಬಾಮಾ ಅವರು, ಹೌದು ನಾವು ಸಾಧಿಸಬಲ್ಲೆವು ಎಂಬ ಸರಳ ಹಾಗೂ

ಭರವಸೆದಾಯಕ ಸೂತ್ರದ ಮೂಲಕ ಇದನ್ನು ಸಾಧಿಸಿ ತೋರಿಸಿದರು. ಬೆಂಗಳೂರು ಮತ್ತು ಭಾರತಕ್ಕೆ ಸಂಬಂಧಿಸಿದಂತೆ ಇಂತಹ ಅನೇಕ ಉದಾಹರಣೆಗಳನ್ನು ಕೊಡಬಹುದು. ಈ ಮಾತಿನ ಒಟ್ಟಾರೆ ಉದ್ದೇಶವೇನೆಂದರೆ ನಾವೇನು ಬದಲಾವಣೆ ಬಯಸಿದ್ದೇವೋ ಅದನ್ನು ಸಾಧಿಸಲು ನಾವೆಲ್ಲರೂ ಕೈಜೋಡಿಸಿ ಕೆಲಸ ಮಾಡಬೇಕಿದೆ. ಇದು ಕಠಿಣವಾದ ಸುದೀರ್ಘ ಹಾದಿಯಾಗಿರಬಹುದು. ಆದರೆ, ನಾವಿದನ್ನು ಸಾಧಿಸಬಹುದು!

ಇಂತಹ ವೇದಿಕೆಯಲ್ಲಿ ಮಾತನಾಡಲು ನನಗೆ ಅವಕಾಶ ನೀಡಿದ್ದಕ್ಕಾಗಿ ನಿಮಗೆಲ್ಲರಿಗೂ ಧನ್ಯವಾದಗಳು. ಎಲ್ಲರಿಗೂ ಎಲ್ಲವೂ ಒಳ್ಳೆಯದಾಗಲಿ!

ಧನ್ಯವಾದಗಳು. ಜೈಹಿಂದ್

# 2

# ನಮ್ಮ ಬೆಂಗಳೂರು ಪ್ರಶಸ್ತಿ ಪ್ರದಾನ ಸಮಾರಂಭ 2009ರಲ್ಲಿ ಮಾಡಿದ ಭಾಷಣ

ಎನ್‌ಬಿಎಫ್, ಬೆಂಗಳೂರು 13 ಅಕ್ಟೋಬರ್,2009

ನ್ಯಾಯಮೂರ್ತಿಗಳಾದ ರಾಮಾ ಜೋಯಿಸ್, ಗೌರವಾನ್ವಿತ ಲೋಕಾಯುಕ್ತರಾದ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅವರೇ, ನಮ್ಮ ಬೆಂಗಳೂರು ಅವಾರ್ಡ್‌ನ ನನ್ನ ಸಂಗಡಿತ ಜ್ಯೂರಿ ಸದಸ್ಯರೇ, ಮಾಧ್ಯಮ ಸ್ನೇಹಿತರೇ, ಮಹಿಳೆಯರೇ ಮತ್ತು ಮಹನೀಯರೇ...

ನಮ್ಮ ಬೆಂಗಳೂರು ಅವಾರ್ಡ್ 2009ರ ಪ್ರದಾನ ಸಮಾರಂಭಕ್ಕೆ ನೀವೆಲ್ಲಾ ಆಗಮಿಸಿರುವುದಕ್ಕೆ ಧನ್ಯವಾದಗಳು. ತಾವು ಬಾಳಿ ಬದುಕಿದ ಈ ನಗರವನ್ನು ಉತ್ತಮ ನಗರವನ್ನಾಗಿ ರೂಪಿಸಲು ಶ್ರಮಿಸಿದ ನಮ್ಮ ಸಮಾಜದ ನಾನಾ ವಲಯಗಳಿಂದ ಬಂದಿರುವ ಜನರನ್ನು ಗುರುತಿಸಿ ಸನ್ಮಾನಿಸುವ ಮೊದಲ ವಾರ್ಷಿಕ ಕಾರ್ಯಕ್ರಮ ಇದಾಗಿದೆ. ಈ ಪ್ರಶಸ್ತಿಗಳ ಕುರಿತಂತೆ ನಿಮಗೆಲ್ಲರಿಗೂ ನಾವು ಸಮಗ್ರ ವಿವರ ಒದಗಿಸುತ್ತೇವೆ.

ಈ ಮಹಾನ್ ನಗರದ ಪ್ರಜೆಗಳಾಗಿ ನಮಗೆಲ್ಲರಿಗೂ ಇದು ಎಷ್ಟು ಪ್ರಸ್ತುತ ಹಾಗೂ ಅನ್ವಯವಾಗುತ್ತದೆ ಎಂಬುದು ಇಲ್ಲಿ ಮುಖ್ಯ.

ಅದಕ್ಕಿಂತಲೂ ಮೊದಲು ಈ ಪ್ರಶಸ್ತಿ ನೀಡುವ ಕಲ್ಪನೆ ಹೇಗೆ ಮತ್ತು ಎಲ್ಲಿಂದ ಜನ್ಮ ತಳೆಯಿತು ಎಂಬ ಕುತೂಹಲಕಾರಿ ಕತೆಯನ್ನು ನಿಮಗೆ ಹೇಳಲು ಇಚ್ಛಿಸುತ್ತೇನೆ.

ಈಗಾಗಲೇ ನಾವೆಲ್ಲರೂ ಲೆಕ್ಕವಿಲ್ಲದಷ್ಟು ಬಾರಿ ಚರ್ಚಿಸಿರುವಂತೆ ಕಳೆದ ಹಲವು ವರ್ಷಗಳಿಂದ ನಗರ ಸಾಗುತ್ತಿರುವ ಹಾಗೂ ಬೆಳೆಯುತ್ತಿರುವ ರೀತಿಯ ಬಗ್ಗೆ ನಮಗೆಲ್ಲರಿಗೂ ಬೇಸರವಿದೆ. ಕಣ್ಮರೆಯಾಗುತ್ತಿರುವ ನಮ್ಮ ಪರಂಪರೆ, ಹದಗೆಡುತ್ತಿರುವ ಪರಿಸರ, ಮರಗಳ ಹನನ, ಅಂತರ್ಜಲ ಮಟ್ಟದ ಕುಸಿತ ಮೊದಲಾದ ವಿಪರೀತ ಬೆಳವಣಿಗೆಗಳಿಂದ ನಗರ ವಾಸಿಸಲು ಅಸಹನೀಯವಾಗುತ್ತಿದೆ.

ನಗರದ ಅಭಿವೃದ್ಧಿಯನ್ನು ಸರಿಯಾದ ಹಳಿಗೆ ತಂದು, ನಮ್ಮೆಲ್ಲರಿಗೂ ಸಂತೋಷವಾಗುವಂತ ರೀತಿ ಅದಕ್ಕೊಂದು ದಿಕ್ಕು ನೀಡುವ ಸವಾಲಿನ ಕೆಲಸವನ್ನು ನಾವೊಂದಿಷ್ಟು ಜನ ಒಟ್ಟಾಗಿ ಕೈಗೊಂಡಿದ್ದೇವೆ. ಈ ಮಹಾನ್ ಯಜ್ಞದಲ್ಲಿ ನಾವು ನಿಮ್ಮಂತೆಯೇ ಪಾಲುದಾರರು ಎಂಬುದು ಅತ್ಯಂತ ಸ್ಫುಟವಾದ ಸತ್ಯ.

1. ಎಲ್ಲ ಜನರು ಹಾಗೂ ಎಲ್ಲ ವಿಷಯಗಳನ್ನೂ ಒಳಗೊಂಡ ಅಭಿವೃದ್ಧಿಯ ನೀಲನಕ್ಷೆ.
2. ಹೆಚ್ಚು ಸ್ಪಂದನಶೀಲವಾದ, ಪಾರದರ್ಶಕವಾದ ಹಾಗೂ ನಾಗರೀಕ ಕೇಂದ್ರಿತ ನಗರಾಡಳಿತ ವ್ಯವಸ್ಥೆ.
3. ಯೋಜನೆಗಳ ಜಾರಿಗೆ ಅಗತ್ಯವಾದ ಕಾನೂನು, ಹಣಕಾಸು ಮತ್ತು ಆರ್ಥಿಕ ವ್ಯವಸ್ಥೆ.
4. ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಗುವಂತೆ ನಮ್ಮ ಸಾರ್ವಜನಿಕ ಹಾಗೂ ಸರಕಾರಿ ಸಂಸ್ಥೆಗಳ ಸಾಮರ್ಥ್ಯ ಹೆಚ್ಚಿಸುವುದು.
5. ಕೊನೆಯದಾಗಿ ಇದೆಲ್ಲವೂ ಸುಲಲಿತವಾಗಿ ಮುಂದುವರಿದುಕೊಂಡು ಹೋಗುವಂತಹ ನಾಗರೀಕರ ಕೇಡರ್ ವ್ಯವಸ್ಥೆ ರೂಪಿಸುವುದು. ಸಾರ್ವಜನಿಕ ಜೀವನ, ಸರಕಾರಿ ಸೇವೆ, ಉದ್ಯಮ ವಲಯದಲ್ಲಿರುವ ನಾಗರೀಕರನ್ನು ನಗರದ ಕಲ್ಯಾಣಕ್ಕಾಗಿ ಕೆಲಸ ಮಾಡುವಂತೆ ಪ್ರೇರೇಪಿಸುವುದು. ಇದು ನನ್ನ ನಗರ, ಇವರು ನಮ್ಮ ಜನರು ಎಂಬ ಸಮುದಾಯದ ಭಾವನೆಯನ್ನು ನಗರವಾಸಿಗಳಲ್ಲಿ ಮರಳಿ ತರುವುದು ಇದರ ಒಟ್ಟಾರೆ ಉದ್ದೇಶವಾಗಿದೆ.

ಕಳೆದ 8 ತಿಂಗಳು ಹಾಗೂ ಅದಕ್ಕಿಂತ ಮೊದಲಿನಿಂದ ಸರಕಾರ, ನಗರದ ಕಾನೂನಿನ ಸುಧಾರಣೆ, ಯೋಜನೆ, ಹಣಕಾಸು ಹಾಗೂ ಸಾಮರ್ಥ್ಯ ಸೃಷ್ಟಿಯ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ನಾವು ಸಮರ್ಥರಾಗಿದ್ದೇವೆ. ಇದೆಲ್ಲಕ್ಕಿಂತಲೂ ಅತೀ

ದೊಡ್ಡ ಸವಾಲಿನ ಕೆಲಸವೆಂದರೆ ನಿಜವಾದ ನಗರ ನಿರ್ಮಾತೃಗಳನ್ನು ಗುರುತಿಸಿ, ಅವನ್ನು ಗೌರವಿಸುವುದು. ಇವೆಲ್ಲವುಗಳ ಒಟ್ಟಾರೆ ಫಲಿತಾಂಶವೇ ಈ ಕಾರ್ಯಕ್ರಮ.

ನಮ್ಮ ಬೆಂಗಳೂರು ಅವಾರ್ಡ್ ಒಂದು ಶಾಶ್ವತವಾದ ವೇದಿಕೆಯಾಗಬೇಕು. ಸಾರ್ವಜನಿಕ ಹಾಗೂ ಖಾಸಗಿ ಬದುಕಿನಲ್ಲಿ ಅಸಾಮಾನ್ಯ ಬದ್ಧತೆಯುಳ್ಳ ನಾಗರೀಕರನ್ನು ಗುರುತಿಸಿ ಪ್ರತಿವರ್ಷ ಗೌರವಿಸಬೇಕು ಎಂಬುದು ನಮ್ಮ ಹಂಬಲ. ಒಮ್ಮೆ ಸುತ್ತ ಕಣ್ಣು ಹಾಯಿಸಿದರೆ ಇಂತಹ ಶ್ರೇಷ್ಠ ಸಂಪ್ರದಾಯ ನಮ್ಮ ನಗರದಿಂದ ದೂರವಾಗಿ ಬಹಳ ಸಮಯ ಕಳೆದಿದೆ.ಸಾರ್ವಜನಿಕ ಜೀವನ, ನಗರವಾಸಿಗಳು ಹಾಗೂ ವ್ಯವಹಾರದ ವಲಯದಲ್ಲಿ ಹಲವು ಮಂದಿ ಕಿಡಿಗೇಡಿಗಳು ಹಾಗೂ ಕೆಟ್ಟ ವ್ಯಕ್ತಿಗಳಿರುವುದು ನಿಜವಾದರೂ, ಜೀವನದಲ್ಲಿ ಮೌಲ್ಯಗಳನ್ನು ನಂಬಿಕೊಂಡು ಅದರಂತೆ ಜೀವಿಸುತ್ತಿರುವ ಅಮೂಲ್ಯ ಜೀವಗಳಿವೆ. ಸರಕಾರಿ ಅಧಿಕಾರಿಗಳು, ನಾಗರೀಕ ವಲಯದಲ್ಲಿ ಇಂತಹ ಸಾವಿರಾರು ಮಂದಿಯಿದ್ದಾರೆ.

ಇಂತಹ ಮಹಾನ್ ಚೇತನಗಳಿಗೆ ಧನ್ಯವಾದವನ್ನು ಅರ್ಪಿಸುವುದೇ ನಮ್ಮ ಬೆಂಗಳೂರು ಪ್ರಶಸ್ತಿಯ ಪರಮೋದ್ದೇಶವಾಗಿದೆ. ಅಂತಹ ಎಲೆಮರೆಯ ಕಾಯಿಗಳೇ ನಮ್ಮ ನಗರದ ನಿಜವಾದ ನಾಯಕರು. ಈ ಪ್ರಶಸ್ತಿ ಸಮುದಾಯ ನಾಯಕತ್ವ ಮತ್ತು ನಾಗರೀಕ ಪ್ರಜ್ಞೆಯನ್ನು ಉತ್ತೇಜಿಸಿ, ನಾಗರೀಕರು, ಸ್ವಯಂ ಸೇವಾ ಸಂಸ್ಥೆಗಳು, ಉದ್ಯಮ ಸಂಸ್ಥೆಗಳು, ಆಡಳಿತ ಸಂಸ್ಥೆಗಳ ಮಧ್ಯೆ ಪಾಲುದಾರಿಕೆಯನ್ನು ಬಲಪಡಿಸುವ ಉತ್ತಮ ಸಂಸ್ಕೃತಿಯನ್ನು ಬೆಳೆಸುತ್ತದೆ ಎಂಬ ನಿರೀಕ್ಷೆ ನಮ್ಮದು.ನಾಗರೀಕರು ಹಾಗೂ ಇತರ ಪಾಲುದಾರರ ಭಾಗೀಧಾರಿಕೆಯು ನಮ್ಮ ನಗರದ ಭವ್ಯ ಭವಿಷ್ಯಕ್ಕೆ ಭದ್ರ ಬುನಾದಿಯಾಗಲಿದೆ.

ನಮ್ಮ ನಗರದಲ್ಲಿ ಇದು ನಮ್ಮದು ಎಂಬ ಭಾವನೆಯಿಂದ ಒಗ್ಗೂಡಿ ಕೆಲಸ ಮಾಡುವುದಕ್ಕಿದು ಸಕಾಲ ಎಂಬ ನಂಬಿಕೆ ನನ್ನದು. ಈ ಬೆಳವಣಿಗೆಯ ಸವಾಲಿನ ಮಧ್ಯೆಯೂ ಬೆಂಗಳೂರಿನ ಸ್ಫೂರ್ತಿಯನ್ನು ಜೀವಂತವಾಗಿರಿಸಿಕೊಳ್ಳಲು ಸಾಮಾಜಿಕ ಸಂಘಟನೆಗಳು, ಸರಕಾರ, ಸ್ವಯಂ ಸೇವಾ ಸಂಘಟನೆಗಳು, ಉದ್ಯಮಗಳು ಕೆಲಸ ಮಾಡಬೇಕಿದೆ. ಪ್ರತಿವರ್ಷ ನಡೆಯುವ ಈ ಕಾರ್ಯಕ್ರಮಕ್ಕೆ ತಗುಲುವ ವೆಚ್ಚವನ್ನು ನಮ್ಮ ಬೆಂಗಳೂರು ಪ್ರತಿಷ್ಠಾನ ತುಂಬಿಕೊಡಲಿದೆ ಎಂದು ನಾನು ಭರವಸೆ ನೀಡುತ್ತೇನೆ. ಈ ಕಾರ್ಯದಲ್ಲಿ ಮಾಧ್ಯಮಗಳ ಪಾತ್ರ ತುಂಬಾ ಪ್ರಮುಖವಾಗಿದೆ. ನಗರದ ನಿಜವಾದ ತಿರುಳಿನ ಮೇಲೆ ಬೆಳಕು ಚೆಲ್ಲುವ ಕೆಲಸ ಆರಂಭವಾಗಬೇಕಿದೆ. ನಮ್ಮ ನಗರ ಮಾಧ್ಯಮಗಳ ಆಕರ್ಷಣೆ ಕೇಂದ್ರವಾಗಿದೆ. ಪ್ರಚಾರಪ್ರಿಯರ ಅಬ್ಬರದಲ್ಲಿ ಸದ್ದಿಲ್ಲದೇ ಕೆಲಸ ಮಾಡುತ್ತಿರುವ ಪ್ರಾಮಾಣಿಕ ಜೀವಗಳಿಗೆ ಅನ್ಯಾಯವಾಗುತ್ತಿದೆ. ಇಂತಹ ತೆರೆಮರೆ ಸಾಧಕರ ಮೇಲೆ ಬೆಳಕು ಚೆಲ್ಲಬೇಕಿದೆ.

ಈ ಪ್ರಕ್ರಿಯೆ ತುಂಬಾ ಸರಳ ಮತ್ತು ಸುಲಭ. ತಮ್ಮ ಕಣ್ಣಿಗೆ ಬೀಳುವ ಇಂತಹ ತೆರೆಮರೆ ಸಾಧಕರ ಹೆಸರನ್ನು ನಮ್ಮ ಬೆಂಗಳೂರು ಅವಾರ್ಡ್‌ಗೆ ಜನರು ಶಿಫಾರಸು ಮಾಡಬೇಕು. ಇಂತಹ ನಾಮಾಂಕಿತರ ಪಟ್ಟಿಯನ್ನು ಪರಿಶೀಲಿಸಿ ವಿಜೇತರನ್ನು ನಮ್ಮ ಬೆಂಗಳೂರು ಅವಾರ್ಡ್ ಜ್ಯೂರಿಗಳು ಆಯ್ಕೆ ಮಾಡುತ್ತಾರೆ. ಬೆಂಗಳೂರಿನ ಕುರಿತಾಗಿ ಬದ್ಧತೆ ಹಾಗೂ ಅಮಿತ ಪ್ರೀತಿಯನ್ನು ಬೆಳೆಸಿಕೊಂಡಿರುವ ಸೇವೆ ಮತ್ತು ಅರ್ಪಣಾ ಮನೋಭಾವದಲ್ಲಿ ಅತ್ಯುತ್ತಮ ದಾಖಲೆ ಹೊಂದಿರುವ ಅಸಾಮಾನ್ಯ ವ್ಯಕ್ತಿಗಳನ್ನು ಜ್ಯೂರಿ ತಂಡ ಪ್ರಶಸ್ತಿಗೆ ಆಯ್ಕೆ ಮಾಡಿರುವುದನ್ನು ನೀವೇ ಕಾಣಬಹುದು.ಜ್ಯೂರಿ ಅಥವಾ ನಿರ್ಣಾಯಕರ ತಂಡದ ಒಂದು ಭಾಗವಾಗಿ ತಮ್ಮ ಅಮೂಲ್ಯ ಸಮಯವನ್ನು ನೀಡಿದ್ದಕ್ಕಾಗಿ ಜ್ಯೂರಿ ತಂಡದ ಸದಸ್ಯರಿಗೂ ನನ್ನ ಅನಂತ ಧನ್ಯವಾದಗಳು. ಬೆಂಗಳೂರು ಅವಾರ್ಡ್‌ಗೆ ನಡೆದ ಆಯ್ಕೆ ಪ್ರಕ್ರಿಯೆ ಕೂಡ ಸಂಪೂರ್ಣ ಪಾರದರ್ಶಕವಾಗಿದ್ದು, ಪ್ರತಿಷ್ಠಿತ ಆಡಿಟ್ ಸಂಸ್ಥೆಯ ಮೇಲುಸ್ತುವಾರಿಯಲ್ಲಿ ನಡೆದಿದೆ. ಡಿಸೆಂಬರ್ ಮಧ್ಯಭಾಗದಲ್ಲಿ ಆಚರಿಸಲ್ಪಡುವ ಸಾಂಸ್ಕೃತಿಕ ಮತ್ತು ಮನೋರಂಜನೆ ಸಂಜೆಯಲ್ಲಿ ಈ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುತ್ತದೆ.

ಇಂತಹ ಪ್ರಶಸ್ತಿಯನ್ನು ನೀಡುವ ದೇಶದ ಪ್ರಥಮ ನಗರ ಬೆಂಗಳೂರು ಎಂಬುದು ಮತ್ತೊಂದು ಹೆಗ್ಗಳಿಕೆ. ಇದಲ್ಲದೇ ಹಲವು ವಿಷಯಗಳಲ್ಲಿ ನಮ್ಮ ನಗರ ವೈಶಿಷ್ಟತೆ ಹೊಂದಿದೆ. ನಿಮ್ಮೆಲ್ಲರ ಸಹಕಾರ ಹಾಗೂ ಪಾಲ್ಗೊಳ್ಳುವಿಕೆಯಿಂದ ಮುಂದಿನ ವರ್ಷಗಳಲ್ಲಿ ಸಾರ್ವಜನಿಕ ಸೇವೆಯಲ್ಲಿ ಗುಣಮಟ್ಟವನ್ನು ರೂಪಿಸುವ ಸಂಪೂರ್ಣ ವಿಶ್ವಾಸವಿದೆ. ಈ ಪ್ರಶಸ್ತಿಯಲ್ಲಿ ಇಡೀ ನಗರವೇ ಪಾಲ್ಗೊಂಡು, ಪ್ರಶಸ್ತಿ ಪ್ರಧಾನವನ್ನು ಪ್ರಮುಖ ವಾರ್ಷಿಕ ಸಮಾರಂಭವನ್ನಾಗಿ ಬೆಳೆಸುವುದನ್ನು ನಾನು ಎದುರು ನೋಡುತ್ತಿದ್ದೇನೆ. ಎಲ್ಲಕ್ಕಿಂತ ಮುಖ್ಯವಾಗಿ ಮಾಧ್ಯಮಗಳು ಈ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ನಮ್ಮ ಈ ಸಂದೇಶವನ್ನು ಜನತೆಗೆ ತಲುಪಿಸಲು ಸಹಕರಿಸಬೇಕು ಎಂಬ ಆಶಯ ನಮ್ಮದು.

ಧನ್ಯವಾದಗಳು

ಜೈ ಹಿಂದ್, ಜೈ ಕರ್ನಾಟಕ

# 3

# ನಮ್ಮ ಬೆಂಗಳೂರು ಪ್ರಶಸ್ತಿ ಪ್ರಧಾನ ಸಮಾರಂಭ 2010ರಲ್ಲಿ ಮಾಡಿದ ಭಾಷಣ

ಎನ್‌ಬಿಎಫ್, ಬೆಂಗಳೂರು ಫೆಬ್ರವರಿ 29, 2010

ನಮ್ಮ ಗೌರವಾನ್ವಿತ ಲೋಕಾಯುಕ್ತರಾದ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅವರೇ, ನನ್ನ ಪ್ರೀತಿಯ ಜ್ಯೂರಿ ತಂಡದ ಸದಸ್ಯರೇ, ಮಾಧ್ಯಮ ಸ್ನೇಹಿತರೇ, ಮಹಿಳೆಯರೇ ಮತ್ತು ಮಹನೀಯರೆ,

ಎಲ್ಲಕ್ಕಿಂತ ಮೊದಲಿಗೆ ನಿಮ್ಮ ಅಮೂಲ್ಯ ಸಮಯವನ್ನು ನಮ್ಮ ಬೆಂಗಳೂರು ಅವಾರ್ಡ್, 2010ರ ಪ್ರಧಾನ ಸಮಾರಂಭದಲ್ಲಿ ನಮ್ಮೊಂದಿಗೆ ಕಳೆಯಲು ಇಲ್ಲಿಗೆ ಆಗಮಿಸಿದ ನಿಮಗೆಲ್ಲಾ ಧನ್ಯವಾದಗಳು. ವಾರ್ಷಿಕ ನಮ್ಮ ಬೆಂಗಳೂರು ಅವಾರ್ಡ್ ಕಾರ್ಯಕ್ರಮ ಕಳೆದ ವರ್ಷ ಆರಂಭಗೊಂಡಿತು. ನಮ್ಮ ನಗರದ ಏಳ್ಗೆಗಾಗಿ ಶ್ರಮಿಸಿದ ಸಮಾಜದ ನಾನಾ ವರ್ಗಗಳು ಹಾಗೂ ವಲಯಗಳ ವ್ಯಕ್ತಿಗಳು, ಸಂಸ್ಥೆಗಳನ್ನು ಗುರುತಿಸಿ, ಗೌರವಿಸುವ ಮಹೋನ್ನತ ಉದ್ದೇಶವನ್ನು ಇದು ಹೊಂದಿದೆ. ಈ ನಗರವನ್ನು ಉತ್ತಮ ಹಾಗೂ ವಾಸಯೋಗ್ಯ ನಗರವನ್ನಾಗಿ ಉಳಿಸಿಕೊಳ್ಳುವಲ್ಲಿ ದುಡಿದ ಈ ಜೀವಗಳೇ ನಿಜವಾದ ನಾಯಕರು. ಪ್ರಶಸ್ತಿಗಳ ಮೊದಲ ಆವೃತ್ತಿ ಈ ವರ್ಷದ ಮಾರ್ಚ್‌ನಲ್ಲಿ ನಡೆದಿದ್ದು, ಅಭೂತಪೂರ್ವ ಪ್ರತಿಕ್ರಿಯೆ ವ್ಯಕ್ತವಾಗಿತ್ತು.

ಇದರಲ್ಲಿ 14 ವ್ಯಕ್ತಿಗಳನ್ನು ಹಾಗೂ ಸಂಸ್ಥೆಗಳನ್ನು ಗುರುತಿಸಿ ಗೌರವಿಸಲಾಯಿತು.

ಈ ಪ್ರಶಸ್ತಿಯ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲದವರಿಗಾಗಿ ಸ್ವಲ್ಪ ವಿವರ ನೀಡಲು ಬಯಸುತ್ತೇನೆ.

ಬೆಂಗಳೂರಿನ ಅಭೂತಪೂರ್ವ ಬೆಳವಣಿಗೆಯಿಂದಾಗಿ ಸ್ಥಳೀಯ ಸಂಸ್ಕೃತಿ, ಪರಂಪರೆ ಹಾಗೂ ನಗರದ ಕುರಿತಾದ ಪ್ರೀತಿ ಕಡಿಮೆಯಾಗುತ್ತಿದೆ. ಅಭಿವೃದ್ಧಿ ಹೆಸರಿನಲ್ಲಿ ನಮ್ಮ ಸಮುದಾಯ ಪ್ರಜ್ಞೆ ಹೇಗೆ ನಾಶವಾಗುತ್ತಿದೆ ಎಂಬುದಕ್ಕೆ ನಾವೆಲ್ಲರೂ ಸಾಕ್ಷಿಗಳಾಗಿದ್ದೇವೆ. ನಮ್ಮಲ್ಲಿ ಅಭಿಮಾನ ಮರೆಯಾಗಿದೆ. ಭ್ರಷ್ಟಾಚಾರ ಮೇರೆಮೀರಿದೆ. ಸಾಂಸ್ಥಿಕ ವ್ಯವಸ್ಥೆ ಸಂಪೂರ್ಣ ಕುಸಿದಿದೆ. ಇಂತಹ ಆಪತ್ತಿನಲ್ಲಿಯೂ ನಮ್ಮ ನಗರಕ್ಕೆ ಕೆಲವರು ಆಸರೆಯಾಗಿರುವುದು ನಮ್ಮೆಲ್ಲರ ಪುಣ್ಯ. ಹಲವು ಅಡೆತಡೆಗಳ ನಡುವೆಯೂ ಪುರುಷರು, ಮಹಿಳೆಯರು ಮತ್ತು ಸಂಸ್ಥೆಗಳು ಈ ನಗರದ ಸೇವೆಗೆ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಇಂತಹ ತ್ಯಾಗಜೀವಿಗಳನ್ನು ಗುರುತಿಸಿ ಗೌರವಿಸುವ ಮೂಲಕ ಬೆಂಗಳೂರು ಸ್ಫೂರ್ತಿಯನ್ನು ಕಾಪಾಡಿಕೊಳ್ಳುವುದು ನಮ್ಮ ಬೆಂಗಳೂರು ಪ್ರಶಸ್ತಿಯ ಉದ್ದೇಶ.

ಈ ಕಾರ್ಯಕ್ರಮ ಬೆಂಗಳೂರು ವಾಸಿಗಳಿಗೆ ತಮ್ಮ ಪಾಲಿನ ನಾಯಕರನ್ನು ಪ್ರಶಸ್ತಿಗಾಗಿ ನಾಮಾಂಕನಗೊಳಿಸುವ ಅಸಾಮಾನ್ಯ ಅವಕಾಶ ಕಲ್ಪಿಸುತ್ತದೆ. ಈ ಪ್ರಶಸ್ತಿಯ ಮೂಲ ಉದ್ದೇಶವೆಂದರೆ ಪ್ರತಿಯೊಬ್ಬ ಬೆಂಗಳೂರಿಗನಿಗೂ ತಮ್ಮ ನಾಯಕನನ್ನು ಪ್ರಶಸ್ತಿಗೆ ಶಿಫಾರಸು ಮಾಡುವ ಮೂಲಕ ಈ ಪ್ರಶಸ್ತಿ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದು.

ನಮ್ಮ ದೇಶ ಮತ್ತು ನಗರದ ಭವಿಷ್ಯದ ಬಗ್ಗೆ ನಿರಾಶಾದಾಯಕವಾಗಿರುವುದು ಬಹು ಸುಲಭ. ನಮ್ಮ ಜನಪ್ರತಿನಿಧಿಗಳು ಹಾಗೂ ಆಡಳಿತಗಾರರು ಬಹಳಷ್ಟು ಸಂದರ್ಭಗಳಲ್ಲಿ ಮಾಡುವುದು ಇದನ್ನೇ. ಜನರು, ನಗರ, ದೇಶದ ಒಳಿತಿಗೆ ದುಡಿಯುವುದು ಬಿಟ್ಟು ಅದನ್ನು ಶೋಷಿಸುವವರೇ ಹೆಚ್ಚು. ಇತ್ತೀಚೆಗೆ ನನ್ನನ್ನು ಕೆಲವರು ಕೇಳಿದರು, ಅಧಿಕಾರದಲ್ಲಿರುವ ಜನರು ನಗರವನ್ನು ಶೋಷಿಸಿ, ನಾಶಗೊಳಿಸಿದರೆ ನಾವು ಮಾಡುವುದಾದರೂ ಏನು? ಎಂದು. ಇದಕ್ಕೆ ಉತ್ತರ ತುಂಬಾ ಸರಳ, ನೀವು ಮತ್ತು ನಾವು ಒಟ್ಟಾಗಿ ಈ ನಗರದ ಪ್ರಗತಿಗಾಗಿ ಕಂಕಣ ಕಟ್ಟಿ ದುಡಿಯೋಣ. ನಾವು ಒಟ್ಟಾಗಿ ಅಧಿಕಾರದಲ್ಲಿರುವ ಮತ್ತು ಹೊರಗಿರುವವರನ್ನು ಪ್ರೋತ್ಸಾಹಿಸಿ ಬೆಂಬಲಿಸೋಣ. ನಾವಲ್ಲದೇ ನಮ್ಮ ನಗರವನ್ನು ಇನ್ನಾರು ರಕ್ಷಿಸಬೇಕು?

ಹೌದು, ನಿರಾಶರಾಗಿ ಕುಳಿತುಕೊಳ್ಳುವುದು ಬಹು ಸುಲಭ. ಆದರೆ, ನಮ್ಮ ಬೆಂಗಳೂರು ಪ್ರಶಸ್ತಿ ನಮ್ಮೊಳಗಿನ ಅಂತರಾತ್ಮವನ್ನು ಪ್ರೇರೇಪಿಸಿ, ನಗರದ ಒಳಿತಿಗಾಗಿ ದುಡಿಯಲು

ಕಿಚ್ಚು ಹಚ್ಚುತ್ತದೆ. ನಮ್ಮ ಸಹವಾಸಿಗಳು ಮಾಡಿದ ಸೇವೆಯನ್ನು ಗುರುತಿಸಿ ಅವರ ಹೆಸರನ್ನು ಪ್ರಶಸ್ತಿಗೆ ಸಾವಿರಾರು ಮಂದಿ ಶಿಫಾರಸು ಮಾಡುವುದೇ ಇದಕ್ಕೆ ಸಾಕ್ಷಿ. ನಮ್ಮ ನಾಯಕರನ್ನು ಪ್ರಶಸ್ತಿಗೆ ಶಿಫಾರಸು ಮಾಡುವ ಮಾರ್ಗವೇ ನಮ್ಮ ಬೆಂಗಳೂರು ಪ್ರಶಸ್ತಿ. ವಿದ್ಯಾರ್ಥಿಗಳು ತಮ್ಮ ನೆಚ್ಚಿನ ಶಿಕ್ಷಕರನ್ನು, ಪ್ರಾಧ್ಯಾಪಕರನ್ನು, ರೋಗಿಗಳು ವೈದ್ಯರನ್ನು, ದಾದಿಯರನ್ನು, ನೆರೆಹೊರೆಯವರು ತಮ್ಮ ನೆರೆಹೊರೆಯವರನ್ನು, ಬಿಬಿಎಂಪಿ, ಬಿಡಬ್ಲ್ಯುಎಸ್‌ಎಸ್‌ಬಿ, ಬಿಡಿಎ ಅಧಿಕಾರಿಗಳನ್ನು, ನಿವಾಸಿಗಳು ಆ ಏರಿಯಾದ ಪೊಲೀಸರನ್ನು, ಅಗ್ನಿಶಾಮಕ ಸಿಬ್ಬಂದಿಯನ್ನು, ಬಿಎಂಟಿಸಿ ಪ್ರಯಾಣಿಕರು ಬಸ್‌ನ ನಿರ್ವಾಹಕ, ಚಾಲಕರನ್ನು, ಆಟೋ ಚಾಲಕರು, ಕ್ಯಾಬ್ ಚಾಲಕರು, ಸ್ವಯಂ ಸೇವಾ ಸಂಘಟನೆಗಳನ್ನು ಪ್ರಶಸ್ತಿಗೆ ಶಿಫಾರಸು ಮಾಡಬಹುದು.

ಈ ಪ್ರಶಸ್ತಿಯು ತಮ್ಮ ನೆಚ್ಚಿನವರನ್ನು ಗುರುತಿಸಿ, ಅವರ ಕುರಿತು ಗೌರವ ತೋರಲು ನಮಗೆ ಲಭಿಸಿರುವ ಅವಕಾಶ. ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೇ ಸ್ವಾರ್ಥರಹಿತರಾಗಿ, ನಗರದ ಏಳ್ಗೆಗೆ ಶ್ರಮಿಸುತ್ತಿರುವವರ ಬಗ್ಗೆ ಪ್ರೀತಿ ತೋರುವ ಅವಕಾಶವಿದು. ಇದೊಂದು ಧನ್ಯವಾದ ಅರ್ಪಿಸುವ ವಿಧಾನ. ಆದ್ದರಿಂದ ಈ ಕಾರ್ಯಕ್ರಮದಲ್ಲಿ ಪ್ರತಿಯೊಬ್ಬ ನಗರವಾಸಿಯೂ ಪಾಲ್ಗೊಳ್ಳಬೇಕು ಎಂಬುದು ನನ್ನ ಹಕ್ಕೊತ್ತಾಯ. ಮುಂದೆ ಬಂದು ನಿಮ್ಮ ನಿಮ್ಮ ನಾಯಕರನ್ನು ನಾಮಾಂಕನಗೊಳಿಸಿ. ನಗರದ ನಿಜವಾದ ನಾಯಕರಿಗೆ ಅನಂತ ಧನ್ಯವಾದಗಳು.

ಕಳೆದ ವರ್ಷ ಲಭಿಸಿದ ಅಭೂತಪೂರ್ವ ಜನಬೆಂಬಲವನ್ನು ಗಮನಿಸಿ ಹಾಗೂ ಹರಿದುಬಂದ ಸಲಹೆಗಳನ್ನು ಪರಿಗಣಿಸಿ, ಪ್ರಶಸ್ತಿಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದೆ. ಈ ವರ್ಷ ಮೂರರಿಂದ ನಾಲ್ಕು ಪ್ರಶಸ್ತಿಗಳನ್ನು ಹೆಚ್ಚಿಗೆ ನೀಡಲು ನಮ್ಮ ಬೆಂಗಳೂರು ಪ್ರತಿಷ್ಠಾನ ಮತ್ತು ನಮ್ಮ ಬೆಂಗಳೂರು ಪ್ರಶಸ್ತಿ 2010ರ ಜ್ಯೂರಿ ಸದಸ್ಯರು ನಿರ್ಧರಿಸಿದ್ದಾರೆ. ಹೊಸ ಪ್ರಶಸ್ತಿಗಳು ಚುನಾಯಿತ ಪ್ರನಿಧಿಗಳು, ಉದ್ಯಮಿಗಳು, ಕ್ರೀಡಾಪಟುಗಳು ಹಾಗೂ ನಮ್ಮ ಬೆಂಗಳೂರಿಗರಿಗೆ ಸಲ್ಲುತ್ತವೆ. ಒಟ್ಟಾರೆ ಪ್ರಕ್ರಿಯೆಯಲ್ಲಿ ಮಾಧ್ಯಮಗಳ ಪಾತ್ರ ಬಲುದೊಡ್ಡದು, ತೆರೆಮರೆಯ ಕಾಯಿಗಳನ್ನು ಗುರುತಿಸುವಲ್ಲಿ ಹಾಗೂ ಒಟ್ಟಾರೆ ಪ್ರಕ್ರಿಯೆ ಕುರಿತಂತೆ ಆರೋಗ್ಯಕರ ಚರ್ಚೆ ಏರ್ಪಡುವಂತೆ ಮಾಡುವಲ್ಲಿ ಮಾಧ್ಯಮಗಳು ಪ್ರಮುಖ ಪಾತ್ರ ವಹಿಸಿವೆ.

ಪ್ರಚಾರಪ್ರಿಯರ ಅಬ್ಬರದಲ್ಲಿ ಅನ್ಯಾಯಕ್ಕೊಳಗಾದ ಯಾವುದೇ ಸದ್ದುಗದ್ದಲವಿಲ್ಲದೇ ನಗರ ಹಾಗೂ ನಗರವಾಸಿಗಳ ಕಲ್ಯಾಣಕ್ಕೆ ದುಡಿಯುತ್ತಿರುವವರ ಮೇಲೆ ಬೆಳಕು ಚೆಲ್ಲುವ ಸಮಯವಿದು. ವರ್ಷಕ್ಕೆ ಕನಿಷ್ಠ ಒಂದು ದಿನವಾದರೂ, ಇಂತಹ

ನಿಸ್ವಾರ್ಥ ತಪಸ್ವಿಗಳ ಸಾಧನೆಯನ್ನು ಧ್ಯಾನಿಸೋಣ. ಇಂತಹ ತ್ಯಾಗಮಯಿಗಳನ್ನು ಸನ್ಮಾನಿಸಲು ನಮ್ಮ ಬೆಂಗಳೂರು ಪ್ರತಿಷ್ಠಾನ ಕೃತಕೃತ್ಯತೆ ಅನುಭವಿಸುತ್ತದೆ. ನೈಜ ನಾಯಕರನ್ನು ಗುರುತಿಸುವಲ್ಲಿ ನಿಮ್ಮೆಲ್ಲಾ ಸಹಕಾರ ಮತ್ತು ಮಾರ್ಗದರ್ಶನಗಳಿಗೆ ನಾವು ಆಭಾರಿಗಳಾಗಿದ್ದೇವೆ.

ನಿಮಗೆಲ್ಲಾ ತಿಳಿದಿರುವಂತೆ ಇಂತಹ ಪ್ರಶಸ್ತಿಯನ್ನು ನೀಡುತ್ತಿರುವ ದೇಶದ ಮೊದಲ ನಗರ ಬೆಂಗಳೂರು. ನಮ್ಮ ಬೆಂಗಳೂರು ಹೀಗೆ ಸದಾ ಎಲ್ಲ ವಿಚಾರಗಳಲ್ಲೂ ಎಲ್ಲರಿಗಿಂತ ಮುಂದಿರಲಿ. ಮುಂದಿನ ದಿನಗಳಲ್ಲಿ ನಿಮ್ಮೆಲ್ಲರ ಸಹಕಾರ ಮತ್ತಷ್ಟು ಹೆಚ್ಚಲಿ. ನಾಗರೀಕತೆಯ ಉನ್ನತ ದರ್ಜೆಗಳನ್ನು ಸ್ಥಾಪಿಸುವಲ್ಲಿ ಮತ್ತು ಸಾರ್ವಜನಿಕ ಸೇವೆಯಲ್ಲಿ ತೊಡಗಿಸಿಕೊಳ್ಳುವಲ್ಲಿ ನೀವು ನನ್ನೊಂದಿಗಿರಿ!

ಈ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಇಡೀ ನಗರವನ್ನೇ ತೊಡಗಿಸುವ ಈ ಕನಸಿನ ಸಾಕಾರಕ್ಕೆ ನಿಮ್ಮೆಲ್ಲರ ಪೂರ್ಣ ಪಾಲ್ಗೊಳ್ಳುವಿಕೆಯನ್ನು ನಾನು ಎದುರು ನೋಡುತ್ತಿದ್ದೇನೆ. ವಿಶೇಷವಾಗಿ ಇದನ್ನು ಗಮನಾರ್ಹವಾದ ವಾರ್ಷಿಕ ಕಾರ್ಯಕ್ರಮವಾಗಿ ಮಾಡುವಲ್ಲಿ ಮತ್ತು ಈ ಪ್ರಕ್ರಿಯೆಯಲ್ಲಿ ನಮ್ಮ ಕನಸಿನ ನಗರವನ್ನು ನಿರ್ಮಾಣ ಮಾಡುವಲ್ಲಿ. ಎಲ್ಲಕ್ಕಿಂತ ಮುಖ್ಯವಾಗಿ ಮಾಧ್ಯಮಗಳ ಪಾತ್ರ ಬಹುದೊಡ್ಡದು. ಒಳ್ಳೆಯ ವಿಚಾರಗಳನ್ನು ಓದುಗರಿಗೆ ಮತ್ತು ವೀಕ್ಷಕರಿಗೆ ಎಲ್ಲೆಡೆ ತಲುಪಿಸಲು ಅವರ ಸಹಕಾರ ಅಗತ್ಯ.

ಧನ್ಯವಾದಗಳು

ಜೈ ಹಿಂದ್, ಜೈ ಕರ್ನಾಟಕ

# 4

# ಕರ್ನಾಟಕ ರಾಜ್ಯ ಮತ್ತು ದೇಶದ ಇತರ ಭಾಗಗಳಲ್ಲಿ ರೇಷ್ಮೆ ಕೃಷಿಕರನ್ನು ರಕ್ಷಿಸುವ ಕುರಿತಾಗಿ ಸಂಸತ್ತಿನಲ್ಲಿ ಶೂನ್ಯ ವೇಳೆ ಪ್ರಸ್ತಾಪ

ರಾಜ್ಯಸಭೆ 19ನೇ ಡಿಸೆಂಬರ್2011

ಮಾನ್ಯರೇ,

ನನ್ನ ತವರು ರಾಜ್ಯ ಕರ್ನಾಟಕವು ದೇಶದ ಶೇ. 50ರಷ್ಟು ಕಚ್ಚಾ ಹಿಪ್ಪನೇರಳೆ ಸೊಪ್ಪಿನ ಉತ್ಪಾದನೆ ಮಾಡುತ್ತದೆ. ಸುಮಾರು 8.15 ಲಕ್ಷ ಕೃಷಿಕರು ರಾಜ್ಯದಲ್ಲಿ ರೇಷ್ಮೆ ಕೃಷಿಯ ಮೇಲೆ ಅವಲಂಬಿತರಾಗಿದ್ದ, 8000 ಮೆಟ್ರಿಕ್‌ಟನ್‌ಕಚ್ಚಾ ರೇಷ್ಮೆ ಮತ್ತು 5500 ಮೆಟ್ರಿಕ್‌ಟನ್‌ಗಳಷ್ಟು ರೇಷ್ಮೆ ಗೂಡುಗಳನ್ನು ಪ್ರತಿವರ್ಷ ಉತ್ಪಾದಿಸುತ್ತಿದ್ದಾರೆ. ಈ ಕೃಷಿ ಆಧರಿತ ಚಟುವಟಿಕೆಯು, ಅತ್ಯಂತ ಕಡಿಮೆ ಅವಧಿಯಲ್ಲಿ ಬಡ ಕುಟುಂಬಗಳಿಗೆ ಲಾಭದಾಯಕ ಉದ್ಯೋಗಾವಕಾಶವನ್ನು ಒದಗಿಸುವ ಜೊತೆಗೆ, ಸಣ್ಣ ಭೂಮಿಯಲ್ಲೂ ಸಾಕಷ್ಟು ಲಾಭವನ್ನು ಗಳಿಸಿಕೊಡಬಲ್ಲ ಸಾಮರ್ಥ್ಯ ಹೊಂದಿದೆ.

ಆದರೆ, ಒಂದು ಕಾಲದಲ್ಲಿ ಕರ್ನಾಟಕ ಮತ್ತು ದೇಶದ ಇತರ ಭಾಗಗಳಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ರೇಷ್ಮೆ ಕೃಷಿಯು ಈಗ ಅತಿ ದೊಡ್ಡ ಸಂಕಷ್ಟಕ್ಕೆ ಗುರಿಯಾಗಿದೆ.

ಇತ್ತೀಚೆಗೆ ಸತತವಾಗಿ ಕುಸಿಯುತ್ತಿರುವ ಕಚ್ಚಾ ರೇಷ್ಮೆಯ ಬೆಲೆಗಳು ಇದಕ್ಕೆ ಕಾರಣ. 2011–12ನೇ ಸಾಲಿನ ಆಯ–ವ್ಯಯದಲ್ಲಿ ಕೇಂದ್ರ ಸರ್ಕಾರವು ರೇಷ್ಮೆ ಉತ್ಪಾದಿಸುವ ರಾಜ್ಯಗಳ ಜೊತೆ ಯಾವುದೇ ಸಮಾಲೋಚನೆ ನಡೆಸದೆ, ರೇಷ್ಮೆ ಮೇಲಿನ ಆಮದು ಸುಂಕವನ್ನು ಶೇ 30ರಿಂದ ಕೇವಲ ಶೇ. 5ಕ್ಕೆ ಇಳಿಕೆ ಮಾಡಿದ ಬಳಿಕ ಈ ವಲಯದ ಬಿಕ್ಕಟ್ಟು ಮತ್ತಷ್ಟು ಬಿಗಡಾಯಿಸಿದೆ.

ಸರ್ಕಾರದ ಈ ನಿರ್ಧಾರದಿಂದ ದೇಶಾದ್ಯಂತ ಬಹುತೇಕ ದಿನಗೂಲಿ ನೌಕರೇ ಆಗಿರುವ ಲಕ್ಷಾಂತರ ಕೈಮಗ್ಗ ನೇಕಾರರು ಮತ್ತು ವಿದ್ಯುತ್‌ಚಾಲಿತ ಮಗ್ಗ ನೇಕಾರರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಆಮದು ಸುಂಕವನ್ನು ಕಡಿಮೆ ಮಾಡಿರುವುದರಿಂದ ಚೀನಾ ದೇಶವು ಭಾರಿ ಪ್ರಮಾಣದ ಚೀನಿ–ರೇಷ್ಮೆಯನ್ನು ಭಾರತದ ಮಾರುಕಟ್ಟೆಗೆ ಸುರಿಯಲು ಅವಕಾಶವಾಗಿದ್ದು, ಇದು ಅಕ್ಷರಶಃ ದೇಶದ ರೇಷ್ಮೆ ವಲಯಕ್ಕೆ ಮಾರಣಾಂತರಿಕ ಹೊಡೆತವಾಗಿದೆ. ಅಲ್ಲದೆ, ಸಣ್ಣ ಮತ್ತು ಮಧ್ಯಮ ಪ್ರಮಾಣದ ರೇಷ್ಮೆ ಕೃಷಿಕರ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ.

ಆದ್ದರಿಂದ, ಮುಂದಿನ ಆಯವ್ಯಯ ಮಂಡನೆ ವೇಳೆ ಕಚ್ಚಾ ರೇಷ್ಮೆ ಮೇಲಿನ ಆಮದು ಸುಂಕವನ್ನು ಮೊದಲಿದ್ದ ಶೇ. 30ಕ್ಕೆ ಅಥವಾ ಅದಕ್ಕಿಂತಲೂ ಅಧಿಕ ಮಟ್ಟಕ್ಕೆ ನಿಗದಿಪಡಿಸುವ ಮೂಲಕ ದೇಶದಲ್ಲಿರುವ ಕೃಷಿ ಕಾರ್ಮಿಕರನ್ನು ರಕ್ಷಿಸಬೇಕೆಂದು ನಾನು ಸರ್ಕಾರವನ್ನು ಕೋರುತ್ತೇನೆ. ಜೊತೆಗೆ, ಸರ್ಕಾರ ರೇಷ್ಮೆ ಗೂಡಿಗೆ ಕನಿಷ್ಠ ಬೆಂಬಲ ಬೆಲೆಯನ್ನೂ ಘೋಷಿಸಬೇಕು.

ಧನ್ಯವಾದಗಳು.

# 5

# ಉತ್ತಮ ಆಡಳಿತ ಮತ್ತು ಘನ ತ್ಯಾಜ್ಯ ನಿರ್ವಹಣೆ ಮೂಲಕ ಸಾರ್ವಜನಿಕ ಆರೋಗ್ಯ ಸಮಸ್ಯೆಗೆ ಪರಿಹಾರ

ಘನ ತ್ಯಾಜ್ಯ ನಿರ್ವಹಣೆ ಕುರಿತಾದ ವಿಚಾರ ಸಂಕಿರಣ ಬೆಂಗಳೂರು

13ನೇ ಜನವರಿ 2013

ತಮ್ಮೆಲ್ಲರಿಗೂ ನಮಸ್ಕಾರ...!

ಬೆಂಗಳೂರು ಈ ಶ್ರೇಷ್ಠ ರಾಜ್ಯದ ಹೆಮ್ಮೆಯ ರಾಜಧಾನಿ. ಇದು ಅಘಾದವಾದ ಶ್ರೀಮಂತ ಇತಿಹಾಸವನ್ನು ಹೊಂದಿರುವ ನಗರ...ಅದರಲ್ಲೂ ಮುಖ್ಯವಾಗಿ, ಪರಂಪರೆ, ಸಾಂಸ್ಕೃತಿಕ ವೈವಿಧ್ಯತೆ, ಉತ್ತಮ ನಗರ ಯೋಜನೆ ಮತ್ತು ಆಡಳತದ ವಿಚಾರದಲ್ಲಿ ಹಾಗೂ ವಿವಿಧ ಪ್ರದೇಶಗಳಲ್ಲಿ ವಾಸಿಸುತ್ತಿರುವ, ಸಾರ್ವಜನಿಕ ಸೇವೆಗಳು ಮತ್ತು ಸುರಕ್ಷತೆಯನ್ನು ಪಡೆಯುತ್ತಿರುವ ಈ ನಗರದ ಜನತೆಯ ವಿಚಾರದಲ್ಲೂ ಬೆಂಗಳೂರಿಗೆ ಶ್ರೀಮಂತ ಇತಿಹಾಸವಿದೆ.

ಈಗಾಗಲೇ ಎಲ್ಲರಿಗೂ ತಿಳಿದಿರುವಂತೆ ಹೊಸ ಭಾರತದ ಒಂದು ಸಂಕೇತವಾಗಿ ಬೆಂಗಳೂರು ರೂಪುತಳೆದಿದೆ ಮತ್ತು ತಂತ್ರಜ್ಞಾನ ಹಾಗೂ ಇತರ ಆರ್ಥಿಕ ಚಟುವಟಿಕೆಗಳ ಆಮದು ರಾಜಧಾನಿಯಾಗಿ ಮಾರ್ಪಟ್ಟಿದೆ. ಅದರಲ್ಲೂ ಬಹು ಮುಖ್ಯವಾಗಿ, ಬೆಂಗಳೂರಿಲ್ಲಿ ನೆಲೆಸಿರುವ ಮತ್ತು ಬೆಂಗಳೂರನ್ನು ಪ್ರತಿನಿಧಿಸುವ

ನಮ್ಮೆಲ್ಲರಿಗೂ ಬೆಂಗಳೂರು ಎಂಬುದು ಕರ್ನಾಟಕದ ಆರ್ಥಿಕತೆಯ ಯಂತ್ರವಿದ್ದಂತೆ.

ಈ ಅದ್ಭುತ ನಗರ ಇಂದು ಸೊರಗುತ್ತಿದೆ! ಇಂದಿನ ಈ ವಿಚಾರ ಸಂಕಿರಣವು, ನಮ್ಮ ನಗರದ ಅಧೋಗತಿಯ ಒಂದು ಕೆಟ್ಟ ಸೂಚನೆಯಷ್ಟೇ.

ಈ ಅಧೋಗತಿಗೆ ಕಾರಣ ಮತ್ತು ಇದಕ್ಕೆ ಪರಿಹಾರವನ್ನು ನಾನು ನಿಮ್ಮ ಪರಿಗಣನೆಗಾಗಿ ನಿಮ್ಮ ಮುಂದಿಡಲು ಬಯಸುತ್ತೇನೆ. ದೂರದೃಷ್ಟಿ ಮತ್ತು ಯೋಜನೆಯ ಕೊರತೆಯಿಂದ ಹಲವು ಅಂಶಗಳಲ್ಲಿ ನಾವು ನಗರವನ್ನು ವಿಫಲಗೊಳಿಸಿದ್ದೇವೆ. ತ್ಯಾಜ್ಯ ನಿರ್ವಹಣೆಯಲ್ಲಿ ನಮ್ಮ ವೈಫಲ್ಯವು, ಮೂಲಭೂತ ಸಾರ್ವಜನಿಕ ಸೇವೆಗಳನ್ನು ಒದಗಿಸಲು ಸಹ ಆಗದ ನಮ್ಮ ಕಳಪೆ ಆಡಳಿತಕ್ಕೆ ಉದಾಹರಣೆಯಾಗಿದೆ.

ನಿಮ್ಮೆಲ್ಲರಂತೆಯೇ ನಾನು ಸಹ ಹೆಮ್ಮೆಯ ಬೆಂಗಳೂರಿಗನಾಗಿದ್ದು, ನಮ್ಮ ನಗರದ ಈ ಕ್ಷಿಪ್ರ ಅಧೋಗತಿಯಿಂದ ಹತಾಶಗೊಂಡವರಲ್ಲಿ ಒಬ್ಬನಾಗಿದ್ದೇನೆ. ಬೆಂಗಳೂರು, ಇಸ್ರೋ ಮೂಲಕ ಚಂದ್ರಮಂಡಲಕ್ಕೆ ರಾಕೆಟ್‌ಕಳುಹಿಸಬಲ್ಲದು, ವಿಶ್ವದ ಯಾವುದೇ ದೇಶಕ್ಕೆ ಅಗತ್ಯವಾದ ತಂತ್ರಜ್ಞಾನವನ್ನು ಸೃಷ್ಟಿಸಲ್ಲದು, ಆದರೆ, ನಮ್ಮ ನಗರದ ತ್ಯಾಜ್ಯವನ್ನು ನಿರ್ವಹಣೆ ಮಾಡಲು ನಮ್ಮಿಂದ ಸಾಧ್ಯವಾಗುತ್ತಿಲ್ಲ.

ಕಾರಣಗಳು:

ಇಂದಿನ ಚರ್ಚೆಯು, ಕಸ ಮತ್ತು ತ್ಯಾಜ್ಯ ನಿರ್ವಹಣೆಯ ಕುರಿತಾದದ್ದು. ಕೆಲವು ತಿಂಗಳ ಹಿಂದೆ, ವಾಹನ ದಟ್ಟಣೆ, ನಂತರ ಕಾನೂನು–ಸುವ್ಯವಸ್ಥೆ, ಶ್ರೀಘ್ರದಲ್ಲೇ ನೀರಿನ ಸಮಸ್ಯೆ ಶುರುವಾಗಲಿದೆ..ಹೀಗೆಯೇ ಒಂದರ ನಂತರ ಒಂದು ಸಮಸ್ಯೆಗಳು. ನಾನು ಇದನ್ನು ಏಕೆ ಹೇಳುತ್ತಿದ್ದೇನೆ? ನನಗೇನೂ ಇಂತಹದನ್ನು ಊಹಿಸುವುದು ಸಂತೋಷದ ವಿಚಾರವಲ್ಲ. ಆದರೆ, ಒಂದು ಕಟು ವಾಸ್ತವ ಕುರಿತಾಗಿ ನಾವು ಒಪ್ಪಿಕೊಳ್ಳಲೇಬೇಕಾದ ಸ್ವಾಭಾವಿಕ ಉಪಸಂಹಾರವಿದು. ಇದನ್ನು ನಿಲ್ಲಿಸಲು ಯಾವುದೇ ಯೋಜನೆ ಇಲ್ಲವೇ?

ನಮ್ಮ ನಗರ ಹೀಗೆ ಅಧೋಗತಿಗೆ ಇಳಿಯಲು ಕಾರಣವೇನು? ನಮ್ಮ ನಗರದಲ್ಲಿ 198 ಕಾರ್ಪೊರೇಟರುಗಳು, 28 ಶಾಸಕರು, 3 ಲೋಕಸಭಾ ಸಂಸದರು, ನನ್ನಂತಹ ರಾಜ್ಯಸಭಾ ಸದಸ್ಯರು, ಒಬ್ಬರು ಜಿಲ್ಲಾ ಸಚಿವರು, ನೇರ ಸಿಎಂ ಅವರ ಅಡಿಯಲ್ಲಿ ಬೆಂಗಳೂರಿಗೆ ಪ್ರತ್ಯೇಕ ಇಲಾಖೆ, ಸಾಕಷ್ಟು ಅನುಭವ ಹೊಂದಿರುವ ಅಧಿಕಾರಿಗಳು, ಹಲವು ಸರ್ಕಾರೇತರ ಸೇವಾ ಸಂಸ್ಥೆಗಳು (ಎನ್‌ಜಿಒಗಳು) ಮತ್ತು ಸಕ್ರಿಯ ನಾಗರೀಕರಿದ್ದಾರೆ. ಆದರೂ ನಮ್ಮ ಈ ಭವ್ಯ ನಗರ ದೇಶಾದ್ಯಂತ ಮತ್ತು ವಿದೇಶಗಳಲ್ಲಿ

ಕಸದ ನಗರ ಎಂದೇಕೆ ಕುಖ್ಯಾತವಾಗಿ ಸುದ್ದಿಯಾಗುತ್ತದೆ?

ಬೆಂಗಳೂರಿಗಾಗಿ ಯಾವುದೇ ಯೋಜನೆಯಿಲ್ಲ. ರಾಜಕೀಯ ನಾಯಕರಾಗಲೀ ಅಥವಾ ಅಧಿಕಾರಿಗಳ ನಾಯಕತ್ವವಾಗಲೀ ನಮ್ಮ ನಗರದ ಭವಿಷ್ಯದ ಅಭಿವೃದ್ಧಿ ಹಾಗೂ ಅದಕ್ಕೆ ಸಂಬಂಧಿಸಿದ ಬಗ್ಗೆ ಸಮಗ್ರ ಮತ್ತು ದೂರದೃಷ್ಟಿಯ ಯೋಜನೆಯನ್ನು ಹೊಂದಿಲ್ಲ. ಸರ್ಕಾರದಲ್ಲಿರುವ ಕೆಲವರು ಈ ಬಿಕ್ಕಟ್ಟಿಗೆ ಬೆಂಗಳೂರಿನ ಕ್ಷಿಪ್ರ ಪ್ರಗತಿಯೇ ಕಾರಣ ಎಂದು ಆರೋಪಿಸುತ್ತಾರೆ. ಇದು ಅಸಂಬದ್ಧ. ನಗರವನ್ನು ನಿರ್ವಹಿಸುವ ವೈಫಲ್ಯದಿಂದ ನುಣಿಚಿಕೊಳ್ಳುವ ಯತ್ನವಿದು. ದುರಂತದ ಉಪಮೆನ್ನು ಬಳಸುವುದಾದರೆ – "ಮೂಲಭೂತ ಸಾರ್ವಜನಿಕ ಸೇವೆಗಳನ್ನು ಒದಗಿಸುವಲ್ಲಿ ನಮ್ಮ ವೈಫಲ್ಯಕ್ಕೆ ಬೆಂಗಳೂರಿನ ಪ್ರಗತಿಯನ್ನು ದೂರುವುದೆಂದರೆ, ಮಹಿಳೆಯರಿಗೆ ಭದ್ರತೆ ಒದಗಿಸಲಾಗದೆ ಅವರ ಉಡುಪಿನ ಬಗ್ಗೆ ದೂರಿದಂತೆ."

ಆದ್ದರಿಂದ, ಇದರ ಮೊದಲ ಕಾರಣವೆಂದರೆ, ಯೋಜನೆಯು ಇಲ್ಲದಿರುವುದು. ಹೀಗಾಗಿ ಯಾರಿಗೂ ಹೊಣೆಗಾರಿಕೆ ಇಲ್ಲ. ಈ ನಿಟ್ಟಿನಲ್ಲಿ ನಾವು ನಗರವನ್ನ ವಿಫಲಗೊಳಿಸಿದ್ದೇವೆ. ಅಂದಹಾಗೆ, ಆಡಳಿತಾರೂಢ ಸರ್ಕಾರಕ್ಕೆ ಇದರ ಬಗ್ಗೆ ಅರಿವು ಇಲ್ಲವೆಂದೇನೂ ಅಲ್ಲ. 2008ರಲ್ಲಿ, ಬೆಂಗಳೂರು ಭಾರತದಲ್ಲಿ ನಂಬರ್‌ವನ್ ನಗರವಾಗುವ ಮತ್ತು ಅಂತಾರಾಷ್ಟ್ರೀಯವಾಗಿ ಪ್ರಮುಖ ಮಹಾನಗರವಾಗುವ ಸಾಮರ್ಥ್ಯ ಹೊಂದಿದೆ, ಎಂದು ಸರ್ಕಾರವೇ ಹೇಳಿತ್ತು. ಇದನ್ನು ಸಾಧ್ಯವಾಗಿಸಲು, ನಾವು ಹೊಸ ಮಾದರಿಯ ನಗರ ಯೋಜನೆನ್ನು ಅನುಸರಿಸಬೇಕಿದೆ, ಮೂಲ ಸೌಕರ್ಯವನ್ನು ಸುಧಾರಣೆ ಮಾಡಬೇಕಿದೆ, ಸಾಮಾಜಿಕ ಸೌಲಭ್ಯಗಳನ್ನ ಹೆಚ್ಚಿಸಿ, ಉತ್ತಮ ಗುಣಮಟ್ಟದ ಜೀವನಕ್ಕೆ ಮತ್ತಷ್ಟು ಉತ್ತಮ ವಾತವರಣವನ್ನು ಸೃಷ್ಟಿಸಬೇಕಿದೆ. ಮತ್ತೊಂದು ಮಾತಿನಲ್ಲಿ ಹೇಳುವುದಾದರೆ, ನಾವು ಬೆಂಗಳೂರನ್ನು ಮರುಸಂಶೋಧಿಸಬೇಕಿದೆ.

ಸರ್ಕಾರವು ABIDe ಅನ್ನು ರಚಿಸಿದ್ದು, ಶ್ರೀ ಅನಂತಕುಮಾರ್ ಅವರು ಅದರ ಉಪಾಧ್ಯಕ್ಷರಾಗಿದ್ದರೆ ನಾನು ಅದರ ಸಂಚಾಲಕನಾಗುವ ಅವಕಾಶ ಪಡೆದಿದ್ದೆ. ABIDe ಸಾವಿರಾರು ನಾಗರೀಕರು ಮತ್ತು ತಜ್ಞರೊಂದಿಗೆ ಕೆಲಸ ಮಾಡುತ್ತಾ, ಒಂದು ಗಣನೀಯ ವೆಚ್ಚದಲ್ಲಿ 'ಪ್ಲಾನ್ ಬೆಂಗಳೂರು–2020' ಯೋಜನೆಯನ್ನು ಮುಂದಿಟ್ಟಿತ್ತು. ಬೆಂಗಳೂರಿಗೆ ಸಂಬಂಧಿಸದ ಎಲ್ಲ ಸಮಸ್ಯೆಗಳಿಗೆ ಅನುಷ್ಠಾನಕ್ಕೆ ತರಬಹುದಾದ ಪರಿಹಾರಗಳನ್ನು ಒಳಗೊಂಡ ಸಮಗ್ರ ದೃಷ್ಟಿಕೋನವನ್ನು ಈ ಯೋಜನೆಯು ಒಳಗೊಂಡಿತ್ತು. ಕೇವಲ ಸಂಚಾರ ದಟ್ಟಣೆ ದೃಷ್ಟಿಕೋನದಿಂದ

ಮಾತ್ರವಲ್ಲದೆ, ನಗರದ ಜನತೆಯನ್ನು ಬಾಧಿಸುತ್ತಿರುವ ಎಲ್ಲ ಸಮಸ್ಯೆಗಳನ್ನೂ ಇದರಲ್ಲಿ ಗುರುತಿಸಲಾಗಿತ್ತು.

ಈ ಯೋಜನಾ ವರದಿಯನ್ನು ಸರ್ಕಾರ ಅಂಗೀಕರಿಸಿತಾದರೂ, ಈಗಿನ ಸರ್ಕಾರವು ಈ ಶಿಫಾರಸುಗಳನ್ನು ಅನುಷ್ಠಾಗೊಳಿಸುವಲ್ಲಿ ವಿಫಲವಾದವು. ನಾಯಕತ್ವ, ದೂರದೃಷ್ಟಿ ಮತ್ತು ಯೋಜನೆಯ ಕೊರತೆಯಿಂದ ಉಂಟಾದ ಅವ್ಯವಸ್ಥೆಯು ಪ್ರತಿಯೊಬ್ಬರ ಅರಿವಿಗೂ ಬಂದಿದ್ದು, ಅವರ ಆತಂಕಕ್ಕೆ ಕಾರಣವಾಗಿದೆ.

ಹೂಡಿಕೆ ಮತ್ತು ಅಭಿವೃದ್ಧಿಗೆ ಯೋಜನೆ ಮತ್ತು ಯೋಜಿತ ವಿಧಾನವನ್ನು ಅನುಸರಿಸಲು ಇಷ್ಟು ನಿರ್ಲಕ್ಷ್ಯವೇಕೆ? ಪ್ರತಿ ಬಾರಿ ಆಯವ್ಯಯದ ಸಮಯದಲ್ಲೂ ನಾವು ಬೆಂಗಳೂರಿಗೆ ಸಮಾರು 30,000 ಕೋಟಿ ರೂ. ಅಥವಾ ಗಮನ ಸೆಳೆಯುವ ಮೊತ್ತದ ಅನುದಾನದ ಸುದ್ದಿ ನಮ್ಮ ಕಿವಿಗೆ ಬೀಳುತ್ತದೆ. ರಾಜಕಾರಣಿಗಳು/ ಆಡಳಿತಗಾರರು ಹಣವನ್ನು ಖರ್ಚು ಮಾಡಲು ಮತ್ತು ಗುತ್ತಿಗೆ ನೀಡುವ ಬಗ್ಗೆ ಆಸಕ್ತಿ ಹೊಂದಿರುತ್ತಾರಾದರೂ, ಸಾರ್ವಜನಿಕ ಸೇವೆಗಳನ್ನು ಮತ್ತಷ್ಟು ದಕ್ಷವಾಗಿ ಒದಗಿಸಬೇಕೆಂಬ ನೈಜ ದೃಷ್ಟಿಯು ಇಲ್ಲಿ ಮಹತ್ವ ಪಡೆಯುವುದಿಲ್ಲ. ನಗರದ ಪ್ರಗತಿ ಮತ್ತು ಅಭಿವೃದ್ಧಿ ಬಗ್ಗೆ ಪಾರದರ್ಶಕ ಮತ್ತು ಸಾರ್ವಜನಿಕವಾಗಿ ಗುತುತಿಸಲ್ಪಟ್ಟಂತಹ ಯೋಜನೆಗಳ ಅನುಪಸ್ಥಿತಿ ಹಿನ್ನೆಲೆಯಲ್ಲಿ ಬಹುತೇಕ ಯೋಜನೆಗಳು ನಿರಂಕುಶ ರೀತಿಯದಾಗಿದ್ದು, ಬಹುತೇಕ ಯೋಜನೆಗಳು ಗುತ್ತಿಗೆದಾರ ಹಿತಾಸಕ್ತಿಯನ್ನು ಹೊಂದಿವೆ. ನಮ್ಮ ರಾಜಕೀಯ ಭಾಷಣಗಳಲ್ಲಿ 1000 ಕೋಟಿ ಯೋಜನೆಗಳ ಅಬ್ಬರಕ್ಕಿಂತಲೂ ಉತ್ತಮ ಮತ್ತು ಸುಸ್ಥಿರ ಸಾರ್ವಜನಿಕ ಸೇವೆಗಳ ನಿರೀಕ್ಷೆಯ ಆದ್ಯತೆ ಪಡೆಯಬೇಕು. ಕೇವಲ ಮಾಧ್ಯಮ ಮತ್ತು ನಾಗರೀಕರು ಮಾತ್ರ ಈ ಸಂಬಂಧ ಬದಲಾವಣೆಯನ್ನು ತರಲು ಸಾಧ್ಯ.

ಬಿಬಿಎಂಪಿ ಮತ್ತು ಇತರ ಸಂಸ್ಥೆಗಳು ಹಲವು ವರ್ಷಗಳಿಂದ ಗುತ್ತಿಗೆ ನೀಡುತ್ತಿರುವ ಪ್ರಕ್ರಿಯೆ ಬಗ್ಗೆ ಕೆಲವೊಂದು ಸಂಘ–ಸಂಸ್ಥೆಗಳು ಮತ್ತು ಎನ್‌ಜಿಒಗಳು ಕೈಗೊಂಡಿರುವ ವಾರ್ಡ್‌ಗಳ ಅಧ್ಯಯನ ಇನ್ನೇನು ಕೊನೆಯ ಹತಕ್ಕೆ ಬಂದಿದ್ದು, ಅದರಲ್ಲಿ ಬಯಲಾಗರುವ ಕೆಲವೊಂದು ಅಂಕಿ–ಅಂಶಗಳು ಆಘಾತಕಾರಿಯಾಗಿವೆ. ಭಾರಿ ಮೊತ್ತದ ತೆರಿಗೆದಾರರ ಹಣವನ್ನು ಖರ್ಚು ಮೇಲ್ನೋಟಕ್ಕೆ ಮಾಡಲಾಗುತ್ತಿದೆಯಾದರೂ, ಅದರಿಂದ ಯಾವುದೇ ಪ್ರಯೋಜನಗಳು ಕಂಡುಬರುತ್ತಿಲ್ಲ. ಅಥವಾ ದೈನಂದಿನ ಜೀವನದ ಮೇಲೆ ಪರಿಣಾಮ ಬೀರದಂತಹ ವ್ಯರ್ಥ ಯೋಜನೆಗಳಲ್ಲಿ ಈ ಹಣವನ್ನು ತೊಡಗಿಸಲಾಗುತ್ತಿದೆ.

ಒಟ್ಟಾರೆಯಾಗಿ, ಈ ವೈಫಲ್ಯಕ್ಕೆ ಕಾರಣ ನಗರ ಆಡಳಿತ ಎಂದು ನಾನು ಮತ್ತೊಮ್ಮೆ ಹೇಳಬಯಸುತ್ತೇನೆ. ಅದರಲ್ಲೂ ತ್ಯಾಜ್ಯ ನಿರ್ವಹಣೆ ಮತ್ತು ಸಾರ್ವಜನಿಕ ಆರೋಗ್ಯ ಸಮಸ್ಯೆಯು, ನಗರ ಆಡಳಿತದ ವೈಫಲ್ಯವೇ ಆಗಿದೆ. ಇಲ್ಲಿ ರಾಜಕೀಯವೇನೂ ಇಲ್ಲ, ಇದೆಲ್ಲವೂ ವಾಸ್ತವ.

ಹಾಗಾದರೆ, ಮುಂದಿನ ದಾರಿ ಏನು?

ತಕ್ಷಣದ ಸಮಯಕ್ಕೆ ತ್ಯಾಜ್ಯ ನಿರ್ವಹಣೆಯನ್ನು ಸಾರ್ವಜನಿಕ ಆರೋಗ್ಯ ಕುರಿತಾದ ತುರ್ತು ಸಮಸ್ಯೆ ಎಂದು ಪರಿಗಣಿಸಬೇಕು. ಸ್ವಚ್ಛ ನಗರವೆಂದರೆ, ಕೇವಲ ಸೌಂದರ್ಯವೊಂದೇ ಅಲ್ಲ; ಅದನ್ನು ಸಾರ್ವಜನಿಕ ಆರೋಗ್ಯದ ಮತ್ತು ಆರ್ಥಿಕತೆಯ ಚಾಲಕ ಶಕ್ತಿ ಎಂದು ಪರಿಗಣಿಸಬೇಕು. ಬಿಬಿಎಂಪಿ ಆಯುಕ್ತರು ಮತ್ತು ಮೇಯರ್ ಅವರು ಈ ತುರ್ತು ಸಮಸ್ಯೆಯನ್ನು ಪರಿಗಣಿಸಲು ಜೊತೆ ಜೊತೆಯಾಗಿ ಕೆಲಸ ಮಾಡಬೇಕು. ಗುತ್ತಿಗೆದಾರರು ಮತ್ತು ಪೂರೈಕೆದಾರರು ತಾವು ಸುಸ್ಥಿರತೆ ಮತ್ತು ಆರೋಗ್ಯವಂತ ನಗರ ನಿರ್ಮಾಣದಲ್ಲಿ ಪಾಲುದಾರರಾಗಬೇಕೆಂದು ಬಯಸುತ್ತರೋ ಅಥವಾ ತಾವೇ ಸಮಸ್ಯೆಯಾಗಲು ಬಯಸುತ್ತಾರೋ ಎಂಬುದನ್ನು ನಿರ್ಧರಿಸಲು ಇದು ಸಕಾಲ.

ಮತ್ತೊಂದೆಡೆ ಸರ್ಕಾರ ಬಹು ಹಂತದ ನಗರ ಅಭಿವೃದ್ಧಿ ಯೋಜನೆಯನ್ನು ಕೈಗೊಳ್ಳುತ್ತಿದೆಯೇ, ಅದು ಶಾಸನಬದ್ಧವಾಗಿದೆಯೇ ಮತ್ತು ಎಲ್ಲ ಸಂಸ್ಥೆಗಳು ಅದಕ್ಕಾಗಿ ಕೆಲಸ ಮಾಡುತ್ತಿವೆಯೇ ಎಂಬುದನ್ನು ಶ್ರೀ ಅನಂತ ಕುಮಾರ್ ಅವರಂತಹ ಹಿರಿಯ ಸಂಸದರನ್ನು ಒಳಗೊಂಡ ರಾಜಕೀಯ ನಾಯಕತ್ವವು ಖಾತರಿಪಡಿಸಿಕೊಳ್ಳಬೇಕು.

ಇದರ ಜೊತೆಗೆ, ಆಡಳಿತವನ್ನು ಮರು ಸಂಘಟಿತಗೊಳಿಸುವ ಮತ್ತು ಸುಧಾರಣೆಗೊಳಿಸುವ ಅಗತ್ಯವೂ ಇದೆ. ಸಾರ್ವಜನಿಕ ಸೇವೆಯನ್ನು ಒದಗಿಸುವ ಬಿಬಿಎಂಪಿ ಮತ್ತು ಇತರೆ ಎಲ್ಲಾ ಸಂಸ್ಥೆಗಳು ತಮ್ಮ ಯೋಜನೆ ಮತ್ತು ಸೇವೆ ಒದಗಿಸುವ ತಮ್ಮ ನೆರೆಹೊರೆ ಮತ್ತು ವಾರ್ಡ್‌ನ ಹಂತವನ್ನು ಮೀರಿದಂತೆ ನೋಡಿಕೊಳ್ಳಬೇಕು. ಬಿಬಿಎಂಪಿಯು ಪ್ರತಿ ವಾರ್ಡ್/ನೆರೆಹೊರೆಯ ಪ್ರದೇಶಕ್ಕೆ ನಿರ್ದಿಷ್ಟ ತಂಡಗಳನ್ನು ನಿಯೋಜಿಸಬೇಕು ಮತ್ತು ವಾರ್ಡ್/ನೆರೆಹೊರೆಯ ಪ್ರದೇಶಗಳಲ್ಲಿತ್ಯಾಜ್ಯ ವಿಲೇವಾರಿ ಸೇರಿದಂತೆ ಎಲ್ಲ ಬಗೆಯ ಗುತ್ತಿಗೆಗಳ ಪ್ರಕ್ರಿಯೆ ಸಾರ್ವಜನಿಕರಿಗೆ ಪಾರದರ್ಶಕವಾಗಿರುವಂತೆ ನೋಡಿಕೊಳ್ಳಬೇಕು.

ಪ್ರತಿಯೊಂದು ನಿವಾಸಿಗಳ ತಂಡವೂ ಸ್ಥಳೀಯ ಬಿಬಿಎಂಪಿ ಎಂಜಿನಿಯರುಗಳ

ಜೊತೆಗೂಡಿ ತ್ಯಾಜ್ಯ ವಿಂಗಡಣೆ ಮತ್ತು ಸಂಗ್ರಹಕ್ಕೆ ಕಾರ್ಯತಂತ್ರಗಳನ್ನು ರೂಪಿಸಬೇಕು. ಸ್ಥಳೀಯ ಜನಜೀನವಕ್ಕೆ ಸಂಬಂಧಿಸಿದ ಪ್ರತಿಯೊಂದು ಮುಖ್ಯ ಸುಧಾರಣೆಯಲ್ಲೂ ಸ್ಥಳೀಯ ಜನತೆಯ ಪಾಲ್ಗೊಳ್ಳುವಿಕೆಗೆ ಗಮನ ಹರಿಸಬೇಕು. ಪ್ರತಿಯೊಂಧು ಆಧುನಿಕ ಯಶಸ್ವಿ ನಗರದಲ್ಲೂ, ಅಲ್ಲಿನ ಸ್ಥಳೀಯ ನಿವಾಸಿಗಳು ತಮ್ಮ ಮನೆ, ಕೆಲಸದ ಸ್ಥಳಗಳ ಸುತ್ತಲಿನ ಅಭಿವೃದ್ಧಿಯ ದಿಶೆಗೆ ಸಂಬಂಧಿಸಿದಂತೆ ಅತ್ಯಂತ ಪ್ರಬಲ ಧ್ವನಿಯನ್ನು ಹೊಂದಿದ್ದಾರೆ. ಸೂಕ್ತ ರೀತಿಯ ಯೋಜನೆ ಮತ್ತು ಅನುಷ್ಠಾನದಿಂದ ಆಡಳಿತ ಮತ್ತು ಸರ್ಕಾರದಲ್ಲಿ ಸಾರ್ವಜನಿಕರ ವಿಶ್ವಾಸ ಕ್ರಮೇಣ ಹೆಚ್ಚುತ್ತದೆ. ನಗರದ ಆಡಳಿತದಲ್ಲಿ ಜನರಿಗೆ ಪಾಲ್ಗೊಳ್ಳುವಿಕೆ ಅವಕಾಶ ಮತ್ತು ಅಧಿಕಾರವನ್ನು ನೀಡುವ ಬೆಂಗಳೂರು ಮಹಾನಗರ ಪ್ರದೇಶ ಆಡಳಿತ ವಿಧೇಯಕ, ದುರದೃಷ್ಟವಶಾತ್ ಇನ್ನೂ ಸರ್ಕಾರದ ಅನುಮೋದನೆಗಾಗಿ ಕಾಯುತ್ತಿದೆ. ಎಲ್ಲಾ ವಾರ್ಡ್‌ಗಳಲ್ಲೂ ಸರ್ಕಾರವು ವಾರ್ಡ್‌ಸಮಿತಿ ರಚಿಸುವಂತಾಗಲು ಸುದೀರ್ಘ ಹೋರಾಟ ಮತ್ತು ವಾರ್ಡ್‌ಸಮಿತಿ ರಚಿಸುವಂತೆ ನಿರ್ದೇಶನ ನೀಡುವ ಮೂಲಕ ಕರ್ನಾಟಕ ಉಚ್ಚನ್ಯಾಯಲಯ ಮಧ್ಯಪ್ರವೇಶವು ಅಗತ್ಯವಾಯಿತು. ABIDe ಸಹ 2010ರಲ್ಲಿ ಇಂತಹ ಸಮಿತಿಗಳ ರಚನೆ ಬಗ್ಗೆ ಶಿಫಾರಸು ಮಾಡಿತ್ತು. ವಾರ್ಡ್‌ಗಳ ವಿವಿಧ ಭಾಗಗಳಿಂದ ನಿವಾಸಿಗಳ ಮಟ್ಟದಲ್ಲಿ ಪ್ರಾತಿನಿಧ್ಯವನ್ನು ಬಿಬಿಎಂಪಿ ಆಯುಕ್ತರು ಕಾಯ್ದುಕೊಳ್ಳುತ್ತಾರೆ ಎಂದು ನಾನು ವಿಶ್ವಾಸ ಹೊಂದಿದ್ದೇನೆ. ಹೊಸ ವಾರ್ಡ್ ಸಮಿತಿಗಳು ಬಿಬಿಎಂಪಿ ಮತ್ತು ಇತರ ಸಂಸ್ಥೆಗಳೊಂದಿಗೆ ನಾಗರೀಕ ಮೇಲ್ವಿಚಾರಣೆ ಮತ್ತು ಸಹಭಾಗಿತ್ವವನ್ನು ಅನುಮತಿಸುತ್ತದೆ.

ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದ ಪರಿಹಾರಗಳ ಕುರಿತು ನಾನು ಏನಾದರು ಹೇಳುವುದರಿಂದ ದೂರ ಉಳಿಯುತ್ತೇನೆ. ಏಕೆಂದರೆ ಈ ಬಗ್ಗೆ ನಂತರದಲ್ಲಿ ಮಾತನಾಡಲು ಇನ್ನೂ ಹೆಚ್ಚು ಅನುಭವಿಗಳು ಇಲ್ಲಿದ್ದಾರೆ. ಆದರೆ ಯೋಜನೆ ಮತ್ತು ಆಡಳಿತದ ಕೊರತೆಯ ದೊಡ್ಡ ಸಮಸ್ಯೆಗಳತ್ತ ಗಮನ ಸೆಳೆಯಲು ನಾನು ಪ್ರಯತ್ನಿಸುತ್ತೇನೆ.

ಇದು ತುಂಬ ಸಮಸ್ಯಾತ್ಮಕವಾದುದು. ಇದರ ಅನೇಕ ದೀರ್ಘಕಾಲೀನ ಪರಿಣಾಮಗಳು ಇಲ್ಲಿವೆ – ಆರೋಗ್ಯ, ನಮ್ಮ ನಿವಾಸಿಗಳ ನೈರ್ಮಲ್ಯ, ಜೀವನ ಮಟ್ಟಗಳು, ಹೂಡಿಕೆದಾರ ಉತ್ಸಾಹರಾಹಿತ್ಯ, ಮತ್ತು ಆರ್ಥಿಕ ಚಟುವಟಿಕೆ ಉತ್ಸಾಹರಾಹಿತ್ಯ ಇತ್ಯಾದಿ.

ಸರ್ಕಾರ, ನಗರ ಶಾಸಕರು ಮತ್ತು ನಗರ ಅಧಿಕಾರಿಗಳು ನಮ್ಮ ನಗರ ಮತ್ತು

ನಮ್ಮ ಜನರನ್ನು ಹತಾಶರನ್ನಾಗಿಸುತ್ತಿದ್ದಾರೆಂದು ಅವರು ಅರಿತುಕೊಳ್ಳಬೇಕು. ನಮ್ಮ ಹೆಮ್ಮೆಯ ನಗರ ಮತ್ತು ಶ್ರಮದಾಯಕ, ತೆರಿಗೆದಾರರ ನಿವಾಸಿಗಳ ನಿರೀಕ್ಷೆಗಳಿಗೆ ತಕ್ಕಂತೆ ಬದುಕಲು ಇನ್ನೂ ಅವಕಾಶವಿದೆ. ನಮ್ಮ ನಗರ ನಾಶವಾದಾಗ ರಾಜಕೀಯ ನಾಯಕತ್ವ ಮತ್ತು ಆಡಳಿತಶಾಹಿಗಳು ಪ್ರಶ್ನಾತೀತರಾಗಿ ಉಳಿಯಲು ಸಾಧ್ಯವಿಲ್ಲವೆಂದು ಅರಿತುಕೊಳ್ಳಬೇಕು, ಯಾವುದೇ ಅನುಮಾನವಿಲ್ಲದೆ ಅವರು ಮುಂದಿನ ಪರಿಣಾಮಗಳಿಗೆ ಬೆಲೆ ತೆರಲೇಬೇಕು. ಸಮಯ ಬದಲಾಗುತ್ತಿದೆ, ಮತ್ತು ಸಾರ್ವಜನಿಕ ಅಧಿಕಾರಿಗಳು, ಮಂತ್ರಿಗಳ ವಿಚಾರಣೆ ನಡೆಸುವ ಹಕ್ಕನ್ನು ನಾಗರೀಕರಿಗೆ ನೀಡುವ ಸುಪ್ರೀಂ ಕೋರ್ಟ್ ಆದೇಶದಂತೆ, ನಮ್ಮ ಪ್ರಜಾಪ್ರಭುತ್ವದ ಅಧಿಕಾರವು ನಾಗರೀಕರ ಕೈಗೆ ಮರಳುತ್ತಿದೆ. ನಮ್ಮ ನಗರದ ಜನರ ಸೇವೆ ಮಾಡಬೇಕೇ ಅಥವಾ ಶೋಷಣೆ ಮಾಡಬೇಕೇ ಎಂಬುದನ್ನು ರಾಜಕೀಯ ಮತ್ತು ಆಡಳಿತವರ್ಗ ನಿರ್ಧರಿಸಬೇಕು.

ಮಾಧ್ಯಮ ಮತ್ತು ನಾಗರೀಕರು ಈ ಬಿಕ್ಕಟ್ಟನ್ನು ಪರಿಹರಿಸುವುದಕ್ಕಷ್ಟೇ ಚರ್ಚೆಯನ್ನು ಸೀಮಿತಗೊಳಿಸದೆ, ನಮ್ಮ ನಗರದ ಬಗ್ಗೆ ರಾಜಕೀಯ ನಾಯಕತ್ವ ಸಮಗ್ರ ದೀರ್ಘಾವಧಿಯ ದೃಷ್ಟಿಯ ಕಡೆಗೆ ಹರಿಸುವಂತೆ ಮತ್ತು ನಗರ ಹಾಗೂ ನಗರದ ಜನತೆಯ ಕುರಿತಾಗಿ ತಮ್ಮ ಜವಾಬ್ದಾರಿ ನಿರ್ವಹಿಸುವಂತೆ ಮಾಧ್ಯಮಗಳು ದೊಡ್ಡ ಪಾತ್ರ ವಹಿಸಬೇಕಿದೆ.

ಪ್ರಮುಖ ವಿಷಯದ ಮೇಲೆ ಶ್ರೇಷ್ಠವಾದ ಚಿಂತಕರನ್ನು ಒಟ್ಟಿಗೆ ಸೇರಿಸಿದ್ದಕ್ಕಾಗಿ ನಮ್ಮ ಬೆಂಗಳೂರು ಪ್ರತಿಷ್ಠಾನ ಮತ್ತು ಅದಮ್ಯ ಚೇತನವನ್ನು ಅಭಿನಂದಿಸುತ್ತೇನೆ. ಬೆಂಗಳೂರಿನ ಹಿರಿಯ ಸಂಸದ ಶ್ರೀ ಅನಂತ್ ಕುಮಾರ್, ರಾಜಕೀಯ ಮುಖಂಡರು, ತಜ್ಞರು, ಕೆಲ ಸಮರ್ಪಿತ ವ್ಯಕ್ತಿಗಳು, ಸ್ವಯಂ ಸೇವಾ ಸಂಸ್ಥೆಗಳು, ಮತ್ತು ಬಿಬಿಎಂಪಿ ಕಮಿಷನರ್ ಭಾಗವಹಿಸಿದ ವಿಚಾರಗೋಷ್ಠಿಯು ಯೋಜನೆಗಳು ಮತ್ತು ಪರಿಹಾರಗಳನ್ನು ಒದಗಿಸುತ್ತದೆ ನಮ್ಮ ಹೆಮ್ಮೆಯ ಬೆಂಗಳೂರಿನ ಪುನರ್ನಿರ್ಮಾಣಕ್ಕೆ ಅವಕಾಶ ಕಲ್ಪಿಸುತ್ತದೆ ಎಂದು ನಾನು ನೈಜವಾಗಿ ನಂಬುತ್ತೇನೆ.

ನಾಳೆಯ ಸಂಕ್ರಾಂತಿಯ ಹಿನ್ನೆಲೆಯಲ್ಲಿ ನಿಮ್ಮ ಮತ್ತು ನಿಮ್ಮ ಕುಟುಂಬದವರಿಗೆ ನಾನು ಶುಭಾಶಯ ಕೋರಬಯಸುತ್ತೇನೆ.

ತಮ್ಮೆಲ್ಲರಿಗೂ ಸಂಕ್ರಾಂತಿ ಹಬ್ಬದ ಶುಭಾಶಯಗಳು.

ಜೈಹಿಂದ್

ಜೈ ಕರ್ನಾಟಕ

# 6

# ಮಾಫಿಯಾ ಮತ್ತು ಸ್ವಜನ ಹಿತಾಸಕ್ತಿಗಳಿಂದ ನಗರವನ್ನು ಪುನಃ ಪಡೆದುಕೊಳ್ಳಲು ಅಭಿಯಾನ

**ಎನ್‌ಬಿಎಫ್‌ಮತ್ತು ಬ್ರೇಸ್, ಬೆಂಗಳೂರು ಫೆಬ್ರವರಿ 23, 2014**

ಸನ್ಮಾನ್ಯ ಗಾಂಧಿವಾದಿ ಶ್ರೀಯುತ ದೊರೆಸ್ವಾಮಿ, ಪ್ರೊ. ಸಿದ್ದಲಿಂಗಯ್ಯ, ಬೆಂಗಳೂರು ನಿವಾಸಿಗಳ ಸಂಘಗಳ ಒಕ್ಕೂಟದ (ಬ್ರೇಸ್) ಅಧ್ಯಕ್ಷರಾದ ಮಹಾಲಕ್ಷ್ಮಿ ಪಾರ್ಥಸಾರಥಿ, ಬ್ರೇಸ್ ಕಾರ್ಯದರ್ಶಿಗಳಾದ ಎನ್.ಎಸ್. ಮುಕುಂದಾ ಅವರೇ, ವಿವಿಧ ಕ್ಷೇಮಾಭಿವೃದ್ಧಿ ಸಂಘಟನೆಗಳ ಪದಾಧಿಕಾರಿಗಳೇ, ಮಾನ್ಯರೇ ಮತ್ತು ಬೆಂಗಳೂರಿನ ಹೆಮ್ಮೆಯ ನಿವಾಸಿಗಳೇ, ಎಲ್ಲರಿಗೂ ಶುಭೋಧಯ...

ನಮ್ಮ ನಗರವನ್ನು, ಅದರ ಅರ್ಹ ಗತ ವೈಭವಕ್ಕೆ ಕೊಂಡೊಯ್ಯಲು ಹೋರಾಡುವ ಇಚ್ಛೆಯೊಂದಿಗೆ ಕ್ರಿಯಾಶೀಲವಾಗಿ ಕೈ ಜೋಡಿಸಿರುವ ಜನರೊಂದಿಗೆ ಇರುವುದು ನನಗೆ ಇಂದು ಅತೀವ ಸಂತಸ ನೀಡುತ್ತಿದೆ.

ನಮ್ಮ ನಗರವು ಇತಿಹಾಸದ ಅಂತ್ಯಂತ ಗಂಭೀರ ಕಾಲಘಟ್ಟದಲ್ಲಿದೆ. ಅಭಿವೃದ್ಧಿಯ ವಿಚಾರದಲ್ಲಿ ನಾವು ನಾವು ಕೆಲವು ಸರಿಯಾದ ನಿರ್ಧಾರಗಳನ್ನು ಮಾಡಬೇಕಾಗಿದೆ. ಇಲ್ಲದವಾದರೆ, ನಾವು ಸೂಚ್ಯವಾಗಿ ಈಗಾಗಲೇ ಕಾಣುತ್ತಿರುವ ಮತ್ತು ಕಳೆದ

ಹಲವು ದಶಕಗಳಿಂದ ನಮ್ಮ ನಗರದ ಅಭಿವೃದ್ಧಿಯ ವೇಳೆ ಕಂಡಂತಹ ಅವ್ಯವಸ್ಥೆ, ಅರಾಜಕತೆ ಮತ್ತು ಭ್ರಷ್ಟಾಚಾರದ ಕೂಪಕ್ಕೆ ಬೀಳುತ್ತೇವೆ.

ರಾಜಕಾರಣಿಗಳು, ಅಧಿಕಾರಿಗಳು ಮತ್ತು ಉದ್ಯಮಿಗಳು ಒಂದು ವಿಧದಲ್ಲಿ ನಗರದ ಆಡಳಿತ ಮತ್ತು ನೀತಿ ನಿರೂಪಣೆಗೆ ಮುಂದಾಗಿದ್ದಾರೆ. ನಾನು ಇಂದು ತುಂಬಾ ಹೇಳಲು ಹೋಗುವುದಿಲ್ಲ. ಕೆಲವೊಂದು ಅತ್ಯಂತ ಸ್ಫೂರ್ತಿದಾಯಕ ಕಥೆಗಳನ್ನು ಕೇಳಿದ್ದೇನೆ. ಆದರೆ, ನೀವೆಲ್ಲರೂ ಅರ್ಥಮಾಡಿಕೊಳ್ಳಲೇಬೇಕೆಂದು ನಾನು ಅಂದುಕೊಳ್ಳುತ್ತಿರುವ ಒಂದು ಮೂಲಭೂತ ವಿಷಯದೊಂದಿಗೆ ಆರಂಭಿಸೋಣ. ನನ್ನ ಅತ್ಯಂತ ಆದರಣೀಯರಾದ ಸಿದ್ದಲಿಂಗಯ್ಯ ಅವರು ನಗರಗಳು ನಾಗರೀಕರಿಗಾಗಿ ಇರುವಂಥವು ಎಂದು ಹೇಳಿದ್ದಾರೆ. ಇದು ಮೂಲಭೂತ ನೈಜತ್ವ, ನಾವೆಲ್ಲರೂ ನಂಬಿರುವಂತಹ ಒಂದು ಮೂಲಭೂತ ಸತ್ಯ. ಎಲ್ಲಾ ಆಧುನಿಕ ನಗರಗಳು, ಪ್ರಪಂಚದಲ್ಲಿರುವ ಎಲ್ಲಾ ನವೀನ ನಗರಗಳು ಈ ಮೂಲಭೂತ ತತ್ವದ ಆಧಾರದ ಮೇಲೆ ನಿಂತಿವೆ. ಆದ್ದರಿಂದ ನಗರ ಸರ್ಕಾರಗಳು ಆ ನಗರಗಳಲ್ಲಿ ವಾಸಿಸುವವರ ಆಕಾಂಕ್ಷೆಗಳಿಗಾಗಿ ಕೆಲಸ ಮಾಡುವ ಉದ್ದೇಶವನ್ನು ಹೊಂದಿರಬೇಕು. ಆದರೆ, ಜನರು ಈ ಮೂಲಭೂತ ತತ್ವವನ್ನು ಮರೆಯುತ್ತಿದ್ದಾರೆ. ನೀವು ದೃಷ್ಟಿಕೋನಗಳು, ಯೋಜನೆಗಳು, ನೀತಿಗಳನ್ನು ಹೊಂದಬಹುದು, ಆದರೆ ಅಂತ್ಯದಲ್ಲಿ, ನಾಗರೀಕರು, ನೆರೆಹೊರೆಯವರು, ಸಮುದಾಯವನ್ನು ಸಂತೋಷಪಡಿಸದಿದ್ದರೆ, ಅದು ತಪ್ಪು. ಬಹಳ ಕಾಲದಿಂದ ಆ ಮೂಲಭೂತ ಸತ್ಯ ಮರೆತುಹೋಗಿದೆ ಮತ್ತು ಇದನ್ನು ಮರೆಯಲು ಜನರಿಗೆ ಅವಕಾಶ ನೀಡಿ ನಾವು ಮೌನವಾಗಿ ಕುಳಿತುಕೊಂಡಿದ್ದೇವೆ.

ಇಂದು ಅತ್ಯಂತ ಮುಖ್ಯವಾಗಿ ನಾನು ಹೇಳಬಯಸುವುದೇನೆಂದರೆ, ಈ ನಗರವನ್ನು ಬಡಿದೆಬ್ಬಿಸಲು ಹಲವು ವರ್ಷಗಳಿಂದ ಯತ್ನಿಸುತ್ತಿರುವ ಒಬ್ಬ ಸಂಸದನಾಗಿ ನಾನು ಹೇಳುವುದೇನೆಂದರೆ, ಮೊದಲ ಐದು ವರ್ಷಗಳ ಕಾಲ ಹಲವು ಜನರು ನನ್ನ ಬಳಿಗೆ ಬಂದು ಮನವಿಗಳನ್ನು ಸಲ್ಲಿಸಿದ್ದಾರೆ. ಅದೇ ನಮ್ಮ ಸಮಸ್ಯೆ. ಅವರು ಅದನ್ನು ನನಗೆ ಕೊಡುತ್ತಿದ್ದರು ಮತ್ತು ಹಿಂದಿನ ಮುಖ್ಯಮಂತ್ರಿ, ಹೊಸ ಮುಖ್ಯಮಂತ್ರಿ, ಬೆಂಗಳೂರು ಜಿಲ್ಲಾ ಮಂತ್ರಿ, ಬಿಬಿಎಂಪಿ ಕಮಿಷನರ್ ಇವರೆಲ್ಲರ ಬಳಿಗೂ ನಾನು ಹೋಗುತ್ತಿದ್ದೆ. ಏಕೆಂದರೆ ನನ್ನ ಮೇಜಿನ ಮೇಲೆ ನೂರಾರು ಸಮಸ್ಯೆಗಳನ್ನು ಹರವಿಕೊಂಡಿದ್ದ ನನಗೆ ಇದು ಮತ್ತೊಂದು ಸಮಸ್ಯೆ ಎನಿಸಿತ್ತು. ಆದರೆ ನನಗೆ ಮನವಿಯನ್ನು ಸಲ್ಲಿಸಿದವರು ಮತ್ತೆ ಮುಂದೇನಾಯಿತು ಎಂದು ನನ್ನ ಬಳಿ ವಿಚಾರಿಸಲಿಲ್ಲ. ಆದರೆ, ಇದೀಗ ಈ ಮೂಲಭೂತ ಬದಲಾವಣೆಗೆ ನಾವು

ಸಾಕ್ಷಿಯಾಗುತ್ತಿದ್ದೇವೆ. ನಾಗರೀಕರೇ ಸಮಸ್ಯೆಗಳನ್ನು ಬಗೆಹರಿಸಬೇಕಾಗಿದೆ. ನನ್ನಂತಹ ವ್ಯಕ್ತಿಗಳು ಸಮಸ್ಯೆಯನ್ನು ಪರಿಹರಿಸಲು ನಿಮಗೆ ಸಹಾಯ ಮಾಡಬಹುದು. ಸಮಸ್ಯೆಯನ್ನು ಪರಿಹರಿಸುವಲ್ಲಿ ನಾವು ಪಾಲುದಾರರಾಗಬಹುದು. ಅದಕ್ಕಾಗಿಯೇ ಸಿದ್ದಲಿಂಗಯ್ಯ ಅವರು ಹೇಳಿದಾಗ, ನಾವು ಸಮಸ್ಯೆಯನ್ನು ಮರೆಯಲು ಸಾಧ್ಯವಿಲ್ಲ. ನಾವು ಮನೆಯಲ್ಲಿ ಕುಳಿತು ಟಿವಿ ವೀಕ್ಷಿಸುತ್ತಿರುವಾಗ ನೀವು ಪ್ರತಿಭಟಿಸಿ ಹೇಳಲು ಸಾಧ್ಯವಿಲ್ಲ. ಇದು ಕೆಲಸ ಮಾಡುವುದಿಲ್ಲ. ನಮ್ಮ ನಗರವು ಅಪಾಯದಲ್ಲಿದೆ ಎಂದು ನಾವು ತಿಳಿದುಕೊಳ್ಳಬೇಕು. ನಾವು ಅದನ್ನು ಮರಳಿ ಪಡೆಯಲು ಮುಂದಾಗಿದ್ದೇವೆ ಎಂದರೆ, ನಾವೆಲ್ಲರೂ ಅದರಲ್ಲಿ ಪಾತ್ರ ವಹಿಸಬೇಕಾಗಿದೆ. ಇದು ಗುತ್ತಿಗೆಗೆ ಮಾದರಿಯಲ್ಲ. ವೇದಿಕೆ ಮೇಲಿರುವ ಮೂರು ಜನರು ಅಥವಾ ಮೂರು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಟನೆಗಳಿಗೆ ಇದನ್ನು ಗುತ್ತಿಗೆಗೆ ನೀಡಲು ಸಾಧ್ಯವಿಲ್ಲ. ಇದು ಆರ್‌ಡಬ್ಲ್ಯೂಎಗಳು, ರಾಜಕೀಯ ನಾಯಕರು, ಬುದ್ಧಿಜೀವಿಗಳು ಮತ್ತು ಮಾಧ್ಯಮಗಳ ನಡುವಿನ ಪಾಲುದಾರಿಕೆಯಾಗಿರಬೇಕು. ಈ ಹೋರಾಟದಲ್ಲಿ ಅತ್ಯಂತ ಪ್ರಧಾನ ಪಾಲುದಾರರೆಂದರೆ, ನಿವಾಸಿಗಳು, ನಿವಾಸಿ ಕ್ಷೇಮಾಭಿವೃದ್ಧಿ ಸಂಘಗಳು, ಏಕೆಂದರೆ ಅವರ ಹಕ್ಕನ್ನು ಪಟ್ಟಭದ್ರ ಹಿತಾಸಕ್ತಿಗಳು ಕಸಿದುಕೊಂಡಿದ್ದಾರೆ. ನಾವು ನಿಮ್ಮ ಪರವಾಗಿ ಪವರ್ ಆಫ್ ಅಟಾರ್ನಿ ಹೊಂದಿರುವವರಾಗಿದ್ದೇವೆ. ನೀವು ನಮ್ಮೊಂದಿಗೆ ಯುದ್ಧದಲ್ಲಿದ್ದರೆ, ನಾವು ನಿಮಗಾಗಿ ಯುದ್ಧದಲ್ಲಿ ಹೋರಾಡಬಹುದು. ಹಾಗಾಗಿ ಅತ್ಯಂತ ಮುಖ್ಯವಾದ ವಿಷಯವೆಂದರೆ ಇದು.

ಈ ಯುದ್ಧದಲ್ಲಿ ಹೋರಾಡಬಹುದು. ಇದಕ್ಕೆ ಈ ಜನರೇ ಸಾಕ್ಷಿ ಎಂದು ನಾನು ಹೇಳಬಲ್ಲೆ. ವೆಂಕಟ ಸುಬ್ಬರಾವ್ ಅವರು, ಮತ್ತು ನಿತಿನ್, ರವೀಂದ್ರನಾಥ್ ಮತ್ತು ರಾಧಾಕೃಷ್ಣ ಅವರು ನಿಮಗೆ ಇಂತಹ ಕಥೆಗಳನ್ನು ಹೇಳಬಲ್ಲರು. ನಾವು ಮೇಲುಗೈ ಸಾಧಿಸಬಹುದು ಮತ್ತು ಈ ಸ್ವಜನ ಹಿತಾಸಕ್ತಿಗಳ ವಿರುದ್ಧ ಹೋರಾಡಿ ಅವುಗಳನ್ನು ಸೋಲಿಸುವುದು ಕಷ್ಟಸಾಧ್ಯವಲ್ಲ ಎಂಬುದು ಸಾಬೀತಾಗಿದೆ. ನಾವು ಅವರ ವಿರದ್ಧ ಹೋರಾಡಲು ನಿರ್ಧರಿಸಿದರೆ ಸೋಲಿಸುವುದು ಸುಲಭ. ನಾನು ಈ ಕುರಿತು ತುಂಬಾ ಹೆಚ್ಚಾಗಿ ಏನೂ ಹೇಳುವುದಿಲ್ಲ, ಆದರೆ, ಒಂದಂತೂ ನಿಜ ಇದು ಸಣ್ಣ ವಿಷಯವಲ್ಲ. ನಾವು ನಮ್ಮ ನಗರವನ್ನು ಮರುಪಡೆದುಕೊಳ್ಳಲು ಬಯಸಿದರೆ, ಈಗ ಚುನಾವಣಾ ಸಮಯವಾಗಿದೆ, ಆದ್ದರಿಂದ ಜನರು 'ಇದು ನನ್ನ ದೃಷ್ಟಿ, ಅದು ನನ್ನ ದೃಷ್ಟಿ' ಎಂದು ಹೇಳುತ್ತಾರೆ. ಹೀಗಾಗಿ ಅನೇಕ "ದೃಷ್ಟಿಕೋನಗಳು" ಈಗ ಹೊರಹೊಮ್ಮುತ್ತವೆ. ಆದರೆ ನಾವು ಒಂದು ವಿಷಯ ಹೇಳಬೇಕು – "ದೃಷ್ಟಿಕೋನಗಳು" ಒಳ್ಳೆಯವೇ, ಆದರೆ ನಮಗೆ "ಒಂದು ಕಲ್ಪನೆ" ಬೇಕು. ಮೂಲಭೂತ ಯೋಚನೆಯೆಂದರೆ, ಸರ್ಕಾರಗಳು

ನಾಗರೀಕರಿಗೆ ಸಂಬಂಧಿಸಿದವಾಗಿರಬೇಕು. ನಾಗರೀಕರು ಪಾಲ್ಗೊಳ್ಳಬೇಕು, ಆದರೆ ಕೇವಲ ಬಾಯಿ ಮಾತಿನ ಮಾತಾಗಬಾರದು, ಸಭೆಯನ್ನೆ ಸೇರದ ವಾರ್ಡ್ ಸಮಿತಿಯಲ್ಲಿ ಮಾತ್ರವಾಗಿರಬಾರದು. ಯಾವುದೇ ಅನುಮಾನವಿಲ್ಲದೆ, ಆತನ ಅಥವಾ ಆಕೆಯ ನೆರೆಹೊರೆಯ ಅಭಿವೃದ್ಧಿ ಯೋಜನೆಯಲ್ಲಿ ಪಾಲ್ಗೊಳ್ಳಬೇಕು. ಕಾರ್ಪೊರೇಟರ್, ಶಾಸಕ ಅಥವಾ ಸಂಸದರು ಅಲ್ಲಿನ ಸ್ಥಳೀಯ ನಿವಾಸಿಗಳ ದೃಷ್ಟಿಕೋನವನ್ನು ಜಾರಿಗೊಳಿಸಬೇಕೆ ಹೊರತು, ಇದಕ್ಕೆ ತದ್ವಿರುದ್ಧವಾಗಬಾರದು. ನಾವು ದೆಹಲಿ, ಲಂಡನ್, ನ್ಯೂಯಾರ್ಕ್ ಸಿಂಗಪುರದ ದೃಷ್ಟಿಕೋನಗಳ ಬಗ್ಗೆ ಕೇಳಿ ತಿಳಿಯಬೇಕು. ನಾವು ಜಾರಿಗೊಳಿಸುವ ಯೋಜನೆಗಳು ನಮ್ಮ ಮಾಹಿತಿಯುಕ್ತ ಚಿಂತನೆಯಿಂದ ಹೊರಹೊಮ್ಮಿದಂತಾಗಿರಬೇಕೆಂದು ನಾವು ಬಯಸುತ್ತೇವೆ. ನಾನು ಮೊದಲೇ ಹೇಳಿದಂತೆ, ಇದು ವಿಕೇಂದ್ರೀಕರಣವಲ್ಲ ವಿಕಸದ ಯೋಜನೆಗಳು ಸರ್ಕಾರದಿಂದ ನಾಗರೀಕರಿಗೆ ವಿಕಸನಗೊಳ್ಳಬೇಕು ಮತ್ತು ಇತರ ಮಾರ್ಗಗಳಿಲ್ಲ. ಇಂದು ನಡೆಯುತ್ತಿರುವ ಮೂಲಭೂತ ಬದಲಾವಣೆಗಳಾಗಿದ್ದು, ಆರ್‌ಡಬ್ಲ್ಯೂಎಗಳಿಂದ ರು ಜುವಾತುಗೊಂಡಿರುವುದೇನೆಂದರೆ, ನಾವು ಬಿಬಿಎಂಪಿಯೇ ನಮ್ಮ ಬಳಿಗೆ ಬರುವಂತೆ ಮಾಡುತ್ತಿದ್ದೇವೆ ಮತ್ತು ನಿಮ್ಮ ದೃಷ್ಟಿಕೋನವನ್ನು ನಮಗೆ ತಿಳಿಸಿ. ನಮ್ಮ ಹಣಕಾಸಿನ ಸಂಪನ್ಮೂಲಗಳನ್ನು ಹೋಲಿಸಿ ನೋಡೋಣ. ಅದಕ್ಕಾಗಿಯೇ, ನಾವು ಹೆಚ್ಚು ರಸ್ತೆ ಸಾಮರ್ಥ್ಯವನ್ನು ಬಯಸುತ್ತಿದ್ದೇವೆಂದು ಹೇಳುವ ಮೂಲಭೂತ ವಿಷಯವೆಂದರೆ, ರಸ್ತೆಯ ವಿಸ್ತರಣೆಯನ್ನು ನಾವು ಬಯಸುವುದಿಲ್ಲ, ಅಂಡರ್ ಪಾಸ್‌ಗಳನ್ನು ನಾವು ಬಯಸುವುದಿಲ್ಲ, ಒಳ ರಸ್ತೆಗಳಲ್ಲಿ ಹೆಚ್ಚಿನ ರಸ್ತೆ ಸಾಮರ್ಥ್ಯ ಬಯಸುತ್ತಿಲ್ಲ, ನಾವು ಎತ್ತರಿಸಿದ ರಸ್ತೆಗಳನ್ನು ಹೊಂದಬೇಕು.

ನಾನು ಇದನ್ನು ನೋಡಿದ ಬಳಿಕ ನನ್ನಲ್ಲಿ ಹೆಚ್ಚು ಆಶಾವಾದ ಬೆಳೆದಿದೆ. ನಾನು ಇದಕ್ಕಾಗಿ ನಿಮಗೆ ಅಭಿನಂದಿಸುತ್ತೇನೆ. ಇಂದು, ರಾಜಕೀಯದಲ್ಲಿ 7 ವರ್ಷದ ನಂತರ, ಈ ಯುದ್ಧದಲ್ಲಿ ಹೋರಾಡಿ ಗೆಲ್ಲಬಹುದೆಂದು ನನಗೆ ಅನಿಸುತ್ತಿದೆ. ದೊರೈಸ್ವಾಮಿ ಅವರು ಮತ್ತು ಸಿದ್ದಲಿಂಗಯ್ಯ ರವರ ಉಪಸ್ಥಿತಿಗಾಗಿ ನಾನು ಬ್ರೇಸ್ ಮತ್ತು ಎನ್‌ಬಿಎಫ್ ಅನ್ನು ಅಭಿನಂದಿಸುತ್ತೇನೆ. ಈ ಚಳುವಳಿಗಾಗಿ ಮಾರ್ಗದರ್ಶನಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ನಾನು ಏನು ಮಾಡುತ್ತಿದ್ದೇನೋ ಅದನ್ನು ಮುಂದುವರಿಸುತ್ತೇನೆಂದು ಸಂಕಲ್ಪಿಸುತ್ತೇನೆ. ನಾನು ಕಲ್ಲಿನಂತೆ ನಿಮಗೆ ಬೆಂಬಲವಾಗಿ ನಿಲ್ಲುತ್ತೇನೆ. ರಾಜಕಾರಣಿಗಳು ಈ ಬಗ್ಗೆ ಅಸಮಾಧಾನ ಹೊಂದಿದ್ದಾರೆ ಎಂಬುದಕ್ಕೆ ಅವರು ನನ್ನನ್ನೂ ಸಹ ಟಾರ್ಗೆಟ್ ಮಾಡುತ್ತಿರುವುದೇ ರುಜುವಾತು.

ನನಗೆ ಇದರಲ್ಲಿ ಮುಖಸ್ತುತಿ ಕಂಡುಬಂದಿದೆ. ಜನರು ಸಂಸತ್ತಿನಲ್ಲಿ ನನ್ನ ಹೆಸರನ್ನು ಕೂಗುವಾಗ, ನಾನು ಕೆಲ ರಾಜಕಾರಣಿಗಳ ಗಮನವನ್ನು ಸೆಳೆಯುತ್ತಿದ್ದೇನೆ ಎಂದರ್ಥ. ನನ್ನ ಪಾಲಿಗೆ ಅದೇ ಪ್ರಶಸ್ತಿ– ಗೌರವ.

ನನ್ನ ಉಪಸ್ಥಿತಿಗೆ ಇಲ್ಲಿ ಅವಕಾಶ ಕಲ್ಪಿಸಿದ್ದಕ್ಕಾಗಿ ತುಂಬಾ ಧನ್ಯವಾದಗಳು.

# 7

# ಕಾರ್ಲ್‌ಟನ್ ನೆನಪಿನ ಸುರುಳಿಯಾಚೆ – ಸಾರ್ವಜನಿಕ ಸುರಕ್ಷತೆಗಾಗಿ ಸರ್ಕಾರಗಳನ್ನು ಹೊಣೆಯಾಗಿಸುವುದು

| | |
|---|---|
| ಬೆಂಗಳೂರು | 23, ಫೆಬ್ರವರಿ 2014 |

ಇಂದಿಗೆ, (ಫೆಬ್ರವರಿ 23ಕ್ಕೆ), ಕಾರ್ಲಟನ್ ಟವರ್ ಅಗ್ನಿ ದುರಂತಕ್ಕೆ ನಾಲ್ಕು ವರ್ಷಗಳು ತುಂಬುತ್ತವೆ. ಇದೊಂದು ತಪ್ಪಿಸಬಹುದಾದ ದುರಂತವಾಗಿತ್ತು ಅಲ್ಲದೆ, ಒಂಬತ್ತು ಕುಟಂಬಗಳನ್ನು ಶಾಶ್ವತವಾಗಿ ಈ ದುರಂತ ಬದಲಾಯಿಸಿದೆ. ಈ ದುರಂತದಲ್ಲಿ ಗಾಯಗೊಂಡ 60ಕ್ಕೂ ಹೆಚ್ಚು ಜನರ ಕುಟುಂಬಗಳು ಮತ್ತು ಸ್ನೇಹಿತರಿಗೆ ನೋವು ತಂದಿದೆ. ನಾನು ಸವಿತಾ, ಬೆಂಜಿ ಶಾಂತಕುಮಾರ್, ರಾಜೇಶ್ ಸುಬ್ರಮಣ್ಯಂ, ಸುರಾಭಾಯ್ ಜೋಷಿ, ಪುರೋಹಿತ್ ಮದನ್, ಸುನಿಲ್ ಐಯ್ಯರ್, ಫಯಾಜ್ ಪಾಶ, ಅಖಿಲ್ ಉದಯ್ ಮತ್ತು ಸಿದ್ಧಾರ್ಥ್ ಪದಮ್ ಅವರ ಕುಟುಂಬ ಮತ್ತು ಸ್ನೇಹಿತರಿಗಾಗಿ ಕೆಲಕಾಲ ಮೌನವಹಿಸಿ, ಸಂತಾಪ ಸೂಚಿಸಲು ಬಯಸುತ್ತೇನೆ.

ನಾಲ್ಕು ವರ್ಷದಿಂದೀಚೆ ಹೆಚ್ಚು ಇಂದು ನಾವು ಸುರಕ್ಷಿತವಾಗಿದ್ದೇವೆಯೇ ಎಂದು ಪ್ರಶ್ನಿಸಿಕೊಳ್ಳುವ ಮೂಲಕ ಆರಂಭಿಸೋಣ. ನಾವು ಮುಂದೆ ಇಂತಹ ದುರಂತಗಳಿಗೆ ಸಾಕ್ಷಿಯಾಗದಂತೆ ಸಾಕಷ್ಟು ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂಬ ಭಾವನೆ ಮೂಡುತ್ತಿದೆಯೇ? ದುರಂತದಲ್ಲಿ ಸಂತ್ರಸ್ತ ಕುಟುಂಬಗಳಿಗೆ ಆಗಿರುವ ಹಾನಿಯ

ಬಗ್ಗೆ ಯಾರಿಗಾದರೂ ನೆನಪಿದೆಯೇ? ಅಂತಹ ಭಯಾನಕ ದುರಂತಗಳು ಬಹಳ ಕಾಲ ಸಾರ್ವಜನಿಕರ ನೆನಪಿನಲ್ಲಿ ಉಳಿಯುವುದಿಲ್ಲ, ದುರದೃಷ್ಟಕರ ವಿಚಾರವೆಂದರೆ, ಇಂತಹ ಮತ್ತೊಂದು ದುರಂತ ಮತ್ತು ಅದರಿಂದ ಉಂಟಾಗುವ ಸಾವು–ನೋವುಗಳೇ ಮತ್ತೆ ನಮ್ಮನ್ನು ಈ ಕುರಿತು ಎಚ್ಚರಿಸಬೇಕು.

ಇಂತಹ ದುರಂತಗಳು ಈ ಹಿಂದೆ ನಡೆದಿದ್ದರೂ ಈ ವ್ಯವಸ್ಥೆ ಮತ್ತು ವ್ಯವಸ್ಥೆಯ ಭಾಗವಾಗಿರುವ ಜನರು ಇದರ ಬಗ್ಗೆ ನಿರ್ಲಕ್ಷ್ಯ ತೋರುತ್ತಿದ್ದಾರೆ. ಏಕೆ ಈ ಯಥಾಸ್ಥಿತಿ ಬಗ್ಗೆ ನಮಗೆ ಇಂತಹ ಜಡತ್ವ?

ನಗರದ ಅತಿಯಾದ ಬೆಳವಣಿಗೆ, ನಗರದಲ್ಲಿ ತಲೆ ಎತ್ತುತ್ತಿರುವ ಗಗನಚುಂಬಿ ಕಟ್ಟಡಗಳು, ಗಡಿಗಳನ್ನು ದಾಟಿ ವಿಸ್ತರಿಸುತ್ತಿರುವ ನಗರ ಇವೆಲ್ಲವುಗಳ ನಡುವೆ ನಮ್ಮ ಬಳಿ ಹೆಚ್ಚುವರಿ ಅಭಿವೃದ್ಧಿ ಪ್ರಕ್ರಿಯೆ ಯೋಜನೆ ಇದೆಯೇ? "ಪ್ರಗತಿ" ತರುವ ಸಂಭವನೀಯ ಅಪಾಯಗಳ ಬಗ್ಗೆ ಸಾಕಷ್ಟು ಸಮಯ ಮತ್ತು ಸಂಪನ್ಮೂಲವನ್ನು ವ್ಯಯಿಸಿಲಾಗಿದೆಯೇ? ಅಂತಹ ಆಲೋಚನೆಗೆ ಜವಾಬ್ದಾರರು ಯಾರು?

ದೇಶದಲ್ಲಿ 5 ನೇ ಅತಿದೊಡ್ಡ ಮಹಾನಗರವಾಗಿ ನನ್ನ ನಗರವು ಬೆಳೆಯುತ್ತಿದ್ದಾಗ ನಾನು ಹೆಮ್ಮೆ ಪಡುತ್ತಿದ್ದರೂ – ಅದೇ ಸಮಯದಲ್ಲಿ, ನಾವು ನಮ್ಮ ನಗರದಲ್ಲಿನ ಅವನತಿಯ ಸ್ಥಿತಿಯಲ್ಲಿ ಮಾನಸಿಕ ಜೀವನ, ಸಾರ್ವಜನಿಕ ಸೇವೆಗಳು ಮತ್ತು ಸಜ್ಜನರ ಹಿತಾಸಕ್ತಿ ಮತ್ತು ಭ್ರಷ್ಟಾಚಾರದ ಬೆಳವಣಿಗೆಯಲ್ಲಿ ದಿಗ್ಭ್ರಮೆಗೊಂಡಿದ್ದೇನೆ.

ಸಾರ್ವಜನಿಕ ಸುರಕ್ಷತೆ ವ್ಯವಸ್ಥೆಗಳನ್ನು ಅಗತ್ಯವಾಗಿ ಹೊಂದುವುದು, ನೈಸರ್ಗಿಕ ಮತ್ತು ಮಾನವ ನಿರ್ಮಿತ ಎರಡೂ ಬಗೆಯ ಸಂಭವನೀಯ ಅಪಾಯಗಳನ್ನು ನಿರೀಕ್ಷಿಸಿ ಅವುಗಳನ್ನು ಎದುರಿಸಲು ಸನ್ನದ್ಧವಾಗುವುದು ರಾಕೆಟ್‌ಸೈನ್ಸ್ ಅಲ್ಲ. ಆದರೆ ದುರದೃಷ್ಟವಶಾತ್, ಪುನರಾವರ್ತಿತ ದುರಂತಗಳ ನಡುವೆಯೂ ದುರಂತಗಳಿಗಾಗಿ ನಮ್ಮ ಸನ್ನದ್ಧತೆಯು ಅತ್ಯಂತ ಕಳಪೆಯಾಗಿದೆ.

ಒಂದು ವಿಷಯವನ್ನ ನಾವು ಮೊದಲು ಅರ್ಥಮಾಡಿಕೊಳ್ಳಬೇಕು! ನಗರಗಳು ಅದರ ಪ್ರಜೆಗಳಿಗಾಗಿ ಅಸ್ತಿತ್ವದಲ್ಲಿವೆ, ಮತ್ತು ಪ್ರಪಂಚದಾದ್ಯಂತದ ಎಲ್ಲಾ ಆಧುನಿಕ ನಗರಗಳು ಆ ಮೂಲಭೂತ ತತ್ತ್ವದ ಮೇಲೆ ಕಾರ್ಯನಿರ್ವಹಿಸುತ್ತವೆ. ಆದ್ದರಿಂದ ನಗರ ಸರ್ಕಾರಗಳು, ನಗರಗಳಲ್ಲಿ ವಾಸಿಸುವವರ ಆಕಾಂಕ್ಷೆಗಳಿಗೆ ಕೆಲಸ ಮಾಡುವ ಉದ್ದೇಶವನ್ನು ಹೊಂದಿರಬೇಕು– ಸುರಕ್ಷಿತವಾಗಿ ಜೀವಿಸುವುದು ಇಂತಹ ಸರಳ ಮತ್ತು ನೇರ ಆಕಾಂಕ್ಷೆಗಳಲ್ಲಿ ಒಂದಾಗಿದೆ.

ಯಾವುದೇ ಅಪಘಾತ ಸಂಭವಿಸಿದಲ್ಲಿ ಹೆಚ್ಚಿನ ಸನ್ನದ್ಧತೆಯನ್ನು ಹೊಂದಲು ಪೂರ್ವಭಾವಿಯಾಗಿ ಯೋಜನೆ ಇರಬೇಕು ಮತ್ತು ಎಲ್ಲಾ ಸುರಕ್ಷತೆ ಕಾರ್ಯವಿಧಾನಗಳು ಕ್ರಮದಲ್ಲಿವೆ ಎಂದು ಖಚಿತಪಡಿಸಿಕೊಳ್ಳಬೇಕು. ಇದು ಕೆಲಸ ಮಾಡಲು, ನಮ್ಮ ತುರ್ತುಸ್ಥಿತಿ ಮತ್ತು ವಿಕೋಪ ನಿರ್ವಹಣೆ ವ್ಯವಸ್ಥೆಯನ್ನು ನಗರದ ಸಾರ್ವಜನಿಕ ಆಡಳಿತಾತ್ಮಕ ಕಾರ್ಯಗಳ ಜತೆ ಆಳವಾಗಿ ಬೆಸೆಯಬೇಕು, ಇನ್ನು ಮುಂದೆ 'ಉತ್ತಮ ಭಾವನೆ/ತೋರ್ಪಡಿಕೆಗೆ ಉತ್ತಮವಾಗಿರುವ ಲೋಕೋಪಯೋಗಿ ಇಲಾಖೆಯು, ಅಗತ್ಯವಾದ ಮತ್ತು ಸಂಪೂರ್ಣವಾಗಿ ರಾಜಿಯಾಗದ ಇಲಾಖೆಯಾಗಿ ಪರಿವರ್ತನೆಯಾಗಬೇಕು!

ಹಲವು ರಾಜ್ಯಗಳಲ್ಲಿರುವಂತಹ ಸುರಕ್ಷತಾ ಸಲಕರಣೆಗಳ ಬಳಕೆಯಾಗಬೇಕು. ಹೂಡಿಕೆ ಕೊರತೆ, ಸಂಪನ್ಮೂಲ ಕೊರತೆ ಸಾಕೂ ಸಾಲದ ತಂತ್ರಜ್ಞಾನ/ಸಲಕರಣೆಗಳು ಮತ್ತು ತರಬೇತಿ ಕೊರತೆಯಿಂದ ಈ ಇಲಾಖೆಗಳಿಗೆ ತುರ್ತು ಸಂದರ್ಭಗಳನ್ನು ಹೇಗೆ ನಿಭಾಯಿಸಬೇಕೆಂದು ಗೊತ್ತಿಲ್ಲ. ನಿಧಿಯ ಕೊರತೆಯಿದೆ ಎಂದೇನೂ ಇಲ್ಲ– ಈ ನಿಧಿಗಳ ಸದ್ಬಳಕೆ ಮತ್ತು ಹಂಚಿಕೆಯೇ ಮೂಲ ಸಮಸ್ಯೆ. ಉದಾಹರಣೆಗೆ: 2010–2015ರ 13 ನೇ ಹಣಕಾಸು ಆಯೋಗದ ವರದಿಯು ನಗರ ಪ್ರದೇಶದ ಸ್ಥಳೀಯ ಸಂಸ್ಥೆಗಳಿಗೆ ಅನುದಾನವನ್ನು ಒದಗಿಸಬೇಕೆಂದು ಶಿಫಾರಸು ಮಾಡಿದೆ, ಇದು ಅವರ ಅಧಿಕಾರ ವ್ಯಾಪ್ತಿಯಲ್ಲಿ ಅಗ್ನಿಶಾಮಕ ಸೇವೆಗಳನ್ನು ಪುನರುಜ್ಜೀವನಗೊಳಿಸುತ್ತದೆ.

ಸುರಕ್ಷತೆಗೆ ಆದ್ಯತೆಯ ಕೊರತೆಯೇ ಸಂಪನ್ಮೂಲಗಳ ಕಳಪೆ ಬಳಕೆ ಮತ್ತು ಆಡಳಿತದ ಸಾಂಸ್ಥಿಕ ವೈಫಲ್ಯಕ್ಕೆ ಕಾರಣವಾಗಿದೆ. ಜನರ ಸುರಕ್ಷತೆ ಕುರಿತಾಗಿ ಸರ್ಕಾರಿ ಇಲಾಖೆಗಳಿಗೆ ಸಂವೇದನೆ ಇಲ್ಲದಿರುವುದು ಮತ್ತು ಜವಾಬ್ದಾರಿರಾಹಿತ್ಯ ಈ ಸಮಸ್ಯೆ ಮೂಲವಾಗಿದೆ.

ಸಮಸ್ಯೆಯು ಕೇವಲ ಶಾಸನದಲ್ಲಿ ಅಂತ್ಯಗೊಳ್ಳುವುದಿಲ್ಲ, ವಾಸ್ತವವಾಗಿ, ಇದು ಪರಿಣಾಮಕಾರಿಯಲ್ಲದ ಅನುಷ್ಠಾನ ಮತ್ತು ಜಾರಿ ವ್ಯವಸ್ಥೆಯಿಂದ ಸಂಯೋಜಿಸಲ್ಪಟ್ಟಿದೆ. 2011 ರಲ್ಲಿ, ನನ್ನ ಪ್ರತಿಷ್ಠಾನವಾದ – ನಮ್ಮ ಬೆಂಗಳೂರು ಪ್ರತಿಷ್ಠಾನ, ಕರ್ನಾಟಕ ಉಚ್ಚನ್ಯಾಯಲಯದಲ್ಲಿ ಬಿಯಾಂಡ್‌ಕಾರ್ಲ್‌ಟನ್ ಸಲ್ಲಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಬೆಂಬಲ ಸೂಚಿಸಿತ್ತು ಮತ್ತು ಬೆಂಗಳೂರಿನ ಎತ್ತರದ ಕಟ್ಟಡಗಳಲ್ಲಿ ಬೆಂಕಿಯ ಸುರಕ್ಷತೆಗಾಗಿ ಬಿಬಿಎಂಪಿ ರೂಪಿಸುವ ಮಾರ್ಗಸೂಚಿಗಳಿಗೆ ಕಾರಣವಾಯಿತು; ಜುಲೈ 2011 ರಲ್ಲಿ ಸರ್ಕಾರ ಈ ಸಂಬಂಧ ಅಧಿಸೂಚನೆ ಹೊರಡಿಸಿತು. ಬೆಂಗಳೂರು ಮೆಟ್ರೋಪಾಲಿಟನ್ ಪ್ರದೇಶದ ಕಟ್ಟಡಗಳು

ಸುರಕ್ಷಿತವಾಗಿರುವುದನ್ನು ಖಚಿತಪಡಿಸಿಕೊಳ್ಳುವುದು ಅಗ್ರಗಣ್ಯ ಪೌರ ಸಂಸ್ಥೆಯಾದ ಬಿಬಿಎಂಪಿಯ ಕರ್ತವ್ಯವಾಗಿದೆ.

ಆದರೆ, ಅವುಗಳು ಸುರಕ್ಷಿತವಾಗಿವೆಯೇ? 2011ರಲ್ಲಿ ಅಗ್ನಿ ಸುರಕ್ಷತೆ ಮಾರ್ಗದರ್ಶಕ ಸೂತ್ರಗಳನ್ನು ಸರ್ಕಾರ ಹೊರಡಿಸಿದರೂ, ಮೂರು ವರ್ಷಗಳಲ್ಲಿ ಈ ಪ್ರಕ್ರಿಯೆಯನ್ನು ಸಾಂಸ್ಥೀಕರಣಗೊಳಿಸುವ ಒಂದು ಸಣ್ಣ ಯತ್ನವೂ ನಡೆದಿಲ್ಲ. ಅನುಷ್ಠಾನವನ್ನು ಕಾಯ್ದುಕೊಳ್ಳುವ ವಿಚಾರದಲ್ಲಿ ಜಾರಿ ಸಂಸ್ಥೆಗಳಿಗೆ ಯಾವುದೇ ಅಧಿಕಾರಗಳಿಲ್ಲ. ನಮ್ಮ ದೇಶದಲ್ಲಿನ ಯಾವುದೇ ಇತರ ನಿಯಮಗಳಂತೆಯೇ, ಬೆಂಕಿಯ ಸುರಕ್ಷತೆ ಮಾರ್ಗದರ್ಶಿ ಸೂತ್ರಗಳ ಎನ್‌ಒಸಿಗಳ (ಆಕ್ಷೇಪಣಾ ರಹಿತ ಪ್ರಮಾಣಪತ್ರಗಳು) ವಿತರಣೆಯಲ್ಲೂ ಅಕ್ರಮ ನಡೆಯುತ್ತಿದ್ದು, ಅವುಗಳನ್ನು ನಿಯಮಬಾಹಿರವಾಗಿ ಪಡೆಯಲಾಗುತ್ತಿದೆ. ಈ ದೌರ್ಭಾಗ್ಯವು ನಿಜಕ್ಕೂ ಬೇಸರದ ವಿಚಾರ. ದಂಡಗಳು ಇವೆಯಾದರೂ ಅವು ಹೆಸರಿಗೆ ಮಾತ್ರ, ಹೆಚ್ಚು ಹೆಚ್ಚು ಕಟ್ಟಡಗಳು ನಿಯಮ ಉಲ್ಲಂಘನೆಯನ್ನು ಮುಂದುವರಿಸಿವೆ, ನಮ್ಮ ವ್ಯವಸ್ಥೆಯಲ್ಲಿನ ಲೋಪಗಳ ದುರ್ಬಳಕೆ ಮಾಡಿಕೊಳ್ಳುತ್ತಿವೆ. ಅಧಿಕಾರಿಗಳು ಬೇಜಾಬ್ದಾರಿಯನ್ನು ಇತರರ ಮೇಲೆ ಹೊರಿಸುವುದನ್ನು ಮುಂದುವರಿಸಿದ್ದಾರೆ.

ಕಾರ್ಲ್‌ಟನ್ ಅಗ್ನಿ ದುರಂತದ ಬಳಿಕ, ಆಗಿನ ಮುಖ್ಯಮಂತ್ರಿಗಳಿಗೆ ನಾನೊಂದು ಸಲಹೆ ನೀಡಿದ್ದೆ, ನಾಗರೀಕ ರಕ್ಷಣಾ ಸನ್ನದ್ಧತೆ  ಮತ್ತು ಅಗ್ನಿಶಾಮ ಹಾಗೂ ತರ್ತು ಸೇವೆಗಳ ಸನ್ನದ್ಧತೆಯನ್ನು ಮರುಪರಿಶೀಲನೆ ನಡೆಸುವಂತೆ ನಾನು ಸೂಚಿಸಿದ್ದೆ. ರಾಜ್ಯದ ಬಹುತೇಕ ಅಗ್ನಿಶಾಮಕ ಸೇವೆಗಳೂ ಟರ್ನ್ ಟೇಬಲ್ ಏಣಿಗಳು/ಹೈಡ್ರಾಲಿಕ್ ಪ್ಲಾಟ್‌ಫಾರಂಗಳು, ಕ್ರಾಶ್ ಟೆಂಡರ್ಸ್ /ಫೋಮ್ ಟೆಂಡರ್ಸ್ ಮತ್ತು ರೆಸ್ಕ್ಯೂ ವೆಹಿಕಲ್ಸ್ ಮುಂತಾದ ವಿಶೇಷ ಅಗ್ನಿಶಾಮಕ ಉಪಕರಣಗಳನ್ನು ಹೊಂದಿಲ್ಲ. ಅಗ್ನಿಶಾಮಕ ದಳದಲ್ಲಿ ಸೂಕ್ತ ರಕ್ಷಣಾ ಸಲಕರಣೆಗಳು, ಅಧಿಕ ಒತ್ತಡದ ಪಂಪುಗಳು, ಸಂವಹನ ಸೌಲಭ್ಯಗಳು ಮತ್ತು ಇತರ ವಿಶೇಷ ಅಗ್ನಿ ಶಾಮಕ ಉಪಕರಣಗಳ ಕೊರತೆಯಿದೆ. ಬಹುತೇಕ ರಾಜ್ಯ ಅಗ್ನಿಶಾಮಕ ದಳಗಳು ವಾಟರ್ ಟೆಂಡರ್, ಪೋರ್ಟಬಲ್ ಪಂಪ್ ಮುಂತಾದ ಸಾಂಪ್ರದಾಯಿಕ ಅಗ್ನಿ ಶಾಮಕ ಉಪಕರಣಗಳನ್ನೂ ಸಹ ಹೊಂದಿಲ್ಲ.

ನನ್ನ ಪಾಲಿನ ಕೆಲಸವಾಗಿ, ನಾನು ಈ ಎಲ್ಲಾ ಶಾಸನಗಳು/ಮಾರ್ಗಸೂಚಿಗಳು ಕಠಿಣವಾಗಿ ಜಾರಿಯಾಗುವಂತೆ ಮತ್ತು ನಮ್ಮ ಗುರಿ ಸಾಧನೆಗೆ ನೆರವಾಗುವಂತೆ ನೋಡಿಕೊಳ್ಳುತ್ತೇನೆ. ಇಂತಹ ಪ್ರಕರಣಗಳಲ್ಲಿ ಶಾಮೀಲಾದ ಅಧಿಕಾರಿಗಳ ಮೇಲೆ ಹೊಣೆಗಾರಿಕೆಯನ್ನು ಹೊರಿಸಿ, ಶಿಕ್ಷೆಗೆ ಗುರಿಪಡಿಸಲು ಸಾಧ್ಯವಾಗುವ ರೀತಿಯಲ್ಲಿ ಈ

ಮಾರ್ಗಸೂಚಿಗಳನ್ನು ಮರುಪರಿಶೀಲಿಸಲು ನಾನು ನಮ್ಮ ಬೆಂಗಳೂರು ಪ್ರತಿಷ್ಠಾನ ನಂತಹ ಎನ್‌ಜಿಒಗಳನ್ನು ಪ್ರೋತ್ಸಾಹಿಸುತ್ತೇನೆ. ಈ ಬ್ರಹ್ಮಾಂಡ ಭ್ರಷ್ಟಾಚಾರ, ಸಾಂಸ್ಥಿಕ ವೈಫಲ್ಯ, ಸಾರ್ವಜನಿಕ ಆಸ್ತಿಗಳ ದುರ್ಬಳಕೆ ಮತ್ತು ಆಳವಾಗಿ ಬೇರೂರಿರುವ ಸ್ವಜನ ಪಕ್ಷಪಾತ ಮತ್ತು ಬಿಲ್ಡರ್‌ಗಳು–ಪೌರ ಸಂಸ್ಥೆಗಳು/ರಾಜಕಾಣಿಗಳು ಮತ್ತು ಅಧಿಕಾರಿಗಳ ನಡುವಿನ ನಂಟಿನ ವಿರುದ್ಧ ನಾಗರೀಕರು ತಮ್ಮ ಹೋರಾಟವನ್ನು ಮುಂದುವರಿಸಬೇಕಿದೆ.

ವ್ಯವಸ್ಥೆಯ ವೈಫಲ್ಯಕ್ಕೆ ಕಾರಣರಾಗುವ ಎಲ್ಲ ವ್ಯಕ್ತಿಗಳನ್ನೂ ಪರಿಶೀಲನೆಯ ವ್ಯಾಪ್ತಿಗೆ ಒಳಪಡಿಸುವುದು ಅನಿವಾರ್ಯವಾಗಿದೆ. ಇತ್ತೀಚೆಗೆ ನಗರದ ಗಗನಚುಂಬಿ ಕಟ್ಟಡಗಳಲ್ಲಿ ಸುರಕ್ಷತೆ ನಿಯಮ ಉಲ್ಲಂಘನೆ ಕುರಿತಾದ ಬಹುತೇಕ ಪ್ರಕರಣಗಳಲ್ಲಿ, ಆ ವ್ಯಕ್ತಿಗಳು ಆಳವಾದ ರಾಜಕೀಯ ನಂಟು ಹೊಂದಿರುವುದು ಕಂಡು ಬಂದಿದೆ. ಅಗ್ನಿಶಾಮಕ ಸೇವೆ ಕಾಯ್ದೆ 1964ರ ಅಡಿಯಲ್ಲಿ ಕಾನೂನು ಬಾಹಿರವಾಗಿ ಎನ್‌ಒಸಿ ಪಡೆಯುವುದು ಕ್ರಿಮಿನಲ್ ಅಪರಾಧವಾಗಿದ್ದು, ಅಂಥವರನ್ನು ಹೊಣೆಗಾರರನ್ನಾಗಿಸಿ ನಿಷೇಧಿತರ ಪಟ್ಟಿಗೆ ಸೇರಿಸಲು ಬಿಬಿಎಂಪಿ ಕ್ರಮ ಕೈಗೊಳ್ಳುವುದು ಮುಖ್ಯವಾಗಿದೆ. ಆದರೆ ಬಿಬಿಎಂಪಿ, ಬೆಸ್ಕಾಮ್ ಮತ್ತು ಇತರ ಏಜೆನ್ಸಿಗಳು ಒಟ್ಟಾಗಿ ತಮ್ಮ ಕೆಲಸವನ್ನು ಮಾಡುವ ತನಕ ಈ ಎಲ್ಲ ದಂಡಗಳು ಕೇವಲ ಪತ್ರದಲ್ಲಿ ಮಾತ್ರ ಮುಂದುವರಿಯುತ್ತವೆ.

ಅಲ್ಲದೆ, ನಾವು ಏನನ್ನು ಹೊಂದಿದ್ದೇವೆಯೋ ಅದಕ್ಕೆ ಕೃತಜ್ಞರಾಗಿರುವುದನ್ನು ಮರೆಯಬಾರದು– ನಮ್ಮ ನಡುವೆ ಇರುವಂತಹ ಪ್ರಾಮಾಣಿಕ ಪೊಲೀಸರು, ಪೌರಕಾರ್ಮಿಕರು ಅಥವಾ ಅಗ್ನಿಶಾಮಕ ತಂಡದವರನ್ನು ಮರೆಯಬಾರದು. ಅವರ ನಡುವಿನ ವ್ಯವಸ್ಥೆಯಲ್ಲಿ ಎಷ್ಟೇ ಕೊರತೆಗಳಿದ್ದರೂ ನಮ್ಮನ್ನು ವಿಫಲರಾಗಲು ಅವಕಾಶ ನೀಡದ ಹಲವು ಉತ್ತಮ ವ್ಯಕ್ತಿಗಳು ನಮ್ಮ ನಡುವೆ ಇದ್ದಾರೆ. ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಶ್ರೀ ಚೆಂಗಪ್ಪ ಅವರಿಗೆ ಸರಕಾರದ ಅಧಿಕೃತ ವಿಭಾಗದಲ್ಲಿ 2012ರ ನಮ್ಮ ಬೆಂಗಳೂರು ಪ್ರಶಸ್ತಿಯನ್ನು ನೀಡಲಾಗಿದೆ ಎಂದು ನಾನು ಸ್ಮರಿಸಬಯಸುತ್ತೇನೆ.

ವ್ಯವಸ್ಥೆಯಲ್ಲಿ ಲೋಪಗಳನ್ನು ಹುಡುಕುವುದು ಮತ್ತು ಆರೋಪಿಸುವುದು ಸುಲಭ – ಆದರೆ ಸರ್ಕಾರದಲ್ಲಿ ಚೆಂಗಪ್ಪ ಅವರಂತಹ, ತಮ್ಮ ಕರ್ತವ್ಯಕ್ಕೆ ಮೋಸ ಮಾಡದಂತಹ ವ್ಯಕ್ತಿಗಳು ಇನ್ನೂ ಇದ್ದಾರೆ– ಈ ಪ್ರಜ್ಞೆಯೇ ಅವರನ್ನು ತಮ್ಮ ಪರಧಿಯನ್ನೂ ಮೀರಿ ಕೆಲಸ ಮಾಡುವಂತೆ ಪ್ರೇರೇಪಿಸುತ್ತದೆ.

ಆದರೆ, ನಾವು ಸದಾ ಅವರ ಸೇವೆಯನ್ನು ದುರ್ಬಳಕೆ ಮಾಡಿಕೊಳ್ಳುತ್ತೇವೆ. ಅವರ ತರಬೇತಿ, ಕೌಶಲ್ಯದ ಅಭಿವೃದ್ಧಿಯ ಮತ್ತು ತಂತ್ರಜ್ಞಾನದ ಪರಿಚಯವನ್ನು ತಮ್ಮ ಪರಿಣಾಮಕಾರಿತ್ವವನ್ನು ಹೆಚ್ಚಿಸಲು ಹೂಡಿಕೆ ಮಾಡುವುದರ ಮೂಲಕ ನಾವು ನಮಗೆ ಸಹಾಯ ಮಾಡಲು ಅವರಿಗೆ ಅನುವು ಮಾಡುತ್ತಿದ್ದೇವೆ ಎಂದು ಖಚಿತಪಡಿಸಿಕೊಳ್ಳಬೇಕು. ಉನ್ನತ ಮಟ್ಟದ ವೃತ್ತಿಪರತೆ ಮತ್ತು ಸಾಮರ್ಥ್ಯವನ್ನು ನಿರ್ವಹಿಸಲು ಅಗತ್ಯವಾದ ತಾಂತ್ರಿಕ ಮತ್ತು ಆಡಳಿತಾತ್ಮಕ ಕೌಶಲ್ಯಗಳನ್ನು ನಿಯಮಿತವಾಗಿ ಗುರುತಿಸಬೇಕಾಗಿದೆ, ನವೀಕೃತ ಮತ್ತು ವಿವಿಧ ಸೇವೆಗಳ ಸಂಸ್ಥೆಗಳಲ್ಲಿನ ಎಲ್ಲಾ ಸಿಬ್ಬಂದಿಗೆ ಸೂಕ್ತವಾದ ತರಬೇತಿಯನ್ನು ನೀಡಬೇಕಿದೆ.

ನಾನು ಈ ಮಾತನ್ನು ಹೇಳುವ ಮೂಲಕ ಕೊನೆಗೊಳಿಸುತ್ತೇನೆ – ಹೊಣೆಗಾರಿಕೆಯನ್ನು ಸರಿಪಡಿಸಲು ಮತ್ತು ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಲು ನಾವು ಪರಿಣಾಮಕಾರಿಯಾದ ವಿಧಾನಗಳನ್ನು ಕಂಡುಕೊಳ್ಳುವವರೆಗೂ ಜನರು ಸರ್ಕಾರದ ಉದಾಸೀನತೆಗೆ ಬಲಿಯಾಗುತ್ತಲೇ ಇರುತ್ತಾರೆ.

ಸುರಕ್ಷತೆ ಸೇರಿದಂತೆ ನಮಗೆ ಮುಖ್ಯವೆನಿಸುವ ವಿಚಾರಗಳಲ್ಲಿ ಸರ್ಕಾರಗಳನ್ನು ಸ್ಪಂದಿಸುವಂತೆ ಮಾಡಲು ನಾಗರೀಕರಾಗಿ ನಾವು ದೃಢ ನಿರ್ಧಾರ ಮಾಡಿದರೆ, ಅದು ನಮ್ಮೊಂದಿಗೆಯೇ ಆರಂಭವಾಗುತ್ತದೆ. ನನಗೆ ಸಂಬಂಧಿಸಿದಂತೆ, ಯಾವುದೇ ಆಲೋಚನೆ ಮತ್ತು ಉಪಕ್ರಮಗಳಿಗೆ ನನ್ನ ಬೆಂಬಲವನ್ನು ನೀಡಲು ನಾನು ಸದಾ ಸಿದ್ಧನಿದ್ದೇನೆ ಮತ್ತು ನಿಮಗೆ ಬೆಂಬಲಿಸಲು ಎನ್‌ಬಿಎಫ್‌ಇರುತ್ತದೆ ಎಂದು ಖಚಿತಪಡಿಸಿಕೊಳ್ಳಿ. ಇದು ನಮ್ಮ ನಗರ ಮತ್ತು ಇದಕ್ಕಾಗಿ ನಾವೆಲ್ಲರೂ ಅಳಿಲು ಸೇವೆ ಮಾಡುತ್ತಿದ್ದೇವೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಬೇರೊಬ್ಬರು ಬಂದು ನಮ್ಮ ಸಮಸ್ಯೆಗಳನ್ನು ಬಗೆಹರಿಸುತ್ತಾರೆಂದು ಕಾಯದೆ, ನಾವು ಸುರಕ್ಷಿತವಾಗುವ ತನಕ ನಾವು ಏನೆಲ್ಲಾ ಮಾಡಬಲ್ಲೆವೋ ಅದಕ್ಕಾಗಿ ಒತ್ತಡ ಮುಂದುವರಿಸೋಣ. ಎಲ್ಲ ವಿಧದಲ್ಲೂ! ಎಲ್ಲಕ್ಕಿಂತಲೂ ಹೆಚ್ಚಾಗಿ ಇದು ನಮ್ಮ ನಗರ, ನಮ್ಮ ಧ್ವನಿ ಮತ್ತು ನಮ್ಮ ಭವಿಷ್ಯ.

ನಾಗರಾಜು, ಅನಿಲ್ ಕುಮಾರ್, ರಾಮಯ್ಯ ಮತ್ತು ರಾಮಾಭದ್ರಯ್ಯರ ಎಲ್ಲಾ ನಾಲ್ಕು ವಿಜೇತರನ್ನು ನಾನು ಅಭಿನಂದಿಸುತ್ತೇನೆ ಮತ್ತು ನಮ್ಮ ನಗರಕ್ಕೆ ಅವರ ಸೇವೆಗಾಗಿ ಧನ್ಯವಾದಗಳು. ಮಕ್ಕಳು ಸೇರಿದಂತೆ ನಾಗರೀಕರಲ್ಲಿ ಅಗ್ನಿ ಸುರಕ್ಷತೆ ಬಗ್ಗೆ ಅರಿವು ಮೂಡಿಸಲು ಬಿಯಾಂಡ್ ಕಾರ್ಲ್‌ಟನ್ ಅಭಿಯಾನವನ್ನು ಕೈಗೊಂಡಿದ್ದಕ್ಕಾಗಿ ಮತ್ತು ಇತರರ ಪ್ರಾಣ ಉಳಿಸಲು ತಮ್ಮ ಪ್ರಾಣವನ್ನು ಒತ್ತೆ ಇಡುವ ಅಗ್ನಿಶಾಮಕ

ಸಿಬ್ಬಂದಿಗೆ ಶೌರ್ಯ ಪ್ರಶಸ್ತಿ ನೀಡುತ್ತಿರುವುದಕ್ಕಾಗಿ ನಾನು ಉದಯ್ ವಿಜಯನ್ ಮತ್ತು ಇತರರನ್ನು ಶ್ಲಾಘಿಸಲು ಬಯಸುತ್ತೇನೆ.

ಅಂತಿಮವಾಗಿ, ನಮ್ಮ ನಗರವನ್ನು ಮತ್ತೆ ಹಿಂಪಡೆಯುವ ಪ್ರಯತ್ನದಲ್ಲಿ ಪಾಲ್ಗೊಳ್ಳಿ ಎಂದು ಒತ್ತಾಯಿಸುತ್ತೇನೆ.! ನಮ್ಮ ಸುರಕ್ಷತೆಯನ್ನು ಬೇರೆ ಯಾರೋ ಬಂದು ಕಾಯ್ದುಕೊಳ್ಳುತ್ತಾರೆಂದು ಕಾಯುವುದು ಬೇಡ, ನಮ್ಮೊಳಗಿನ ನೇತಾರನನ್ನು ಜಗೃತಗೊಳಿಸೋಣ ಮತ್ತು ಅದಕ್ಕಾಗಿ ಒಂದುಗೂಡಿ ಕೆಲಸ ಮಾಡೋಣ.

ಜೈ ಹಿಂದ್,

ಜೈ ಕರ್ನಾಟಕ

# 8

# ದೇಶದಲ್ಲಿನ ಬರಗಾಲ ಮತ್ತು ಉಷ್ಣ ಮಾರುತ ಪರಿಸ್ಥಿತಿ ಹಾಗೂ ಅದರಿಂದ ಉಂಟಾಗಿರುವ ನೀರಿನ ಬವಣೆ ಕುರಿತಾಗಿ ಸಂಸತ್ತಿನಲ್ಲಿ ಕಿರು ಚರ್ಚೆ

ರಾಜ್ಯಸಭೆ ಹೊಸದೆಹಲಿ 27ನೇ ಏಪ್ರಿಲ್ 2016

ಮಾನ್ಯರೇ,

13 ರಾಜ್ಯಗಳ 33 ಕೋಟಿ ಭಾರತೀಯರ (ನಮ್ಮ ಜನಸಂಖ್ಯೆಯ ಕಾಲುಭಾಗದಷ್ಟು) ಮೇಲೆ ಪರಿಣಾಮ ಬೀರುವ ಈ ಮಾನವೀಯ ಬಿಕ್ಕಟ್ಟಿನ ಬಗ್ಗೆ ಮಾತನಾಡಲು ನನ್ನನ್ನು ಅನುಮತಿಸಿದ್ದಕ್ಕಾಗಿ ಧನ್ಯವಾದಗಳು.

ಮಾನ್ಯರೇ, ನಾನು ಈಗ್ಗೆ 10 ವರ್ಷಗಳಿಂದ ಸಂಸತ್ತಿನಲ್ಲಿದ್ದಿದ್ದೇನೆ ಮತ್ತು ಬರಗಾಲದ ಪರಿಸ್ಥಿತಿಗಳನ್ನು ಮತ್ತು ನಮ್ಮ ದೇಶದ ರೈತರ ಮತ್ತು ಗ್ರಾಮೀಣ ಸಮುದಾಯಗಳ ಗಂಭೀರ ನೋವನ್ನು ಚರ್ಚಿಸುವುದನ್ನು ಸದನದಲ್ಲಿ ಪ್ರತಿ ವರ್ಷವೂ ನಾನು ಕೇಳಿದ್ದೇನೆ. ಗೌರವದಿಂದಲೇ ನಾನು ಒಂದು ಮಾತನ್ನು ಹೇಳಲು ಬಯಸುತ್ತೇನೆ – ಬರಗಾಲದ ಮೇಲೆ ಪ್ರತಿ ವರ್ಷವೂ ಅನೇಕ ರೀತಿಯ ಭಾಷಣಗಳನ್ನು ನಾನು ಕೇಳಿದ್ದೇನೆ ಮತ್ತು ಈ ವರ್ಷವೂ ಮತ್ತೆ ಹಲವು ವರ್ಷಗಳಂತೆ ಅನೇಕ ಬಾರಿ ಹೇಳಿದ ವಿಷಯಗಳನ್ನೇ ಹೇಳುತ್ತಿದ್ದೇವೆ ಎಂದರೆ, ಅದರಲ್ಲಿ ಅಚ್ಚರಿಯಿಲ್ಲ. ಎಲ್ಲ

ಗಂಭೀರತೆಯನ್ನು ಒಳಗೊಂಡೇ ನಾನು ಇದನ್ನು ಹೇಳುತ್ತಿದ್ದೇನೆ– ನಮ್ಮ ದೇಶದಲ್ಲಿ ಸಂಭವಿಸುತ್ತಿರುವ ವಾರ್ಷಿಕ ದುರಂತಕ್ಕೆ ನಾವು ಮೂಕಸಾಕ್ಷಿಗಳಾಗಿದ್ದೇವೆ.

ನಮ್ಮಲ್ಲಿ ಮೂರು ಕಾಲಗಳಿವೆ – ಬೇಸಿಗೆ, ಮುಂಗಾರು ಮತ್ತು ಚಳಿಗಾಲ.

ಇತ್ತೀಚೆಗೆ, ಇದೇ ವಿಚಾರದ ಕುರಿತಾಗಿ ನನ್ನ ಅಧ್ಯಯನದ ವೇಳೆ ನಾನು ಆಸಕ್ತಿಕರ ಪುಸ್ತಕವೊಂದನ್ನು ಓದಿದೆ, ಒಳ್ಳೆಯ ಬರಗಾಲವನ್ನು ಪ್ರತಿಯೊಬ್ಬರೂ ಇಷ್ಟಪಡುತ್ತಾರೆ ಎಂಬುದು ಅದರ ಹೆಸರು. ನನಗೆ ಅಷ್ಟೇನೂ ಪರಿಣಿತಿ ಇಲ್ಲದಿದ್ದರೂ, ಈ ಬಗ್ಗೆ ಹೇಳುವುದು ನನ್ನ ಕರ್ತವ್ಯ ಎಂದು ನಾನು ಭಾವಿಸಿದ್ದೇನೆ. ನಾವು ಬರಗಾಲದ ಬಗ್ಗೆ ರಾಜಕೀಯ ಭಾಷಣಗಳನ್ನು ತೊರೆದು, ಪರಿಹಾರಾತ್ಮಕ ಆಡಳಿತದತ್ತ ಹೆಜ್ಜೆ ಹಾಕಬೇಕಿದೆ. ಈ ಹಿನ್ನೆಲೆಯಲ್ಲಿ ನಾನು ಕೆಳಕಂಡ ಅಂಶಗಳನ್ನು ಮುಂದಿಡಲು ಬಯಸುತ್ತಿದ್ದೇನೆ:

ನಾವು ಹಾಲಿ ಬಿಕ್ಕಟ್ಟನ್ನು ಕ್ರಿಯಾಶೀಲವಾಗಿ ಮತ್ತು ಸಂಪೂರ್ಣ ಮಟ್ಟದಲ್ಲಿ ಎದುರಿಸಬೇಕಿದೆ.

ವರ್ಷದಿಂದ ವರ್ಷಕ್ಕೆ ನಾವು ಮೂಕ ಪ್ರೇಕ್ಷಕರಾಗಿರುವುದನ್ನು ತಪ್ಪಿಸಲು ನಾವು ನೀರಿನ ವಿಚಾರವಾಗಿ ದೀರ್ಘಕಾಲೀನ ಮತ್ತು ಮಧ್ಯಮ ಕಾಲೀನ ಕಾರ್ಯತಂತ್ರಗಳನ್ನು ರೂಪಿಸಬೇಕಿದೆ.

ಮಾನ್ಯರೇ, ನಾನು ಕರ್ನಾಟಕದಿಂದ ಬಂದವನು ಮತ್ತು ನನ್ನ ರಾಜ್ಯದಲ್ಲಿ ಹೆಚ್ಚುತ್ತಿರುವ ಈ ಬಿಕ್ಕಟ್ಟಿನ ಬಗ್ಗೆ ಗಮನ ಸೆಳೆಯಲು ಬಯಸುತ್ತಿದ್ದೇನೆ.

ಉತ್ತರ ಕರ್ನಾಟಕದ ಜಿಲ್ಲೆಗಳಾದ – ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು, ವಿಜಯಪುರ, ಬಾಗಲಕೋಟ ಮತ್ತು ಉತ್ತರ ಕನ್ನಡ ಹಾಗೂ ಇತರ ಹಲವು ಜಿಲ್ಲೆಗಳೂ ತೀವ್ರ ಬರಗಾಲದಿಂದ ತತ್ತರಿಸುತ್ತಿವೆ.

ಕೇವಲ ಉತ್ತರ ಕರ್ನಾಟಕದಲ್ಲಿ 197 ಗ್ರಾಮಗಳು ನೀರಿನ ಕೊರತೆ ಎದುರಿಸುತ್ತಿವೆ; ಭತ್ತದಂತಹ ಬೆಳೆಗಳು ನೀರಿನ ಕೊರತೆಯಿಂದಾಗಿ ಹಾನಿಗೊಳಗಾಗಿವೆ. ಮತ್ತೊಂದು ಮುಖ್ಯವಾದ ವಿಚಾರವೆಂದರೆ, ಜನರು ಸಿಕ್ಕ ಸಿಕ್ಕ ಬೆಲೆಗೆ ತಮ್ಮ ಜಾನುವಾರು ಮತ್ತು ಆಸ್ತಿಪಾಸ್ತಿಗಳನ್ನು ಮಾರಿ ಗುಳೆ ಹೋಗುತ್ತಿದ್ದಾರೆ. ರೈತರು ತಮ್ಮ ತೋಟಗಳನ್ನು ಕಳೆದುಕೊಳ್ಳುವ ಅಪಾಯದಲ್ಲಿದ್ದರೂ, ದೀರ್ಘಾವಧಿಯವರೆಗೆ ಮನೆಗಳತ್ತ ಹಿಂದಿರುಗುತ್ತಿಲ್ಲ. ಇದರಿಂದಾಗಿ ಈ ಪ್ರದೇಶದ ಒಟ್ಟಾರೆ ಆರ್ಥಿಕತೆಯ ಮೇಲೆ ಮಧ್ಯಮ ಅವಧಿಯಲ್ಲಿ ಬಹುವಿಧದ ಪರಿಣಾಮಗಳು ಬೀರುತ್ತಿವೆ.

ಮಾನ್ಯರೇ, ಕರ್ನಾಟಕದಲ್ಲಿನ ನೀರಿನ ಬಿಕ್ಕಟ್ಟು ಕಳೆದ 8 ವಾರಗಳಲ್ಲಿ, ಕೇಂದ್ರ ತಂಡದ ಸಮೀಕ್ಷೆ ಬಳಿಕ ಮತ್ತಷ್ಟು ಬಿಗಡಾಯಿಸಿದೆ. ಹೀಗಾಗಿ ಬರಗಾಲ ಪೀಡಿತ ಜಿಲ್ಲೆಗಳಿಗೆ ಕೂಡಲೇ ಹಣಕಾಸು ಮತ್ತು ಮೇವಿನ ನೆರವನ್ನು ಕೂಡಲೇ ಒದಗಿಸುವತ್ತ ಸರ್ಕಾರ ಗಮನ ಹರಿಸಬೇಕೆಂದು ನಾನು ವಿನಂತಿಸುತ್ತೇನೆ. ಇದು ಕೇವಲ ನನ್ನ ರಾಜ್ಯದಲ್ಲಿ ಮಾತ್ರವಲ್ಲದೆ, ಎಲ್ಲಾ 13 ಬರ ಪೀಡಿತ ರಾಜ್ಯಗಳಲ್ಲೂ ಈ ಕೆಲಸ ಆಗಬೇಕು.

ಮಧ್ಯಮ ಅವಧಿಯಿಂದ ದೀರ್ಘಾವಧಿವರೆಗಿನ ಕಾರ್ಯತಂತ್ರಗಳ ಬಗ್ಗೆ ನಾನು ಸಂಕ್ಷಿಪ್ತವಾಗಿ ಇಲ್ಲಿ ಹೇಳಲು ಬಯಸುತ್ತೇನೆ. ಸರ್ಕಾರ ಈ ಸಮಸ್ಯೆ ಪರಿಹಾರಕ್ಕಾಗಿ ರಾಷ್ಟ್ರೀಯ ನೀರು ನಿರ್ವಹಣೆ ಕಾರ್ಯತಂತ್ರವನ್ನು ರೂಪಿಸಬೇಕೆಂದು ನನಗೆ ಅನಿಸುತ್ತಿದೆ. ಭಾರತದಲ್ಲಿ ಬರಗಾಲದ ನಿರ್ವಹಣೆಯ ಸುಧಾರಣೆಗಾಗಿ ಸಮಗ್ರ ಕಾರ್ಯತಂತ್ರ ರಚನೆ ನಮ್ಮ ಆದ್ಯತೆಯಾಗಬೇಕು. ರೈಲುಗಳಲ್ಲಿ ಲೋಡುಗಟ್ಟಲೆ ನೀರನ್ನು ಪೂರೈಸುವುದು ತಕ್ಷಣದ ಪರಿಹಾರವಾದರೂ ಗ್ರಾಮೀಣ ಮೂಲಸೌಕರ್ಯಗಳಲ್ಲಿ ಹೆಚ್ಚಿನ ಹೂಡಿಕೆ, ಒಂದು ಕೇಂದ್ರೀಯ ಜಲ ನಿರ್ವಹಣಾ ನೀತಿ ರಚನೆ, ಹವಾಮಾನ ಬದಲಾವಣೆ ಬಗ್ಗೆ ನಿಗಾ, ತಂತ್ರಜ್ಞಾನದ ವಿಸ್ತರಿತ ಬಳಕೆಯು ಸದ್ಯದ ತುರ್ತು ಅವಶ್ಯವಾಗಿದೆ. ಸ್ಯಾಟಿಲೈಟ್ ಇಮೇಜ್ (ಉಪಗ್ರಹ ಚಿತ್ರ) ಮತ್ತು ಇತರ ತಂತ್ರಜ್ಞಾನಗಳ ನೆರವಿನಿಂದ ನಾವು ಬರಗಾಲವನ್ನು ಮೊದಲೇ ಅಂದಾಜಿಸಿ, ಅದನ್ನು ಎದುರಿಸಲು ಮುಂಚಿತವಾಗಿಯೇ ಯೋಜನೆ ಮಾಡಬಹುದು.

ಭವಿಷ್ಯದ ಬಿಕ್ಕಟ್ಟನು ತಪ್ಪಿಸುವ ಸಲುವಾಗಿ, ಇಸ್ರೇಲ್ ಬಳಸುತ್ತಿರುವ ಸಮುದ್ರದ ನೀರಿನಲ್ಲಿ ಉಪ್ಪಿನ ಅಂಶವನ್ನು ತೆಗೆಯುವ (ಡೀಸಾಲಿಟೈಸೇಷನ್) ಮುಂತಾದ ತಂತ್ರಜ್ಞಾನಗಳನ್ನು ನಮ್ಮ ತೀರ ಪ್ರದೇಶಗಳಲ್ಲಿ ಅಳವಡಿಸುವ ಬಗ್ಗೆ ಅಧ್ಯಯನ ನಡೆಸಿ, ಅನುಷ್ಠಾನಗೊಳಿಸಬೇಕು.

ನಾನು ಈ ಒಂದು ಒಂದು ವಿಷಯವನ್ನು ಹೇಳುವ ಮೂಲಕ ಮಾತು ಮುಗಿಸುತ್ತೇನೆ – ಪ್ರಸ್ತುತ ಬಿಕ್ಕಟ್ಟನ್ನು ರಾಷ್ಟ್ರೀಯ ವಿಪತ್ತಾಗಿ ನೋಡಬೇಕೆಂದು ನಾನು ಕೇಂದ್ರವನ್ನು ಒತ್ತಾಯಿಸುತ್ತೇನೆ ಮತ್ತು ಈ ಸಂಬಂಧ ತುರ್ತು ಕ್ರಮ ಕೈಗೊಳ್ಳಲು ವಿಶೇಷ ಕಾರ್ಯಪಡೆಯೊಂದನ್ನು ರಚಿಸಬೇಕೆಂದು ಮನವಿ ಮಾಡುತ್ತೇನೆ. ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ ಈ ಕ್ರಮಗಳನ್ನು ಕೈಗೊಳ್ಳುವ ಮೂಲಕ ತುರ್ತು ನೆರವಿಗಾಗಿ ನಮ್ಮತ್ತ ನೋಡುತ್ತಲಿರುವ ದೇಶದ ನಾಲ್ಕನೇ ಒಂದರಷ್ಟು ಸಂಕಷ್ಟ ಪೀಡಿತ ಜನತೆಯ ಸಹಾಯಕ್ಕೆ ಧಾವಿಸಬೇಕೆಂದು ಕೋರುತ್ತೇನೆ.

ಧನ್ಯವಾದಗಳು.

ಜೈ ಹಿಂದ್

ಜೈ ಕರ್ನಾಟಕ

# ಬಿಗ್ ಬೆಂಗಳೂರು ಫೈಟ್

## ಪತ್ರಗಳು

# 1

# ಕಾರ್ಲ್‌ಟನ್ ಟವರ್ಸ್‌ನಲ್ಲಿ ಅಗ್ನಿ ಅನಾಹುತದ ಕುರಿತು ಮುಖ್ಯಮಂತ್ರಿಯವರಿಗೆ ಪತ್ರ

25ನೇ ಫೆಬ್ರವರಿ, 2010

ಶ್ರೀ ಯಡಿಯೂರಪ್ಪನವರೇ,

23 ಫೆಬ್ರವರಿ, 2010 ರಂದು ಬೆಂಗಳೂರಿನ ಕಾರ್ಲ್‌ಟನ್ ಟವರಿನಲ್ಲಿನ ಅಗ್ನಿ ಅನಾಹುತದ ಕುರಿತು ಈ ಪತ್ರವನ್ನು ಬರೆಯುತ್ತಿದ್ದೇನೆ.

**1. ಕಟ್ಟಡಗಳ ಸುರಕ್ಷತಾ ಪರಿಶೋಧನೆ**

ಸಮಗ್ರವಾದ ರೀತಿಯಲ್ಲಿ ಬೆಂಗಳೂರಿನ ಎಲ್ಲ ಬಹುಮಹಡಿ ಕಟ್ಟಡಗಳ ಸುರಕ್ಷತಾ ಪರಿಶೋಧನೆಗೆ ಸರ್ಕಾರ ಮುಂದಾಗಿರುವುದು ಸಂತಸದ ಸಂಗತಿಯಾಗಿದೆ. ಈ ಪರಿಶೋಧನೆಯ ವರದಿಯನ್ನು ಸಾರ್ವಜನಿಕರಿಗೆ ಲಭ್ಯಗೊಳಿಸುವ ಮೂಲಕ ಅಸುರಕ್ಷಿತವಾದ ಕಟ್ಟಡಗಳಾವವು ಎಂಬ ಬಗ್ಗೆ ನಾಗರೀಕರಿಗೆ ತಿಳಿಯುವಂತೆ ಮಾಡಲು ನಾನು ಶಿಫಾರಸು ಮಾಡುತ್ತೇನೆ.

**2. ತುರ್ತು ಸೇವೆಗಳ ಮತ್ತು ಸನ್ನಿವೇಶಕ್ಕಾಗಿ ಸನ್ನದ್ಧತೆಯ ಪರಿಶೀಲನೆ**

ಅಗ್ನಿಶಾಮಕ ಮತ್ತು ತುರ್ತು ಸೇವೆಗಳಿಗಾಗಿ ನಾಗರೀಕ ರಕ್ಷಣಾ ಸನ್ನದ್ಧತೆ ಮತ್ತು ಸಲಕರಣೆಗಳ ತುರ್ತು ಪರಿಶೀಲನೆಗೆ ನಾನು ಶಿಫಾರಸು ಮಾಡುತ್ತೇವೆ. ನಮ್ಮ ತುರ್ತು ಪಡೆಗಳು ಸಾಕಷ್ಟು ಸಜ್ಜುಗೊಳಿಸಲ್ಪಟ್ಟಿಲ್ಲ. ಇದರಿಂದುಂಟಾಗುವ ಕೆಲವು ಕಳವಳಗಳನ್ನು ಈ ಪರಿಶೀಲನೆಗೆ ಪರಿಹರಿಸುತ್ತದೆ.

**3. ಪೊಲೀಸರಿಗೆ ಸಮೂಹಗಳ ನಿರ್ವಹಣೆಗೆ ಮಾರ್ಗಸೂಚಿಗಳು ಮತ್ತು ಪ್ರಮಾಣಿಕ ಕಾರ್ಯನಿರ್ವಹಣಾ ಪ್ರಕ್ರಿಯೆ.**

ಇದರ ಜೊತೆಯಲ್ಲಿ, ಅಗ್ನಿಶಾಮಕ ವಾಹನಗಳು ಮತ್ತು ಅಗ್ನಿಶಾಮಕ ಸಿಬ್ಬಂದಿಗಳ ಮುಕ್ತ ಚಲನೆಯನ್ನು ತಡೆಗಟ್ಟುವ ರೀತಿಯಲ್ಲಿ ನೂರಾರು ಜನರು ಈ ಕಟ್ಟಡದ ಸುತ್ತಲೂ ಒಟ್ಟುಗೂಡಿದರು ಎಂಬುದು ಈ ಘಟನೆಯ ಕುರಿತು ತಿಳಿದುಬಂದ ಒಂದು ಅಂಶ. ಸ್ಪಷ್ಟವಾಗಿ, ಈ ಘಟನೆಯ ಸಂದರ್ಭದಲ್ಲಿ ಜನಸಂದಣಿಯ ನಿರ್ವಹಣೆ ಸಾಧ್ಯವಾಗದೇ ಇರುವುದರಿಂದಾಗಿ ಅಗ್ನಿಶಾಮಕ ಮತ್ತು ಆಂಬುಲೆನ್ಸ್ ಸೇವೆಗಳು ಸ್ಥಳಕ್ಕೆ ತಲುಪಲು ವಿಳಂಬಕ್ಕೆ ಕಾರಣವಾಯಿತು. ಈ ರೀತಿಯ ಜನಸಂದಣಿಯು ಭಯೋತ್ಪಾದಕ ದಾಳಿಗಳಂತಹ ಇತರ ತುರ್ತು ಪರಿಸ್ಥಿತಿಗಳಲ್ಲಿ ಅಪಾಯವನ್ನುಂಟುಮಾಡುತ್ತದೆ. ಇದು ಭಯೋತ್ಪಾದಕರಿಗೆ ಅಸ್ತವ್ಯಸ್ತತೆಯನ್ನು ಬಳಸಿಕೊಂಡು ಹಾನಿಯುಂಟುಮಾಡಲು ಮತ್ತು ಜನಸಂದಣಿಯಲ್ಲಿನ ಗೊಂದಲವನ್ನು ಬಳಸಿಕೊಂಡು ತಪ್ಪಿಸಿಕೊಂಡು ಹೋಗಲು ಹೆಚ್ಚಿನ ಅವಕಾಶಗಳನ್ನು ಒದಗಿಸುತ್ತದೆ, ಇದರಿಂದಾಗಿ ಭಯೋತ್ಪಾದನಾ ವಿರೋಧಿ ಕಾರ್ಯಾಚರಣೆಗಳ ಸಂದರ್ಭದಲ್ಲಿ ಜನಸಮೂಹದ ನಿರ್ವಹಣೆಯು ಇನ್ನಷ್ಟು ಸವಾಲುಗಳನ್ನು ಮತ್ತು ಬೆದರಿಕೆಗಳನ್ನು ಉಂಟುಮಾಡುತ್ತದೆ.

ಮುಂಬೈ ಭಯೋತ್ಪಾದನಾ ದಾಳಿಗಳ ಸಂದರ್ಭದಲ್ಲಿ ನಾನು ಕಾರ್ಯಾಚರಣೆಯ ಸಂದರ್ಭದಲ್ಲಿ ಜನರನ್ನು ನಿರ್ವಹಿಸುವ ಕೆಲವು ಸಲಹೆಗಳೊಂದಿಗೆ ಮಾನ್ಯ ಗೃಹ ಸಚಿವರಿಗೆ ಬರೆದಿದ್ದೆ (ಪ್ರತಿಯನ್ನು ಲಗತ್ತಿಸಲಾಗಿದೆ).

ಆದ್ದರಿಂದ ತುರ್ತು ಪರಿಸ್ಥಿತಿಗಳಲ್ಲಿ, ಸ್ಥಳೀಯ ಪೋಲಿಸರು ಸ್ಪಷ್ಟವಾದ ಪ್ರಮಾಣಿತ ಕಾರ್ಯನಿರ್ವಹಣೆ ಕಾರ್ಯವಿಧಾನಗಳು ಮತ್ತು ಮಾರ್ಗದರ್ಶಿ ಸೂತ್ರಗಳನ್ನು ಹೊಂದಿರಬೇಕು, ಇದು ಘಟನೆ ಪ್ರದೇಶದ ಸುತ್ತಲೂ ಜನಸಂದಣಿಯಿಲ್ಲದ ವಲಯವನ್ನು ರಚಿಸಿಕೊಂಡಿರಬೇಕು. ಜನಸಮೂಹದ ನಿರ್ವಹಣೆಗಾಗಿ ಈ ನಿರ್ದಿಷ್ಟ ಮಾರ್ಗಸೂಚಿಗಳನ್ನು ಪೊಲೀಸರು ಸ್ಥಳದಲ್ಲಿ ರಚಿಸಬೇಕು. ಅಲ್ಲಿನ

ಸ್ಥಳೀಯ ನಾಗರೀಕರನ್ನು ಸ್ಥಳಾಂತರಿಸಬೇಕು ಮತ್ತು ಈ ಘಟನೆಯ ದೃಶ್ಯದ ಸುತ್ತ ಯಾವುದೇ ಗುಂಪಿಗೆ ಪ್ರವೇಶಿಸದಂತೆ ನಿಷೇಧಿಸಬೇಕು.

ಸಾಧ್ಯವಾದಷ್ಟು ಬೇಗ ಅಗತ್ಯವಾದ ನಿರ್ದೇಶನಗಳನ್ನು ನೀಡಲು ನಾನು ನಿಮ್ಮನ್ನು ಕೇಳಿಕೊಳ್ಳುತ್ತೇನೆ.

ಇಂತಿ ನಿಮ್ಮ ವಿಶ್ವಾಸಿ,
ರಾಜೀವ್ ಚಂದ್ರಶೇಖರ್

ಶ್ರೀ ಬಿ.ಎಸ್ ಯಡಿಯೂರಪ್ಪ
ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳು,
ಬೆಂಗಳೂರು

# 2

# 2020ರ ಬೆಂಗಳೂರಿಗಾಗಿ ಯೋಜನೆ ರೂಪಿಸಲು ನಗರಾಭಿವೃದ್ಧಿ ಸಚಿವರಿಗೆ ಪತ್ರ

8 ನೇ ಮಾರ್ಚ್, 2011

ಶ್ರೀ ಕಮಲನಾಥ್ ಜೀ

ಈಗಿರುವ ನಗರ ಕೇಂದ್ರಗಳನ್ನು ಪುನಶ್ಚೇತನಗೊಳಿಸುವುದು ಮತ್ತು ದೇಶದ ಹೊಸ ನಗರ ಕೇಂದ್ರಗಳನ್ನು ಹುಟ್ಟುಹಾಕುವಲ್ಲಿ ಜೆಎನ್‌ಎನ್‌ಆರ್‌ಯುಎಂ ಅನ್ನು ಪುನರ್ರಚಿಸುವ ಮತ್ತು ಮರು ಗಮನ ಕೇಂದ್ರೀಕರಿಸುವ ನಿಮ್ಮ ಉದ್ದೇಶಿತ ಯೋಜನೆಗೆ ಇದು ಸಂಬಂಧಿಸಿದೆ.

ಸ್ವಾತಂತ್ರ್ಯದ 60 ವರ್ಷಗಳ ಬಳಿಕವೂ ಸಹ ಭಾರತವು ವಿಶ್ವದರ್ಜೆಯ ನಗರವನ್ನು ಹೊಂದಿಲ್ಲ ಎಂಬುದು ನಿಜಕ್ಕೂ ದುಃಖಕರ ವಿಷಯ ಎಂಬುದನ್ನು ನೀವು ಒಪ್ಪುತ್ತೀರಿ. ಆಧುನಿಕ, ಸುಸ್ಥಿರ ನಗರಗಳನ್ನು ಹೊಂದಿರುವ ಹೂಡಿಕೆಗಳಿಗೆ ಜಾಗತಿಕವಾಗಿ ಸ್ಪರ್ಧಾತ್ಮಕ ತಾಣವೆಂದು ನಮ್ಮ ನಗರಗಳು ಕರೆಸಿಕೊಳ್ಳುವುದು ಮಹತ್ವದ್ದಾಗಿದೆ ಎಂದು ನೀವು ಒಪ್ಪುತ್ತೀರಿ. ನಾನು ವಿವರಿಸಿದಂತೆ, ಜೆಎನ್‌ಎನ್‌ಆರ್‌ಯುಎಂ ನ

ತಂತ್ರವು ಹಲವಾರು ವಿಭಿನ್ನ ನಗರ ಮೂಲಸೌಕರ್ಯ ಯೋಜನೆಗಳಿಗೆ ನಿಧಿಯನ್ನು ನೀಡುತ್ತಿದೆಯಾದರೂ, ಏಷ್ಯಾ ಮತ್ತು ಪ್ರಪಂಚದ ಬಹುತೇಕ ಇತರ ನಗರಗಳು ಮಾಡಿದಂತೆ ಎಲ್ಲ ಮೂಲಸೌಕರ್ಯವನ್ನೂ ಸಮಗ್ರ, ಸುಸಂಬದ್ಧ ಮತ್ತು ಬಹು–ಪದರದ ನಗರ ಅಭಿವೃದ್ಧಿಯ ನೀಲನಕ್ಷೆಗೆ ಎಲ್ಲವನ್ನೂ ಸೇರಿಸಿಕೊಳ್ಳುವುದು ಇದರಲ್ಲಿ ಸೇರಿಲ್ಲ.

ಬೆಂಗಳೂರಿನ ನಗರಕ್ಕೆ ನಮ್ಮಿಂದ ಅಭಿವೃದ್ಧಿಪಡಿಸಲಾಗಿರುವ, ಯೋಜನಾ ಆಯೋಗದ ಸದಸ್ಯರಾದ ಶ್ರೀ ಅರುಣ್ ಮೈರಾ ಅವರೊಂದಿಗೆ ಹಂಚಿಕೊಂಡಿರುವ, 2020ರ ಬೆಂಗಳೂರು ಯೋಜನೆಯನ್ನು ನಾನು ನಿಮಗೆ ಕಳುಹಿಸುತ್ತಿದ್ದೇನೆ. ಆಧುನಿಕ, ಸುಸ್ಥಿರ ನಗರಗಳನ್ನು ನಿರ್ಮಿಸಲು ಹೊಸ ದಿಶೆಯನ್ನು ನೀವು ನೀಡುತ್ತೀರಿ ಎಂದು ನಾನು ಆಶಿಸುತ್ತೇನೆ.

ಈ ನಿಟ್ಟಿನಲ್ಲಿ, ಅಗತ್ಯವಿದ್ದಲ್ಲಿ, ಯಾವುದೇ ಸ್ಪಷ್ಟೀಕರಣ ಅಥವಾ ಸಹಾಯಕ್ಕಾಗಿ ನಾನು ನಿಮಗೆ ಮತ್ತು ನಿಮ್ಮ ಸಚಿವಾಲಯಕ್ಕೆ ಲಭ್ಯವಿರುತ್ತೇನೆ.

ನಿಮ್ಮ ವಿಶ್ವಾಸಿ
ರಾಜೀವ್ ಚಂದ್ರಶೇಖರ್

ಶ್ರೀ ಕಮಲ್ ನಾಥ್
ಮಾನ್ಯ ನಗರಾಭಿವೃದ್ಧಿ ಸಚಿವರು, ಭಾರತ ಸರ್ಕಾರ
ನವ ದೆಹಲಿ

# 3

# ಜಕ್ಕೂರು ವೈಮಾನಿಕ ತರಬೇತಿ ಶಾಲೆಯ ಕುರಿತು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವರಿಗೆ ಪತ್ರ

15 ನೇ ಜೂನ್, 2011

ಶ್ರೀ ಜೋಶಿ,

ಕರ್ನಾಟಕದ ಏಕೈಕ ವೈಮಾನಿಕ ತರಬೇತಿ ಶಾಲೆಯಾಗಿರುವ ಬೆಂಗಳೂರಿನಲ್ಲಿರುವ ಸರ್ಕಾರಿ ವೈಮಾನಿಕ ತರಬೇತಿ ಶಾಲೆಯು (ಜಕ್ಕೂರಿನಲ್ಲಿರುವ ಜಿಎಫ್ಟಿಎಸ್ – (ಮೈಸೂರಿನ ರಾಜಮನೆತನದ 25 ನೇ ಹಾಗೂ ಕೊನೆಯ ಮಹಾರಾಜರಾದ ಶ್ರೀ ಜಯಾಚಮರಾಜೇಂದ್ರ ಒಡೆಯರು 1948ರಲ್ಲಿ ಸ್ಥಾಪಿಸಿದ ಮತ್ತು ದೇಶದ ಮೊದಲ ಮಹಿಳಾ ಪೈಲಟ್ ಅವರನ್ನು ನೀಡಿದ ಹೆಗ್ಗಳಿಕೆಯ ಒಂದು ಸಂಸ್ಥೆ) ನಾಗರೀಕ ವಿಮಾಯಾನ ಮಹಾನಿರ್ದೇಶನಾಲಯದ (ಡಿಜಿಸಿಎ) ರಾಷ್ಟ್ರೀಯ ಸುರಕ್ಷತೆಯ ನಿರ್ದೇಶನಾಲಯವು ರಾಷ್ಟ್ರೀಯ ಹೆದ್ದಾರಿಯಲ್ಲಿ ಎತ್ತರದ ರಸ್ತೆಯ ನಿರ್ಮಾಣದ ಕಾರಣದಿಂದ ಜಕ್ಕೂರು ವಿಮಾನ ನಿಲ್ದಾಣವು ಸ್ಥಿರವಾದ ರೆಕ್ಕೆಯ ವಿಮಾನಯಾನಕ್ಕೆ ಅಸುರಕ್ಷಿತವಾಗಿದೆ ಎಂದು ದೃಢಪಡಿಸಿರುವುದರಿಂದ ಮುಚ್ಚುವ ಅಪಾಯವನ್ನು ಎದುರಿಸುತ್ತಿದೆ.

ಡಿ.ಜಿ.ಸಿ.ಎ. ಶಿಫಾರಸು ನೇರವಾಗಿ ಜಿಎಫ್ಟಿಎಸ್ ಚಟುವಟಿಕೆಗಳ ಮೇಲೆ ಮತ್ತು ಏರೋಡ್ರೋಮಿನಿಂದ ಕಾರ್ಯನಿರ್ವಹಿಸುವ ಇತರ ಹಗುರ ವಿಮಾನಗಳ ಮೇಲೆ ಸಹ ಪರಿಣಾಮ ಬೀರುತ್ತದೆ. ಹಿಂದೆ ಎತ್ತರಿಸಿದ ಹೆದ್ದಾರಿಗಾಗಿ NHAI ಗೆ ಪ್ರತಿನಿಧಿತ್ವಗಳನ್ನು ಸಲ್ಲಿಸಲಾಗಿದ್ದು, ಅಸ್ತಿತ್ವದಲ್ಲಿರುವ ಹೆದ್ದಾರಿ ಮಟ್ಟಕ್ಕೆ ರನ್ ವೇ ಜೋಡಣೆಗೆ ತಕ್ಕಂತೆ 50 ಮೀಟರುಗಳಷ್ಟು ಕೆಳಕ್ಕೆ ತರಬೇಕು ಎಂದು ಸೂಚಿಸಲಾಗಿತ್ತು. ಇದು ಜಕ್ಕೂರ್ ಏರೋಡ್ರೋಮಿನಲ್ಲಿ ವಿಮಾನ ಸುರಕ್ಷತೆಯನ್ನು, ಸ್ಥಿರ ವಿಂಗ್ ವೈಮಾನಿಕ ಕಾರ್ಯಾಚರಣೆಗಳ ಮುಂದುವರಿದ ಲಭ್ಯತೆ ಮತ್ತು ಆಕಸ್ಮಿಕಗಳ/ಅಪಘಾತಗಳನ್ನು ತಪ್ಪಿಸಲು ಟ್ರೈನೀ ಪೈಲಟ್‌ಗಳ ಕಾರ್ಯಾಚರಣೆಗಳಿಗಾಗಿ ಉನ್ನತ ಸುರಕ್ಷತೆಯನ್ನು ಒದಗಿಸುವುದನ್ನು ಖಚಿತಪಡಿಸುತ್ತದೆ.

ಜಕ್ಕೂರು ಏರೋಡ್ರೋಮ್ ನಲ್ಲಿ ಸ್ಥಿರ ವಿಂಗ್ ಕಾರ್ಯಾಚರಣೆ ಕಡಿತಗೊಳಿಸುವ ಯಾವುದೇ ಕ್ರಮವು ಏರೋಡ್ರೋಮಿನಲ್ಲಿ ಕಾರ್ಯಾಚರಣೆಗಳನ್ನು ಮಿತಿಗೊಳಿಸುತ್ತದೆ ಮತ್ತು ಶಾಲೆಯಲ್ಲಿ ವಾಯುಯಾನ ತರಬೇತಿ ಪಡೆಯುತ್ತಿರುವ ಕರ್ನಾಟಕ ಯುವಕರ ಭವಿಷ್ಯದ ಅಭಿವೃದ್ಧಿಯ ಮೇಲೆ ಪರಿಣಾಮ ಬೀರುತ್ತದೆ.

ಆದ್ದರಿಂದ ವಿಮಾನಯಾನ ಕ್ಷೇತ್ರದಲ್ಲಿ ಸುರಕ್ಷತೆ ಮತ್ತು ಕರ್ನಾಟಕದ ಯುವಜನತೆಯ ಅಭಿವೃದ್ಧಿಯ ದೃಷ್ಟಿಯಿಂದ ನಾನು ಈ ವಿಷಯದಲ್ಲಿ ನಿಮ್ಮ ಹಸ್ತಕ್ಷೇಪವನ್ನು ಕೋರುತ್ತೇನೆ ಮತ್ತು ಡಿ.ಜಿ.ಸಿ.ಎ.ಯಿಂದ ವಿಷಯವನ್ನು ವಿವರವಾಗಿ ಪರೀಕ್ಷಿಸಿ ಮತ್ತು ಅವರ ಶಿಫಾರಸುಗಳನ್ನು ತಜ್ಞರು ಸಲ್ಲಿಸುವವರೆಗೂ ಹೆದ್ದಾರಿಯಲ್ಲಿನ ಎಲ್ಲಾ ನಿರ್ಮಾಣ ಕಾರ್ಯಗಳನ್ನು ನಿಲ್ಲಿಸುವ ಅಗತ್ಯ ಸೂಚನೆಗಳನ್ನು ರವಾನಿಸಲು ನಾನು ಮನವಿ ಮಾಡುತ್ತೇನೆ.

ಈ ವಿಷಯದ ಬಗ್ಗೆ ನಿಮ್ಮ ತುರ್ತು ಮಧ್ಯಪ್ರವೇಶಕ್ಕಾಗಿ ನಾನು ಎದುರುನೋಡುತ್ತೇನೆ.

ನಿಮ್ಮ ವಿಶ್ವಾಸಿ
ರಾಜೀವ್ ಚಂದ್ರಶೇಖರ್

ಡಾ. ಸಿಪಿ ಜೋಷಿ,
ಮಾನ್ಯ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವರು,
ಸಾರಿಗೆ ಭವನ,

1, ಪಾರ್ಲಿಮೆಂಟ್ ಸ್ಟ್ರೀಟ್,
ನವ ದೆಹಲಿ – 110001.

ನಕಲು ಪ್ರತಿ:

ಶ್ರೀ ವಯಲಾರ್ ರವಿ,
ನಾಗರೀಕ ವಿಮಾನಯಾನ ಸಚಿವ

ಶ್ರೀ ಬಿ ಎಸ್ ಯಡಿಯೂರಪ್ಪ,
ಕರ್ನಾಟಕದ ಮುಖ್ಯಮಂತ್ರಿ

# 4

# ಪದವೀಧರ ಕ್ಷೇತ್ರದ ಮತದಾರರ ಯಾದಿಯ ಕುರಿತು ಬಿಬಿಎಂಪಿ ಆಯುಕ್ತರಿಗೆ ಪತ್ರ

18 ನೇ ಅಕ್ಟೋಬರ್, 2011

ಶ್ರೀ ಸಿದ್ದಯ್ಯ,

ನಿಮಗೆ ತಿಳಿದಿರುವಂತೆ, ಕರ್ನಾಟಕ ವಿಧಾನ ಪರಿಷತ್ತಿನ ಪದವೀಧರರ ಕ್ಷೇತ್ರಗಳಿಗೆ ಮತದಾರರ ನೋಂದಣಿಗಳು (ಈ ಸಮಯದಲ್ಲಿ ಬೆಂಗಳೂರು ಪದವೀಧರರ ಕ್ಷೇತ್ರವು ಸೇರಿದಂತೆ) ಈಗ ತೆರೆದಿರುತ್ತವೆ.

ಕೊನೆಯದಾಗಿ 2006 ರಲ್ಲಿ ಈ ಚುನಾವಣೆ ನಡೆಯುವಾಗ ಅರ್ಹ ಮತದಾರರಲ್ಲಿ 6% ರಷ್ಟು (60,000ದಲ್ಲಿ 10 ಮಾತ್ರ) ಮಾತ್ರ ನೋಂದಾಯಿತರಾಗಿದ್ದಾರೆ ಎಂಬುದನ್ನು ಪರಿಗಣಿಸಿದರೆ, ಈ ಬಾರಿ ಮತದಾರರ ನೋಂದಣಿ ಹೆಚ್ಚು ಬಲವಾಗಿರಬೇಕು.

ಪ್ರಕ್ರಿಯೆಯನ್ನು ಅಧ್ಯಯನ ಮಾಡಿದ ನಂತರ, ಇದರಲ್ಲಿನ ದೊಡ್ಡದಾದ "ಅಡಚಣೆ" ಎಂದರೆ ಅಧಿಕಾರಿಗಳು ಮೂಲ ದಾಖಲೆಗಳ 'ದೃಢೀಕರಣ' ಮಾಡಬೇಕು ಎಂಬುದಾಗಿದೆ ಎಂಬುದನ್ನು ನಾನು ತಿಳಿದುಕೊಂಡಿದ್ದೇನೆ. ಬೆಂಗಳೂರು ಪ್ರದೇಶದಲ್ಲಿ

ಸುಮಾರು 15 ಲಕ್ಷ ಕಾಲೇಜು ಪದವೀಧರರು ಇರುವುದರಿಂದ, ನಾವು ಈ ಸಮಯದಲ್ಲಿ ಹೆಚ್ಚಿನ ದಾಖಲಾತಿಯನ್ನು ಸಾಧಿಸಲು ಬಯಸಿದರೆ ಸಮರ್ಪಣಾ ಮನೋಭಾವ ಇಲ್ಲದ ಸಿಬ್ಬಂದಿ ದೃಢೀಕರಣ ಮಾಡಲು ಸಾಧ್ಯವಿಲ್ಲ.

ಆದ್ದರಿಂದ, ಬಿಬಿಎಂಪಿಯ ಪ್ರತಿ ವಾರ್ಡಿನಲ್ಲಿ ಅಭ್ಯರ್ಥಿಗಳ ದಾಖಲೆಗಳನ್ನು ದೃಢೀಕರಿಸಲು ನೀವು ಸಾಕಷ್ಟು ಮತ್ತು 'ಮೀಸಲಾದ' ಸಿಬ್ಬಂದಿಯನ್ನು ನೇಮಕ ಮಾಡಲು ನಾನು ವಿನಂತಿಸುತ್ತೇನೆ. ಅಂತಹ ಅಧಿಕಾರಿಗಳ ಪಟ್ಟಿಯನ್ನು ನನಗೆ ಸಾಧ್ಯವಾದಷ್ಟು ಬೇಗನೆ ಕಳುಹಿಸಿ, ಇದರಿಂದ ಇದನ್ನು

ಸ್ವತಃ ಬಿಬಿಎಂಪಿ ಮತ್ತು ಮತದಾರರ ಗುಂಪಿನಿಂದ ವ್ಯಾಪಕವಾಗಿ ಪ್ರಕಟಿಸಬಹುದು.

ಇಂತಿ ನಿಮ್ಮ ವಿಶ್ವಾಸಿ,
ರಾಜೀವ್ ಚಂದ್ರಶೇಖರ್

ಶ್ರೀ ಸಿದ್ದಯ್ಯ,
ಐಎಎಸ್ ಆಯುಕ್ತರು,
ಬಿಬಿಎಂಪಿ, ಬೆಂಗಳೂರು.

# 5

# ನಗರಗಳ ವಾರ್ಷಿಕ ಜೆಎನ್‌ಎನ್‌ಯುಆರ್‌ಎಂ ಸ್ಥಾನನಿಗದಿ ಕುರಿತು ನಗರಾಭಿವೃದ್ಧಿ ಸಚಿವರಿಗೆ ಪತ್ರ

13 ನೇ ಡಿಸೆಂಬರ್, 2011

ಶ್ರೀ ಕಮಲನಾಥ್ ಜೀ

ಜವಾಹರಲಾಲ್ ನೆಹರೂ ರಾಷ್ಟ್ರೀಯ ನಗರ ನವೀಕರಣ ಮಿಷನ್ (ಜೆಎನ್‌ಎನ್‌ಆರ್‌ಯುಎಂ) ಈಗ ಆರು ವರ್ಷಗಳನ್ನು ಪೂರ್ಣಗೊಳಿಸಿದೆ. ಈ ಯೋಜನೆಯನ್ನು ನಗರ ಮೂಲಭೂತ ಸೌಕರ್ಯ, ಸೇವಾ ವಿತರಣಾ ಕಾರ್ಯವಿಧಾನಗಳಲ್ಲಿ ದಕ್ಷತೆಯನ್ನು ತರುವ ಉದ್ದೇಶದಿಂದ ದೇಶಾದ್ಯಂತ ನಗರಗಳ ಅಭಿವೃದ್ಧಿ ಮತ್ತು ಸುಧಾರಿತ ರಸ್ತೆ ಅಭಿವೃದ್ಧಿಯ, ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಮುದಾಯದ ಭಾಗವಹಿಸುವಿಕೆ ಮತ್ತು ಉತ್ತರದಾಯಿತ್ವ ಮತ್ತು ನಾಗರೀಕರ ಅರೆಆಡಳಿತ ಸಂಸ್ಥೆಗಳ ಪಾಲ್ಗೊಳ್ಳುವಿಕೆಯ ಶ್ಲಾಘನೀಯ ಉದ್ದೇಶಗಳೊಂದಿಗೆ ಪ್ರಾರಂಭಿಸಲಾಯಿತು.

ಆದರೂ ನಾವು ಈ ಗುರಿಗಳ ಕಡೆಗೆ ಎಷ್ಟು ಮುಂದುವರೆದಿದ್ದೇವೆಂಬುದು ಸ್ಪಷ್ಟವಾಗಿಲ್ಲ, ಮತ್ತು ನಮ್ಮ ಗ್ರಹಿಕೆಯೆಂದರೆ ಜೆಎನ್‌ಎನ್‌ಯುಆರ್‌ಎಂ ಮತ್ತೊಂದು ತೆರಿಗೆದಾರನ ನಿಧಿಯ ಬಳಕೆಯ ಮತ್ತೊಂದು ಕಾರ್ಯಕ್ರಮವಾಗಿದೆಯೇ ಹೊರತು ಫಲಿತಾಂಶಗಳು ಅಥವಾ ಉದ್ದೇಶಗಳತ್ತ ಯಾವುದೇ ಗಮನವನ್ನು ಹೊಂದಿಲ್ಲ.

ಉದ್ದೇಶಗಳು ಮತ್ತು ಫಲಿತಾಂಶಗಳ ನಡುವಿನ ಈ ಅಂತರವನ್ನು ಪರಿಹರಿಸಲು, ಜೆಎನ್‌ಎನ್‌ಯುಆರ್‌ಎಂನಲ್ಲಿ ಹೇಳಲಾದ ಶ್ರೇಣಿಗಳಿಗೆ ಎದುರಾಗಿ ನಗರ ಮೂಲಭೂತ ಸೌಕರ್ಯ ಮತ್ತು ಆಡಳಿತ (ಯುಐಜಿ) ಘಟಕದ ಅಡಿಯಲ್ಲಿ ಬರುವ ನಗರಗಳ ವಾರ್ಷಿಕ ಜೆಎನ್‌ಎನ್‌ಆರ್‌ಯುಎಂ ಶ್ರೇಯಾಂಕ ನೀಡಿಕೆ ವಿಧಾನವನ್ನು ಜಾರಿಗೆ ತರಲು ನಾನು ಸರ್ಕಾರವನ್ನು ಕೇಳುತ್ತೇನೆ.

ಅಂತಹ ಪರಿಶೀಲನೆಯು ಕಾರ್ಯಕ್ರಮದ ನೈಜ ಪರಿಣಾಮಗಳ ಮೇಲೆ ಬೆಳಕು ಚೆಲ್ಲುತ್ತದೆ ಮತ್ತು ಜೆಎನ್‌ಎನ್‌ಯುಆರ್‌ಎಂ ಬೆಂಬಲಿಸುವ ಪ್ರತಿ 65 ನಗರಗಳ ಸುಸಂಬದ್ಧ ಮತ್ತು ಸಮಗ್ರ ಅಭಿವೃದ್ಧಿಯ ಮೇಲೆ ಗಮನವನ್ನು ಕೇಂದ್ರೀಕರಿಸಲು ಸಹಾಯ ಮಾಡುತ್ತದೆ. ಇದು ಜೆಎನ್‌ಎನ್‌ಯುಆರ್‌ಎಂನ ಸುಧಾರಣೆ/ ಅಭಿವೃದ್ಧಿಯ ಗುರಿಗಳ ಆಶಯದಂತೆ ನಮ್ಮ ನಗರಗಳಲ್ಲಿ ನಿಜವಾದ ಸ್ಪರ್ಧೆಯನ್ನು ಉಂಟುಮಾಡುತ್ತದೆ.

ನೀವು ಬಯಸಿದಲ್ಲಿ ನಾನು ನಿಮ್ಮನ್ನು ಭೇಟಿ ಮಾಡಲು ಮತ್ತು ಈ ವಿಷಯವನ್ನು ನಿಮ್ಮೊಂದಿಗೆ ಇನ್ನಷ್ಟು ಚರ್ಚಿಸಲು ಸಹ ಲಭ್ಯನಿರುತ್ತೇನೆ.

ನಿಮ್ಮ ವಿಶ್ವಾಸಿ,
ರಾಜೀವ್ ಚಂದ್ರಶೇಖರ್

ಶ್ರೀ ಕಮಲ್ ನಾಥ್,
ಮಾನ್ಯ ನಗರಾಭಿವೃದ್ಧಿ ಸಚಿವರು,
ಭಾರತ ಸರ್ಕಾರ
ನವ ದೆಹಲಿ

# 6

# ಬೆಂಗಳೂರು ಮೂಲಸೌಕರ್ಯ ಯೋಜನೆಗಳ ಅಗತ್ಯ ತತ್ವಗಳ ಕುರಿತು ಮುಖ್ಯಮಂತ್ರಿಯವರಿಗೆ ಪತ್ರ

ಫೆಬ್ರವರಿ 9, 2012

ಶ್ರೀ ಸದಾನಂದ ಗೌಡ ಅವರೆ,

ನಿಮ್ಮೊಂದಿಗೆ ನನ್ನ ಮುಂಚಿನ ಸಭೆಗಳಲ್ಲಿ ನಾವು ಚರ್ಚಿಸಿದಂತೆ, ನಗರದ ಎಲ್ಲೆಡೆ ಅಭಿವೃದ್ಧಿಯ ಹೆಸರಿನಲ್ಲಿ ಪಟ್ಟಭದ್ರ ಹಿತಾಸಕ್ತಿಗಳಿಂದ ಹೇಗೆ ಪ್ರದೇಶಗಳನ್ನು ನಾಶಗೊಳಿಸಲಾಗುತ್ತಿದೆ ಎಂಬ ಬಗ್ಗೆ ನಗರದಾದ್ಯಂತ ಇರುವ ಅನೇಕ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಟನೆಗಳಿಂದ ನಾನು ದೂರು ಸ್ವೀಕರಿಸುತ್ತಿದ್ದೇನೆ. ಸ್ಥಳೀಯ ನಿವಾಸಿಗಳ ಸಲಹೆಗಾಗಿ ಅವರನ್ನು ಸಂಪರ್ಕಿಸದ ಅಥವಾ ಅವರ ಒಪ್ಪಿಗೆಯನ್ನು ತೆಗೆದುಕೊಳ್ಳಲಾಗದ ಈ ಅಭಿವೃದ್ಧಿಯ ಮಾದರಿ ಸಾರ್ವಜನಿಕ ಸೇವೆಯಲ್ಲಿ ನಂಬಿಕೆ ಹೊಂದಿರುವ ಸರ್ಕಾರಕ್ಕೆ ತಕ್ಕದ್ದಲ್ಲ.

ನಿಮಗೆ ಅರಿವಿರುವಂತೆ, ಇತ್ತೀಚೆಗೆ ಕರ್ನಾಟಕದ ಹೈಕೋರ್ಟ್ ನಾಗರೀಕರ ಕ್ರಿಯಾಸಮಿತಿ (ಸಿಎಫ್ಎಫ್) ಸಲ್ಲಿಸಿದ ಸಾರ್ವಜನಿಕ ಹಿತದ ಅರ್ಜಿಯ

ಅಡಿಯಲ್ಲಿ ವಾಸಯೋಗ್ಯ ಪ್ರದೇಶಗಳಲ್ಲಿ ಎಲ್ಲಾ ವಾಣಿಜ್ಯ ಚಟುವಟಿಕೆಗಳಿಗೆ ತಡೆಯಾಜ್ಞೆ ನೀಡಿದೆ.

ಬೆಂಗಳೂರು ವಾಸಯೋಗ್ಯವಾದ ವಸತಿ ಪ್ರದೇಶಗಳ ದೀರ್ಘ ಇತಿಹಾಸವನ್ನು ಹೊಂದಿದೆ, ಆದರೆ ಆರಾಮದಾಯಕ ಮತ್ತು ಆಕರ್ಷಕ ನಗರದ ಅನುಭವವು ಈಗ ಅಪಾಯದಲ್ಲಿದೆ. ಪ್ರಮುಖ ವಿಷಯಗಳು ಮತ್ತು ಸವಾಲುಗಳ ಕುರಿತು ಸಮುದಾಯದ ತೊಡಗಿಸುವಿಕೆಯನ್ನು ಉತ್ತೇಜಿಸುವ ಮೂಲಕ ಮತ್ತು ಅದರ ನಿವಾಸಿಗಳು ವ್ಯಕ್ತಪಡಿಸುವ ಆದ್ಯತೆಗಳ ಆಧಾರದ ಮೇಲೆ ನಗರವನ್ನು ಅಭಿವೃದ್ಧಿಪಡಿಸುವ ಮೂಲಕ ಅದನ್ನು ಪುನಃಸ್ಥಾಪಿಸಬೇಕೆಂದು ನಾವು ಆಶಿಸಬಹುದು. ಈ ಸಮುದಾಯ ಪ್ರಜ್ಞೆಯನ್ನು ನಿರ್ಮಿಸುವುದಕ್ಕೆ ಮತ್ತು ಪೋಷಣೆ ಮಾಡುವುದಕ್ಕೆ ಸಂಬಂಧಿಸಿದ ಹಲವು ಪ್ರಯೋಜನಗಳಿವೆ – ಈ ನಗರದ ಭಾಗವಾದ ಭಾವನೆ, ಸಂಕೀರ್ಣ ಸಮಸ್ಯೆಗಳ ನಿರ್ವಹಣೆ, ನಿರ್ವಹಣೆ ಮತ್ತು ಸುರಕ್ಷತೆಯ ಭಾವನೆಯ ಜೊತೆ ಮತ್ತು ಹಲವು ಕನಸುಗಳ ಈಡೇರಿಕೆಗೆ ಪ್ರಯತ್ನಿಸಬಹುದು. ನಾಗರೀಕರು ನಿರಾಶೆಗೊಂಡಿದ್ದಾರೆ. ಏಕೆಂದರೆ ಅವರ ನೆರೆಹೊರೆಯ ಪ್ರದೇಶಗಳು ಮತ್ತು ಕಣ್ಣಳತೆಯಲ್ಲಿರುವ ಪ್ರದೇಶಗಳ ಕುರಿತಾಗಿ ಅವರು ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ.

ಪಾರದರ್ಶಕತೆಯ ಮೇಲೆ ಗಮನ ನೀಡುವ ಮೂಲಕ ಮತ್ತು ನೆರೆಹೊರೆಯ ಜೀವನದ ವಿವಿಧ ಅಂಶಗಳಲ್ಲಿ ನಾಗರೀಕರನ್ನು ತೊಡಗಿಸುವ ಮೂಲಕ, ಪ್ರತಿ ಯಶಸ್ವೀ ಆಧುನಿಕ ನಗರದಲ್ಲಿ, ನಾಗರೀಕರು ತಮ್ಮ ಮನೆಗಳು ಮತ್ತು ಕೆಲಸದ ಸ್ಥಳಗಳ ಸುತ್ತಲಿನ ಅಭಿವೃದ್ಧಿಯ ವಿಚಾರದಲ್ಲಿ ಮತ್ತು ಅದರ ದಿಶೆಯನ್ನು ನಿರ್ಧಸಿರುವಲ್ಲಿ ಅತ್ಯಂತ ಶಕ್ತಿಯುತ ಧ್ವನಿಯನ್ನು ಹೊಂದಿರುತ್ತಾರೆ. ಬೆಂಗಳೂರಲ್ಲಿ ಕೂಡ ಇದೇ ನಡೆಯಲಿ ಎಂದು ನಾವು ಬಯಸಬೇಕು.

ನಾನು ನಿಮ್ಮನ್ನು ಕೆಳಗಿನ ಕ್ರಮಗಳನ್ನು ಜರುಗಿಸುವಂತೆ ವಿನಂತಿಸುತ್ತೇನೆ:

1. ಮುಖ್ಯಮಂತ್ರಿಯವರ ಅಧ್ಯಕ್ಷತೆ ಅಡಿಯಲ್ಲಿ ಎಬಿಐಡಿಇ 2009ರ ಜನವರಿಯಲ್ಲಿ ನಗರದ ಒಟ್ಟಾರೆ ಅಭಿವೃದ್ಧಿಗಾಗಿ ಒಂದು ಸಮಗ್ರವಾದ ನೀಲನಕ್ಷೆಯಾಗಿರುವ ಪ್ಲಾನ್ ಬೆಂಗಳೂರು2020ನ್ನು ಸಲ್ಲಿಸಿತು. ಅದನ್ನು ಕಾರ್ಯಗತಗೊಳಿಸಲು ನಾನು ನಿಮ್ಮನ್ನು ವಿನಂತಿಸುತ್ತೇನೆ. ಇದು ನಗರದ ಸುಸ್ಥಿರ ಅಭಿವೃದ್ಧಿಗೆ ಸರಿಯಾದ ಮಾರ್ಗವನ್ನು ರಚಿಸುತ್ತದೆ.

2. ಸರ್ಕಾರಿ ಸಂಸ್ಥೆಗಳಿಂದ ಬೆಂಗಳೂರು ಮೂಲಸೌಕರ್ಯ ಯೋಜನೆಗಳಿಗೆ ಅಗತ್ಯ ತತ್ವಗಳ ಕುರಿತಾದ ಒಂದು ಟಿಪ್ಪಣಿಯನ್ನು ನಿಮ್ಮ ಉಲ್ಲೇಖಕ್ಕಾಗಿ ಲಗತ್ತಿಸಲಾಗಿದೆ. ನಿವಾಸಿಗಳ ಹಿತಾಸಕ್ತಿಗಳನ್ನು ರಕ್ಷಿಸಲು ಮತ್ತು ಬೆಂಗಳೂರಿನಲ್ಲಿ ಸುಸ್ಥಿರ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಈ ತತ್ವಗಳನ್ನು ಅನುಸರಿಸಲು ಎಲ್ಲಾ ಸರ್ಕಾರಿ ಸಂಸ್ಥೆಗಳು/ಇಲಾಖೆಗಳನ್ನು ನಿರ್ದೇಶಿಸಲು ನಾನು ವಿನಂತಿಸುತ್ತೇನೆ.

ಇಂತಹ ಕ್ರಮವು ಜನರ ವಿಶ್ವಾಸವನ್ನು ಹೆಚ್ಚಿಸುತ್ತದೆ ಮತ್ತು ನಿಮ್ಮ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಬೆಂಬಲ ನೀಡುವುದೆಂಬ ಬಗ್ಗೆ ನನಗೆ ವಿಶ್ವಾಸವಿದೆ.

ಈ ವಿಷಯದ ಬಗ್ಗೆ ನಿಮ್ಮ ತುರ್ತು ಕ್ರಮಕ್ಕೆ ನಾನು ಎದುರುನೋಡುತ್ತೇನೆ.

ಇಂತಿ ನಿಮ್ಮ ವಿಶ್ವಾಸಿ,
ರಾಜೀವ್ ಚಂದ್ರಶೇಖರ್

ಶ್ರೀ ಡಿ ವಿ ಸದಾನಂದ ಗೌಡ,
ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳು,
ವಿಧಾನ ಸೌಧ, ಬೆಂಗಳೂರು

**ಉತ್ತಮ ಬೆಂಗಳೂರಿಗಾಗಿ ಎಬಿಐಡಿಇ (ABIDe) ಕಾರ್ಯಪಡೆ**
**ಸರ್ಕಾರಿ ಸಂಸ್ಥೆಗಳಿಂದ ಬೆಂಗಳೂರಿನ ಮೂಲಸೌಕರ್ಯ**
**ಯೋಜನೆಗಳಿಗೆ ಅಗತ್ಯ ತತ್ವಗಳು**

1. **ನೆರೆಹೊರೆಯಲ್ಲಿನ ನಿವಾಸಿಗರ ಕ್ಷೇಮಾಭಿವೃದ್ಧಿ ಸಂಘದಿಂದ ಒಪ್ಪಿಗೆಯಿಲ್ಲದೇ/ಅನುಮತಿಯಿಲ್ಲದೇ ಯಾವುದೇ ಯೋಜನೆಯನ್ನೂ ಪ್ರಾರಂಭಿಸಬಾರದು**

   ಎ) ಮೂಲಸೌಕರ್ಯ ಯೋಜನೆಗಳು ನೆರೆಹೊರೆಯ ಪ್ರದೇಶಗಳನ್ನು ನಾಶಗೊಳಿಸಬಾರದು – ಬೆಂಗಳೂರು ಒಂದು ನೆರೆಹೊರೆಗಳ ನಗರ – ಹೂಡಿಕೆದಾರರು / ಸಂದರ್ಶಕರು / ನಿವಾಸಿಗಳು ಇವರೆಲ್ಲರಿಗೂ ಉತ್ತಮ ನೆರೆಹೊರೆಯ ಅಗತ್ಯವಿರುತ್ತದೆ

ಬಿ) ನಿವಾಸಿಗರ ಕ್ಷೇಮಾಭಿವೃದ್ಧಿ ಸಂಘ/ನಿವಾಸಿಗರಿಂದ ಒಪ್ಪಿಗೆ ಪಡೆದ ಮೇಲಷ್ಟೇ ಯೋಜನೆಗಳ ಅನುಷ್ಠಾನ ಮಾಡಬೇಕು

ಸಿ) ಎತ್ತರದ ರಸ್ತೆಗಳನ್ನು ನಿರ್ಮಿಸುವ ಮೂಲಕ ಪ್ರಮುಖ ರಸ್ತೆಗಳ ಸಾಮರ್ಥ್ಯವನ್ನು ಹೆಚ್ಚಿಸಬೇಕು. ಮತ್ತು ಅಗತ್ಯವಿದ್ದರೆ ಪ್ರಮುಖ ರಸ್ತೆಗಳ ಸಾಮರ್ಥ್ಯಕ್ಕೆ ಹೆಚ್ಚಿನ ಸಾಮರ್ಥ್ಯ ಸೇರಿಸಲು ಎತ್ತರಿಸಿದ ರಸ್ತೆಗಳ ತತ್ವವನ್ನೇ ಬಳಸಬೇಕು.

ಡಿ) ನಾಗರೀಕರ ಕಾಳಜಿಗಳನ್ನು ನಿರ್ಲಕ್ಷಿಸಬಾರದು

**2. ಸಾರಿಗೆ ಮೂಲಸೌಕರ್ಯ ಯೋಜನೆಗಳು**

ಎ) ಉದ್ದೇಶವು ಸಾಮರ್ಥ್ಯ ಮತ್ತು ಬಳಕೆಯನ್ನು ವಿಸ್ತರಿಸುವುದು/ ಹೆಚ್ಚಿಸುವುದಾಗಿದ್ದು ಇತರ ನಗರ ಬೆಳವಣಿಗೆ ಆದ್ಯತೆಗಳೊಂದಿಗೆ ದೀರ್ಘಾವಧಿಯ ಸಾರಿಗೆ ಯೋಜನೆಗಳನ್ನು ಸಹಾ ಹೊಂದಿರಬೇಕು.

ಬಿ) ಅಂಡರ್ ಪಾಸುಗಳು ಸಾಮರ್ಥ್ಯವನ್ನು ಹೆಚ್ಚಿಸುವುದಿಲ್ಲ, ಹೀಗಾಗಿ ಸಮಸ್ಯೆಗೆ ಅವು ಪರಿಹಾರವಲ್ಲ

i. ಅವರು ಈಗಾಗಲೇ ಇರುವ ಗ್ರೇಡ್ ಸಾಮರ್ಥ್ಯವನ್ನು ವಿಭಜಿಸಿದ್ದು ವಸತಿ ಪ್ರದೇಶಗಳಿಗೆ ತೊಂದರೆಯಾಗುವಂತೆ/ಅವನತಿಗೊಳ್ಳುವಂತೆ ಮಾಡಿದ್ದಾರೆ ಮತ್ತು ಸ್ಥಳೀಯ ಸಂಚಾರ ಚಳವಳಿಯಲ್ಲಿ ಅವ್ಯವಸ್ಥೆಯನ್ನು ಸೃಷ್ಟಿಸಿದ್ದಾರೆ. ದೂರ ಸಂಚಾರದಂತೆ ಸ್ಥಳೀಯ ಸಂಚಾರ ಕೂಡ ಮುಖ್ಯವಾಗಿದೆ.

ii. ಆರ್ಟೆರಿಯಲ್ ರಸ್ತೆಗಳಲ್ಲಿ, ಅಂಡರ್ ಪಾಸುಗಳನ್ನು ರಚಿಸುವ ಮೂಲಕ, ನಾವು ಅಸ್ತಿತ್ವದಲ್ಲಿರುವ ಗ್ರೇಡ್ ಸಾಮರ್ಥ್ಯವನ್ನೇ ವಿಭಜಿಸುತ್ತಿದ್ದೇವೆ;

iii. ಇವುಗಳಿಗೆ ಗುತ್ತಿಗೆದಾರರು/ಇಂಜಿನಿಯರುಗಳು, ಪಟ್ಟಭದ್ರ ರಿಯಲ್ ಎಸ್ಟೇಟ್ ಹಿತಾಸಕ್ತಿಗಳು ಕಾರಣವೇ ಹೊರತು ನಗರ ಯೋಜನೆ ರೂಪಿಸುವವರಲ್ಲ

iv. 40 ತಿಂಗಳುಗಳಿಗಿಂತ ಹೆಚ್ಚು ಕಾಲದಿಂದ ಬಾಕಿ ಉಳಿದಿರುವ ಕದಿರೇನಹಳ್ಳಿ ಮತ್ತು ಟಾಗೋರ್ ಅಂಡರ್ ಪಾಸ್ ಪ್ರಕರಣಗಳಲ್ಲಿ

ಕಂಡುಬಂದಂತೆ ಬೆಂಗಳೂರು ಮತ್ತು ನಾಗರೀಕರು ಕಳಪೆ ಯೋಜನೆಗೆ ಬೆಲೆ ತೆರುತ್ತಿದ್ದಾರೆ.

ಸಿ) ಇದಕ್ಕೆ ಉತ್ತರ ಎಂದರೆ ಎಲಿವೇಟೆಡ್ ರಸ್ತೆಗಳು

ಹೊಸೂರು ರಸ್ತೆ, ಬಳ್ಳಾರಿ ರಸ್ತೆ, ತುಮಕೂರು ರಸ್ತೆ ಮತ್ತು ಮೈಸೂರು ರಸ್ತೆಯ ಫ್ಲೈಓವರ್ ಮೇಲಿನ ಎತ್ತರದ ರಸ್ತೆ ಇವುಗಳು ಹೊಸ ಸಾಮರ್ಥ್ಯ ಉಂಟುಮಾಡುವ ಎತ್ತರದ ರಸ್ತೆಗಳಿಗೆ ಉದಾಹರಣೆಗಳಾಗಿವೆ.

ಆರ್ಟೆರಿಯಲ್ ರಸ್ತೆಗಳಲ್ಲಿ ಅಂಡರ್ ಪಾಸ್ ರಚಿಸುವ ಮೂಲಕ, ನಾವು ಅಸ್ತಿತ್ವದಲ್ಲಿರುವ ಗ್ರೇಡ್ ಸಾಮರ್ಥ್ಯವನ್ನು ವಿಭಜಿಸುತ್ತಿದ್ದೇವೆ. ಇದರ ಬದಲಿಗೆ ಸಂಸ್ಥೆಗಳು ಎತ್ತರದ ರಸ್ತೆಗಳ ಮೂಲಕ ಹೊಸ ಸಾಮರ್ಥ್ಯವನ್ನು ನಿರ್ಮಿಸಲು ಗಮನಹರಿಸಬೇಕು.

ಡಿ) ಜಂಕ್ಷನ್ ನಂತಹ ಅಡಚಣೆಗಳಿರುವ ಸ್ಥಳಗಳಲ್ಲಿ ಅಂಡರ್ ಪಾಸ್‌ಗಳು ಮತ್ತು ಫ್ಲೈಓವರುಗಳು ಕಾರ್ಯನಿರ್ವಹಿಸುತ್ತವೆ.

ರಸ್ತೆಗಳು, ಅಂಡರ್ ಪಾಸುಗಳು ಮತ್ತು ಫ್ಲೈಓವರುಗಳ ಸಾಮರ್ಥ್ಯವನ್ನು ಮೀರಿದ ಸಂಚಾರವಿದ್ದಲ್ಲಿ ಅಲ್ಲಿ ಇವು ತಾತ್ಕಾಲಿಕ ಪರಿಹಾರ ಮಾತ್ರ.

ಆದಾಗ್ಯೂ, ಅಂಡರ್ ಪಾಸ್‌ಗಳು ಮತ್ತು ಫ್ಲೈಓವರುಗಳ ಜೊತೆಗೆ ಕೆಳಗಿನ 2 ವಿಧಾನಗಳನ್ನು ಅನುಸರಿಸುವ ಮೂಲಕ ನಾವು ಸಾಮರ್ಥ್ಯವನ್ನು ಹೆಚ್ಚಿಸಬೇಕಾಗಿದೆ.

1. ಅಸ್ತಿತ್ವದಲ್ಲಿರುವ ರಸ್ತೆಗಳ ಅಗಲವನ್ನು ವಿಸ್ತರಿಸುವ ಮೂಲಕ

2. ಎತ್ತರದ ರಸ್ತೆಗಳನ್ನು ರಚಿಸುವ ಮೂಲಕ

ಆದರೆ ಅಸ್ತಿತ್ವದಲ್ಲಿರುವ ಕಟ್ಟಡಗಳು ಮತ್ತು ಪರಿಸರವನ್ನು ನಾಶಪಡಿಸದೇ ಆರ್ಟೇರಿಯಲ್ ರಸ್ತೆಗಳನ್ನು ಅಗಲಗೊಳಿಸಲು ಸಾಧ್ಯವಿಲ್ಲ.

ಎತ್ತರಿಸಿದ ರಸ್ತೆಗಳು ಕಾರ್ಯಸಾಧ್ಯವಾದ ಮತ್ತು ಆದ್ಯತೆಯ ಆಯ್ಕೆಯಾಗಿವೆ.

ಭವಿಷ್ಯದ ಮೆಟ್ರೋ ಮತ್ತು ಸಾರ್ವಜನಿಕ ಸಾರಿಗೆ ಮತ್ತು ಮೂಲಭೂತ ಸೌಕರ್ಯದ ಯೋಜನೆಗಳ ವಿಸ್ತರಣೆಯ ಬಗ್ಗೆ ಮನಸ್ಸಿನಲ್ಲಿಟ್ಟುಕೊಂಡು ನಾವು ಕೆಳಗಿನ ಹೆಚ್ಚು ದಟ್ಟಣೆಯಿರುವ ರಸ್ತೆಗಳಲ್ಲಿ ಎತ್ತರದ ರಸ್ತೆಗಳನ್ನು ಪ್ರಸ್ತಾಪಿಸುತ್ತೇವೆ.

ಎತ್ತರದ ರಸ್ತೆಗಳ ಜೊತೆಗೆ, ಸೆಂಟ್ರಲ್ ಸಿಲ್ಕ್ ಬೋರ್ಡ್ ಹಾಗೂ ಹೆಬ್ಬಾಳದ ನಡುವೆ ಈಗಾಗಲೇ ಪ್ರಸ್ತಾಪಿಸಲಾಗಿರುವ ಒ ಆರ್ ಆರ್ ನಿಂದ ಪ್ರಾರಂಭವಾಗುವ ಕಾರ್ಯಸಾಧ್ಯವಾದ ಆರ್ಟೀರಿಯಲ್ ಮತ್ತು ವೃತ್ತಾಕಾರದ ರಸ್ತೆಗಳಲ್ಲಿ ಬಿ ಆರ್ ಟಿ ಎಸ್ ಅನ್ನು ನಿಯೋಜಿಸಲು ನಾವು ಶಿಫಾರಸು ಮಾಡುತ್ತೇವೆ.

ಗ್ರೇಡ್ ಮಟ್ಟದಲ್ಲಿ ಈ ಎತ್ತರದ ಕಾರಿಡಾರುಗಳಲ್ಲಿ ಬಿ ಆರ್ ಟಿ ಎಸ್ ಅನ್ನು ಕೂಡ ಜಾರಿಗೊಳಿಸಬಹುದು.

ಇ) ಹೊಸ ಯೋಜನೆಗಳೊಂದಿಗೆ ಅಸ್ತಿತ್ವದಲ್ಲಿರುವ ರಸ್ತೆಗಳ ನಿರ್ವಹಣೆಗೆ ಆದ್ಯತೆ ನೀಡಬೇಕು.

ಎಫ್) ಕೆಳಗಿನ ಮಾರ್ಗಗಳಲ್ಲಿ ಎತ್ತರಿಸಿದ ರಸ್ತೆಗಳ ಅಗತ್ಯವಿದೆ

| ಕ್ರಮ ಸಂಖ್ಯೆ | ಇಲ್ಲಿಂದ | ಇಲ್ಲಿಗೆ | ದೂರ (ಕಿಮೀ) |
|---|---|---|---|
| 1 | ದೊಮ್ಮಲೂರು ಸೇತುವೆ | ವರ್ತೂರು ಕೋಡಿ | 10 ಕಿ.ಮೀ. |
| 2 | ಸೇಂಟ್ ಪ್ಯಾಟ್ರಿಕ್ ಸ್ಮಶಾನ | ಸೆಂಟ್ರಲ್ ಸಿಲ್ಕ್ ಬೋರ್ಡ್ | 4.4 ಕಿ.ಮೀ. |
| 3 | ನಾಯಂಡಹಳ್ಳಿ ಜಂಕ್ಷನ್ | ಸೆಂಟ್ರಲ್ ಸಿಲ್ಕ್ ಬೋರ್ಡ್ | 13.6 ಕಿ.ಮೀ. |
| 4 | ಮೈಸೂರು ರೋಡ್ ಸರ್ಕಲ್ | ಯೂನಿವರ್ಸಿಟಿ ಜಂಕ್ಷನ್ | 6 ಕಿ.ಮೀ. |
| 5 | ಎನ್.ಕೆ. ಜಂಕ್ಷನ್ | ಅಗರ ಕೆರೆ ಜಂಕ್ಷನ್ | 3.0 ಕಿ.ಮೀ. |
| 6 | ಈಜಿಪುರ | ಹೊಸೂರು ರಸ್ತೆ (ಮಡಿವಾಳ ಜಂಕ್ಷನ್) | 3.0 ಕಿ.ಮೀ. |
| | | ಒಟ್ಟು (ಅಂದಾಜು) | 40 ಕಿ.ಮೀ. |

ಜಿ) ಎತ್ತರದ ರಸ್ತೆಗಳನ್ನು ಕಾರ್ಯಗತಗೊಳಿಸದಿರುವುದಕ್ಕೆ ಹಣಕಾಸು ಕೊರತೆ ಕಾರಣವೆಂದು ಹೇಳಲಾಗಿದೆ. ಇದು ತಪ್ಪು ಮತ್ತು ಇದಕ್ಕೆ ಸುಲಭವಾಗಿ ಹಣಹೂಡಿಕೆ ಮಾಡಬಹುದು ಮತ್ತು ಸೂಕ್ತವಾದ ಹಣಕಾಸು ಕಂಪನಿಯನ್ನು ನಿಗದಿಗೊಳಿಸಬಹುದು.

**ಉದಾಹರಣೆಗೆ –**

1. ನಂತರದ ಹಂತದಲ್ಲಿ ರಸ್ತೆಗಳಿಗೆ ಶುಲ್ಕ ವಿಧಿಸಬಹುದಾಗಿದ್ದು ಈ ಹೊಸ ರಸ್ತೆಗಳನ್ನು ಸದ್ಯಕ್ಕೆ ಬಿಬಿಎಂಪಿ ನಿರ್ವಹಿಸಬೇಕು
2. ಒಟ್ಟು ಶಿಫಾರಸು ಮಾಡಲಾಗಿರುವ ನಾಲ್ಕು ಟ್ರ್ಯಾಕ್ ಎತ್ತರದ ರಸ್ತೆ – 40 ಕಿ.ಮೀ.
3. ಪ್ರತಿ ಕಿಲೋಮೀಟರಿಗೆ ನಾಲ್ಕು ಟ್ರ್ಯಾಕ್ ಎಲಿವೇಟೆಡ್ ರಸ್ತೆ ನಿರ್ಮಿಸಲು ಅಂದಾಜು ವೆಚ್ಚವಾಗಿ 45 ಕೋಟಿ ಎಂದಾದಲ್ಲಿ ಒಟ್ಟು ನಮಗೆ ರೂ. 1850.00 ಕೋಟಿ ರೂ. ಅಗತ್ಯ.
4. ಇದಕ್ಕೆ 30 ವರ್ಷಗಳಿಂದ ಸರಕಾರದ ವರ್ಷಾಶನ ಪಾವತಿಯ ರಿಯಾಯಿತಿಯ ಮೂಲಕ ಹಣ ಹೊಂದಿಸಬಹುದು
5. ಸರ್ಕಾರದ ವರ್ಷಾಶನವು ಪ್ರತಿವರ್ಷ ರೂ. 150– 200 ಕೋಟಿ ಆಗಿರಬಹುದು
6. ಈ ಹೊರಹರಿವನ್ನು ಭವಿಷ್ಯದಲ್ಲಿ ಬಿಬಿಎಂಪಿ ಶುಲ್ಕ ಸಂಗ್ರಹಣೆಯ ಮೂಲಕ ಕಡಿಮೆ ಮಾಡಬಹುದು

# 7

# ಕೆಜಿಎಫ್‌ಗೆ ಪರಮಾಣು ತ್ಯಾಜ್ಯ ಸುರಿಯುವ ಕುರಿತು ಕರ್ನಾಟಕದ ರಾಜ್ಯಪಾಲರಿಗೆ ಪತ್ರ

24 ನೇ ನವೆಂಬರ್, 2012

ನಾನು ಕೋಲಾರ ಗೋಲ್ಡ್ ಫೀಲ್ಡ್ಸ್ (ಕೋಲಾರ ಚಿನ್ನದ ಗಣಿ, ಕೆಜಿಎಫ್) ನಲ್ಲಿ ಕೂಡಂಕುಳಂ ವಿದ್ಯುತ್ ಸ್ಥಾವರವು ಉತ್ಪಾದಿಸುವ ತ್ಯಾಜ್ಯಕ್ಕೆ ಆಳವಾದ ತ್ಯಾಜ್ಯ ಸಂಗ್ರಹವನ್ನು ಅಭಿವೃದ್ಧಿಪಡಿಸಲು ಮತ್ತು ಅದನ್ನು ವಿಕಿರಣ ತ್ಯಾಜ್ಯಕ್ಕೆ ಶಾಶ್ವತ ಶೇಖರಣಾ ಸೌಲಭ್ಯವಾಗಿ ಪರಿವರ್ತಿಸಲು ಕೇಂದ್ರ ಪರಮಾಣು ಶಕ್ತಿ ಸಚಿವ ಮತ್ತು ನ್ಯೂಕ್ಲಿಯರ್ ಪವರ್ ಕಾರ್ಪೋರೇಶನ್ (ಎನ್‌ಪಿಸಿ) ನಿಂದ ಆಘಾತಕಾರಿ ಪ್ರಸ್ತಾಪ ಮಾಡಿರುವ ಬಗ್ಗೆ ನಿಮ್ಮ ಗಮನ ಸೆಳೆಯಲು ಈ ಪತ್ರ ಬರೆಯುತ್ತಿದ್ದೇನೆ. ಇದು ನಿಜವಾಗಿದ್ದರೆ, ವಿಕಿರಣಶೀಲ ಅಣು ತ್ಯಾಜ್ಯಕ್ಕಾಗಿ ಕೆಜಿಎಫ್ ಅನ್ನು ಡಂಪಿಂಗ್ ಯಾರ್ಡ್ ಆಗಿ ಬದಲಿಸುವ ನಿರ್ಧಾರವು ಬೇಜವಾಬ್ದಾರಿಯುತವೂ ಅಪಾಯಕಾರಿಯದೂ ಆಗಿದ್ದು ಅದನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು.

ಕೆಜಿಎಫ್ ನಲ್ಲಿ ಪರಮಾಣು ತ್ಯಾಜ್ಯ ಸಂಗ್ರಹಿಸಿದಲ್ಲಿ ಅಣು ಅಪಘಾತ ಅಥವಾ ವಿಕಿರಣ ಪ್ರಸರಣವಾದಲ್ಲಿ ಕೋಲಾರಕ್ಕೆ ಹತ್ತಿರವಾಗಿರುವ ಬೆಂಗಳೂರು ಮತ್ತು

ಅದರ 8 ಮಿಲಿಯನ್ ನಾಗರೀಕರು ಅಪಾಯಕ್ಕೆ ಗುರಿಯಾಗುತ್ತಾರೆ ಮತ್ತು ಇದು ಬೆಂಗಳೂರಿನ ನಿವಾಸಿಗಳ ಜೀವನ ಮತ್ತು ಸುರಕ್ಷತೆಗೆ ಬೆದರಿಕೆ ಒಡ್ಡುತ್ತದೆ ಮತ್ತು ಮತ್ತೆ ಪೂರ್ವರೂಪದಕ್ಕೆ ತರಲಾಗದಂಥ ಪರಿಣಾಮಗಳನ್ನು ಇದು ಉಂಟುಮಾಡುತ್ತದೆ.

ಬೆಂಗಳೂರಿನ ನಾಗರೀಕನಾಗಿ ಮತ್ತು ಸಂಸತ್ಸದಸ್ಯನಾಗಿ ಬೆಂಗಳೂರಿನ ಮೇಲೆ ಪರಿಣಾಮ ಬೀರುವ ವಿಚಾರಗಳು, ನಾಗರೀಕರ ಕ್ಷೇಮಾಭಿವೃದ್ಧಿ ವಿಷಯಗಳನ್ನು ಚರ್ಚಿಸಿದ್ದೇನೆ ಮತ್ತು ಮತ್ತು ನಾಗರೀಕರು ತಮ್ಮ ಹಕ್ಕುಗಳಿಗಾಗಿ ನಡೆಸುತ್ತಿರುವ ಹೋರಾಟದಲ್ಲಿ ಅವರ ಜೊತೆಗಿದ್ದೇನೆ. ಕೆಜಿಎಫ್ ಗೆ ಸಂಬಂಧಿಸಿದ ಕೇಂದ್ರದ ಈ ಪ್ರಸ್ತಾವನೆಯು ದುರದೃಷ್ಟಕರವಾದುದು ಹಾಗೂ ಬೆಂಗಳೂರಿಗೆ ಬೆದರಿಕೆಯಷ್ಟೇ ಅಲ್ಲದೇ ನಾಗರೀಕರ ಬದುಕಿನ ಸುರಕ್ಷತೆ ಮತ್ತು ಅವರ ಜೀವನದೊಂದಿಗೆ ಚೆಲ್ಲಾಟವಾಡುವಂಥದ್ದು.

ಭಾರತ ಸರ್ಕಾರವು ಈ ಗಂಭೀರ ವಿಷಯದ ಬಗ್ಗೆ ತಕ್ಷಣವೇ ಸ್ಪಷ್ಟೀಕರಣವನ್ನು ನೀಡಬೇಕು, ಈ ಅಪಾಯಕಾರಿ ಪ್ರಸ್ತಾಪವನ್ನು ಕೈಬಿಡುವುದಾಗಿ ಕರ್ನಾಟಕದ ಜನರಿಗೆ ಭರವಸೆ ನೀಡಬೇಕು ಮತ್ತು ನ್ಯೂಕ್ಲಿಯರ್ ಪವರ್ ಕಾರ್ಪೋರೇಶನ್ ಆಫ್ ಇಂಡಿಯಾ ಲಿಮಿಟೆಡ್ (ಎನ್ ಪಿ ಸಿ ಐ ಎಲ್) ಕೋಲಾರ ಚಿನ್ನದ ಕೈಬಿಟ್ಟ ಗಣಿಗಳಲ್ಲಿ ಪರಮಾಣು ತ್ಯಾಜ್ಯ ಸುರಿಯಲಾಗುವುದೆಂದು ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಿರುವ ಆಫಿಡೆವಿಟ್ ಅನ್ನು ಹಿಂತೆಗೆದುಕೊಳ್ಳಲು ಆಗ್ರಹಿಸಬೇಕು. ಈ ವಿಷಯದ ಬಗ್ಗೆ ನಿಮ್ಮ ತುರ್ತು ಹಸ್ತಕ್ಷೇಪಕ್ಕೆ ಎದುರುನೋಡುತ್ತಿದ್ದೇನೆ ಮತ್ತು ಇದನ್ನು ಕರ್ನಾಟಕದ ಜನ ನಿಜಕ್ಕೂ ಮೆಚ್ಚುತ್ತಾರೆ.

ಇಂತಿ ನಿಮ್ಮ ವಿಶ್ವಾಸಿ,
ರಾಜೀವ್ ಚಂದ್ರಶೇಖರ್

ಶ್ರೀ ಹನ್ಸ್‌ರಾಜ್ ಭಾರದ್ವಾಜ್
ಕರ್ನಾಟಕದ ರಾಜ್ಯಪಾಲರು,
ರಾಜ್ಯ ಭವನ,
ಬೆಂಗಳೂರು

# 8

# ಪ್ರಭಾವಿಗಳು ಹಾಗೂ ಸ್ಥಾಪಿತ ಹಿತಾಸಕ್ತಿಗಳಿಂದ ನಗರವನ್ನು ಕಾಪಾಡುವಂತೆ ಮುಖ್ಯಮಂತ್ರಿಯವರಿಗೆ ಪತ್ರ

14 ನೇ ಜೂನ್, 2013

ಶ್ರೀ ಸಿದ್ದರಾಮಯ್ಯ ಅವರೆ,

ಕರ್ನಾಟಕ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಗುಂಪು 2020ರಲ್ಲಿ (ವರದಿ) ಹಲವಾರು ಕಳವಳಗಳನ್ನು ಹಲವಾರು ನಾಗರೀಕರು ಹಾಗೂ ನಿವಾಸಿಗರ ಕ್ಷೇಮಾಭಿವೃದ್ಧಿ ಸಂಸ್ಥೆಗಳು ವ್ಯಕ್ತಪಡಿಸುತ್ತಿದ್ದು, ಬೆಂಗಳೂರಿನ ಬೆಳವಣಿಗೆಯ ಅಪಾಯಕಾರಿ ಪರಿಣಾಮಗಳು ಮತ್ತು ಅದರ ಪ್ರತಿಕೂಲ ಪರಿಣಾಮಗಳ ಕುರಿತು ಶಿಫಾರಸುಗಳು ವ್ಯಕ್ತವಾಗುತ್ತಿವೆ.

ವರದಿಯಲ್ಲಿ ಮಾಡಿದ ಅನೇಕ ಶಿಫಾರಸುಗಳು ನಾಗರೀಕರು ಎದುರಿಸುತ್ತಿರುವ ನಿರ್ಣಾಯಕ ಸವಾಲುಗಳಿಗೆ ಪರಿಹಾರ ಹೇಳುವುದಿಲ್ಲ, ವಿಶೇಷವಾಗಿ ನೈಜ ಆಡಳಿತ ಸುಧಾರಣೆಗಳು ಮತ್ತು ಪಾರದರ್ಶಕತೆಯ ಬಗ್ಗೆ ಇವು ಪ್ರಸ್ತಾಪಿಸಿಲ್ಲ ಎಂದು ನಾಗರೀಕರು ಸೂಚಿಸಿದ್ದಾರೆ. ನಗರಕ್ಕೆ ಶಾಸನಬದ್ಧ ಯೋಜನೆಗಳ ಮೂಲಭೂತ

ಸಮಸ್ಯೆಗಳನ್ನು ಪರಿಹರಿಸದ ಮತ್ತು ನಾಗರೀಕ–ಕೇಂದ್ರಿತ ಆಡಳಿತ ಸುಧಾರಣೆಗೆ ಉತ್ತೇಜನ ನೀಡದ ಯಾವುದೇ ಬೆಂಗಳೂರಿನ ಅಭಿವೃದ್ಧಿಯ ಯಾವುದೇ ಪ್ರಸ್ತಾವನೆಯೂ ಉತ್ತಮ ಆಡಳಿತದ ಭರವಸೆಯೊಂದಿಗೆ ಆಯ್ಕೆಯಾದ ಸರ್ಕಾರಕ್ಕೆ ಸರಿಹೊಂದಿಕೆಯಾಗುವುದಿಲ್ಲ ಎಂಬುದಕ್ಕೆ ನೀವು ಒಪ್ಪುತ್ತೀರಿ.

ಅಗತ್ಯವಿರುವ ರಸ್ತೆಗಳು, ನೀರು, ವಿದ್ಯುತ್ ಮತ್ತು ನಾಗರೀಕ ಸೇವೆಗಳ ರೂಪದಲ್ಲಿ ಮೂಲಸೌಕರ್ಯ ನಿರ್ಬಂಧಗಳನ್ನು ಪರಿಗಣಿಸದೆ ಬೆಂಗಳೂರಿನ ಅಭಿವೃದ್ಧಿಗಾಗಿ ನಿಧಿ ಸಂಗ್ರಹಣೆಗಾಗಿ ಬಿಲ್ಡರುಗಳಿಗೆ ಮಹಡಿ ಜಾಗ ಸೂಚ್ಯಂಕದ ಹೆಚ್ಚಳವನ್ನು ಶಿಫಾರಸು ಮಾಡುವ ಪ್ರಮುಖ ಪ್ರಸ್ತಾಪ ನಗರಕ್ಕೆ ಮರಣಶಾಸನವೆನ್ನಬಹುದು. ಎಲ್ಲಕ್ಕಿಂತ ಮುಖ್ಯವಾಗಿ ಇದು ಬಿಲ್ಡರುಗಳು, ಗುತ್ತಿಗೆದಾರರು ಮತ್ತು ರಿಯಲ್ ಎಸ್ಟೇಟ್ ಕಂಪನಿಗಳನ್ನು ಪ್ರತಿನಿಧಿಸುವ ವಾಣಿಜ್ಯ ಹಿತಾಸಕ್ತಿಗಳಿಗೆ ನಗರದ ಅಭಿವೃದ್ಧಿಯ ಶರಣಾಗತಿಯನ್ನು ಪ್ರತಿನಿಧಿಸುತ್ತದೆ – ನಗರದ ನಿವಾಸಿಗಳು ಎದುರಿಸುತ್ತಿರುವ ಈ ಹಲವಾರು ಸಮಸ್ಯೆಗಳಿಗೆ ಅವರ ವಾಣಿಜ್ಯ ಆಸಕ್ತಿಗಳೇ ನೇರವಾಗಿ ಕಾರಣವಾಗಿವೆ.

ವಿವಿಧ ಒಪ್ಪಂದಗಳು ಮತ್ತು ಯೋಜನೆಗಳು ಸೇರಿದಂತೆ ನಗರದ ಅಭಿವೃದ್ಧಿ ನಗರ ಯೋಜನೆಯ ನಿಯಮಗಳಿಗೆ ಅತೀತವಾಗಿ ಇರುವ ಬಿಲ್ಡರುಗಳು ಮತ್ತು ಗುತ್ತಿಗೆದಾರರ ಪಟ್ಟಭದ್ರ ವಾಣಿಜ್ಯ ಹಿತಾಸಕ್ತಿಗಳಿಂದ ಪ್ರಭಾವಿತವಾಗಿದೆ. ನಮ್ಮ ನಗರದ ಕಳಪೆ ಆಡಳಿತದ ಬಹುತೇಕ ಸಾಂಕೇತಿಕ ಪ್ರತಿನಿಧಿತ್ವ ಎನಿಸಿರುವ ರಿಯಲ್ ಎಸ್ಟೇಟ್ ಉದ್ಯಮದಲ್ಲಿ ಆಳವಾದ ಮತ್ತು ಬಹುವಾದ ಸಂಘರ್ಷಮಯ ಹಿತಾಸಕ್ತಿ ಹೊಂದಿರುವ ಹೆಚ್ಚಿನ ಸಂಖ್ಯೆಯ ಚುನಾಯಿತ ಪ್ರತಿನಿಧಿಗಳ ಬಗ್ಗೆ ನಮಗೆಲ್ಲರಿಗೂ ತಿಳಿದಿದೆ. ಸಾರ್ವಜನಿಕ ಹಿತಾಸಕ್ತಿಯ ವಿರುದ್ಧ ವರ್ತಿಸುತ್ತಿರುವ ಗುತ್ತಿಗೆದಾರರು ಮತ್ತು ಅಧಿಕಾರಿಗಳ ನಡುವಿನ ಅಂತಹ ಸಂಬಂಧವನ್ನು ಕೊನೆಗೊಳಿಸಲು ತುರ್ತು ಕ್ರಮ ಕೈಗೊಳ್ಳಬೇಕಾದ ಅವಶ್ಯಕತೆ ಇದೆ.

ಅಂತಹ ಒಂದು ಸನ್ನಿವೇಶದಲ್ಲಿ, ಉಲ್ಲೇಖಿಸಿದಂತಹ ಒಂದು ಪ್ರಸ್ತಾಪವೂ ಸೇರಿದಂತೆ ಯಾವುದೇ ಪ್ರಸ್ತಾಪವನ್ನು ಪ್ರಮುಖ ಕೈಗಾರಿಕೋದ್ಯಮಿಗಳು ಬೆಂಬಲಿಸುತ್ತಿದ್ದರೂ ಸಹ ಅದನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕು: ನಮ್ಮ ನಗರದ ಅಭಿವೃದ್ಧಿ ಯೋಜನೆಗಳ ಮೇಲೆ ಗಮನಾರ್ಹವಾಗಿ ಪ್ರಭಾವ ಬೀರಲು ಕೆಲವು ಬಿಲ್ಡರುಗಳು ಮತ್ತು ರಿಯಲ್ ಎಸ್ಟೇಟ್ ಲಾಬಿ ಪ್ರಯತ್ನ ಮಾಡುತ್ತಿದೆ. ಪ್ರಪಂಚದಲ್ಲಿ ಎಲ್ಲಿಯೂ ಬಿಲ್ಡರುಗಳಿಗೆ ನಗರಗಳನ್ನು ನಿರ್ಮಿಸುವ ಜವಾಬ್ದಾರಿಯನ್ನು ನೀಡಲಾಗಿಲ್ಲ. ಮತ್ತು ಬೆಂಗಳೂರಿನಲ್ಲಿ ನಿಸ್ಸಂಶಯವಾಗಿ ಇದಕ್ಕೆ ಅವಕಾಶ ನೀಡಬಾರದು.

ಅಂತಹ ಕ್ರಮಗಳು ನಗರದ ಅಭಿವೃದ್ಧಿಗೆ ಕಾರಣವಾಗುವುದಿಲ್ಲ ಅಥವಾ ನಗರದ ಸಮಸ್ಯೆಗಳನ್ನು ಪರಿಹರಿಸುವುದಿಲ್ಲ.

ಇದು ಅಪಾಯಕಾರಿಯಾಗಿದ್ದು ಸಮಗ್ರ ನೀತಿ ಕ್ರಮಗಳ ಮೂಲಕ ಹಾಗೂ ಹಣಕಾಸು ಸುಧಾರಣೆ ಮಾಡುವ ಮೂಲಕ ನಗರವನ್ನು ಅಭಿವೃದ್ಧಿಗೊಳಿಸಬೇಕಾದ ಸರ್ಕಾರವು ಜವಾಬ್ದಾರಿಯನ್ನು ನುಣುಚಿಕೊಂಡಂತೆ ಆಗುತ್ತದೆ. ಶಾರ್ಟ್‌ಕಟ್ ಮತ್ತು ಸುಲಭ ಪರಿಹಾರಗಳು ಎಂದು ಭಾವಿಸಲಾಗುವ ಇಂಥ ಕ್ರಮಗಳಿಗೆ ತೆರಬೇಕಾದ ಬೆಲೆ ದುಬಾರಿಯಾಗಿರುತ್ತದೆ ಮತ್ತು ಇದರಿಂದ ಗಂಭೀರ ಪರಿಣಾಮಗಳಾಗುತ್ತವೆ.

ಬದಲಾಗಿ ಸರ್ಕಾರವು ಬೆಂಗಳೂರಿನ ಸುತ್ತಮುತ್ತಲಲ್ಲಿ ಯಲಹಂಕಾ, ಕೆಂಗೇರಿ, ದೇವನಹಳ್ಳಿ ಮತ್ತು ಹೊಸಕೋಟೆಯಂತಹ ಸ್ಥಳಗಳಲ್ಲಿ ಉಪಗ್ರಹ ಪಟ್ಟಣಗಳನ್ನು ಅಭಿವೃದ್ಧಿಪಡಿಸುವ ಯೋಜನಾಭಿವೃದ್ಧಿಯನ್ನು ಒಳಗೊಂಡಿರುವ ಒಂದು ನೀಲನಕ್ಷೆಯನ್ನು ವಿನ್ಯಾಸಗೊಳಿಸಬೇಕು ಮತ್ತು ಬೆಂಗಳೂರಿನ ಮೂಲಭೂತ ಸೌಕರ್ಯ ಮತ್ತು ಸಾರ್ವಜನಿಕ ಸೇವೆಗಳ ಮೇಲೆ ಅಗಾಧವಾದ ಒತ್ತಡವನ್ನು ಕಡಿಮೆಗೊಳಿಸಬೇಕು.

ಬೆಂಗಳೂರಿನ ಅಸಂಖ್ಯಾತ ಸಮಸ್ಯೆಗಳಿಗೆ ಯಾವುದೇ ಪರಿಹಾರವನ್ನು ಕಂಡುಕೊಳ್ಳುವುದಿದ್ದಲ್ಲಿ ಜಾಣ್ಮೆಯ ವಿಧಾನವನ್ನು ಅನುಸರಿಸಬೇಕು, ಕೈಗೊಳ್ಳುವ ತೀರ್ಮಾನವು ಬೆಂಗಳೂರಿನ ನಾಗರೀಕರ ಆಕಾಂಕ್ಷೆಗಳನ್ನು, ಎಲ್ಲಾ ಸಾಮಾಜಿಕ–ಆರ್ಥಿಕ ಗುಂಪುಗಳ ಹಿತಾಸಕ್ತಿಗಳನ್ನು ಪರಿಗಣಿಸಿ ಕೈಗೊಳ್ಳುವ ಕ್ರಮವಾಗಿದ್ದು ಪ್ರಪಂಚದಾದ್ಯಂತ ಇತರ ಯಶಸ್ವೀ ನಗರಗಳಲ್ಲಿ ಬಳಸಲಾಗುವ ಯೋಜನೆ ಮತ್ತು ಹಣಕಾಸು ತಂತ್ರಗಳನ್ನು ಅನುಸರಿಸಬೇಕು. ಸರ್ಕಾರದ ಮಧ್ಯಸ್ಥಿಕೆ ಅಗತ್ಯವಿರುವ ಸಮಾಜದ ವಿಭಾಗಗಳಿಗೆ ಸಾಕಷ್ಟು ಕುಡಿಯುವ ನೀರು, ಸಾಮೂಹಿಕ ಸಾರಿಗೆ, ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯ ಮತ್ತು ಒಳ್ಳೆ ವಸತಿಗಳ ಲಭ್ಯತೆ ಸೇರಿದಂತೆ ಪ್ರಮುಖ ವಿಷಯಗಳಿಗೆ ಉನ್ನತ–ಆದ್ಯತೆ ನೀಡಬೇಕು.

ನಾಗರೀಕರ ಅವಶ್ಯಕತೆಗಳನ್ನು ಗಂಭೀರವಾಗಿ ಪರಿಗಣಿಸಿ ಮತ್ತು ಪ್ರಭಾವಶಾಲಿಗಳು ಮತ್ತು ಪಟ್ಟಭದ್ರ ಹಿತಾಸಕ್ತಿಗಳ ಪ್ರಯತ್ನಗಳಿಂದ ನಗರವನ್ನು ರಕ್ಷಿಸಲು ನಾನು ನಿಮ್ಮನ್ನು ಒತ್ತಾಯಿಸುತ್ತೇನೆ.

ನಿಮ್ಮ ವಿಶ್ವಾಸಿ,
ರಾಜೀವ್ ಚಂದ್ರಶೇಖರ್

ಶ್ರೀ ಸಿದ್ದರಾಮಯ್ಯ,
ಮಾನ್ಯ ಮುಖ್ಯಮಂತ್ರಿ,
ಕರ್ನಾಟಕ ಸರ್ಕಾರ,
ಬೆಂಗಳೂರು

# 9

# ಫೋರಂ ಜಂಕ್ಷನ್ನಿನಿಂದ ಸರ್ಜಾಪುರ ರಸ್ತೆಯ ವರೆಗೆ ಅಂಡರ್‌ಪಾಸ್ ನಿರ್ಮಿಸುವಂತೆ ಮುಖ್ಯಮಂತ್ರಿಯವರಿಗೆ ಪತ್ರ

30 ನೇ ಅಕ್ಟೋಬರ್, 2013

ಶ್ರೀ ಸಿದ್ದರಾಮಯ್ಯ ಅವರೆ,

**ವಿಷಯ: ಉತ್ತಮ ಆಡಳಿತದ ಭರವಸೆಯನ್ನು ನೀವು ಉಳಿಸಿಕೊಳ್ಳಬೇಕಾದರೆ ನಿವಾಸಿಗಳನ್ನು ಸೇರಿಸಿಕೊಳ್ಳಿ.**

ಫೋರಂ ಜಂಕ್ಷನ್ನಿಂದ ಹೊಸೂರು ರಸ್ತೆಯ ಸರ್ಜಾಪುರ ರಸ್ತೆ ಜಂಕ್ಷನ್ನಿನ ವರೆಗೆ ಪ್ರಸ್ತಾವಿತ ಇಂಟಿಗ್ರೇಟೆಡ್ ಅಂಡರ್ಪಾಸ್ ಕುರಿತು ಕಳವಳ ವ್ಯಕ್ತಪಡಿಸಿದ ವಿವಿಧ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಟನೆಗಳಿಂದ ನಾನು ಅಭಿಪ್ರಾಯಗಳನ್ನು ಪಡೆದಿದ್ದೇನೆ. ಅವರು ಈ ಯೋಜನೆಯ ವಿನ್ಯಾಸದಲ್ಲಿರುವ ಒಂದು ಗಂಭೀರ ಕೊರತೆಯನ್ನು ನನ್ನ ಗಮನಕ್ಕೆ ತಂದಿದ್ದಾರೆ ಮತ್ತು ಸ್ಥಳೀಯ ನಿವಾಸಿಗಳು ಮತ್ತು ಯೋಜನೆಯು ಪ್ರಮುಖವಾಗಿ ಸ್ಥಳೀಯ ನಿವಾಸಿಗಳು ಮತ್ತು ಉದ್ಯಮಗಳಿಗೆ ಸ್ಪಂದಿಸಲು ವಿಫಲವಾಗಿರುವುದಾಗಿ ಹೇಳಿದ್ದಾರೆ.

ನಿವಾಸಿಗಳ ಪ್ರಕಾರ ಪ್ರಸ್ತಾವಿತ ಅಂಡರ್ಪಾಸ್ ಯೋಜನೆಯು ನೆರೆಹೊರೆಯ ಪ್ರದೇಶಗಳಿಗೆ ಅಡ್ಡಿಪಡಿಸುತ್ತದೆ. ಏಕೆಂದರೆ ಇದು ಸಮರ್ಪಕವಾಗಿಲ್ಲ. ಕೋರಮಂಗಲಕ್ಕೆ ತೆರಳುವ ಸಂಚಾರದ ಮಟ್ಟಿಗೆ ಇದರಲ್ಲಿ ಯಾವುದೇ ಯೋಜನೆ ಮತ್ತು ಪ್ರವೇಶದ ಆಯ್ಕೆಗಳ ಕೊರತೆಯಿದೆ. ಸ್ಥಳದ ಕೊರತೆಯು ಸ್ಥಳೀಯ ಸಂಚಾರದ ಮೇಲೆ ಪ್ರಭಾವ ಬೀರುತ್ತದೆ. ಪ್ರಮುಖ ವಾಣಿಜ್ಯ ವಲಯಗಳ ಬಳಿ ಅಥವಾ ಪ್ರವೇಶದ್ವಾರದ ಬಳಿ ಸಾಕಷ್ಟು ಸ್ಥಳಾವಕಾಶದ ಕೊರತೆ ಸಮಸ್ಯಾತ್ಮಕವಾಗುತ್ತದೆ. ಈ ವಿನ್ಯಾಸದಲ್ಲಿ ಪಾದಚಾರಿಗಳಿಗೆ ದಾಟುವ ವ್ಯವಸ್ಥೆಯಿಲ್ಲ ಅಥವಾ ಬಸ್ ನಿಲ್ದಾಣಗಳಿಲ್ಲ.

ಸರ್ಜಾಪುರ ರಸ್ತೆಯ ಅಂಡರ್ಪಾಸ್ ನಿರ್ಮಾಣದ ವಿಷಯದ ನಂತರ ಕೌಶಿಕ್ ಮುಖರ್ಜಿ ವರದಿಯ ಬಗ್ಗೆ ನಿಮ್ಮ ಗಮನವನ್ನು ಸೆಳೆಯಲು ನಾನು ಬಯಸುತ್ತೇನೆ. ಇದು ಯಾವುದೇ ಅಭಿವೃದ್ಧಿಯ ಯೋಜನೆಯಲ್ಲಿ ಭಾಗವಹಿಸುವ ಎಲ್ಲಾ ಪಾಲುದಾರರ ಸಾರ್ವಜನಿಕ ಸಮಾಲೋಚನೆಗಳ ಮಹತ್ವವನ್ನು ಪ್ರತಿಪಾದಿಸಿದೆ. ಫೋರಂ ಮಾಲ್ ಗೆ ಯಾವುದೇ ಸಮಗ್ರ ಅಂಡರ್ಪಾಸ್ ಪರಿಹಾರವು ಮಡಿವಾಳ ಅಂಡರ್ಪಾಸ್ ಅನ್ನು ಇನ್ನಷ್ಟು ಆಳವಾಗಿ ಮಾಡುವ ಮತ್ತು ಸಂಪರ್ಕ ರಸ್ತೆಗಳನ್ನು ಅಗಲಗೊಳಿಸುವುದನ್ನು ಒಳಗೊಳ್ಳಬೇಕೆಂದು ಸಮಿತಿಯು ಹೇಳಿದೆ. ಪ್ರಸ್ತುತ ಪ್ರಸ್ತಾಪವು, ಇದು ರಾಜ್ಯ ಹೈಕೋರ್ಟ್‌ಸೂಚಿಸಿದಂತೆ ಹಾಗೂ ರಾಜ್ಯ ಸರ್ಕಾರವೇ ಒಪ್ಪಿಕೊಂಡಂತೆ ಸಮಿತಿಯ ಈ ಶಿಫಾರಸುಗಳನ್ನು ಗಣನೆಗೆ ತೆಗೆದುಕೊಂಡಿಲ್ಲ.

ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು ಮತ್ತು ನಿವಾಸಿಗಳು ತಮ್ಮ ನೆರೆಹೊರೆಯ ತೀರ್ಮಾನಗಳಿಗೆ ಅಥವಾ ಅಂಥ ಪ್ರದೇಶಗಳ ಅಭಿವೃದ್ಧಿಗೆ ಸಂಬಂಧಿಸಿ ತಮ್ಮನ್ನು ದೂರವಿಟ್ಟಿರುವ ಬಗ್ಗೆ ನಿರಾಶೆಗೊಂಡಿದ್ದಾರೆ. ಉತ್ತಮ ಆಡಳಿತದ ಭರವಸೆ ನೀಡಿದ ಸರ್ಕಾರವು, ಅಭಿವೃದ್ಧಿಯ ಮೇಲೆ ಹಾಗೂ ಅವರ ನೆರೆಹೊರೆಯ ವಿಸ್ತರಣೆಯ ಮೇಲೆ ಪ್ರಭಾವ ಬೀರುವ ಪ್ರಮುಖ ನಿರ್ಧಾರಗಳಲ್ಲಿ ನಾಗರೀಕರನ್ನು ತೊಡಗಿಸುವುದು ಬಹಳ ಮಹತ್ವದ್ದಾಗಿದೆ.

ಸ್ಥಳೀಯ ನಿವಾಸಿಗಳ ಸಲಹೆ ಪಡೆಯದಿರುವುದು ಅಥವಾ ಅವರ ದೃಷ್ಟಿಕೋನಗಳನ್ನು ಪರಿಗಣಿಸದಿರುವ ಈ ಮಾದರಿಯ ಅಭಿವೃದ್ಧಿಯು ಉತ್ತಮ ಆಡಳಿತದ ಭರವಸೆಯಲ್ಲಿ ಆಯ್ಕೆಯಾದ ಸರಕಾರದ ಗುರಿಗಳಿಗೆ ಅಸಮಂಜಸವಾಗಿದೆ ಮತ್ತು ಹೊಂದಾಣಿಕೆಯಾಗುವುದಿಲ್ಲ ಎಂದು ನೀವು ಒಪ್ಪುತ್ತೀರಿ.

ಸರ್ಕಾರದಲ್ಲಿ ವಿಶ್ವಾಸಾರ್ಹತೆ ಮತ್ತು ನಂಬಿಕೆ ಹೆಚ್ಚಾಗುವುದಕ್ಕಿಂತ ಬದಲಾಗಿ, ಅಂತಹ ಯೋಜನೆಗಳು ಪಟ್ಟಭದ್ರ ಹಿತಾಸಕ್ತಿಗಳು ಮತ್ತು ಪ್ರೇರಣೆಗಳ ಬಗ್ಗೆ ಪ್ರಶ್ನೆಗಳನ್ನು ಮೂಡಿಸುತ್ತವೆ ಮತ್ತು ನಿವಾಸಿಗಳು ನ್ಯಾಯಾಲಯದ ಮಧ್ಯಸ್ಥಿಕೆಗೆ ಕೋರಲು ಕಾರಣವಾಗುತ್ತವೆ ಎಂದು ನಾನು ನಿಮ್ಮನ್ನು ಎಚ್ಚರಿಸುತ್ತೇನೆ.

ನಾನು ಪುನರಾವರ್ತಿತವಾಗಿ ಒತ್ತಿಹೇಳಿದಂತೆ, ಬೆಂಗಳೂರಿನ ಅಸಂಖ್ಯಾತ ಸಮಸ್ಯೆಗಳಿಗೆ ಯಾವುದೇ ಪರಿಹಾರವು ಸಮಗ್ರ ಯೋಜಿತ ವಿಧಾನವನ್ನು ಅನುಸರಿಸಬೇಕು ಮತ್ತು ಅವರ ನೆರೆಹೊರೆಯ ಮೇಲೆ ಪ್ರಭಾವ ಬೀರುವ ಬದಲಾವಣೆಗಳು ಮತ್ತು ಬೆಳವಣಿಗೆಗಳ ಬಗ್ಗೆ, ವಿಶೇಷವಾಗಿ ಈ ಪ್ರಸ್ತಾವಿತ ಅಂಡರ್ಪಾಸ್ ಯೋಜನೆಯ ಸಂದರ್ಭದಲ್ಲಿ ನಗರದ ನಿವಾಸಿಗಳ ಆಕಾಂಕ್ಷೆಗಳನ್ನು ಗಣನೆಗೆ ತೆಗೆದುಕೊಳ್ಳಬೇಕು.

ಯೋಜನೆಗಾಗಿ ಟೆಂಡರ್ ಪ್ರಕ್ರಿಯೆಗೊಳಿಸುವುದನ್ನು ನಿಲ್ಲಿಸಲು ಮತ್ತು ಯೋಜನೆಯನ್ನು ಅಂತಿಮಗೊಳಿಸಲು  ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳನ್ನು ಮತ್ತು ಇತರ ಪಾಲುದಾರರನ್ನು ತೊಡಗಿಸುವಂತೆ ಬಿಬಿಎಂಪಿಗೆ ನಿರ್ದೇಶನ ನೀಡಬೇಕೆಂದು ನಿಮ್ಮನ್ನು ನಾನು ಕೋರುತ್ತೇನೆ. ಕೇವಲ ಇದು ಮಾತ್ರವೇ ನಿಮ್ಮ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಜನರ ವಿಶ್ವಾಸ ಮತ್ತು ಬೆಂಬಲವನ್ನು ಹೆಚ್ಚಿಸುತ್ತದೆ.

ಈ ವಿಷಯದ ಬಗ್ಗೆ ನಿಮ್ಮ ಹಸ್ತಕ್ಷೇಪಕ್ಕೆ ಮತ್ತು ಕ್ರಮಕ್ಕೆ ಎದುರುನೋಡುತ್ತಿದ್ದೇನೆ.

ಇಂತಿ ನಿಮ್ಮ ವಿಶ್ವಾಸಿ,
ರಾಜೀವ್ ಚಂದ್ರಶೇಖರ್

ಶ್ರೀ ಸಿದ್ದರಾಮಯ್ಯ,
ಮುಖ್ಯಮಂತ್ರಿ,
ಕರ್ನಾಟಕ ಸರ್ಕಾರ,
ಬೆಂಗಳೂರು.

# 10

# ದೋಷಪೂರಿತ ಕರಡು ಎಂಪಿಸಿ ನಿಯಮಗಳ ಕುರಿತು ಮುಖ್ಯಮಂತ್ರಿಯವರಿಗೆ ಪತ್ರ

22 ನೇ ನವೆಂಬರ್, 2013

ಶ್ರೀ ಸಿದ್ದರಾಮಯ್ಯ ಅವರೆ,

ಮೆಟ್ರೋಪಾಲಿಟನ್ ಪ್ಲಾನಿಂಗ್ ಕಮಿಷನ್ (ಎಂಪಿಸಿ) ಅನ್ನು ಬೆಂಗಳೂರಿಗೆ ಸ್ಥಾಪಿಸಲು ಕರಡು ನಿಯಮಗಳ ಕುರಿತು ನಗರ ಅಭಿವೃದ್ಧಿ ಅಧಿಸೂಚನೆಗೆ ಸಂಬಂಧಿಸಿದಂತೆ, ನಾನು ಅದನ್ನು ಅಧ್ಯಯನ ಮಾಡಿದ್ದೇನೆ ಮತ್ತು ಅನೇಕ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಟನೆಗಳಿಂದ (ಆರ್ ಡಬ್ಲ್ಯು ಎಗಳು) ಮತ್ತು ಸಿವಿಕ್, ನಮ್ಮ ಬೆಂಗಳೂರು ಫೌಂಡೇಶನ್ (ನಿಮ್ಮ ಉಲ್ಲೇಖಕ್ಕಾಗಿ ಲಗತ್ತಿಸಲಾಗಿದೆ) ಮುಂತಾದ ಸರ್ಕಾರೇತರ ಸಂಘಟನೆಗಳಿಂದ ಅಭಿಪ್ರಾಯಗಳನ್ನು ಸ್ವೀಕರಿಸಿದ್ದು ಸಂವಿಧಾನದ 74 ನೇ ತಿದ್ದುಪಡಿಯ ಸ್ಫೂರ್ತಿಗೆ ಅಸಮಂಜಸವೆನಿಸುವ ರೀತಿಯಲ್ಲಿ ಎಂಪಿಸಿ ಕರಡು ನಿಯಮಗಳಲ್ಲಿ ಮೂಲಭೂತ ನ್ಯೂನತೆಗಳಿವೆ ಎಂಬ ಅವರ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ.

74 ನೇ ತಿದ್ದುಪಡಿಯಲ್ಲಿ ಅನುಮೋದಿಸಲಾಗಿರುವಂತೆ ಕರಡು ನಿಯಮಗಳು ಯೋಜನೆ ಪ್ರಕ್ರಿಯೆ ಮತ್ತು ಚುನಾಯಿತ ಪ್ರತಿನಿಧಿಗಳ ಅಧಿಕಾರ ವಿತರಣೆಯಲ್ಲಿ ನಾಗರೀಕರ ಪಾಲ್ಗೊಳ್ಳುವಿಕೆಯ ಸ್ಫೂರ್ತಿಯ ವಿರುದ್ಧವಾಗಿವೆ.

ಕರಡು ನಿಯಮಗಳಿಗೆ ಹಲವಾರು ಬದಲಾವಣೆಗಳು ಅಗತ್ಯವಾಗಿದ್ದು ನಾಗರೀಕರು ಪ್ರಸ್ತಾಪಿಸುವ ಕೆಳಕಂಡ ಕಳವಳಗಳನ್ನು ಅವು ನಿವಾರಿಸಬೇಕು:

1. ಕರಡು ನಿಯಮಗಳು ದಾಖಲೆಗಳಂತೆ ಉಚ್ಚ ನ್ಯಾಯಾಲಯದ ಆದೇಶವನ್ನು ಪಾಲಿಸುವಂತಿದ್ದರೂ ಕ್ರಿಯೆಯಲ್ಲಿ ಹಾಗಿಲ್ಲ. ವಾಸ್ತವವಾಗಿ ನಾಗರೀಕರಿಗೆ ಜವಾಬ್ದಾರಿಯುತವಾದ ಸ್ವಾಯತ್ತ, ಪಾಲ್ಗೊಳ್ಳುವಿಕೆಯುಳ್ಳ ಮತ್ತು ಉತ್ತರದಾಯಿತ್ವವುಳ್ಳ ಸಂಸ್ಥೆಯನ್ನಾಗಿ ಅಭಿವೃದ್ಧಿಗೊಳಿಸಲು ಸರ್ಕಾರರಿಂದ ಸಾಧ್ಯವಾಗಿಲ್ಲ. ಬದಲಾಗಿ, ಕರಡು ನಿಯಮಗಳು ಬೆಂಗಳೂರಿನ ಯೋಜನೆಯಲ್ಲಿ ಯಾವುದೇ ಸ್ವತಂತ್ರ ಪಾಲ್ಗೊಳ್ಳುವಿಕೆಗೆ ಅವಕಾಶ ನೀಡುವುದಿಲ್ಲ. ರಾಜ್ಯ ಸರಕಾರದ ನಿಯಂತ್ರಣದಲ್ಲಿದ್ದು, ಈಗ ಇರುವ ಯಥಾಸ್ಥಿತಿಯನ್ನೇ ಮುಂದುವರಿಸುತ್ತವೆ.

2. ಕರಡು ನಿಯಮಗಳು ನಾಗರೀಕರ ನೈಜ ಮತ್ತು ಸಕ್ರಿಯ ಭಾಗವಹಿಸುವಿಕೆಗೆ ಅವಕಾಶ ಒದಗಿಸುವುದಿಲ್ಲ ಮತ್ತು ಅವರ ಪಾಲ್ಗೊಳ್ಳುವಿಕೆಯಿಲ್ಲದೇ ಯೋಜನಾ ಪ್ರಕ್ರಿಯೆ ಎಂಬುದು 74 ನೇ ತಿದ್ದುಪಡಿಯ ಸ್ಪಷ್ಟ ಉಲ್ಲಂಘನೆಯಾಗಿದ್ದು, ಇದು ವಾರ್ಡ್ ಸಮಿತಿಗಳು, ನಾಗರೀಕರು, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಟನೆಗಳು ಮತ್ತು ಸರ್ಕಾರೇತರ ಸಂಘಟನೆಗಳಿಗೆ ನಿರ್ದಿಷ್ಟ ಪಾತ್ರವನ್ನು ಕಲ್ಪಿಸುತ್ತವೆ– ಇದು ಗಮನಿಸಬೇಕಾದ ಎದ್ದುಕಾಣುವ ಲೋಪವಾಗಿದೆ.

3. ಈ ಕರಡು ಮುಖ್ಯಮಂತ್ರಿ, ವಿಧಾನ ಸಭೆ ಮತ್ತು ಪರಿಷತ್ ಸದಸ್ಯರನ್ನು ಎಂಪಿಸಿ ಸದಸ್ಯರನ್ನಾಗಿ ಹೊಂದಿದ್ದರೂ, ಬೆಂಗಳೂರು ಮೆಟ್ರೋಪಾಲಿಟನ್ ಪ್ರದೇಶದ ಬಹುಪಾಲು ಮತ್ತು ಮಹತ್ವದ ಪ್ರದೇಶವನ್ನು ಪ್ರತಿನಿಧಿಸುವ ಮೇಯರ್ ಮತ್ತು ಬಿಬಿಎಂಪಿ ಆಯುಕ್ತರನ್ನು ಒಳಗೊಂಡಿಲ್ಲ. ಸ್ಥಳೀಯ ಸಂಸ್ಥೆಗಳಿಗೆ ಯೋಜನಾ ಅಧಿಕಾರ ಮತ್ತು ಸ್ವಾಯತ್ತತೆಯ ಯಾವುದೇ ಅವಕಾಶವಿಲ್ಲ ಎಂಬುದನ್ನು ಇದು ಸೂಚಿಸುತ್ತದೆ. ನಿಯಂತ್ರಣವು ರಾಜ್ಯ ಸರ್ಕಾರದೊಂದಿಗೆ ಮುಂದುವರಿಯುತ್ತದೆ. ನಗರದ ನೈಜ ಪಾಲನ್ನು ಹೊಂದಿರುವ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಟನೆಗಳು ಮತ್ತು ನಾಗರೀಕರಿಗೆ ಅಧಿಕಾರವನ್ನು ಹಂಚಿಕೆ ಮಾಡಬೇಕೆಂಬ 74 ನೆಯ ತಿದ್ದುಪಡಿಯ ಆಶಯಕ್ಕೆ ವಿರುದ್ಧವಾಗಿದೆ.

4. ಕರಡು ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವಲ್ಲಿ ಸರ್ಕಾರೇತ ಸಂಘಟನೆಗಳು ಮತ್ತು ಇತರ ವೃತ್ತಿಪರ ಸಂಸ್ಥೆಗಳನ್ನು ಸಂಪರ್ಕಿಸಲಾಗಿದೆಯೆಂಬ ಕ್ಷಣಿಕವಾದ ಉಲ್ಲೇಖವನ್ನು ಹೊರತುಪಡಿಸಿ ಮೆಟ್ರೊಪಾಲಿಟನ್ ಪ್ರದೇಶದ ನೈಜ ಪಾಲುದಾರರಾಗಿರುವ ನಾಗರೀಕರು ಮತ್ತು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಟನೆಗಳಿಗೆ ಇಲ್ಲಿ ಯಾವುದೇ ಪ್ರತಿನಿಧಿತ್ವವಿಲ್ಲ.

5. ನಾಗರೀಕರಿಗೆ ಎಂಪಿಸಿಯಲ್ಲಿ ಪ್ರಾತಿನಿಧ್ಯ ಬೇಕು ಮತ್ತು ನಿರ್ಧಾರ ತೆಗೆದುಕೊಳ್ಳುವ ಸಂಸ್ಥೆಯಲ್ಲಿ ಧ್ವನಿಯನ್ನು ನೀಡಬೇಕು.

ಎಂಪಿಸಿ ಸ್ಥಾಪನೆಗೆ ಕರಡು ನಿಯಮವು ಸಾರ್ವಜನಿಕ ಕಾರ್ಯವಾಗಿದೆ ಮತ್ತು ಸರಿಯಾದ ಸಮಾಲೋಚನೆಯೊಂದಿಗೆ ಅಭಿವೃದ್ಧಿಪಡಿಸಿದಲ್ಲಿ ಕೈಗೊಳ್ಳಲಾಗುವ ಅಂತಿಮ ನಿರ್ಧಾರದ ಗುಣಮಟ್ಟವನ್ನು ಹೆಚ್ಚಿಸುತ್ತದೆ. ಇದು ಪಾಲ್ಗೊಳ್ಳುವಿಕೆಯ ಅಗತ್ಯತೆಗೆ ತಕ್ಕುದಾಗಿದ್ದು, ಸಂತ್ರಸ್ತರಿಗೆ ಸಂಪೂರ್ಣ ಮತ್ತು ಪರಿಣಾಮಕಾರಿಯಾದ ಮಾಹಿತಿಯನ್ನು ಒದಗಿಸುವಂತಿರಬೇಕು.

ಎಂಪಿಸಿಯಲ್ಲಿ ಪಾಲ್ಗೊಳ್ಳುವ ಮತ್ತು ಅಭಿಪ್ರಾಯವನ್ನು ವ್ಯಕ್ತಪಡಿಸುವ ಅವಕಾಶವು ಅರ್ಥಪೂರ್ಣವಾದುದು. ಆದರೆ ಸಾರ್ವಜನಿಕ ಸಮಾಲೋಚನೆಗಾಗಲಿ ಮತ್ತು ಸಲಹೆಗಳನ್ನು ಪಡೆಯುವುದಕ್ಕಾಗಲಿ ಯಾವುದೇ ಅವಕಾಶವನ್ನು ನೀಡದಿದ್ದಲ್ಲಿ ನಾಗರೀಕರು ಈ ಸಂದರ್ಭದಲ್ಲಿ ಸಿಕ್ಕಿಹಾಕಿಕೊಳ್ಳುವುದು ಅರ್ಥಹೀನ. ಅದರ ಪ್ರಸ್ತುತ ರೂಪದಲ್ಲಿ, ಎಂಪಿಸಿ 74 ನೇ ತಿದ್ದುಪಡಿಯ ಕಾಯಿದೆಗಿಂತ ಭಿನ್ನಾಗಿದ್ದು ಅದರ ಸಾಂವಿಧಾನಿಕ ಕಾರ್ಯಗಳನ್ನು ನಿರ್ವಹಿಸಲು ವಿಫಲವಾಗುತ್ತದೆ. ಆದ್ದರಿಂದ, ಎಂಪಿಸಿ ಕಾಯ್ದೆಯ ಅಂತಿಮ ನಿಯಮಗಳನ್ನು ರೂಪಿಸುವಾಗ ಕರಡು ಮಸೂದೆಯ ಮೂಲಭೂತ ನ್ಯೂನತೆಗಳನ್ನು ಮತ್ತು ನಾಗರೀಕರು ಮತ್ತು ಆರ್. ಡಬ್ಲ್ಯೂ.ಎ.ಗಳು ವ್ಯಕ್ತಪಡಿಸಿದ ಇತರ ಕಳವಳಗಳನ್ನು ಪರಿಗಣಿಸಿ ನೀವು ಇದರಲ್ಲಿ ಮಧ್ಯಪ್ರವೇಶಿಸಬೇಕೆಂದು ನಿಮ್ಮಲ್ಲಿ ನಾನು ಕೇಳಿಕೊಳ್ಳುತ್ತೇನೆ. ಇದಕ್ಕೆ ವಿಫಲವಾದಲ್ಲಿ ರಾಜ್ಯ ಸರ್ಕಾರವು ತಾನು ನೀಡಿದ 'ಉತ್ತಮ ಆಡಳಿತ'ದ ಭರವಸೆ ಪೂರೈಸಲು ವಿಫಲವಾಗಿದೆ ಎಂದು ನಾವು ಪರಿಗಣಿಸಬೇಕಾಗುತ್ತದೆ.

ವಿಶ್ವಾಸಪೂರ್ವಕವಾಗಿ,
ರಾಜೀವ್ ಚಂದ್ರಶೇಖರ್

ಶ್ರೀ ಸಿದ್ದರಾಮಯ್ಯ,
ಗೌರವಾನ್ವಿತ ಮುಖ್ಯಮಂತ್ರಿ,
ಕರ್ನಾಟಕ ಸರ್ಕಾರ,
ವಿಧಾನ ಸೌಧ,
ಬೆಂಗಳೂರು.

# 11

# ಕರಡು ಎಂಪಿಸಿ ನಿಯಮಗಳ ಕುರಿತು ನಗರಾಭಿವೃದ್ಧಿ ಸಚಿವರಿಗೆ ಪತ್ರ

26 ನೇ ನವೆಂಬರ್, 2013

ಶ್ರೀ ಕಮಲ್ ನಾಥ್ ಜಿ,

ನೀವು ತಿಳಿದಿರುವಂತೆ ಕರ್ನಾಟಕ ಸರಕಾರದ ನಗರಾಭಿವೃದ್ಧಿ ಇಲಾಖೆಯು ಬೆಂಗಳೂರು ಮೆಟ್ರೋಪಾಲಿಟನ್ ಪ್ರದೇಶಕ್ಕೆ ಸಂಬಂಧಿಸಿ ಮೆಟ್ರೋಪಾಲಿಟನ್ ಪ್ಲಾನಿಂಗ್ ಕಮಿಟಿ (ಎಂಪಿಸಿ) ರಚನೆಗಾಗಿ ಕರಡು ನಿಯಮಗಳ ಬಗ್ಗೆ ಅಧಿಸೂಚನೆಯನ್ನು ಹೊರಡಿಸಿದ್ದು ಈ ನಿಯಮಗಳ ಬಗ್ಗೆ ಸಾಮಾನ್ಯ ಜನರಿಂದ ಅಭಿಪ್ರಾಯಗಳನ್ನು ಆಹ್ವಾನಿಸಿದೆ.

1992 ರಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರಗಳನ್ನು ಮತ್ತು ಜವಾಬ್ದಾರಿಗಳನ್ನು ವಿತರಿಸಬೇಕಾದ ಸಾಂವಿಧಾನಿಕ ತಿದ್ದುಪಡಿಯ ಕಾಯಿದೆಯನ್ನು ಅಂಗೀಕರಿಸಲಾಗಿದೆ. ಈ ಎಲ್ಲಾ ವರ್ಷಗಳಲ್ಲಿ, ಯಾವುದೇ ರಾಜ್ಯಗಳು ಅದರ ಅವಶ್ಯಕತೆಗಳನ್ನು ಪೂರ್ಣವಾಗಿ ಪೂರೈಸಿಲ್ಲ. ಜವಾಹರಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ

ಮಿಷನ್ (ಜೆಎನ್‌ಎನ್‌ಯುಆರ್‌ಎಂ), ರಾಜ್ಯಗಳು ಪೂರೈಸಬೇಕಾದ ಹಲವು ಷರತ್ತುಗಳನ್ನು (ತಿದ್ದುಪಡಿ ಕಾಯಿದೆಯಲ್ಲಿನ ಅಂಶಗಳು) ರೂಪಿಸಿತು. ಆ ಷರತ್ತುಗಳಿಗೆ ಅನುಗುಣವಾಗಿ ಕೆಲಸ ಮಾಡದಿದ್ದರೂ ಸಹ ಮಿಷನ್ ಅಡಿಯಲ್ಲಿ ಹಣವನ್ನು ರಾಜ್ಯಗಳಿಗೆ ಬಿಡುಗಡೆ ಮಾಡಲಾಗಿದೆ.

ಇಂದಿಗೂ ಕೂಡ ಈ ಕ್ರಮವೇ ಮುಂದುವರಿಯುತ್ತಿದೆ. ಕರಡು ಎಂಪಿಸಿ ಅಧಿಸೂಚನೆಯು 74 ನೇ ತಿದ್ದುಪಡಿ ಕಾಯ್ದೆಯ ಆಶಯಕ್ಕೆ ಎಲ್ಲ ರೀತಿಯಲ್ಲೂ ವಿರುದ್ಧವಾಗಿದೆ. ಸಮಗ್ರ ಶಾಸನಬದ್ಧ ಯೋಜನೆ, ನಾಗರೀಕರ ಪಾಲ್ಗೊಳ್ಳುವಿಕೆ, ಮೇಯರುಗಳು ಮತ್ತು ಅಧ್ಯಕ್ಷರಿಗೆ ಹೆಚ್ಚಿನ ಕಾರ್ಯನಿರ್ವಹಣಾಧಿಕಾರಗಳು – ಇವೆಲ್ಲವುಗಳಿಗೂ ವಿದಾಯ ಹೇಳಲಾಗಿದೆ. "ಮೆಟ್ರೋಪಾಲಿಟನ್ ಪ್ರದೇಶ"ದ ಮೇಲೆ ಎಂಪಿಸಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರಬೇಕೆಂಬ ಕನಿಷ್ಠ ನಿರೀಕ್ಷೆಯನ್ನು ಕೂಡ ದುರ್ಬಲಗೊಳಿಸಲಾಗಿದೆ.

ತಿದ್ದುಪಡಿ ಕಾಯಿದೆಯ ಆಶಯವನ್ನು ಪಾಲಿಸುವ ಒಂದು ಸರಿಯಾದ ಕಾನೂನನ್ನು ಜಾರಿಗೊಳಿಸಲು ನಾನು ನಿಮ್ಮನ್ನು ಕೇಳಿಕೊಳ್ಳುತ್ತೇನೆ.

ಒಂದೆಡೆ ನೈಜ ಸುಧಾರಣೆಗಳಿಗಾಗಿ ಕೇಂದ್ರ ಸರಕಾರವು ಒತ್ತಾಯಿಸುತ್ತಿರುವುದು ನಮಗೆ ಕಂಡುಬರುತ್ತಿಲ್ಲ, ಇನ್ನೊಂದೆಡೆ ಆಶಯವನ್ನು ದುರ್ಬಲಗೊಳಿಸುವುದು ಕಂಡುಬರುತ್ತಿದೆ. ಎಲ್ಲ ಮೂರು ಗುರಿಗಳನ್ನು ಸಾಧಿಸುವ ಎಂಪಿಸಿ ಕಾನೂನುಗಳನ್ನು ಜಾರಿಗೊಳಿಸಲು ಕೇಂದ್ರ ಸರ್ಕಾರವು ಒತ್ತಾಯಿಸುವುದು ಸಂಪೂರ್ಣವಾಗಿ ಅನಿವಾರ್ಯವಾಗಿದೆ – ಆಡಳಿತದಲ್ಲಿ ನಾಗರೀಕರಿಗೆ (ಬಜೆಟ್ ಮತ್ತು ಮೇಲ್ವಿಚಾರಣೆ ಸೇರಿದಂತೆ) ಅಧಿಕೃತ ಪಾತ್ರ, ಎಂಪಿಸಿಗೆ ಪ್ರಾದೇಶಿಕ ವ್ಯಾಪ್ತಿ ಮತ್ತು ಪುರಸಭಾ ಸಂಸ್ಥೆಗಳಲ್ಲಿ ಚುನಾಯಿತ ನಾಯಕರ ವರ್ಧಿತ ಕಾರ್ಯನಿರ್ವಾಹಕ ಅಧಿಕಾರಗಳು.

ನಗರ ಆಡಳಿತವನ್ನು ಪರಿವರ್ತಿಸುವ ನೈಜ ಅವಕಾಶ ಮಾತ್ರ ಆಗ ಮಾತ್ರವೇ ಇರಲು ಸಾಧ್ಯ.

ಇದು ಇಂದು ವಿಶೇಷವಾಗಿ ನಿರ್ಣಾಯಕವಾಗಿದೆ, ಏಕೆಂದರೆ ದೇಶವು ತ್ವರಿತ ನಗರೀಕರಣದ ಮೂಲಕ ಸಾಗುತ್ತಿದೆ. ಇಂದು ಸ್ಥಳದಲ್ಲಿ ಇರಿಸಲಾಗಿರುವ ಕಾರ್ಯಸೂಚಿಯು ನಮ್ಮ ನಗರಗಳು ಭವಿಷ್ಯದಲ್ಲಿ ಆಡಳಿತ ನಡೆಸುವುದಕ್ಕೆ ಮತ್ತು ಅದರ ಪರಿಣಾಮವಾಗಿ ಅವರ ಜೀವನಶೈಲಿ, ತೊಡಗಿಸಿಕೊಳ್ಳುವಿಕೆ ಮತ್ತು ಆರ್ಥಿಕ ಪ್ರಾಧಾನ್ಯತೆಗಾಗಿ ದೀರ್ಘಕಾಲಿಕ ಪರಿಣಾಮಗಳನ್ನು ಹೊಂದಿವೆ.

74 ನೇ ತಿದ್ದುಪಡಿ ಕಾಯಿದೆಯನ್ನು ಜಾರಿಗೊಳಿಸುವಲ್ಲಿ ಸಂಸತ್ತಿನ ಸ್ಪಷ್ಟ ಉದ್ದೇಶವನ್ನು ಎತ್ತಿಹಿಡಿಯುವಲ್ಲಿ ನಿಮ್ಮ ಹಸ್ತಕ್ಷೇಪಕ್ಕೆ ನಾನು ಎದುರು ನೋಡುತ್ತೇನೆ.

ನಿಮ್ಮ ವಿಶ್ವಾಸಿ,
ರಾಜೀವ್ ಚಂದ್ರಶೇಖರ್

ಶ್ರೀ ಕಮಲ್ ನಾಥ್,
ಮಾನ್ಯ ನಗರಾಭಿವೃದ್ಧಿ ಸಚಿವರು,
ಭಾರತ ಸರ್ಕಾರ
ನವ ದೆಹಲಿ.

# 12

# ಭ್ರಷ್ಟಾಚಾರ ಹಾಗೂ ನಿಧಿಗಳ ದುರ್ಬಳಕೆಯಿಂದ ಬೆಂಗಳೂರಿಗೆ ಆಗುತ್ತಿರುವ ಹಾನಿಯ ಬಗ್ಗೆ ಮುಖ್ಯಮಂತ್ರಿಯವರಿಗೆ ಪತ್ರ

16 ನೇ ಡಿಸೆಂಬರ್, 2013

ಶ್ರೀ ಸಿದ್ದರಾಮಯ್ಯ ಅವರೆ,

**ವಿಷಯ: ಬೆಂಗಳೂರು ಭ್ರಷ್ಟಾಚಾರ, ಹಣದ ದುರುಪಯೋಗ ಮತ್ತು ಪಟ್ಟಭದ್ರ ಹಿತಾಸಕ್ತಿಗಳಿಂದ ಬಳಲುತ್ತಿದೆ, ಆದಾಯದ ಕೊರತೆಯಿಲ್ಲ**

ಬೆಂಗಳೂರಿನಲ್ಲಿ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಯಾವುದೇ ಹಣವನ್ನು ಹೊಂದಿಲ್ಲ ಎಂಬ ನಿಮ್ಮ ನಿಲುವನ್ನು ನಾನು ಆತಂಕದಿಂದ ಓದಿದ್ದೇನೆ.

ಬೆಂಗಳೂರು ನಗರವು ಹೂಡಿಕೆ ಮತ್ತು ಆರ್ಥಿಕ ಚಟುವಟಿಕೆಯ ರಹದಾರಿಯಾಗಿದ್ದು, ನಮ್ಮ ರಾಜ್ಯಕ್ಕೆ ಮುಖ್ಯವಾಗಿದೆ. ಆದ್ದರಿಂದ, ಇದರ ಹಣಕಾಸಿನ ಸುಸ್ಥಿತಿಯೆಂಬುದು

ಸಮರ್ಥನೀಯ ಮತ್ತು ಯೋಜಿತ ಬೆಳವಣಿಗೆ ಮತ್ತು ವಿಸ್ತರಣೆಗೆ ಏಕೈಕ ಖಾತರಿಯಾಗಿದ್ದು ಹೆಚ್ಚು ನಿರ್ಣಾಯಕವಾದುದಾಗಿದೆ.

ಬಿಬಿಎಂಪಿ ನಗರದಲ್ಲಿನ ರಾಜಕೀಯ ವಿಕೇಂದ್ರೀಕರಣದ ಚಿಹ್ನೆ ಮಾತ್ರವಲ್ಲ, ಆದರೆ ಅದು ಅತ್ಯಂತ ಮುಖ್ಯವಾದ ಸಾರ್ವಜನಿಕ ಸೇವೆ ಒದಗಿಸುವ ಆಡಳಿತಾತ್ಮಕ ಸಂಸ್ಥೆಯಾಗಿದ್ದು ಸಾರ್ವಜನಿಕ ಮೂಲಸೌಕರ್ಯವನ್ನು ನಿರ್ವಹಿಸುವ ಮತ್ತು ವಿಸ್ತರಿಸುವ ಆಡಳಿತಾತ್ಮಕ ಕೆಲಸವನ್ನು ಮಾಡುತ್ತದೆ. ಹಾಗಾಗಿ, ಬಿಬಿಎಂಪಿ ಹಣಕಾಸು ದಿವಾಳಿತನದ ಅಂಚಿನಲ್ಲಿದೆ ಎಂಬುದು ನಾನೂ ಸೇರಿದಂತೆ ಹೆಚ್ಚಿನ ನಾಗರೀಕರಿಗೆ ಚಿಂತೆಯ ವಿಷಯವಾಗಿದೆ.

8 ದಶಲಕ್ಷ ನಿವಾಸಿಗಳು, ಒಂದು ದಶಲಕ್ಷ ತೆರಿಗೆದಾರರು ಮತ್ತು ರಸ್ತೆ ತೆರಿಗೆ, ಆಸ್ತಿ ತೆರಿಗೆ ಭೂಮಿ ಇತ್ಯಾದಿ ಸಾರ್ವಜನಿಕ ಆಸ್ತಿಗಳಂತಹ ಆದಾಯದ ಅನೇಕ ಮೂಲಗಳು ಮತ್ತು ರಾಜ್ಯದ ಜಿಡಿಪಿಯ 30% ಗೆ ಕೊಡುಗೆ ನೀಡುವ ನಮ್ಮ ನಗರವು ಆರ್ಥಿಕವಾಗಿ ದಿವಾಳಿಯಂಚಿನಲ್ಲಿದೆ ಎಂಬುದನ್ನು ನಾನು ತಿರಸ್ಕರಿಸುತ್ತೇನೆ. ಬೆಂಗಳೂರಿನ ಆಡಳಿತದ ಮೇಲೆ ತಮ್ಮ ಕೊಳಕು ನೆರಳನ್ನು ಬೀರಿರುವ ರಾಜಾರೋಷ ಭ್ರಷ್ಟಾಚಾರ, ವ್ಯರ್ಥವಾದ ಮತ್ತು ಅಯೋಜಿತ ಖರ್ಚು ಮತ್ತು ಆಳವಾಗಿ ಬೇರೂರಿರುವ ಪಟ್ಟಭದ್ರ ಹಿತಾಸಕ್ತಿಗಳಿಂದಾಗಿ ಸರ್ಕಾರಿ ನಿಧಿಗಳು ಮತ್ತು ಸಾರ್ವಜನಿಕ ಸ್ವತ್ತುಗಳ ದುರುಪಯೋಗಕ್ಕೆ ಕಾರಣವಾಗಿದೆ. ಕಳೆದ ಕೆಲವು ವರ್ಷಗಳಿಂದ ಸತತ ಸರ್ಕಾರಗಳು ಮುಂದುವರಿಸಿದ ಕಳಪೆ ಆಡಳಿತ ಮತ್ತು ಭ್ರಷ್ಟಾಚಾರದ ಕಾರಣ ಈ ಪರಿಸ್ಥಿತಿ ಹಾಗೇ ಕಳೆದುಹೋಯಿತು.

ನಮ್ಮ ನಗರದ ಆಡಳಿತದ ಅವನತಿಗೆ ಬ್ರೇಕ್ ಹಾಕಲು ಇದು ಸುಸಮಯ. ಪ್ರಸ್ತುತ ಪರಿಸ್ಥಿತಿಗೆ ಕಾರಣಗಳಿವು ಎಂಬುದು ಎಲ್ಲರಿಗೂ ಗೊತ್ತಿದೆ:

ಎ) ನಗರಕ್ಕೆ ಸರಿಯಾದ ದೀರ್ಘಕಾಲಿಕ ಪಾರದರ್ಶಕ ಯೋಜನೆಯ ಕೊರತೆ – ಬೆಂಗಳೂರಿಗೆ ಆರ್ಥಿಕ ಯೋಜನೆ ಒಳಗೊಂಡಂತೆ ಸರಿಯಾದ ದೀರ್ಘಕಾಲಿಕ ಶಾಸನಬದ್ಧ ಯೋಜನೆ ಅಗತ್ಯವಿದೆ.

ಬಿ) ಹಣಕಾಸಿನ ಸಂಪನ್ಮೂಲಗಳನ್ನು ಬಹಳ ಅಸಮರ್ಥವಾಗಿ ಬಳಸುವ ತುಂಬ ಅದಕ್ಷ ಮತ್ತು ಹೊಂದಾಣಿಕೆಗಳಿರುವ, ಯೋಜನೆಗಳ ಪಾಲನೆ ಬದಲಿಗೆ ಪಟ್ಟಭದ್ರ ಹಿತಾಸಕ್ತಿಗಳಿಗೆ ಮಣೆ ಹಾಕುವ ಗುತ್ತಿಗೆ ವ್ಯವಸ್ಥೆ. ಗುತ್ತಿಗೆ ಮತ್ತು ಹಣದ ಬಳಕೆ ಹೆಚ್ಚು ಪಾರದರ್ಶಕ, ಸ್ಪರ್ಧಾತ್ಮಕ ಮತ್ತು ಸಮರ್ಥವಾಗಿರಬೇಕು.

ಸಿ) ಆದಾಯ ಸಂಗ್ರಹಣೆಯಲ್ಲಿ ಲೋಪದೋಷಗಳನ್ನು ತಪ್ಪಿಸಲು ಉದ್ದೇಶಪೂರ್ವಕ ನಿರಾಕರಣೆ. ತೆರಿಗೆ ಕವರೇಜ್ ವಿಸ್ತರಿಸುವುದು, ಗುರಿಗಳನ್ನು ಸ್ಥಾಪಿಸುವುದು ಮತ್ತು ಆದಾಯದ ಸೋರಿಕೆಗಳಲ್ಲಿ ವ್ಯವಹಾರ ಮಾಡಿಕೊಳ್ಳುವ ಎಲ್ಲಾ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸುವುದು.

ಡಿ) ಜಮೀನು ಮತ್ತು ಕಟ್ಟಡಗಳಂತಹ ಸರ್ಕಾರಿ ಆಸ್ತಿಗಳ ಅತ್ಯಂತ ಅಪಾರದರ್ಶಕವಾದ ಬಳಕೆ – ಹಣಕಾಸಿನ ಸಂಪನ್ಮೂಲಗಳನ್ನು ಗರಿಷ್ಠಗೊಳಿಸುವ ಬದಲಾಗಿ ಪಟ್ಟಭದ್ರ ಹಿತಾಸಕ್ತಿಗಳಿಗೆ ಅನುಕೂಲವಾಗುವಂತೆ ಬಳಸುವುದು. ವಾಣಿಜ್ಯ ಹಿತಾಸಕ್ತಿಗಳಿಂದ ಒತ್ತುವರಿಯಾಗಿರುವ ಭೂಮಿಯನ್ನು ಮತ್ತೆ ತೆಗೆದುಕೊಳ್ಳಬೇಕು. ನಗರಕ್ಕೆ ಆರ್ಥಿಕ ಸಂಪನ್ಮೂಲಗಳನ್ನು ಗರಿಷ್ಠಗೊಳಿಸಲು ಸಾರ್ವಜನಿಕ ಭೂಮಿಯನ್ನು ಮಾರುಕಟ್ಟೆ ದರದಲ್ಲಿ ಗುತ್ತಿಗೆ ಅಥವಾ ಮಾರಾಟ ಮಾಡಬೇಕು. ಬಜೆಟ್ ಮತ್ತು ಹಣದ ಬಳಕೆಗಳಲ್ಲಿ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಟನೆಗಳನ್ನು ಒಳಗೊಳ್ಳಬೇಕು.

ಇ) ಕಂದಾಯದ ಸ್ಪಷ್ಟ ಮೂಲಗಳ ಲಾಭ ಪಡೆಯಲು ವಿಫಲತೆ. ಬೆಂಗಳೂರನ್ನು ಪ್ರವಾಸಿ ತಾಣ ಮತ್ತು ಅಧಿವೇಶನಗಳ ಕೇಂದ್ರಸ್ಥಾನವಾಗಿ ಅಭಿವೃದ್ಧಿಪಡಿಸುವ ಮೂಲಕ ಹೆಚ್ಚಿನ ಹೆಚ್ಚಿನ ಆದಾಯವನ್ನು ಸೃಷ್ಟಿಸಬಹುದು. ವಿಶ್ವದಾದ್ಯಂತದ ಪ್ರವಾಸಿಗರನ್ನು ಸೆಳೆಯಲು ಮನರಂಜನಾತ್ಮಕ, ಔದ್ಯಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದು.

ಎಫ್) ಸರ್ಕಾರದ ಖರ್ಚಿನ ಬದಲಾಗಿ ಅಥವಾ ಅದಕ್ಕೆ ಪೂರಕವಾಗಿ ಸಾಕಷ್ಟು ಸಂಖ್ಯೆಯ ಖಾಸಗಿ ಹೂಡಿಕೆಯನ್ನು ಸಾರ್ವಜನಿಕ–ಖಾಸಗಿ ಪಾಲುದಾರಿಕೆಯತ್ತ (ಪಿಪಿಪಿ) ಸೆಳೆಯಲು ವಿಫಲವಾಗಿದೆ. ಒಪ್ಪಂದಗಳು ಮತ್ತು ವಾಣಿಜ್ಯ ನಿಯಮಗಳನ್ನು ಸೂಕ್ತವಾಗಿ ಮಂಡಿಸುವ ಮೂಲಕ, ನಗರ ಮೂಲಸೌಕರ್ಯ ಮತ್ತು ಸೇವೆಗಳಿಗೆ ಖಾಸಗಿ ಹೂಡಿಕೆಯನ್ನು ಆಕರ್ಷಿಸಬೇಕಾಗಿದೆ. ಬೆಂಗಳೂರಿನ ಹಣಕಾಸು ವ್ಯವಸ್ಥೆ ಆದಷ್ಟು ಬೇಗ ತನ್ನ ಹಾದಿಗೆ ಮರಳಲೇಬೇಕಾಗಿದೆ ಮತ್ತು ಇದರಲ್ಲಿ ದೀರ್ಘಾವಧಿಯ ಸಶಕ್ತ ಹಣಕಾಸು ಯೋಜನೆಯೂ ಸೇರಿದೆ.

ನಮ್ಮಂತ ಯಾರಿಗೆ ಬೆಂಗಳೂರು ಮನೆಯಾಗಿದೆಯೋ ಮತ್ತು ನಮ್ಮ ನಗರದ ಅತಿಯಾದ ಬಳಕೆಯಿಂದ ನಾಶಗೊಳ್ಳುತ್ತಿರುವ ಬಗ್ಗೆ ಕ್ರೋಧವಿದೆಯೋ, ಅವರಲ್ಲಿ ಒಬ್ಬರಾಗಿರುವ ನೀವು ಮಧ್ಯಪ್ರವೇಶಿಸಲೇಬೇಕು ಮತ್ತು ನಾಯಕತ್ವ ವಹಿಸಿಕೊಳ್ಳಲೇಬೇಕು ಎಂದು

ನಂಬಿ, ಏಕೆಂದರೆ ಬೆಂಗಳೂರು ನಿಮ್ಮ ಜವಾಬ್ದಾರಿಯ ಬಂಡವಾಳದ ಅಸ್ಥಿತ್ವವನ್ನು ತೋರಿಸಲು ಅರ್ಹವಾಗಿದೆ. ಅಕ್ರಮ– ಸಕ್ರಮದ ಮೂಲಕ ನಿಯಮೋಲ್ಲಂಘನೆ ಸಂಯೋಜಿಸುವುದು ಮೊದಲಾದವುಗಳು. ಕಂದಾಯ ಕೈಗೂಡಿಸಿಕೊಳ್ಳುವಿಕೆಯ ಹೆಸರಿನಲ್ಲಿ ಆಡಳಿತ ವಿರೋಧಿ ಕ್ರಮಗಳು, ಮತ್ತು ಬದಲಾಗಿ, ಇದು ಉಲ್ಲಂಘನೆ ಮತ್ತು ಭ್ರಷ್ಟಾಚಾರದ ಸಂಸ್ಕೃತಿಯನ್ನು ಬೆಳೆಸುತ್ತದೆ.

ನಾಗರೀಕರು, ನಿವಾಸಿಗಳ ಕ್ಷೇಮ ಸಂಘಟನೆಗಳು (ಆರ್‌ಡಬ್ಲ್ಯುಎಗಳು) ಮತ್ತು ಹೂಡಿಕೆದಾರರು ಅನಿಯಂತ್ರಿತ ಭ್ರಷ್ಟಾಚಾರದಿಂದ ಹೈರಾಣಾಗಿಹೋಗಿದ್ದಾರೆ, ಪಾರದರ್ಶಕತೆಯ ಕೊರತೆ, ಗುತ್ತಿಗೆಯಲ್ಲಿ ಮೋಸ ಮತ್ತು ಪಟ್ಟಭದ್ರ ಹಿತಾಸಕ್ತಿಗಳು ನಗರದ ರೂಪುರೇಷೆಯನ್ನು ನಿಯಂತ್ರಿಸುತ್ತಿರುವುದು. ಇದು ನಿಲ್ಲಲೇಬೇಕು. ಬೆಂಗಳೂರಿನ ಮೂಲನಿವಾಸಿಗಳು ಮತ್ತು ನಿವಾಸಿಗಳ ಕ್ಷೇಮ ಸಂಘಟನೆಗಳ ಮೂಲಕ ಹಣಕಾಸು, ಆಯವ್ಯಯ ಮತ್ತು ನಗರ ಯೋಜನೆ/ಖರ್ಚು ಮೊದಲಾದವುಗಳಲ್ಲಿ ಪಾಲುದಾರರಾದರೆ, ಈ ರೀತಿಯ ಸಂಪತ್ತಿನ ವ್ಯರ್ಥವನ್ನು ತಡೆಯಬಹುದು ಮತ್ತು ಸಾರ್ವಜನಿಕರ ಹಣವನ್ನು ಬೆಂಗಳೂರಿನ ನಾಗರೀಕರ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳಬಹುದು.

ಸರ್ಕಾರಗಳು ನಡೆಸುವ ಆಡಳಿತದಲ್ಲಿ ಬದಲಾವಣೆ ತರಬೇಕು ಎಂದು ಜನರು ದೃಢ ನಿಲುವು ಹೊಂದಿದ್ದಾರೆ ಎಂಬುದನ್ನು ದೆಹಲಿಯಲ್ಲಿ ಇತ್ತೀಚೆಗೆ ನಡೆದ ಕೆಲವು ಘಟನೆಗಳು ತೋರಿಸಿವೆ. ನಗರದ ಇಳಿಮುಖ ಮುಂದುವರಿದರೆ ಮತ್ತು ನಗರದ ಭವಿಷ್ಯವನ್ನು ಕೆಲವು ಪಟ್ಟಭದ್ರ ಹಿತಾಸಕ್ತಿಗಳು ನಿಯಂತ್ರಿಸುವುದು ಮುಂದುವರಿದರೆ, ಬೆಂಗಳೂರಿನ ನಾಗರೀಕರು ಅದೇ ರೀತಿಯಲ್ಲಿ ಸ್ಪಂದಿಸುವುದರಲ್ಲಿ ಅನುಮಾನವೇ ಇಲ್ಲ. ಬೆಂಗಳೂರು ಯುವಕರನ್ನು, ಪ್ರತಿಭಾವಂತರನ್ನು ಮತ್ತು ದೇಶದ ಅತ್ಯಂತ ಬದ್ಧ ಮನಸ್ಸುಗಳನ್ನು ನಾಗರೀಕರನ್ನಾಗಿ ಹೊಂದಿದೆ. ಯಾವುದೇ ಅನುಮಾನವಿಲ್ಲದೆ, ಅವರು ಪ್ರಮುಖ ಆದರೆ ಸಾಮಾನ್ಯ ವಿಷಯಗಳಾದ ಹಣಕಾಸು ಮತ್ತು ನಗರದ ಭವಿಷ್ಯದ ಮರುನಿರ್ಮಾಣ ಮೊದಲಾದ ವಿಷಯಗಳ ಕುರಿತು ಸರ್ಕಾರದ ಜೊತೆ ಕೆಲಸ ಮಾಡಲು ಮನಸ್ಸು ಹೊಂದಿದ್ದಾರೆ.

ನಿಮ್ಮ ಸರ್ಕಾರವನ್ನು ಆಡಳಿತದ ಭರವಸೆಯೊಂದಿಗೆ ಆರಿಸಲಾಗಿದೆ, ಮತ್ತು ಈ ಪ್ರಮಾಣವನ್ನು ಉಳಿಸಿಕೊಳ್ಳಲು, ನಿಮ್ಮ ಸರ್ಕಾರ ಮತ್ತು ನೀವು ತುರ್ತಾಗಿ ಮಾಡಿ ತೋರಿಸಬೇಕಿದೆ. ಇದನ್ನು ಅಡಳಿತದ ಅದರ ತಂತ್ರಗಾರಿಕೆಯನ್ನು ಸಾರ್ವಜನಿಕಗೊಳಿಸುವ ಮೂಲಕ ಆರಂಭಿಸಬೇಕಿದೆ, ಆಯವ್ಯಯದ ಲೆಕ್ಕಾಚಾರ

ಮತ್ತು ನಗರದ ಖರ್ಚನ್ನು ಪಾರದರ್ಶಕವಾಗಿಡಬೇಕು, ಜೊತೆಗೆ ಭ್ರಷ್ಟಾಚಾರವನ್ನು ಆದಷ್ಟು ಬೇಗ ಕೊನೆಗೊಳಿಸುವ ಬದ್ಧತೆಯಿರಬೇಕು.

ನಾನು ನಿಮ್ಮ ಶೀಘ್ರ ಸ್ಪಂದನೆಗೆ ಎದುರುನೋಡುತ್ತಿರುತ್ತೇನೆ.

ನಿಮ್ಮ ವಿಧೇಯ
ರಾಜೀವ್ ಚಂದ್ರಶೇಖರ್

ಶ್ರೀ ಸಿದ್ದರಾಮಯ್ಯ
ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ,
ಬೆಂಗಳೂರು.

# 13

# ಅರುಣಾಚಲ ಪ್ರದೇಶದ ವಿದ್ಯಾರ್ಥಿಯ ಸಾವಿನ ಕುರಿತು ಗೌರವಾನ್ವಿತ ಗೃಹ ಸಚಿವರಿಗೆ ಪತ್ರ

7 ನೇ ಫೆಬ್ರುವರಿ, 2014

ಶ್ರೀ ಕೆ ಜೆ ಜಾರ್ಜ್

ನಾನು, ಕಳೆದ ವಾರ ದೇಶದ ಹೃದಯಭಾಗ, ರಾಜಧಾನಿ ನವದೆಹಲಿಯಲ್ಲಿ ಮೃತರಾದ ಅರುಣಾಚಲ ಪ್ರದೇಶದ 19-ವರ್ಷದ ವಿದ್ಯಾರ್ಥಿ ನಿಡೊ ತನಿಯಾಮ್ ಸಾವಿನ ಹಿನ್ನೆಲೆಯಲ್ಲಿ ಈ ಪತ್ರವನ್ನು ಬರೆಯುತ್ತಿದ್ದೇನೆ. ಈ ಜನಾಂಗೀಯ ಭೇದದ ಅನುಭವ ದೆಹಲಿಗೆ ಮಾತ್ರ ಸೀಮಿತವಾಗಿಲ್ಲ.

ಬೆಂಗಳೂರಿನಲ್ಲೂ, ಕೆಲವೊಮ್ಮೆ ಸ್ಥಳೀಯರು ಈಶಾನ್ಯ ರಾಜ್ಯಗಳಿಂದ ಬಂದ ಯುವಕರನ್ನು ಬೇರೆಯೇ ದೇಶಕ್ಕೆ ಸೇರಿದವರು ಎಂಬಂತೆ ಕಾಣುವುದನ್ನು ನಾನು ನೋಡಿದ್ದೇನೆ- ಇದು ಸಂಪೂರ್ಣವಾಗಿ ಅವರ ಚಹರೆ, ಭಾಷೆ, ಧಿರಿಸು ಮತ್ತು ಜೀವನಶೈಲಿಯನ್ನು ಆಧಾರಿತವಾಗಿರುತ್ತದೆ. ಇದೊಂದು ತುಂಬಾ ಕಾಡುವ ಘಟನೆ ಮತ್ತು ಎಲ್ಲರಿಗೂ ಎಚ್ಚರಿಕೆಯ ಗಂಟೆ ಮತ್ತು ಸಂವೇದನಾಶೀಲತೆಯ ತುರ್ತು ಅಗತ್ಯತೆಯನ್ನು ಒತ್ತಿ ಹೇಳುತ್ತದೆ.

ಜನಾಂಗೀಯ ಅಸಹಿಷ್ಣುತೆಯ ಇಂತಹ ಆಘಾತಕಾರಿ ಘಟನೆಯ ಹಿನ್ನೆಲೆಯಲ್ಲಿ, ಮತ್ತು ರಾಜ್ಯದಲ್ಲಿ ಇಂತಹ ಜನಾಂಗೀಯ ಭೇಧದ ಘಟನೆಗಳು ಈ ಹಿಂದೆ ನಡೆದಿರುವ ಹಿನ್ನೆಲೆಯಲ್ಲಿ, ನಾವು ಅಂತಹ ಘಟನೆಗಳು ನಡೆಯದಂತೆ ಖಚಿತಪಡಿಸಿಕೊಳ್ಳಲು ಕೆಲವು ಕ್ರಮಗಳನ್ನು ಅನುಸರಿಸುವ ಅಗತ್ಯವಿದೆ. ಮತ್ತೊಮ್ಮೆ. ರಾಜ್ಯವು ಇತರ ಭಾಗದ ಮತ್ತು ಜಗತ್ತಿನ ಇತರೆಡೆಯ ಜನರಿಗೆ ಸುರಕ್ಷಿತವಾಗಿದೆ ಎಂದು ಖಚಿತಪಡಿಸಲು ಕರ್ನಾಟಕ ಸರ್ಕಾರ ಕೆಲವು ರಕ್ಷಣಾ ಕ್ರಮಗಳನ್ನು ತೆಗೆದುಕೊಳ್ಳುವ ಅನಿವಾರ್ಯತೆಯಿದೆ.

**ಈ ಸಮಸ್ಯೆಯನ್ನು ಎದುರಿಸಲು ಐದು ನಿರ್ದಿಷ್ಟ ಹಂತಗಳನ್ನು ಪಾಲಿಸುವ ಅಗತ್ಯವಿದೆ:**

1. ಮೊದಲನೆಯದು ಮತ್ತು ಮುಖ್ಯವಾದುದೆಂದರೆ, ಜನಾಂಗೀಯ ಭೇಧದ ವಿರುದ್ಧ ಒಂದು ಕಾನೂನಿರಬೇಕು. ಈ ಕುರಿತ ಕೆಲಸ ಕೂಡಲೇ ಆರಂಭವಾಗಬೇಕು. ಸರ್ಕಾರದ ಜನಾಂಗೀಯ ಭೇದದ ವಿರುದ್ಧ ಶೂನ್ಯ ಸಹನೆಯ ಬಲವಾದ ಸಂದೇಶ ಕಳುಹಿಸುವ ಅಗತ್ಯವಿದೆ.

2. ಸರ್ಕಾರವು ಪೊಲೀಸರಿಗೆ ಅರಿವು ಮೂಡಿಸುವ ಮತ್ತು ಸಂವೇದನೆ ಕುರಿತಾದ ಪಾಠ ಹೇಳಬೇಕಾಗಿದೆ, ಇವು ವ್ಯಾಪಕವಾಗಿರುವ ಭೇದ, ಭ್ರಷ್ಟಾಚಾರ ಮೊದಲಾದ ವಿಷಯಗಳಲ್ಲಿ ಆರಂಭದ ಮೆಟ್ಟಿಲುಗಳಾಗಿವೆ.

3. ಸಾಮರಸ್ಯ ಮತ್ತು ಭಾರತದ ವೈವಿಧ್ಯತೆ, ಅದು ಚರ್ಮದ ಬಣ್ಣಗಳು, ಗುಣಗಳು, ಲಿಂಗ, ಸಂಸ್ಕೃತಿ, ಭಾಷೆಗಳು, ವೇಷಭೂಷಣ ಮತ್ತು ಅಹಾರಾಭ್ಯಾಸವಿರಬಹುದು, ಇವುಗಳನ್ನು ಒತ್ತಿ ಹೇಳುವಂತೆ ನಮ್ಮ ಶಿಕ್ಷಣ ವ್ಯವಸ್ಥೆ ವಿಭಿನ್ನ ಸಂಸ್ಕೃತಿಯ ಪಾಠಗಳನ್ನು ಒಳಗೊಳ್ಳುವ ಅವಶ್ಯಕತೆಯಿದೆ. ರಾಜ್ಯದ ಪಠ್ಯಕ್ರಮದ ಶಿಕ್ಷಣ ಸಾಹಿತ್ಯದಲ್ಲಿ ಇವುಗಳನ್ನು ಸೇರಿಸಲು ರಾಜ್ಯ ಸರ್ಕಾರ ಪ್ರಯತ್ನ ನಡೆಸಲೇಬೇಕಾದ ಸಂದರ್ಭ ಬಂದಿದೆ.

4. ಪೋಷಕರು ಇದನ್ನು ಬೆಳೆಸುವ ಅಗತ್ಯವಿದೆ, ವಿಶೇಷವಾಗಿ ಯುವಕರಲ್ಲಿ ಮಹಿಳೆಯರು ಮತ್ತು ಇತರ ರಾಜ್ಯಗಳ ನಾಗರೀಕರನ್ನು ಗೌರವಿಸುವುದನ್ನು ಹೇಳಿಕೊಡಬೇಕು.

5. ಕೊನೆಯದಾಗಿ, ರಾಜಕಾರಣಿಗಳು ಮತ್ತು ಪತ್ರಕರ್ತರು ಹೆಚ್ಚು ಪ್ರಯಾಣಿಸಿ, ಈಶಾನ್ಯ ರಾಜ್ಯಗಳಿಗೆ ಸಂಬಂಧಿಸಿದ ವಿಷಯಗಳಿಗೆ ಮತ್ತು ಸಮಸ್ಯೆಗಳಿಗೆ ಗಣನೀಯವಾಗಿ ಹೆಚ್ಚಿನ ಪ್ರಚಾರ ನೀಡಬೇಕು.

ದೇಶದ ಯಾವುದೇ ಭಾಗದಲ್ಲಿ ವಾಸಿಸುವ ಮತ್ತು ನೆಲೆಗೊಳ್ಳುವ ಸ್ವಾತಂತ್ರ್ಯವು ಮೂಲಭೂತವಾದ ಹಕ್ಕು, ಇದನ್ನು ನಮ್ಮ ಸಂವಿಧಾನದಲ್ಲಿ ಕೊಡಲಾಗಿದೆ. ನಮ್ಮ ದೇಶ ಒಂದು ಉನ್ನತ ದೇಶ, ಇಲ್ಲಿ ಈಶಾನ್ಯದಿಂದ ಬಂದ ಜನರು ಯಾವುದೇ ತಾರತಮ್ಯದ ಭಯವಿಲ್ಲದೇ ಜೀವಿಸಲು ಸಾಧ್ಯವಿರಬೇಕು ಮತ್ತು ನಾವೂ ಅಲ್ಲಿ ಅದೇ ರೀತಿಯಾಗಿ ಬದುಕುವಂತಿರಬೇಕು.

ನಾನು ನಿಮ್ಮಲ್ಲಿ ಶೀಘ್ರವಾದ ಕ್ರಮಗಳನ್ನು ತೆಗೆದುಕೊಂಡು ರಾಜ್ಯ ಸರ್ಕಾರವು ಈಶಾನ್ಯ ಭಾರತೀಯರ ವಿರುದ್ಧ ಬೆಂಗಳೂರಿನಲ್ಲಿ ಮತ್ತು ಕರ್ನಾಟಕದಲ್ಲಿ ಯಾವುದೇ ರೀತಿಯ ವರ್ಣಭೇದ ಮತ್ತು ತಾರತಮ್ಯದ ವಿರುದ್ಧ ಶೂನ್ಯ ಸಹನೆ ನೀತಿ ಅನುಸರಿಸುತ್ತದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ.

ಧನ್ಯವಾದಗಳೊಂದಿಗೆ, ನಿಮ್ಮ ವಿಧೇಯ,

ರಾಜೀವ್ ಚಂದ್ರಶೇಖರ್

ಕೆ ಜೆ ಜಾರ್ಜ್,
ಮಾನ್ಯ ಗೃಹ ಸಚಿವ,
ಕರ್ನಾಟಕ ಸರ್ಕಾರ,
ವಿಧಾನ ಸೌಧ,
ಬೆಂಗಳೂರು.

# 14

# ಅಂಗವಿಕಲ ಮತದಾರರಿಗೆ ಸೌಲಭ್ಯವೊದಗಿಸುವ ಕುರಿತು ಚುನಾವಣಾಧಿಕಾರಿಗೆ ಪತ್ರ

9 ನೇ ಎಪ್ರಿಲ್, 2014

ಶ್ರೀ ಅನಿಲ್ ಕುಮಾರ್,

ಮತಗಟ್ಟೆಗಳನ್ನು ಇನ್ನೂ ಹೆಚ್ಚಿನ ಅಶಕ್ತ–ಸ್ನೇಹಿಯನ್ನಾಗಿ ಮಾಡುವ ಕುರಿತಂತೆ ಒಂದು ಮೂಲಭೂತ ಪ್ರಾಮುಖ್ಯತೆಯಿರುವ ವಿಷಯದ ಬಗ್ಗೆ ನಿಮ್ಮ ಗಮನ ಸೆಳೆಯಲು ನಾನು ಈ ಪತ್ರವನ್ನು ಬರೆಯುತ್ತಿದ್ದೇನೆ.

ನಮ್ಮ ಸಂವಿಧಾನ ಪ್ರಕಾರ ಎಲ್ಲಾ ಪ್ರೌಢರಿಗೂ ಅಧಿಕಾರವಿದೆ ಮತ್ತು ಎಲ್ಲಾ ಪ್ರೌಢ ನಾಗರೀಕರು ಮತದಾನ ಮಾಡುವ ಹಕ್ಕು ಪಡೆಯುತ್ತಾರೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು ತುಂಬಾ ಪ್ರಮುಖ, ಈ ನಿಟ್ಟಿನಲ್ಲಿ ಚುನಾವಣಾ ಆಯೋಗ ಗಮನಾರ್ಹ ಪ್ರಯತ್ನ ಮಾಡಿದೆ. ಆದರೂ, ಮತದಾನದ ಸೌಲಭ್ಯವನ್ನು ಖಚಿತಪಡಿಸುವ ಚುನಾವಣಾ ಆಯೋಗದ ಕ್ರಮಗಳು, 19 ಲಕ್ಷ ಮಿಲಿಯನ್ ನ್ಯೂನತೆಯುಳ್ಳ ಅಧಿಕಾರಯುತ ಮತದಾರರ ಮತದಾರರ ವಿಚಾರದಲ್ಲಿ ಮಾತ್ರ

ಸಮಾಧಾನಕಾರಿಯಾಗಿಲ್ಲ. ಇದು, 2010 ರಲ್ಲಿ ಸುಪ್ರೀಂ ಕೋರ್ಟ್ ಮತದಾನ ಕೇಂದ್ರಗಳು ದೈಹಿಕ ನ್ಯೂನತೆಯುಳ್ಳ ಮತದಾರರಿಗೆ ನಿಲುಕುವಂತಿರಬೇಕು ಎಂದು ಚುನಾವಣಾ ಆಯೋಗಕ್ಕೆ ನೀಡಿದ ಆದೇಶದ ಹೊರತಾಗಿಯೂ ಸಾಧ್ಯವಾಗಿಲ್ಲ.

ನಿಮ್ಮ ಕಛೇರಿ ಚುನಾವಣಾ ಅಧಿಕಾರಿಗಳಿಗೆ ಪ್ರಾಶಸ್ತ್ಯದ ಮೇಲೆ ದೈಹಿಕ ನ್ಯೂನತೆಯುಳ್ಳ ವ್ಯಕ್ತಿಗಳಿಗೆ ಪ್ರವೇಶ ನೀಡಬೇಕು ಮತ್ತು ಲಭ್ಯವಿರುವ ಕಡೆ ಇಳಿಜಾರುಗಳನ್ನು, ಗಾಲಿಕುರ್ಚಿಗಳನ್ನು ಒದಗಿಸಬೇಕು ಎಂದು ಸೂಚಿಸಿರುವಾಗ, ದೆಹಲಿಯ ಮುಖ್ಯ ಚುನಾವಣಾ ಅಧಿಕಾರಿಯೊಬ್ಬರು, ನ್ಯೂನತೆಗಳಿರುವ ವ್ಯಕ್ತಿಗಳಿಗೆ ಅವಕಾಶ ಸಿಗುವಂತಾಗಲು ಅಲ್ಲಿ ಇತರ ಕ್ರಮಗಳನ್ನೂ ತೆಗೆದುಕೊಳ್ಳಲೂ ಸಾಧ್ಯವಿದೆ ಎಂಬುದನ್ನು ತೋರಿಸಿದ್ದಾರೆ.

ದೆಹಲಿಯ ಮುಖ್ಯ ಚುನಾವಣಾ ಅಧಿಕಾರಿ ದೈಹಿಕ ನ್ಯೂನತೆಯುಳ್ಳ ವ್ಯಕ್ತಿಗಳಿಗೆ ಮತದಾನದ ಹಕ್ಕನ್ನು ಮತ್ತಷ್ಟು ಕೈಗೆಟುಕುವಂತೆ ಮಾಡಲು ಕೆಲವೊಂದು ಹೊಗಳಿಕೆಗೆ ಅರ್ಹ ಆರಂಭಿಕ ಹೆಜ್ಜೆಗಳನ್ನು ಇರಿಸಿದ್ದಾರೆ. ಇವುಗಳಲ್ಲಿ, ಜಾಲತಾಣಗಳಲ್ಲಿ ನ್ಯೂನತೆಯುಳ್ಳ ವ್ಯಕ್ತಿಗಳ ಪಟ್ಟಿ ಮತ್ತು ನ್ಯೂನತೆಯ ಬಗೆಯನ್ನು ನೋಂದಾಯಿಸಲು ಅವಕಾಶ ನೀಡುವುದೂ ಸೇರಿದೆ. ಶ್ರವಣದೋಷವಿದ್ದವರಿಗೆ ಸಹಾಯ ಮಾಡಲು ಪ್ರತಿಯೊಂದು ಮತದಾನ ಕೇಂದ್ರಗಳನ್ನೂ ಹೆಚ್ಚುವರಿಯಾಗಿ ಒಬ್ಬ ಆಂಗಿಕ ಭಾಷಾ ತಜ್ಞರನ್ನು ನೇಮಿಸಲಾಗಿರುತ್ತದೆ. ದೈಹಿಕ ನ್ಯೂನತೆಯುಳ್ಳ ಮತದಾರರಿಗೆ ಗಾಲಿಖುರ್ಚಿಗಳನ್ನು ಒದಗಿಸಲು, ಅವರು ಆಸ್ಪತ್ರೆಗಳು ಮತ್ತು ಸರ್ಕಾರೇತರ ಸಂಸ್ಥೆಗಳ ಸಹಾಯ ಪಡೆದುಕೊಂಡಿದ್ದಾರೆ.

ನಿಮ್ಮ ಕಛೇರಿಯಿಂದ ಈಗಾಗಲೇ ಆರಂಭಿಸಿರುವ ಉಪಕ್ರಮಗಳ ಹೊರತಾಗಿ, ಕರ್ನಾಟಕದಲ್ಲೂ ಈ ಕ್ರಮಗಳನ್ನು ಅನುಸರಿಸಬೇಕಾಗಿ ಕೇಳಿಕೊಳ್ಳುತ್ತೇನೆ, ಈ ಮೂಲಕ ನ್ಯೂನತೆಯಿರುವವರಿಗೆ ಮತದಾನದ ಹಕ್ಕು ಚಲಾಯಿಸಲು ಎಲ್ಲಾ ರೀತಿಯ ಕ್ರಮ ಕೈಗೊಂಡಿರುವ ಬಗ್ಗೆ ಖಚಿತಪಡಿಸಿಕೊಳ್ಳಬಹುದು.

ನಾವೊಂದು ಪ್ರಜಾಪ್ರಭುತ್ವದಲ್ಲಿರುವುದರಿಂದ, ನ್ಯೂನತೆಯುಳ್ಳ ಮತದಾರರ ಧ್ವನಿಯೂ ಸಮನಾದ ಮಹತ್ವ ಹೊಂದಿದೆ. ಈ ನಿಟ್ಟಿನಲ್ಲಿ, ನಾನು ನಿಮ್ಮಲ್ಲಿ ಅಗತ್ಯವಾದ ಮತ್ತು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲು ಕೈಗೊಂಡು, ಭಾರತದ ಗೌರವಾನ್ವಿತ ಸುಪ್ರೀಂ ಕೋರ್ಟ್ ಮತ್ತು ನ್ಯೂನತೆಯುಳ್ಳ (ಸಮಾನ ಅವಕಾಶಗಳು, ಹಕ್ಕುಗಳ ರಕ್ಷಣೆ ಮತ್ತು ಸಂಪೂರ್ಣ ತೊಡಗಿಸಿಕೊಳ್ಳುವಿಕೆ) ವ್ಯಕ್ತಿಗಳ ಕಾಯ್ದೆ, 1995 ರ ಸೆಕ್ಷನ್ 59 ನ್ನು ಸಂಪೂರ್ಣವಾಗಿ ಜಾರಿಗೊಳಿಸಿ, ನ್ಯೂನತೆಯುಳ್ಳ ಮತದಾರರು ತಮ್ಮ

ಮತವನ್ನು ಚಲಾಯಿಸಲು ಮತ್ತು ಪ್ರಜಾಪ್ರಭುತ್ವದ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸುವಂತೆ ಕೇಳಿಕೊಳ್ಳುತ್ತೇನೆ.

ಈ ವಿಷಯದಲ್ಲಿ ನಿಮ್ಮ ಶೀಘ್ರ ಕ್ರಮಗಳನ್ನು ಅಪೇಕ್ಷಿಸುತ್ತೇನೆ.

ನಿಮ್ಮ ವಿಧೇಯ,
ರಾಜೀವ್ ಚಂದ್ರಶೇಖರ್

ಶ್ರೀ ಅನಿಲ್ ಕುಮಾರ್ ಝಾ,
ಐಎಎಸ್ ಮುಖ್ಯ ಚುನಾವಣಾಧಿಕಾರಿ,
ನಿರ್ವಾಚನಾ ನಿಲಯ,
ಮಹಾರಾಣಿ ಕಾಲೇಜ್ ಸರ್ಕಲ್,
ಶೇಷಾದ್ರಿ ರಸ್ತೆ,
ಬೆಂಗಳೂರು

# 15

# ಬೆಂಗಳೂರಿನಲ್ಲಿರುವ ಕಸ ಮತ್ತು ತ್ಯಾಜ್ಯ ನಿರ್ವಹಣೆಯ ಬಿಕ್ಕಟ್ಟು ತಾರಕಕ್ಕೇರುತ್ತಿರುವ ಬಗ್ಗೆ ಮುಖ್ಯಮಂತ್ರಿಯವರಿಗೆ ಪತ್ರ

18 ನೇ ಜೂನ್ 2014

ಶ್ರೀ ಸಿದ್ಧರಾಮಯ್ಯ ಅವರೇ,

ಬೆಂಗಳೂರಿನಲ್ಲಿ ಉಲ್ಬಣಿಸುತ್ತಿರುವ ಕಸ ಮತ್ತು ತ್ಯಾಜ್ಯ ನಿರ್ವಹಣೆ ಬಿಕ್ಕಟ್ಟಿನ ಕುರಿತ ಅವರ ಆತಂಕ ಬಗ್ಗೆ ನಾನು ನಾಗರೀಕರಿಂದ ಮತ್ತು ನಿವಾಸಿಗಳ ಅಭಿವೃದ್ಧಿ ಸಂಘಗಳಿಂದ (ಆರ್‌ಡಬ್ಲ್ಯೂಎ) ನಿರೂಪಣೆಗಳನ್ನು ನಾನು ಕೇಳುತ್ತಿರುತ್ತೇನೆ.

ಬೆಂಗಳೂರಿನ ಒಬ್ಬ ನಾಗರೀಕನಾಗಿ ಮತ್ತು ನಗರದಿಂದ ಚುನಾಯಿತನಾದ ಲೋಕಸಭಾ ಸದಸ್ಯನಾಗಿ, ಸರ್ಕಾರ ಈ ವಿಷಯವನ್ನು ನಿಭಾಯಿಸುತ್ತಿರುವ ಕುರಿತಂತೆ ನಾನು ಅವರ ಪರವಾಗಿ ಮತ್ತು ನನ್ನ ತೀವ್ರ ಬೇಸರ ಮತ್ತು ಸಿಟ್ಟನ್ನು ವ್ಯಕ್ತಪಡಿಸಲು ಈ ಪತ್ರ ಬರೆಯುತ್ತಿದ್ದೇನೆ.

ವಿಶಾಲವಾದ ಹಂತದಲ್ಲಿ, ನಗರದ ಆಡಳಿತ ಕೆಳಮುಖವಾಗಿ ಬರೀ ಗೊಂದಲ ಮತ್ತು ಸಮಸ್ಯೆ ನಿರ್ವಹಣೆಯಾಗಿದೆ– ಒಂದು ಪ್ರಮುಖವಾದ ವಿಚಾರವೆಂದರೆ

ನೀವು ಉತ್ತಮ ಆಡಳಿತದ ಭರವಸೆ ನೀಡಿದ್ದಿರಿ. ಅತಿರೇಕದ ಭ್ರಷ್ಟಾಚಾರ, ಪಾರದರ್ಶಕತೆಯ ಕೊರತೆ, ಗುತ್ತಿಗೆ ಪದ್ಧತಿಯಲ್ಲಿನ ಅಸಂಬದ್ಧತೆ ಮತ್ತು ನಗರದ ಆಡಳಿತ ನೀತಿಯನ್ನು ಚಲಾಯಿಸುತ್ತಿರುವ ಪಟ್ಟಭದ್ರ ಹಿತಾಸಕ್ತಿಗಳು, ನಾಗರೀಕರ ಸಿಟ್ಟಿಗೆ ಕಾರಣವಾಗಿರುವುದು ಸರಿಯೇ.

ಬೆಂಗಳೂರು ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳು, ಅದರಲ್ಲೂ ಪ್ರಮುಖವಾಗಿ ಕಸ ನಿರ್ವಹಣೆಗೂ ನಗರದ ಆಕಾರ ಅಥವ ಗಾತ್ರಕ್ಕೂ ಯಾವುದೇ ಸಂಬಂಧವಿಲ್ಲ, ಬದಲಾಗಿ ಇದು ಹೆಚ್ಚು ಮೂಲಭೂತ ವಿಷಯಗಳಾದ ಸಾರ್ವಜನಿಕ ಸೇವೆಗಳ ಜಾರಿಯಲ್ಲಾಗುತ್ತಿರುವ ಯೋಜನೆ ಮತ್ತು ಸಾಂಸ್ಥಿಕ ನಿರ್ವಹಣೆಗೆ ಕುರಿತದ್ದಾಗಿದೆ. ಕಸ ವಿಲೇವಾರಿ ಸಮಸ್ಯೆ, ನಗರ ಎದುರಿಸುತ್ತಿರುವ ಇತರ ಅನೇಕ ಸಮಸ್ಯೆಗಳಂತೆ, ಇಲ್ಲಿನ ಯೋಜನಾರಹಿತ ಬೆಳವಣಿಗೆಗೆ ಒಂದು ಭೂತಾಕಾರದ ಸಾಕ್ಷಿ. ಇದಕ್ಕುತ್ತರವಾಗಿ, ಇನ್ನೂ ಚರ್ಚೆಯಾಗದೇ ಉಳಿದಿರುವ ಗಂಭೀರ ಸಾರ್ವಜನಿಕ ಆರೋಗ್ಯ ಗಂಢಾಂತರಗಳಿಗೆ ಇದು ಕಾರಣವಾಗುತ್ತದೆ.

ನಗರಕ್ಕೆ ತುರ್ತಾಗಿ ಬೇಕಿರುವುದು ಆಡಳಿತದಲ್ಲಿ ಸುಧಾರಣೆ ಮತ್ತು ಅಭಿವೃದ್ಧಿಯೆಡೆಗೆ ಒಂದು ಯೋಜಿತ ನಡೆ. ಅನೇಕ ಸಭೆಗಳ ನಂತರ ಮತ್ತು 40,000 ಕ್ಕೂ ಹೆಚ್ಚು ನಾಗರೀಕರನ್ನು ಭೇಟಿಯಾದ ಬಳಿಕ, 2010 ರಲ್ಲಿ 'ಪ್ಲಾನ್ ಬೆಂಗಳೂರು–2020' (ಪಿಬಿ– 2020) ಎಂಬ ದಾಖಲೆಯ ಕರಡನ್ನು ರಚಿಸಿ ಕರ್ನಾಟಕ ಸರ್ಕಾರಕ್ಕೆ ಸಲ್ಲಿಸಲಾಯಿತು. ಪ್ಲಾನ್ ಬೆಂಗಳೂರು–2020, ಬೆಂಗಳೂರಿನ ಭವಿಷ್ಯದ ಬೆಳವಣಿಗೆ ಮತ್ತು ನಗರವನ್ನು ಬಾಧಿಸುತ್ತಿರುವ ಕಸ ನಿರ್ವಹಣೆಯ ಸಮಸ್ಯೆ ಮತ್ತಿತರ ವಿಷಯಗಳಿಗೆ ಸಂಬಂಧಪಟ್ಟಂತೆ, ಒಂದು ಮಹತ್ವದ, ಸಮಗ್ರ, ಪ್ರದೇಶಾವಾರು ಯೋಜನೆಯ ರಚನೆಯನ್ನು ಸರ್ಕಾರದಿಂದ ಅಪೇಕ್ಷಿಸಿತ್ತು. ಪ್ಲಾನ್ ಬೆಂಗಳೂರು–2020 ದಾಖಲೆ, ಯೋಜನಗಳು, ಅಪಾಯಗಳತ್ತ ಬೊಟ್ಟು ಮಾಡಿತ್ತು ಮತ್ತು ನಗರದ, ಅದರ ನಾಗರೀಕರ ಸಮಸ್ಯೆಗಳಿಗೆ ಜಾಹಿರಾತು ಆಧಾರಿತ ನಡೆಯಿಂದ ಉಂಟಾಗಿರುವ ಖರ್ಚು ಮೊದಲಾದವುಗಳಿಗೆ ಹೆಚ್ಚಿನ ಒತ್ತು ನೀಡಿತ್ತು.

ಈಗಲೇ ಪರಿಹರಿಸದೇ ಹೋದರೆ–ಅದರಲ್ಲೂ ಈಗಲೇ ಭವಿಷ್ಯ ಸೂಚಕವೆನಿಸುವ ಕಸ ವಿಲೇವಾರಿ ವಿಷಯದಲ್ಲಿ, ಈ ಸಮಸ್ಯೆಗಳನ್ನು ಪರಿಹರಿಸುವುದು ಎಷ್ಟು ಕಷ್ಟ ಮತ್ತು ಎಷ್ಟೊಂದು ಖರ್ಚು ತಗುಲಬಹುದು ಎಂಬುದನ್ನೂ ಇದರಲ್ಲಿ ವಿವರಿಸಲಾಗಿತ್ತು. ಈ ದಾಖಲೆ ಈಗಾಗಲೇ ಹಲವು ತಿಂಗಳುಗಳಿಂದ ನಗರಾಭಿವೃದ್ಧಿ ಇಲಾಖೆಯ ಬಳಿಯಿದೆ, ಯಾವುದೇ ಕ್ರಮಗಳಿಲ್ಲದೆ.

ಈಗ ನಿಮ್ಮಿಂದ ಇದು ಆರಂಭ ಪಡೆದುಕೊಳ್ಳಬೇಕು ಎಂದು ಬಯಸುತ್ತೇನೆ– ಮತ್ತು ಎರಡು ಪಥಗಳ ನಡೆಯೊಂದಿಗೆ ಆರಂಭಿಸಿ, ಮೊದಲನೆಯ ತುರ್ತಾಗಿ ಕಂಡುಬರುತ್ತಿರುವ ಪರಿಹಾರವೆಂದರೆ, ನಗರಕ್ಕೆ ಇನ್ನಷ್ಟು ಅವಮಾನವಾಗುವುದನ್ನು ಮತ್ತು ನಗರದ ದುರಂತವನ್ನು ತಪ್ಪಿಸಲು ಕಸ ತುಂಬುವ ಜಾಗಗಳನ್ನು ಬದಲಾಯಿಸುವುದು, ಜೊತೆಜೊತೆಗೆ ಮೆಟ್ರೋಪಾಲಿಟನ್ ಪ್ಲಾನಿಂಗ್ ಕಮಿಷನ್ (ಎಮ್‌ಪಿಸಿ) ಯನ್ನು ಪುನರ್‌ರಚಿಸುವುದು. ಮತ್ತು ಎರಡನೆಯದಾಗಿ, ಪುನರ್‌ರಚಿತ ಎಮ್‌ಪಿಸಿಯ ಮುಖಾಂತರ, ನಗರಕ್ಕೆ ಒಂದು ಬಹು–ವರ್ಷಗಳ ಶಾಸನಬದ್ಧ ದೃಷ್ಟಿಕೋನದ ಯೋಜನೆ ಮತ್ತು ಸುಧಾರಣೆಗಳನ್ನು ಜಾರಿಗೆ ತನ್ನಿ.

ನಾಗರೀಕರು ಈಗ ತಮ್ಮ ನಗರವನ್ನು ಆಳುತ್ತಿರುವುದರ ಕುರಿತಾಗಿ ನಾಗರೀಕರು ನಿರಾಶೆಗೊಂಡಿದ್ದಾರೆ ಮತ್ತು ಸಿಟ್ಟಾಗಿದ್ದಾರೆ ಎಂದು ಸರ್ಕಾರಕ್ಕೆ ತಿಳಿದಿರಲೇಬೇಕು ಮತ್ತು ಸರ್ಕಾರ ಮತ್ತು ಚುನಾಯಿತ ಪ್ರತಿನಿಧಿಗಳು ಜವಾಬ್ದಾರಿಯುತವಾಗಿ ನಡೆದುಕೊಳ್ಳದೇಹೋದರೆ, ನೀವು ಬೇರೆಡೆ ನೋಡಿದ ಕ್ರಿಯಾವಾದ ಮತ್ತು ಪ್ರತಿಭಟನೆಯಂತಹ ಘಟನೆಗಳನ್ನು ಇಲ್ಲಿಯೂ ಕಾಣಬಹುದು.

ಹಲವು ವರ್ಷಗಳಿಂದ ಅರ್ಧದಲ್ಲೆ ನಿಂತಿರುವ ನಮ್ಮ ನಗರಕ್ಕೆ ಹೊಸ ರೂಪ ನೀಡುವ ಪ್ರಕ್ರಿಯೆಯನ್ನು ಪುನಃ ಆರಂಭಿಸಲು ನಾನು ನಿಮಗೆ ಮತ್ತು ಸರ್ಕಾರಕ್ಕೆ ಲಭ್ಯನಿದ್ದೇನೆ. ನಗರ ಮತ್ತು ಇಲ್ಲಿನ ನಾಗರೀಕರು ಎದುರಿಸುತ್ತಿರುವ ಸಮಸ್ಯೆಗೆ ನೀವು ಸೂಕ್ತವಾಗಿ ಸ್ಪಂದಿಸುತ್ತೀರಿ ಎಂದು ಆಶಿಸುತ್ತೇನೆ.

ನಿಮ್ಮ ಪ್ರತಿಸ್ಪಂದನೆಗಾಗಿ ಎದುರು ನೋಡುತ್ತಿದ್ದೇನೆ

ನಿಮ್ಮ ವಿಶ್ವಾಸಿ
ರಾಜೀವ್ ಚಂದ್ರಶೇಖರ್

ಶ್ರೀ ಸಿದ್ಧರಾಮಯ್ಯ,
ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ,
ಬೆಂಗಳೂರು.

# 16

# ಬೆಂಗಳೂರಿನಲ್ಲಿರುವ ಭಾರತೀಯರ ತಾರತಮ್ಯದ ಕುರಿತು ಮುಖ್ಯಮಂತ್ರಿಯವರಿಗೆ ಪತ್ರ

25 ನೇ ಜೂನ್, 2014

ಶ್ರೀ ಸಿದ್ಧರಾಮಯ್ಯ ಅವರೇ,

ಬೆಂಗಳೂರಿನ ಯೂನೊ–ಇನ್ ಎಂಬ ಹೊಟೇಲ್ ಭಾರತೀಯರ ಬಗ್ಗೆ ಪ್ರದರ್ಶಿಸುತ್ತಿರುವ ಭೇದಭಾವವನ್ನು ಮಾಧ್ಯಮವೊಂದು ಉದಾಹರಣೆ ಸಹಿತ ಭಿತ್ತರಿಸಿದ ಆಘಾತಕಾರಿ ಸುದ್ದಿಯನ್ನು ನೋಡಿ, ಅದನ್ನು ನಿಮ್ಮ ಗಮನಕ್ಕೆ ತರಲು ಈ ಪತ್ರ ಬರೆಯುತ್ತಿದ್ದೇನೆ. ಸುದ್ದಿಯು, ಆ ನಿರ್ದಿಷ್ಟ ಹೊಟೇಲ್ ಇತರ ರಾಷ್ಟ್ರದವರಿಗೆ ಮಣೆ ಹಾಕಿ, ಆ ಹೊಟೇಲನ್ನು ಬೆಂಬಲಿಸುವ ಭಾರತೀಯರನ್ನು ಯಾವ ರೀತಿ ಕಡೆಗಣಿಸುತ್ತದೆ ಎಂಬುದನ್ನು ಉದಾಹರಣೆ ಸಹಿತ ಭಿತ್ತರಿಸಿತ್ತು. ಇಂತಹ ದಿನಗಳಲ್ಲಿ, ಅದೂ ಈ ಕಾಲದಲ್ಲಿ, ಅದರಲ್ಲೂ ನಮ್ಮ ರಾಜ್ಯದ ರಾಜಧಾನಿಯಲ್ಲಿ ವಹಿವಾಟು ನಡೆಸುತ್ತಿರುವ ಹೊಟೇಲ್‌ವೊಂದು ಬಹಿರಂಗವಾಗಿ ನಮ್ಮ ದೇಶದ ನಾಗರೀಕರ ಬಗ್ಗೆ ಭೇದಭಾವ ತೋರಿಸುತ್ತದೆ ಎಂಬುದು ನಿಜಕ್ಕೂ ಆಘಾತಕಾರಿ ವಿಚಾರ.

ಬೆಂಗಳೂರಿನಲ್ಲಿ ನಮ್ಮ ಜನರ ವಿರುದ್ಧ, "ಭಾರತೀಯರಿಗೆ ಪ್ರವೇಶವಿಲ್ಲ" ಎಂಬ ಮಾತು ಒಪ್ಪಲಾರದ್ದು ಮತ್ತು ಆತ್ಮಸಾಕ್ಷಿಯಿಲ್ಲದ್ದು. ಯಾವುದೇ ಹೋಟೇಲ್ ಅಥವಾ ಸಂಸ್ಥೆ ಜನಾಂಗದ ಆಧಾರದ ಮೇಲೆ, ಧರ್ಮ ಅಥವಾ ರಾಷ್ಟ್ರದ ಆಧಾರದ ಮೇಲೆ ಭೇಧಭಾವ ತೋರಿಸಿ ಯಾವುದೇ ಅತಿಥಿಗೂ ಪ್ರವೇಶ ಅಥವಾ ಸೇವೆ ನಿಶಿಧ್ಧಿಸುವಂತಿಲ್ಲ– ಮತ್ತು ಇಂತಹ ನಡತೆ ಭಾರತೀಯ ದಂಡ ಸಂಹಿತೆಯ ಪ್ರಕಾರ ಕಾನೂನಿನ ಸ್ಪಷ್ಟ ಉಲ್ಲಂಘನೆಯಾಗುತ್ತದೆ.

ಇಂತಹ ನಡತೆ ಕಾನೂನಿನ ಈ ನೆಲದ ಕಾನೂನಿನ ಸ್ಪಷ್ಟ ಉಲ್ಲಂಘನೆ ಯಾಗಿರುವುದರಿಂದ, ಆದಷ್ಟು ತ್ವರಿತವಾಗಿ ಸರ್ಕಾರ ಈ ಪ್ರಕರಣಕ್ಕೆ ಕಾನೂನಿನ ಪ್ರಕಾರ ಸೂಕ್ತ ಕ್ರಮ ಕೈಗೊಳ್ಳುವುದರ ಮೂಲಕ ಸ್ಪಂದಿಸಬೇಕು ಎಂದು ಒತ್ತಾಯಿಸಿ ತಮ್ಮ ಗಮನ ಸೆಳೆಯಲು ಈ ಪತ್ರ ಬರೆಯುತ್ತಿದ್ದೇನೆ. ಈ ಪ್ರಕರಣದಲ್ಲಿ ಸರ್ಕಾರದ ಪ್ರತಿಕ್ರಿಯೆ ಇದೇ ರೀತಿ ಕಾನೂನು ಉಲ್ಲಂಘಿಸುತ್ತಿರುವವರಿಗೆ ಮತ್ತು ನಮ್ಮ ನಗರದಲ್ಲಿ ಭೇದಭಾವ ತೋರಿಸುತ್ತಿರುವವರಿಗೆ ಒಂದು ಸಂದೇಶ ಕಳುಹಿಸುತ್ತದೆ.

ಈ ವಿಷಯದಲ್ಲಿ ತಮ್ಮ ಶೀಘ್ರ ಸ್ಪಂದನೆಯನ್ನು ನಿರೀಕ್ಷಿಸುತ್ತೇನೆ.

ಇಂತಿ ನಿಮ್ಮ ವಿಶ್ವಾಸಿ
ರಾಜೀವ್ ಚಂದ್ರಶೇಖರ್

ಶ್ರೀ ಸಿದ್ಧರಾಮಯ್ಯ,
ಮುಖ್ಯ ಮಂತ್ರಿಗಳು,
ಕರ್ನಾಟಕ ಸರ್ಕಾರ,
ಬೆಂಗಳೂರು

# 17

# ಬೆಂಗಳೂರಿಗಾಗಿ ಬಹುವಾರ್ಷಿಕ ಶಾಸನಬದ್ಧ ಯೋಜನೆ ರೂಪಿಸಲು ಮುಖ್ಯಮಂತ್ರಿಯವರಿಗೆ ಪತ್ರ

17 ನೇ ಜುಲೈ, 2014

ಶ್ರೀ ಸಿದ್ಧರಾಮಯ್ಯ ಅವರೆ,

ಬೆಂಗಳೂರಿನ ಪ್ರಸ್ತುತ ಆಡಳಿತದ ಸ್ಥಿತಿಗತಿಯ ಕುರಿತಂತೆ ಹೆಚ್ಚುತ್ತಿರುವ ಕಳವಳದೊಂದಿಗೆ ಈ ಪತ್ರವನ್ನು ಬರೆಯುತ್ತಿದ್ದೇನೆ.

ನಗರ ಅನೇಕ ವರ್ಷಗಳಿಂದ ಅವ್ಯವಸ್ಥೆ ಮತ್ತು ಸಮಸ್ಯೆ ನಿರ್ವಹಣೆ ಯಲ್ಲಿ ಇಳಿಮುಖ ಕಾಣುತ್ತಾ ಬಂದಿದೆ. ಅದರಲ್ಲೂ ಮುಖ್ಯವಾದ ಘನ ತ್ಯಾಜ್ಯ ವಿಲೇವಾರಿ ಮತ್ತು ಸ್ವಚ್ಛತೆ ಮತ್ತು ಸಂಬಂಧಿತ ವಿಷಯಗಳಾದ ಸಾರ್ವಜನಿಕ ಆರೋಗ್ಯದಿಂದ ಹಿಡಿದು ಕಾನೂನು ಸುವ್ಯವಸ್ಥೆ, ಮಹಿಳೆಯರ ಸುರಕ್ಷತೆ, ಮಕ್ಕಳು ಮತ್ತು ಹಿರಿಯರು.

ನಿಮ್ಮ ಸರ್ಕಾರ ಉತ್ತಮ ಆಡಳಿತದ ಭರವಸೆಯೊಂದಿಗೆ ಅಧಿಕಾರಕ್ಕೆ ಬಂದಿದೆ. ಬೆಂಗಳೂರು ಉತ್ತಮ ಆಡಳಿತದ ಕೊರತೆಯಿಂದ ತೀವ್ರವಾಗಿ ಬಳಲುತ್ತಿದೆ ಎಂಬುದಕ್ಕೆ ಬೇಕಾದಷ್ಟು ಸಾಕ್ಷಿಯಿದೆ. ಇನ್ನೊಂದು ಸಾಕ್ಷಿ ಎಂಬಂತೆ ತ್ಯಾಜ್ಯ

ವಿಲೇವಾರಿ ಸಮಸ್ಯೆಯ ಕಳಪೆ ನಿರ್ವಹಣೆ ಮತ್ತು ಈಗ ಸಿಎಜಿ ವರದಿ ಸಾರ್ವಜನಿಕವಾಗಿರುವುದರಿಂದ ಕೆಲವು ದಿನಗಳ ಹಿಂದಷ್ಟೇ ಬಿಬಿಎಂಪಿಯಲ್ಲಿ ನಡೆದ ನೂರಾರು ಕೋಟಿ ರೂಪಾಯಿಗಳ ಹಲವಾರು ಹಣಕಾಸು ಅವ್ಯವಹಾರಗಳನ್ನು ಬಿಚ್ಚಿಡುತ್ತದೆ. ಅಲ್ಲದೆ ಯಾವುದೇ ಮಾಸ್ಟರ್ ಪ್ಲಾನ್ ಇಲ್ಲದ ಕಾರಣಕ್ಕೆ ತ್ಯಾಜ್ಯ ವಿಲೇವಾರಿಗಾಗಿ ಜೆಎನ್‌ಎನ್‌ಯುಆರ್‌ಎಮ್ ನಿಂದ ಬರಬೇಕಿದ್ದ ರೂ. 287 ಕೋಟಿಯನ್ನು ಬಿಬಿಎಂಪಿ ಹೇಗೆ ಕಳೆದುಕೊಂಡಿತು ಎಂಬುದನ್ನೂ ಅದರಲ್ಲಿ ಉಲ್ಲೇಖಿಸಲಾಗಿದೆ.

ನಿಮಗೆ ತಿಳಿದಿರುವಂತೆ, ನಗರದ ಅಭಿವೃದ್ಧಿಗೆ ಮಾಸ್ಟರ್ ಪ್ಲಾನ್ ಅಥವಾ ಮುನ್ನೋಟವನ್ನು ಅಭಿವೃದ್ಧಿಪಡಿಸುವಂತೆ ನಿಮ್ಮ ಸರ್ಕಾರವನ್ನು ಕೇಳಿಕೊಂಡು ಬಂದಿದ್ದೇನೆ. ನಮ್ಮ ನಗರದ ಬೆಳವಣಿಗೆಗೆ ಯೋಜಿತ ನಡೆ ಇಲ್ಲದಿರುವುದು, ಆಡಳಿತದಲ್ಲಿ ಪಾರದರ್ಶಕತೆಯ ಕೊರತೆಗೆ ನೇರ ಕಾರಣವಾಗಿದೆ, ಜೊತೆಗೆ ಅವ್ಯವಸ್ಥಿತ ಗುತ್ತಿಗೆ ಪದ್ಧತಿ ಮತ್ತು ಪಟ್ಟಭದ್ರ ಹಿತಾಸಕ್ತಿಗಳ ಹಿಡಿತ ಮತ್ತು ಭ್ರಷ್ಟಾಚಾರ. ಇದರಲ್ಲಿ ಮಧ್ಯಪ್ರವೇಶಿಸಬೇಕೆಂದು ಪದೇ ಪದೇ ಒತ್ತಾಯಿಸುತ್ತಿದ್ದರೂ ಮತ್ತು ರಾಜ್ಯ ಚುನಾವಣೆಯ ವೇಳೆ ಉತ್ತಮ ಆಡಳಿತ ನೀಡುವುದು ನಿಮ್ಮ ಬದ್ಧತೆ ಎಂದು ಹೇಳಿದ್ದರೂ, ನಿಮ್ಮ ಸರ್ಕಾರ ಇದರಲ್ಲಿ ಮಧ್ಯಪ್ರವೇಶಿಸಲು ವಿಫಲವಾಗುತ್ತಿದೆ.

ಸಹಜವಾಗಿಯೇ, ಯಾವುದೇ ಸರಿಯಾದ ಯೋಚನೆಯುಳ್ಳ ನಾಗರೀಕ, ಚುನಾಯಿತ ಪ್ರತಿನಿಧಿ ಅಥವಾ ಜನ ಸೇವಕ, ಬೆಂಗಳೂರಿನ ಅಸಂಖ್ಯಾತ ಸಮಸ್ಯೆಗಳನ್ನು, ಆಡಳಿತ, ಯೋಜನೆ ಮತ್ತು ಸಾರ್ವಜನಿಕ ಸೇವೆಯ ಹಂಚಿಕೆಯಲ್ಲಿ ಸ್ಥಾನಿಕ ನಿರ್ವಹಣೆ ಹಾಗೂ ಅವುಗಳಿಗೆ ಸಂಬಂಧಪಟ್ಟ ಸಾರಿಗೆಗೆ ಸಂಬಂಧಪಟ್ಟ ವಿಷಯಗಳೇ ಆಗಿರಬಹುದು, ತ್ಯಾಜ್ಯ ವಿಲೇವಾರಿಯೇ ಇರಬಹುದು, ಗುತ್ತಿಗೆಯಲ್ಲಿ ಭ್ರಷ್ಟಾಚಾರ, ಮತ್ತು ನಾಗರೀಕರ ಸುರಕ್ಷತೆಯನ್ನು ಅರ್ಥ ಮಾಡಿಕೊಳ್ಳಬಲ್ಲ. ಈ ಸಮಸ್ಯೆಗಳು ಪವಾಡಗಳನ್ನು ಹುಡುಕುತ್ತಿಲ್ಲ ಆದರೆ ನಗರವನ್ನು ಬೆಳೆಸುವ ಹಾಗು ರಕ್ಷಿಸುವಲ್ಲಿ ಆಸಕ್ತಿಯಿರುವ ನಾಯಕತ್ವಕ್ಕಾಗಿ.

ನಾನು ಈ ಹಿಂದೆ ಅನೇಕ ಬಾರಿ ಹೇಳಿದಂತೆ, ಸರ್ಕಾರ ಹಲವರ ಸಲಹೆಯ ಮೇರೆಗೆ ರೂಪಿಸಲಾದ ಒಂದು ಹೊಸ ಮಹತ್ವದ, ಬಹುವಾರ್ಷಿಕ ಯೋಜನೆಯತ್ತ ಆಸಕ್ತಿವಹಿಸಬೇಕು. ಈ ಯೋಜನೆ ನಗರದ ಕುರಿತ ಶಾಸನಬದ್ಧ ಯೋಜನೆಯ ಮೂಲಭೂತ ವಿಷಯಗಳತ್ತ ಗಮನಹರಿಸಬೇಕು ಮತ್ತು ನಾಗರೀಕ ಗುಂಪುಗಳು, ನಿವಾಸಿಗಳ ಕಲ್ಯಾಣ ಸಂಘಟನೆಗಳಿಗೆ (ಆರ್‌ಡಬ್ಲ್ಯೂಎಗಳು) ಮತ್ತು ವಿಶೇಷ ನಗರ ಯೋಜನಾ ತಜ್ಞರಿಗೆ ಸ್ಥಾನವಿರುವ ಮತ್ತು ನಾಗರೀಕ ಸಹಭಾಗಿತ್ವದ ಉದ್ದೇಶವನ್ನು

ಪತ್ರದ ಮೂಲಕ ಮತ್ತು ಸ್ಫೂರ್ತಿಯಲ್ಲಿ ಬಿಂಬಿಸುವ ಮಹಾನಗರ ಯೋಜನಾ ಸಮಿತಿಯ (ಎಮ್‌ಪಿಸಿ) ಪುನರ್ರಚನೆಯ ಮೂಲಕ ಆಡಳಿತ ಸುಧಾರಣೆಯನ್ನೂ ಒಳಗೊಳ್ಳಬೇಕು. ಈ ಮುನ್ನೋಟ ಮತ್ತು ನಗರದ ಸುಧಾರಣೆಯ ದೃಷ್ಟಿಯಲ್ಲಿ ಈ ಪುನರ್ರಚಿತ ಎಮ್‌ಪಿಸಿ ಮುನ್ನಡೆ ತೆಗೆದುಕೊಳ್ಳಬೇಕು.

**ಸರ್ಕಾರ ಬೆಂಗಳೂರಿಗೆ ಒಂದು ಹೊಸ ಬಹುವಾರ್ಷಿಕ ಯೋಜನೆಯನ್ನು ಪರಿಗಣಿಸಬಹುದು.**

ಪ್ರತಿಯೊಂದು ಆಧುನಿಕ ನಗರವೂ, ಅದು ನ್ಯೂಯಾರ್ಕ್, ಲಂಡನ್, ಬಾರ್ಸಿಲೋನಾ ಯಾವುದೇ ಆಗಿರಲಿ, ಅವುಗಳನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಬಹುವಾರ್ಷಿಕ ಯೋಜನೆಗಳನ್ನು ಹೊಂದಿವೆ.

2010 ರಲ್ಲಿ, ಸಾವಿರಾರು ಸಮರ್ಥ ಅಧ್ಯೈಸಿಕೊಳ್ಳಬಲ್ಲ ಮತ್ತು ಯೋಚಿಸಬಲ್ಲ ಕೆಲಸಮಾಡಬಲ್ಲ ನಾಗರೀಕರನ್ನು ಒಂದೆಡೆ ಸೇರಿಸಿ 'ಪ್ಲಾನ್ ಬೆಂಗಳೂರು 2020' ದಾಖಲೆ– ಬೆಂಗಳೂರಿಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಕುರಿತಂತೆ ಒಂದು ಸಮಗ್ರ ಮುನ್ನೋಟ. ನಗರದ ಆಡಳಿತದಲ್ಲಿ ಆಗಬೇಕಿರುವ ಸುಧಾರಣೆ ಮತ್ತು ಯೋಜನೆಯ ಅಗತ್ಯತೆಯನ್ನು ಈ ದಾಖಲೆಯು ಒತ್ತಿ ಹೇಳಿತ್ತು, ಜೊತೆಗೆ ನಗರ ಮತ್ತು ಅದರ ಸಮಸ್ಯೆಗಳ ಬಗ್ಗೆ ವಿಶೇಷ ಉದ್ದೇಶದ ನೀತಿಯನ್ನು ಅನುಸರಿಸುವುದರಿಂದ ಆಗುವ ಖರ್ಚು ಮತ್ತು ಅಪಾಯಗಳ ಕುರಿತು ಇದು ಬೊಟ್ಟು ಮಾಡಿತ್ತು. ಹಿಂದಿನ ಸರ್ಕಾರ ಒಪ್ಪಿಕೊಂಡಿತ್ತಾದರೂ, ಶಿಫಾರಸ್ಸುಗಳನ್ನು ಜಾರಿಗೆ ತಂದಿರಲಿಲ್ಲ.

ಸರ್ಕಾರ ನಗರಕ್ಕೆ ಹೊಸ ಯೋಜನೆಯನ್ನು ಪರಿಗಣಿಸಲು ಬಯಸಿದರೆ, ಹಾಗೆ ಮಾಡಲು ಅದು ಸ್ವತಂತ್ರವಾಗಿದೆ. ಆದರೆ, ಅಂತಹ ಯಾವುದೇ ಯೋಜನೆ ತುರ್ತು ಆಡಳಿತ ಸುಧಾರಣೆ ಮತ್ತು ನಾಗರೀಕರ ಆಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ನಗರಾಭಿವೃದ್ಧಿಗೆ ರಚಿಸಿದ ಯೋಜಿತ ನಡೆಗೆ ಒತ್ತು ನೀಡಲೇಬೇಕು. ಇದು ತುಂಬಾ ಮುಖ್ಯ, ಏಕೆಂದರೆ ನಮ್ಮ ನಗರದ ಬೆಳವಣಿಗೆಗೆ ಯೋಜನೆಗಳು ಅಥವಾ ಅಭಿವೃದ್ಧಿಯ ಮುನ್ನೋಟಗಳಿಗೇನೂ ಕೊರತೆಯಿಲ್ಲ, ಆದರೆ ಮೌನವಾಗಿರುವ ದೊಡ್ಡ ಸಂಖ್ಯೆಯ ನಿವಾಸಿಗಳ ಅಭಿವೃದ್ಧಿ ಸಂಸ್ಥೆಗಳು ಮತ್ತು ನಾಗರೀಕರ ಧ್ವನಿಯನ್ನು ಒದಗಿಸುವ ಪ್ರಾಮಾಣಿಕ ಮತ್ತು ಪಾರದರ್ಶಕ ಯೋಜನೆಗಳ ಕೊರತೆಯಿದೆ. ನಿವಾಸಿಗಳ ಅಭಿವೃದ್ಧಿ ಸಂಸ್ಥೆಗಳು ಮತ್ತು ನಾಗರೀಕರ ದೃಷ್ಟಿಕೋನವನ್ನು ಈಗ ದೊಡ್ಡ ವ್ಯಕ್ತಿತ್ವವುಳ್ಳ ತಜ್ಞರು ಮತ್ತು ಸಂಸ್ಥೆಗಳಿಂದ, ಯಾರು ತಮ್ಮನ್ನು ತಾವೇ ನಗರ ಯೋಜನೆಯಲ್ಲಿ ತಜ್ಞರೆಂದು ಘೋಷಿಸಿಕೊಳ್ಳುತ್ತಾರೋ, ಯಾರು ನಿಜವಾದ ಅನುಭವಕ್ಕಿಂತ ಮತ್ತು ನಗರಕ್ಕೆ ತಮ್ಮ ಬದ್ಧತೆಗಿಂತ ಮಾಧ್ಯಮದಲ್ಲಿ ತಮ್ಮ

ಅಭಿಪ್ರಾಯದಿಂದ ಹೆಸರು ಮಾಡಿರುತ್ತಾರೋ ಅವರ ಮೂಲಕ ಮುಚ್ಚಿಹಾಕಲಾಗುತ್ತದೆ. ನೂರಾರು ನಿವಾಸಿಗಳ ಅಭಿವೃದ್ಧಿ ಸಂಸ್ಥೆಗಳು ಮತ್ತು ನಾಗರೀಕರ ಗುಂಪುಗಳಿಂದ ವಿರೋಧಿಸಲ್ಪಟ್ಟರೂ, 'ಕೆಐಜಿ 2020 ವರದಿ' ಯನ್ನು ಒಪ್ಪಿಕೊಳ್ಳುವಂತೆ ಸರ್ಕಾರದ ಮೇಲೆ ಹಾಕಲಾಗುತ್ತಿರುವ ಒತ್ತಡವೇ ಇದಕ್ಕೆ ಸಾಕ್ಷಿ. ಅವರೆಲ್ಲರೂ ಈ ವರದಿ ಪಟ್ಟಭದ್ರ ಹಿತಾಸಕ್ತಿಗಳ ಕೀಳು ಅಭಿರುಚಿಗಳಿಗೆ ಉತ್ತೇಜನ ನೀಡುತ್ತದೆ ಮತ್ತು ನಗರ ಹಾಗೂ ಇಲ್ಲಿನ ನಾಗರೀಕರು ಎದುರಿಸುತ್ತಿರುವ ಸವಾಲುಗಳನ್ನು ಪರಿಹರಿಸಲು ವಿಫಲವಾಗುತ್ತದೆ ಎಂದೇ ಭಾವಿಸಿದ್ದಾರೆ. ಸರ್ಕಾರ ನಾಗರೀಕರ ಆಕ್ಷೇಪಗಳನ್ನು ಗಣನೆಗೆ ತೆಗೆದುಕೊಳ್ಳಲೇಬೇಕು.

ನಮ್ಮ ನಗರಕ್ಕಾಗಿ ಈ ಹೊಸ ಯೋಜನೆಗೆ ನೀವು ಮುಂದೆ ನಿಂತು ಮುನ್ನಡೆ ತೆಗೆದುಕೊಳ್ಳಬೇಕು ಎಂದು ನಾನು ಅಪೇಕ್ಷಿಸುತ್ತೇನೆ. ಆಡಳಿತದ ಕುರಿತಂತೆ ನಿಮ್ಮ ಪ್ರಮಾಣವನ್ನು ಪೂರ್ಣಗೊಳಿಸಬೇಕೆಂದು ಮತ್ತು ಈ ಮೂಲಕ ನಮ್ಮ ನಗರದ ಆಡಳಿತ ಸುಧಾರಣೆಯಲ್ಲಿ ವೇಗ ತರಬೇಕೆಂದು ಬಯಸುತ್ತೇನೆ. ನಮ್ಮ ನಗರದ ಇಳಿಮುಖ ಹಾದಿಯನ್ನು ನಿಲ್ಲಿಸಬೇಕಿದೆ ಮತ್ತು ಇಲ್ಲಿನ ಲಕ್ಷಾಂತರ ನಾಗರೀಕರು ಪಡೆಯಲು ಯೋಗ್ಯರಾಗಿರುವ ನಗರೋತ್ಥಾನದ ಹೊಸ ಶಾಖೆ ಆರಂಭವಾಗಬೇಕು. ಸರ್ಕಾರ ಈಗ ಕಾರ್ಯತತ್ಪರವಾಗಬೇಕಿದೆ. ನಮ್ಮ ನಗರ ಇನ್ನಷ್ಟು ಹಾಳಾಗುವುದನ್ನು ತಪ್ಪಿಸಿ, ಮಧ್ಯಪ್ರವೇಶಿಸಿ, ನಿವಾಸಿಗಳ ಅಭಿವೃದ್ಧಿ ಸಂಸ್ಥೆಗಳು ಮತ್ತು ಇತರ ಪಾಲುದಾರರ ಜೊತೆ ಚರ್ಚಿಸಿ ಎಮ್‌ಪಿಸಿ ಕಾಯ್ದೆಯ ಮೂಲಭೂತ ದೋಷಗಳನ್ನು ಪರಿಹರಿಸುವುದು ಮತ್ತು ನಗರಕ್ಕೆ ಒಂದು ಬಹುವಾರ್ಷಿಕ ಶಾಸನಬದ್ಧ ಯೋಜನೆಯನ್ನು ಅಂತಿಮಗೊಳಿಸುವುದು.

ಈ ಸಮಸ್ಯೆಯ ಕುರಿತು ಶೀಘ್ರದಲ್ಲಿ ನಿಮ್ಮ ಧನಾತ್ಮಕ ಸ್ಪಂದನೆಗಾಗಿ ಎದುರು ನೋಡುತ್ತಿದ್ದೇನೆ.

ಇಂತಿ ನಿಮ್ಮ ವಿಶ್ವಾಸಿ
ರಾಜೀವ್ ಚಂದ್ರಶೇಖರ್

ಶ್ರೀ ಸಿದ್ಧರಾಮಯ್ಯ,
ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ,
ಬೆಂಗಳೂರು.

# 18

# ಎಂಪಿಸಿಯಲ್ಲಿ ನಾಗರೀಕರ ಪಾಲ್ಗೊಳ್ಳುವಿಕೆ ಕುರಿತು ಮುಖ್ಯಮಂತ್ರಿಯವರಿಗೆ ಪತ್ರ

11 ನೇ ಸೆಪ್ಟೆಂಬರ್, 2014

ಶ್ರೀ ಸಿದ್ಧರಾಮಯ್ಯ ಅವರೇ,

ಬೆಂಗಳೂರು ಮಹಾನಗರ ಯೋಜನಾ ಸಮಿತಿ (ಎಮ್‌ಪಿಸಿ) ಗೆ ಸೆಪ್ಟೆಂಬರ್ 16, 2014 ರಂದು ಚುನಾವಣೆಯನ್ನು ಸೂಚಿಸಿ ಸರ್ಕಾರ ಇತ್ತೀಚೆಗೆ ಹೊರಡಿಸಿರುವ ಆದೇಶವನ್ನು ಉಲ್ಲೇಖಿಸಿ ನಾನು ನಿಮಗೆ ಬರೆಯುತ್ತಿದ್ದೇನೆ. ನಾನು ಈ ಹಿಂದೆಯೇ 22 ನೇ ನವೆಂಬರ್ 2013 ರಂದೇ ಈ ಬಗ್ಗೆ ಬರೆದಿದ್ದೆ ಮತ್ತು ತುಂಬಾ ತಡವಾಗಿಯಾದರೂ ಇದೊಂದು ಸ್ವಾಗತಾರ್ಹ ನಡೆ. ಇದು ನಮ್ಮ ನಗರದ ಅಭಿವೃದ್ಧಿ ಮತ್ತು ಇದರೆಡೆಗೆ ಯೋಜಿತ ನಡೆಯನ್ನು ಖಾತ್ರಿಪಡಿಸುವಲ್ಲಿ ಮೊದಲನೇ ಮತ್ತು ಅತ್ಯಂತ ಪ್ರಮುಖ ಹಂತ.

ಎಮ್‌ಪಿಸಿ ನಿಯಮಗಳಲ್ಲಿರುವ ಕೆಲವು ಮೂಲಭೂತ ದೋಷಗಳನ್ನು 74 ನೇ ತಿದ್ದುಪಡಿಯ ವಿಷಯ ಮತ್ತು ಸ್ಫೂರ್ತಿಯ ನಿಜವಾದ ಪ್ರತಿನಿಧಿಯಾಗುವುದನ್ನು

ತಡೆಯಲು, ನಿಮ್ಮ ಗಮನ ಸೆಳೆಯಲು ನಾನಿದನ್ನು ಬರೆಯುತ್ತಿದ್ದೇನೆ. ಎಮ್‌ಪಿಸಿಯ 20 ಮಂದಿ ಸದಸ್ಯರುಗಳು ಬರುವ ವಾರದ ಕೊನೆಯಲ್ಲಿ ನಡೆಯುವ ಚುನಾವಣೆಯಲ್ಲಿ ಚುನಾಯಿತರಾಗುತ್ತಾರೆ, ಇದರಷ್ಟೇ ಮುಖ್ಯವಾದ ಇನ್ನೊಂದು ಅಂಶವೆಂದರೆ ಯೋಜನಾ ಪ್ರಕ್ರಿಯೆಯಲ್ಲಿ ನಾಗರೀಕರ ಪಾಲ್ಗೊಳ್ಳುವಿಕೆಯನ್ನು ಖಾತ್ರಿಪಡಿಸಿಕೊಳ್ಳುವುದು. ಎಮ್‌ಪಿಸಿಯ ಇತರ ಚುನಾಯಿತರಾಗದ ಸದಸ್ಯರಿಗಿಂತ ಚುನಾಯಿತರಾದವರು ಉಚಿತವಾಗಿಯೇ ಪ್ರತಿನಿಧಿಸಲು ಅರ್ಹರಾಗಿದ್ದಾರೆ ಎಂದು ನೋಡಿಕೊಳ್ಳುವುದು.

ಕರಡು ನಿಯಮಗಳನ್ನು ರಚಿಸುವ ಮೊದಲು, ನಾನು ನವೆಂಬರ್ 22, 2013 ರ ನನ್ನ ಪತ್ರದಲ್ಲಿ ಬರೆದಂತೆ, ನಾಗರೀಕರು ಗಮನಕ್ಕೆ ತಂದಂತೆ ಎಮ್‌ಪಿಸಿ ನಿಯಮಾವಳಿಗಳಲ್ಲಿ ಈ ಕೆಳಗಿನ ಬದಲಾವಣೆ ಮಾಡುವ ಅಗತ್ಯವಿದೆ (ನಿಮ್ಮ ಉಲ್ಲೇಖಕ್ಕೆ ಜೋಡಿಸಲಾಗಿದೆ):

1. ಎಮ್‌ಪಿಸಿ ಅದರ ಈಗಿನ ರೂಪದಲ್ಲಿ ನಾಗರೀಕರ ನಿಜವಾದ ಮತ್ತು ಕ್ರಿಯಾಶೀಲ ಪಾಲ್ಗೊಳ್ಳುವಿಕೆಗೆ ಅವಕಾಶ ನೀಡುವುದಿಲ್ಲ. ಅವರ ಪಾಲ್ಗೊಳ್ಳುವಿಕೆಯಿಲ್ಲದೆ, ವಾರ್ಡ್ ಸಮಿತಿಗಳ, ನಿವಾಸಿಗಳ ಅಭಿವೃದ್ಧಿ ಸಂಸ್ಥೆ (ಆರ್‌ಡಬ್ಲ್ಯೂಎ) ಮತ್ತು ಸರ್ಕಾರೇತರ ಸಂಸ್ಥೆಗಳ  ನಿರ್ಧಿಷ್ಟ ಪಾತ್ರವನ್ನು ಬಯಸುವ ಎಮ್‌ಪಿಸಿ 74ನೇ ತಿದ್ದುಪಡಿಯ ಉಲ್ಲಂಘನೆ ಮತ್ತು ಅಸ್ಥಿರತೆಯಾಗಿದೆ. ಇದು ಸ್ಪಷ್ಟವಾದ ಚ್ಯುತಿಯಾಗಿದ್ದು ಮತ್ತು ಪರಿಹರಿಸಲೇಬೇಕಾಗಿದೆ. ಎಮ್‌ಪಿಸಿಯನ್ನು ಕಡಿಮೆಯೆಂದರೂ 2–3 ಆರ್‌ಡಬ್ಲ್ಯೂಎಗಳು ಪ್ರತಿನಿಧಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಜೊತೆಗೆ, ನಾನು ನಿಮ್ಮಲ್ಲಿ ವಿನಂತಿಸುವುದೇನೆಂದರೆ, ನಿಯಮಗಳ ಪ್ರಕಾರ ಕಾರ್ಪೊರೇಟರ್‌ಗಳು ಪ್ರತಿನಿಧಿಸುವ ಎಲ್ಲಾ ವಾರ್ಡ್ ಸಮಿತಿಗಳಿಗೆ ಅವರಿಗಾಗಿ ನೇಮಿಸಲ್ಪಟ್ಟ ಸ್ಥಳೀಯ ನಿವಾಸಿಗಳ ಅಭಿವೃದ್ಧಿ ಸಂಸ್ಥೆ (ಆರ್‌ಡಬ್ಲ್ಯೂಎ)ಗಳಿರಬೇಕು.
2. ಎಮ್‌ಪಿಸಿಯ ಉಳಿದ 10 ಸದಸ್ಯರುಗಳ ಪೈಕಿ, ಕನಿಷ್ಟ 2–3 ಮಂದಿಯಾದರೂ ನಗರದ ಅನುಭವ ಹೊಂದಿರಬೇಕು.  ಸರ್ಕಾರೇತರ ಸಂಸ್ಥೆಗಳನ್ನು ಭೇಟಿಯಾಗಿ ಸಲಹೆ ಪಡೆಯುವ ಕ್ಷಣಿಕ ಉಲ್ಲೇಖ ಮಾಡುವುದರಿಂದ ಮತ್ತು ಅಭಿವೃದ್ಧಿ ಯೋಜನೆಗಾಗಿ ಕರಡು ಪ್ರತಿಯನ್ನು ತಯಾರಿಸಲು ಇತರ ವೃತ್ತಿಪರ ಸಂಸ್ಥೆಗಳನ್ನು ಭೇಟಿಯನ್ನು ನಿರ್ಲಕ್ಷಿಸಿದರೆ, ಈಗಿನ ರೂಪದಲ್ಲಿರುವ ಎಮ್‌ಪಿಸಿ, 74 ನೇ ತಿದ್ದುಪಡಿ ಕಾಯ್ದೆಯ ಅಧ್ಯಾದೇಶದಿಂದ ದಿಕ್ಕು ತಪ್ಪುತ್ತದೆ ಮತ್ತು ಎಮ್‌ಪಿಸಿ ಉತ್ತಮ ಯೋಜನೆ ಮತ್ತು ಅಭಿವೃದ್ಧಿಯ ಭರವಸೆ ನೀಡಲು ಸಾಧ್ಯವಿಲ್ಲ.

3. ಯಾವಾಗ ನಿಯಮಗಳ ಪ್ರಕಾರ ಮುಖ್ಯಮಂತ್ರಿ, ವಿಧಾನಸಭಾ ಸದಸ್ಯರು ಮತ್ತು ವಿಧಾನ ಪರಿಷತ್ ಸದಸ್ಯರು ಎಮ್‌ಪಿಸಿಯ ಸದಸ್ಯರಾಗಿದ್ದರೂ, ಬೆಂಗಳೂರು ಮಹಾನಗರ ಪ್ರದೇಶವೆಂಬ ದೊಡ್ಡ ಮತ್ತು ಅತೀ ಮುಖ್ಯ ಪ್ರದೇಶವನ್ನು ಪ್ರತಿನಿಧಿಸುವ ಮೇಯರ್ ಇದರಿಂದ ಹೊರತಾಗಿದ್ದಾರೆ. ಯೋಜನಾ ಶಕ್ತಿ ಮತ್ತು ಸ್ವಾವಲಂಬನೆ ನಿಜವಾಗಿಯೂ ಎಲ್ಲೆಡೆ ವಿಸ್ತರಿಸಲು ಅವರನ್ನು ಸೇರಿಸಲೇಬೇಕು. ಯಾವಾಗ ಕರಡು ನೀತಿ ಬಿಬಿಎಂಪಿ ಆಯುಕ್ತರನ್ನು ಸೇರಿಸಿರಲಿಲ್ಲವೋ, ಸರ್ಕಾರವು ಈ ನಿಟ್ಟಿನಲ್ಲಿ ಜನರ ಮಾತಿಗೆ ಬೆಲೆ ಕೊಟ್ಟಿದೆ ಎಂದು ನನಗೆ ಖುಷಿಯಾಗಿದೆ ಮತ್ತು ಬಿಬಿಎಂಪಿ ಆಯುಕ್ತರನ್ನು ಎಂಪಿಸಿಯ ಅಂತಿಮ ನಿಯಮಗಳಲ್ಲಿ ಸೇರಿಸಲಾಗಿದೆ.

ಸಂವಿಧಾನದ 74ನೇ ತಿದ್ದುಪಡಿ, ಬೆಳೆಸಿ ವಹಿಸುವಂತಹ ಯೋಜನೆ ಮತ್ತು ನಾಗರೀಕರ ಕ್ರಿಯಾಶೀಲ ಪಾಲ್ಗೊಳ್ಳುವಿಕೆಯೊಂದಿಗೆ ನಗರಗಳ ಅಭಿವೃದ್ಧಿಯನ್ನು ಪ್ರತಿನಿಧಿಸುತ್ತದೆ. ನಗರದ ಸಮಸ್ಯೆಗಳು ಮತ್ತು ಇಳಿಮುಖ, ಪಾರದರ್ಶಕತೆಯ ಕೊರತೆ ಮತ್ತು ನಗರಗಳು ಇರಬೇಕಾದ ರೀತಿ ಮತ್ತು ಬೆಳವಣಿಗೆ ಹೊಂದಬೇಕಾದ ವಿಧಾನವನ್ನು ನಿರ್ಧರಿಸುವಲ್ಲಿ ನಾಗರೀಕರ ಪಾಲ್ಗೊಳ್ಳುವಿಕೆಯ ಕೊರತೆಯ ನೇರ ಪರಿಣಾಮಗಳು. ಎಂಪಿಸಿಯ ಸಂವಿಧಾನ ಗುರುತರ ನಗರಾಡಳಿತ ಅಭಿವೃದ್ಧಿಯನ್ನು ಸೂಚಿಸುತ್ತದೆ ಮತ್ತು ನಾನು ಇದನ್ನು ಪತ್ರ ಮತ್ತು ಸ್ಫೂರ್ತಿಯೊಂದಿಗೆ ಜಾರಿಗೊಳಿಸಲು ಮತ್ತು ನನ್ನ ಸಲಹೆಗಳು/ಬೇಡಿಕೆಗಳನ್ನು ಸೇರಿಸಿಕೊಳ್ಳಿ ಎಂದು ಕೇಳಿಕೊಳ್ಳುತ್ತೇನೆ.

ಹಲವು ವರ್ಷಗಳ ಇಳಿಮುಖವನ್ನು ತಿರುಗಿಸಲು ಮತ್ತು ನಾಶವನ್ನು ತಡೆಯಲು, ಜೊತೆಗೆ ನಗರವನ್ನು ಹೂಡಿಕೆದಾರರಿಗೆ, ಪ್ರವಾಸಿಗರಿಗೆ ಆಕರ್ಷಕವನ್ನಾಗಿ ಮಾಡಲು ಇದ್ದ ಒಂದೇ ಉಪಾಯ ಅದಾಗಿತ್ತು. ಬೆಂಗಳೂರನ್ನು ಹೂಡಿಕೆಗೆ ಹೆಬ್ಬಾಗಿಲನ್ನಾಗಿ ಮಾಡಿ ನಮ್ಮ ಕರ್ನಾಟಕ ರಾಜ್ಯದ ಅಭಿವೃದ್ಧಿಗೆ ಸಹಾಯ ಮಾಡಬೇಕಿತ್ತು. ನಾವು ಇಂದು ನೋಡುತ್ತಿರುವುದಕ್ಕಿಂತ ಉತ್ತಮವಾದುದನ್ನು ಪಡೆಯಲು ನಮ್ಮ ರಾಜ್ಯ, ಈ ನಗರ ಮತ್ತು ಜನರು ಯೋಗ್ಯರಾಗಿದ್ದಾರೆ. ಸರ್ಕಾರ ಮತ್ತು ಸಂಸ್ಥೆಗಳು ನಾಗರೀಕರೊಂದಿಗೆ ಹೊಂದಾಣಿಕೆಯಿಂದ ಕೆಲಸಮಾಡುವುದು ಅವರ ಹಕ್ಕಾಗಿದೆ, ಆದರೆ ನಾವಿಂದು ನೋಡುವಂತೆ ನಿವಾಸಿಗಳು ಮತ್ತು ಸರ್ಕಾರದ ಮಧ್ಯೆ ಲೆಕ್ಕವಿಲ್ಲದಷ್ಟು ಕಾನೂನಾತ್ಮಕ ಸಂಘರ್ಷಗಳು ಮತ್ತು ಬಿಕ್ಕಟ್ಟುಗಳು ಇರಬಾರದು.

ಇಂತಿ ನಿಮ್ಮ ವಿಶ್ವಾಸಿ
ರಾಜೀವ್ ಚಂದ್ರಶೇಖರ್

ಶ್ರೀ ಸಿದ್ಧರಾಮಯ್ಯ,
ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ,
ವಿಧಾನಸೌಧ,
ಬೆಂಗಳೂರು.

# 19

# ಬೆಂಗಳೂರಿನ ಪಾರಂಪರಿಕ ಕಟ್ಟಡಗಳ ರಕ್ಷಣೆ ಕುರಿತು ಮುಖ್ಯಮಂತ್ರಿಯವರಿಗೆ ಪತ್ರ

30 ನೇ ಅಕ್ಟೋಬರ್, 2014

ಶ್ರೀ ಸಿದ್ಧರಾಮಯ್ಯ ಅವರೇ,

ಆಡಳಿತಗಾರರ ವೈಫಲ್ಯದ ಬಗ್ಗೆ ಜನರು ತಮ್ಮ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸರ್ಕಾರ ಶಾಸಕರ ಕ್ಲಬ್‌ಗಾಗಿ 150 ವರ್ಷಗಳಷ್ಟು ಹಳೆಯದಾದ ಐತಿಹಾಸಿಕ ರಚನೆ ಬಾಲಬ್ರೂಯಿ ಅತಿಥಿ ಗೃಹವನ್ನು ನಾಶಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮದ ಕುರಿತು ನಾನು ನಿಮಗೆ ಬರೆದಿದ್ದೆ ಮತ್ತು ನೀವು ಅಂತಹ ಭವನವನ್ನು ಕೆಡಹುವ ಅಥವಾ ಬದಲಾಯಿಸುವ ಯಾವುದೇ ಪ್ರಸ್ತಾವ ಸರ್ಕಾರದ ಮುಂದಿಲ್ಲ ಎಂದು ಸ್ಪಷ್ಟನೆ ನೀಡಿದ್ದಿರಿ. ಇದನ್ನು ಪರಿಹರಿಸಿಹರಿಸಲು ಮಧ್ಯಸ್ಥಿಕೆ ವಹಿಸಿ, ಐತಿಹಾಸಿಕ ರಚನೆಯ ನಾಶವನ್ನು ತಡೆಯುವಲ್ಲಿ ನಿಮ್ಮ ಆಸಕ್ತಿಯನ್ನು ನಾನು ಸ್ವಾಗತಿಸುತ್ತೇನೆ.

ಆದರೂ, ಬೆಂಗಳೂರಿನ ಸಾಂಸ್ಕೃತಿಕ ಶ್ರೀಮಂತಿಕೆ ಅಪಾಯದಲ್ಲಿದೆ ಮತ್ತು ಅನೇಕ ವರ್ಷಗಳಿಂದ ದಾಳಿ ಎದುರಿಸುತ್ತಿದೆ. ನಗರದ ಸಂಸ್ಕೃತಿ ಮತ್ತು ಶ್ರೀಮಂತ

ರಚನೆಗಳನ್ನು ರಕ್ಷಿಸಲು ಒಂದು ಖಾಯಂ ಸಂಸ್ಥೆಯ ಪರಿಹಾರದ ಅಗತ್ಯವಿದೆ. ಅಂತಹ ಐತಿಹಾಸಿಕ ರಚನೆಗಳನ್ನು ನಾಶ ಮಾಡುವುದರಿಂದ, ಬೆಂಗಳೂರು ನಗರದ ಕೀರ್ತಿಯ ಗುರುತು ಮತ್ತು ಅಂತರ್ಗತ ಗುಣಗಳನ್ನೇ ಕಡಿಮೆ ಮಾಡಿದಂತಾಗುತ್ತದೆ.

ಇದು ಈಗಿನ ನೀತಿಯ ಪರಿಣಾಮ, ಇವುಗಳಲ್ಲಿ ಕೆಲವೊಂದು ಇತ್ತೀಚಿನದು.

ನಿಮಗೆ ತಿಳಿದಿರುವಂತೆ, ನಮ್ಮ ನಗರ ಬೆಂಗಳೂರಿಗೆ ಹಲವು ನೆನಪುಗಳಿಂದ ಕೂಡಿದ 477 ವರ್ಷಗಳ ಇತಿಹಾಸವಿದೆ, ಇದು ನೂರಾರು ಐತಿಹಾಸಿಕ ಕಟ್ಟಡಗಳ, ರಚನೆಗಳ ತವರು ಮತ್ತು ನಗರದ ಸ್ಥಾಪಕ ಕೆಂಪೇಗೌಡನಿಂದ ಹಿಡಿದು, ಮರಾಠರು, ಬ್ರಿಟಿಷರ ಆಡಳಿತ, ಮತ್ತು ಮೈಸೂರಿನ ಒಡೆಯರ ಆಡಳಿತದವರೆಗೂ ಇದು ಕೇಂದ್ರಸ್ಥಾನದಲ್ಲಿತ್ತು. ಆದರೂ, ವರ್ಷಗಳವರೆಗಿನ ನಿರ್ಲಕ್ಷ್ಯ ಮತ್ತು ಅಪಾಯಕಾರಿ ವೇಗದ ಅಭಿವೃದ್ಧಿಯಲ್ಲಿ ನಾವು ಅನೇಕ ವಾಸ್ತುಶಿಲ್ಪದ ಅದ್ಭುತಗಳನ್ನು ಕಳೆದುಕೊಂಡಿದ್ದೇವೆ. ಒಂದು ಐತಿಹಾಸಿಕ ರಚನೆಯ ಸ್ಥಾಪನೆಗೆ ನೂರಾರು ವರ್ಷಗಳೇ ಬೇಕಾಗುತ್ತವೆ ಮತ್ತು ಅವುಗಳನ್ನು ನಾಶ ಮಾಡಲು ಕೆಲವೇ ದಿನಗಳು ಸಾಕು.

ಒಂದು ದಶಕಕ್ಕಿಂತಲೂ ಕಡಿಮೆ ಅವಧಿಯ ಹಿಂದೆ, ನಮ್ಮ ನಗರ 2,000 ಕ್ಕಿಂತಲೂ ಹೆಚ್ಚಿನ ಪಾರಂಪರಿಕ ಕಟ್ಟಡಗಳಿಗೆ ಮನೆಯಾಗಿತ್ತು– ಸರ್ಕಾರಿ ಮತ್ತು ಖಾಸಗಿ ಒಡೆತನದ ಎರಡೂ– ಈಗ ಇದರ ಸಂಖ್ಯೆ ಕೇವಲ 400 ಕ್ಕೆ ಇಳಿದಿದೆ, ದೊಡ್ಡ ಪ್ರಮಾಣದ ವಾಣಿಜ್ಯೀಕರಣವೇ ಇದಕ್ಕೆ ಕಾರಣ. ಇದು ಅಪಾಯದ ಸೂಚನೆ ಮತ್ತು ನಗರದ ಇತಿಹಾಸ ಮತ್ತು ಪರಂಪರೆಯನ್ನು ರಕ್ಷಿಸಲು ಒಂದು ಕಾನೂನು ಅಥವಾ ಸಂಸ್ಥೆಯ ತುರ್ತು ಅಗತ್ಯವಿದೆ. ಅನಿಯಂತ್ರಿತ ಅಭಿವೃದ್ಧಿ ನಗರದ ಗುಣಮಟ್ಟವನ್ನು ಬಹುಕಾಲದಿಂದ ಕಾಡುತ್ತಾ ಬಂದಿದೆ.

ವಾಸ್ತುಗಳು, ಕಟ್ಟಡಗಳು ಮತ್ತು ಇತರ ತರಹದ ಪಾರಂಪರಿಕ ರಚನೆಗಳನ್ನು ಸರಿಯಾಗಿ ಗುರುತಿಸಲಾಗಿಲ್ಲ, ಅವುಗಳನ್ನು ಅಪಾಯಕ್ಕೆ ತೆರೆದಿಡಲಾಗಿದೆ. ನಗರದ ಶ್ರೀಮಂತ ಪರಂಪರೆ ಮತ್ತು ಇತಿಹಾಸಕ್ಕೆ ಯಾವುದೇ ಸಂಸ್ಥೆ ಹೊಣೆಯಲ್ಲ ಅಥವಾ ನಿರ್ವಹಣೆ, ಬೆಳೆಸುವಿಕೆ ಮತ್ತು ಉಳಿಸಿಕೊಳ್ಳುವಿಕೆಯ ಜವಾಬ್ದಾರಿ ಹೊರುವುದಿಲ್ಲ, ಅನೇಕ ಸರ್ಕಾರೇತರ ಸಂಸ್ಥೆಗಳು, ವಾಸ್ತುಶಿಲ್ಪಿಗಳು ಮತ್ತು ನಗರದ ಕಾರ್ಯಕರ್ತರು ನಗರದ ಪರಂಪರೆಯನ್ನು ಉಳಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಆದರೆ ಈಗಿನ ಅಗತ್ಯವೆಂದರೆ ಈ ಎಲ್ಲಾ ಪ್ರಯತ್ನಗಳನ್ನು ಒಗ್ಗೂಡಿಸುವುದು, ಅದನ್ನೊಂದು ಸಾಮಾನ್ಯ ಕಾರ್ಯಕ್ರಮವಾಗಿ ಅಭಿವೃದ್ಧಿಪಡಿಸುವುದು ಮತ್ತು ಒಂದು ಸಂಘಟಿತ

ಆಂದೋಲನಗಳಾಗಿ ಬೆಳೆಸುವುದು ಮತ್ತು ಸೂಕ್ತ ಶಾಸನಗಳು ಅಥವಾ ಕ್ರಮಗಳು ಆಗುವವರೆಗೆ ಅವುಗಳೆಡೆಗೆ ಸಂಪೂರ್ಣ ಗಮನ ಹರಿಸುವುದು.

ನೂರಾರು ಐತಿಹಾಸಿಕ ವಾಸ್ತುಗಳು, ರಚನೆಗಳು ಮತ್ತು ಸಂಪತ್ತನ್ನು ರಕ್ಷಿಸುವ ನಿಟ್ಟಿನಲ್ಲಿ ಅವುಗಳನ್ನು ಕಾಪಾಡಿಕೊಂಡು ಬರಬೇಕು, ಅದು ನೈಸರ್ಗಿಕ ರಚನೆಯಿರಬಹುದು ಅಥವಾ ಕಟ್ಟಡವಿರಬಹುದು, ನಾವು ಈ ಕೆಳಗಿನವುಗಳನ್ನು ಜಾರಿಗೊಳಿಸಲು ಮನವಿ ಮಾಡಿಕೊಳ್ಳುತ್ತೇನೆ.

1. ಕೂಡಲೇ ಬೆಂಗಳೂರು ಹೆರಿಟೇಜ್ ಕಮಿಷನ್‌ನ್ನು (ಬಿಹೆಚ್‌ಸಿ) ಸ್ಥಾಪಿಸಿ ಮತ್ತು ಅದು ನಗರದ ಪಾರಂಪರಿಕ ರಚನೆಗಳ ಮತ್ತು ಸಂಸ್ಕೃತಿಯ ಗುರುತಿಸುವಿಕೆ, ಕಾಪಾಡಿಕೊಳ್ಳುವಿಕೆ ಮತ್ತು ರಕ್ಷಿಸುವಿಕೆಗೆ ಜವಾಬ್ದಾರವಾಗಿರುತ್ತದೆ.
2. ಇತಿಹಾಸವನ್ನು ಉಳಿಸುವುದು ಮತ್ತು ಭವಿಷ್ಯವನ್ನು ಉಜ್ವಲಗೊಳಿಸುವುದು ಈ ಆಯೋಗದ ಮೂಲೋದ್ದೇಶವಾಗಿರಲಿ.
3. ಬೆಂಗಳೂರು ವಸ್ತುಸಂಗ್ರಹಾಲಯ ಸ್ಥಾಪಿಸಿ ಶಾಶ್ವತ ದಾಖಲೆಗಳು ಮತ್ತು ನಗರದ ಪರಂಪರೆಯ ಸಂಗ್ರಹವನ್ನು ಕಾಪಾಡಬಹುದು.
4. ಶಾಸನಬದ್ಧ ನೋಡಲ್ ಸಂಸ್ಥೆಯನ್ನು ಸ್ಥಾಪಿಸಿ, ಬೆಂಗಳೂರು ಮಹಾನಗರ ವ್ಯಾಪ್ತಿಯ ಪರಂಪರೆಯ ಸಂಗ್ರಹ ಮತ್ತು ಗುರುತಿಸುವಿಕೆ ಮತ್ತು ರಕ್ಷಿಸುವಿಕೆಗೆ ಬಳಸಬಹುದು. ಆ ಸಂಸ್ಥೆಗೆ ನಿಧಿ ಸ್ಥಾಪಿಸಲಾಗುತ್ತದೆ, ಅದೊಂದು ಸ್ವತಂತ್ರ ಸಂಸ್ಥೆಯಾಗಿ ಅಭಿವೃದ್ಧಿ, ಪರಂಪರೆಗಳ ನಿಯಮಗಳ ನಿರ್ವಹಣೆ ಮತ್ತು ನೀತಿಗಳ ಜಾರಿಯನ್ನು ಖಚಿತಪಡಿಸಲು ಸರ್ಕಾರದ ಇಲಾಖೆಗಳೊಂದಿಗೆ ಸಹಕಾರ ಮಾಡುತ್ತದೆ.

ರಾಜಕೀಯ ನಾಯಕರಾಗಿ ಮತ್ತು ಒಟ್ಟಾಗಿ ಒಂದು ಸಮುದಾಯವಾಗಿ, ನಮ್ಮ ಹೆಮ್ಮೆಯ ಸಂಸ್ಕೃತಿ ಮತ್ತು ಪರಂಪರೆಯನ್ನು ನಮ್ಮ ಮಕ್ಕಳಿಗೆ, ಮುಂಬರುವ ಜನಾಂಗಕ್ಕೆ ಉಳಿಸಲು, ರಕ್ಷಿಸಿಕೊಳ್ಳಲು ಏನೆಲ್ಲಾ ಮಾಡಲು ಸಾಧ್ಯವಿದೆಯೋ ಅದನ್ನೆಲ್ಲಾ ಮಾಡುತ್ತೇವೆ ಎಂದು ಖಾತ್ರಿಪಡಿಸುವುದು ನಮ್ಮ ಜವಾಬ್ದಾರಿ. ತಳಮಟ್ಟದಲ್ಲಿ ಬದಲಾವಣೆಗಳು ಆರಂಭವಾಗುವುದಕ್ಕೂ ಮೊದಲು, ಪಾರಂಪರಿಕ ಕಟ್ಟಡಗಳನ್ನು ಹೆಚ್ಚಿನ ಆದ್ಯತೆಯಲ್ಲಿ ರಕ್ಷಣೆ ಮಾಡಲು ಬೆಂಬಲ ಪಡೆಯಲು ರಾಜಕೀಯ ಮುಂದಾಳತ್ವದಲ್ಲಿ ನಾವು ಯಶಸ್ಸು ಸಾಧಿಸಬೇಕು.

ಈ ವಿಷಯದಲ್ಲಿ ನಿಮ್ಮ ಶೀಘ್ರ ಸ್ಪಂದನೆಗಾಗಿ ಎದುರು ನೋಡುತ್ತಿದ್ದೇನೆ.

ಇಂತಿ ನಿಮ್ಮ ವಿಶ್ವಾಸಿ
ರಾಜೀವ್ ಚಂದ್ರಶೇಖರ್

ಶ್ರೀ ಸಿದ್ಧರಾಮಯ್ಯ,
ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ,
ವಿಧಾನಸೌಧ,
ಬೆಂಗಳೂರು.

# 20

# 1925ರ ಭಾರತೀಯ ಉತ್ತರಾಧಿಕಾರ ಕಾಯ್ದೆಯ ಕುರಿತು ಕಾನೂನು ಸಚಿವರಿಗೆ ಪತ್ರ

9 ನೇ ಡಿಸೆಂಬರ್, 2014

ಶ್ರೀ ಸದಾನಂದ ಗೌಡ ಅವರೇ,

ನಾನು ಭಾರತೀಯ ಉತ್ತರಾಧಿಕಾರ ಕಾಯ್ದೆ 1925 ಯಲ್ಲಿರುವ ಒಂದು ಲೋಪವನ್ನು ನಿಮ್ಮ ಗಮನಕ್ಕೆ ತರಲು ಈ ಪತ್ರ ಬರೆಯುತ್ತಿದ್ದೇನೆ. ಇದರಿಂದಾಗಿ ಮೈಸೂರು ಮತ್ತು ಕೊಡಗು ಭಾಗಗಳ ಕ್ರಿಶ್ಚಿಯನ್ ಸಮುದಾಯದ ಹೆಣ್ಣುಮಕ್ಕಳಿಗೆ ಅನೇಕ ದಶಕಗಳಿಂದ ತಮ್ಮ ಹಿರಿಯರ ಆಸ್ತಿಯಲ್ಲಿ ಸಮಪಾಲನ್ನು ನಿರಾಕರಿಸಲಾಗುತ್ತಿದೆ.

ನಿಮಗೆ ತಿಳಿದಿರುವಂತೆ, ಭಾರತೀಯ ಉತ್ತರಾಧಿಕಾರ ಕಾಯ್ದೆ ಮಹಿಳೆ ಮತ್ತು ಪುರುಷರಿಗೆ ಸಮಾನವಾದ ದಾಯಾದಿಗಳ ಹಕ್ಕನ್ನು ಒದಗಿಸುವಂತೆ ಹೇಳುತ್ತದೆ. ಆದರೆ, ಅದರ ಹಿಂದಿನ ಕಾಯ್ದೆ– ಭಾರತೀಯ ಉತ್ತರಾಧಿಕಾರಿ ಕಾಯ್ದೆ, 1865, ತನ್ನ ವ್ಯಾಪ್ತಿಯಿಂದ ಕೊಡಗು ಮತ್ತು ಮೈಸೂರಿನ ಸ್ಥಳೀಯ ಕ್ರಿಶ್ಚಿಯನ್ನರನ್ನು ವಿಶೇಷವಾಗಿ ಬಿಟ್ಟಿತ್ತು. 1925ರ ಶಾಸನ ಸಂಸತ್ತಿನಲ್ಲಿ ಅನುಮೋದನೆಗೊಂಡಾಗ, ಈ ಅವಕಾಶವನ್ನು ಸರಿಪಡಿಸಲಾಗಿರಲಿಲ್ಲ ಇದರಿಂದಾಗಿ ಕೊಡಗು ಮತ್ತು ಮೈಸೂರಿನ ಸ್ಥಳೀಯ ಕ್ರಿಶ್ಚಿಯನ್ನರು ಹೊರತಾಗಿಯೇ ಉಳಿದುಬಿಟ್ಟರು.

ಇದರ ಫಲವಾಗಿ, ಕ್ರಿಶ್ಚಿಯನ್ ಸಮುದಾಯದ ಇತರ ಸಮುದಾಯದ ಮಹಿಳಾ ನಾಗರೀಕರು ಅಧಿಕಾರಯುತವಾಗಿ ಆಸ್ತಿಯ ಮೇಲಿನ ತಮ್ಮ ಉತ್ತರಾಧಿಕಾರವನ್ನು ಭಾರತೀಯ ಉತ್ತರಾಧಿಕಾರಿ ಕಾಯ್ದೆಯ ಮೂಲಕ ಪ್ರತಿಪಾದಿಸಿದಾಗ ಮೂಲ ಕ್ರಿಶ್ಚಿಯನ್ನರನ್ನು ಕಡೆಗಣಿಸಿದಂತಾಗುತ್ತದೆ. ದುರಾದೃಷ್ಟವೆಂದರೆ, ಈ ಲೋಪವನ್ನು ಇಷ್ಟು ವರ್ಷಗಳವರೆಗೂ ಸರ್ಕಾರದಿಂದ ಗುರುತಿಸಲು ಸಾಧ್ಯವಾಗಲಿಲ್ಲ ಮತ್ತು ಸರಿಪಡಿಸಲಾಗಲಿಲ್ಲ.

ಕೊಡಗು ಮತ್ತು ಮೈಸೂರಿನ ಮೂಲ ಕ್ರಿಶ್ಚಿಯನ್ನರನ್ನು ಸೇರಿಸಲು ಭಾರತೀಯ ಉತ್ತರಾಧಿಕಾರಿ ಕಾಯ್ದೆಗೆ ಒಂದು ಸಣ್ಣ ತಿದ್ದುಪಡಿ, ಈ ಮಹಿಳೆಯರ ಹಕ್ಕನ್ನು ಮರುಸ್ಥಾಪಿಸಲು ಸಹಕಾರಿಯಾಗುತ್ತದೆ.

ನಾನು ನಿಮ್ಮನ್ನು ಈ ವಿಚಾರವನ್ನು ಆದಷ್ಟು ಬೇಗ ಗಮನಿಸಲು ಮತ್ತು ಈ ವ್ಯತ್ಯಾಸವನ್ನು ಸರಿಪಡಿಸಲು ಸೂಕ್ತ ಕ್ರಮ ಕೈಗೊಂಡಿರುವುದನ್ನು ಖಾತ್ರಿಪಡಿಸಬೇಕಾಗಿ ಕೇಳಿಕೊಳ್ಳುತ್ತೇನೆ ಮತ್ತು ಕಾಯ್ದೆಗೆ ತಿದ್ದುಪಡಿ ಮಾಡಲು ಬೇಕಾದ ಕ್ರಮಗಳನ್ನು ಆದಷ್ಟು ಶೀಘ್ರ ತೆಗೆದುಕೊಳ್ಳಿ.

ಇಂತಿ ನಿಮ್ಮ ವಿಶ್ವಾಸಿ
ರಾಜೀವ್ ಚಂದ್ರಶೇಖರ್

ಶ್ರೀ ಡಿ. ವಿ ಸದಾನಂದ ಗೌಡ,
ಮಾನ್ಯ ಕಾನೂನು ಸಚಿವ,
ಭಾರತ ಸರ್ಕಾರ,
ನವ ದೆಹಲಿ.

# 21

# 1925ರ ಭಾರತೀಯ ಉತ್ತರಾಧಿಕಾರ ಕಾಯ್ದೆಯ ಕುರಿತು ಮುಖ್ಯಮಂತ್ರಿಯವರಿಗೆ ಪತ್ರ

30 ನೇ ಜನವರಿ, 2015

ಶ್ರೀ ಸಿದ್ಧರಾಮಯ್ಯ ಅವರೇ,

ಮೈಸೂರು ಮತ್ತು ಕೊಡಗು ಭಾಗಗಳ ಮೂಲ ಕ್ರಿಶ್ಚಿಯನ್ ಸಮುದಾಯದ ಹೆಣ್ಣುಮಕ್ಕಳಿಗೆ ಅನೇಕ ದಶಕಗಳಿಂದ ತಮ್ಮ ಹಿರಿಯರ ಆಸ್ತಿಯಲ್ಲಿ ಸಮಪಾಲು ದೊರೆಯದಂತೆ ಮಾಡಿರುವ ಭಾರತೀಯ ಉತ್ತರಾಧಿಕಾರ ಕಾಯಿದೆ 1925ರ ಕಾರ್ಯನಿರ್ವಹಣೆಯಲ್ಲಿರುವ ಕೆಲವು ದೋಷಗಳ ಬಗ್ಗೆ ನಿಮ್ಮ ಗಮನ ಸೆಳೆಯಲು ಈ ಪತ್ರ ಬರೆಯುತ್ತಿದ್ದೇನೆ. ಭಾರತೀಯ ಉತ್ತರಾಧಿಕಾರ ಕಾಯಿದೆ 1925 ಮಹಿಳೆ ಮತ್ತು ಪುರುಷರಿಗೆ ಹಿರಿಯರ ಹಂಚಿಕೆಯಾಗದ ಆಸ್ತಿಯಲ್ಲಿ ಸಮಾನವಾದ ಹಕ್ಕನ್ನು ಒದಗಿಸುವಂತೆ ಹೇಳುತ್ತದೆ. ಕಾಯ್ದೆಯ ಕಲಂ 37 ಒಪ್ಪುವಂತೆ, ಮೃತರಾದವರ ಹಂಚಿಕೆಯಾಗದ ಆಸ್ತಿ ಅವರ ಬದುಕಿರುವ ಮಕ್ಕಳಿಗೆ (ಗಂಡು ಮತ್ತು ಹೆಣ್ಣು) ಸಮಾನಾಗಿ ಹಂಚಿಕೆಯಾಗಬೇಕು.

ಆದರೂ, ಭಾರತೀಯ ಉತ್ತರಾಧಿಕಾರ ಕಾಯಿದೆ 1925 ಯ ಅನ್ವಯಸಾಧ್ಯತೆಯಿಂದ ಈವರೆಗೆ ಮೈಸೂರು ಮತ್ತು ಕೊಡಗು ಭಾಗಗಳ ಮೂಲ ಕ್ರಿಶ್ಚಿಯನ್ ಸಮುದಾಯದ ಮಹಿಳೆಯರಿಗೆ ರಿಯಾಯಿತಿ ನೀಡಲಾಗಿದೆ. ಆದುದರಿಂದ, ಈ ಭಾಗಗಳ ಮಹಿಳೆಯರು, ಈಗಲೂ ಆಸ್ತಿಯ ಉತ್ತರಾಧಿಕಾರ ವಿಷಯದಲ್ಲಿ ಮೂಲರೂಪದ ವಾಡಿಕೆಯ ಹಿಂದೂ ಕಾನೂನಿನ ಪ್ರಕಾರ, ಆಳಲ್ಪಡುತ್ತಿದ್ದಾರೆ ಮತ್ತು ದುರಾದೃಷ್ಟವಶಾತ್ ಅದು ಅವರಿಗೆ ಯಾವ ಸಮಾನ ಹಕ್ಕುಗಳನ್ನೂ ನೀಡುವುದಿಲ್ಲ. ಭಾರತೀಯ ಉತ್ತರಾಧಿಕಾರ ಕಾಯ್ದೆ, 1865 (ಭಾರತೀಯ ಉತ್ತರಾಧಿಕಾರ ಕಾಯಿದೆ 1925 ಗಿಂತ ಹಿಂದಿನದು) ಇದರ ಕಲಂ 332ರ ಅಡಿಯಲ್ಲಿ ಜುಲೈ 23, 1868 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ. 204 ಲಾಭ ಪಡೆದುಕೊಂಡು ಕೊಡಗಿನ ಎಲ್ಲಾ ಮೂಲ ಕ್ರಿಶ್ಚಿಯನ್ ಮಹಿಳೆಯರನ್ನು ಪ್ರಕ್ರಿಯೆಯಿಂದ ಹೊರಗಿಡಲಾಯಿತು.

ಇದೇ ವೇಳೆ, ರಿಯಾಯಿತಿಯ ಅನ್ವಯತೆಯ ಕುರಿತ ಈ ಮೇಲಿನ ಅಧಿಸೂಚನೆಯನ್ನು ಮೈಸೂರು ಭಾಗಕ್ಕೂ ವಿಸ್ತರಿಸಲಾಯಿತು. ಇದರೊಂದಿಗೆ ಮೈಸೂರಿನ ಮೂಲ ಕ್ರಿಶ್ಚಿಯನ್ನರನ್ನೂ ಬಿಡಲಾಯಿತು, ಇದು 1865 ರ ಕಾಯ್ದೆಯಿಂದಲೂ ರಿಯಾಯಿತಿ ಕೊಡಲಾಯಿತು. ಭಾರತೀಯ ಉತ್ತರಾಧಿಕಾರ ಕಾಯ್ದೆ, 1865, ತದನಂತರ ಭಾರತೀಯ ಉತ್ತರಾಧಿಕಾರ ಕಾಯಿದೆಯಾಗಿ(1925) ಮಾರ್ಪಾಡಾಯಿತು. ಆದರೂ, ಭಾರತೀಯ ಉತ್ತರಾಧಿಕಾರ ಕಾಯಿದೆ 1925 ರ ಕಲಂ 3(3) ರ ಪ್ರಕ್ರಿಯೆ, ಅದುವರೆಗೆ ಅಧಿಸೂಚನೆಯ ಮೂಲಕ ಜಾರಿಯಲ್ಲಿದ್ದ ರಿಯಾಯಿತಿ ಮುಂದುವರಿಯಿತು ಮತ್ತು ಅದನ್ನು ಈ ದಿನದವರೆಗೂ ಬದಲು ಮಾಡಲಾಗಿಲ್ಲ. ಹೇಗೆಂದರೆ, ಮೈಸೂರು ಮತ್ತು ಕೊಡಗು ಭಾಗದ ಮೂಲ ಕ್ರಿಶ್ಚಿಯನ್ನರು ಮೂಲರೂಪದ ವಾಡಿಕೆಯ ಹಿಂದೂ ಕಾನೂನಿನ ಪ್ರಕಾರ, ಆಳಲ್ಪಡುತ್ತಿದ್ದಾರೆ.

ಹಿಂದೂ ಉತ್ತರಾಧಿಕಾರಿ ಕಾಯ್ದೆ, 1956 ರ ಹಾದಿಯಲ್ಲಿ ಹಿಂದೂ ಕಾನೂನು ಶಾಸನಾತ್ಮಕವಾಗಿದೆ ಮತ್ತು ಗುಣಾತ್ಮಕವಾಗಿ ತಿದ್ದುಪಡಿ ಮಾಡಲಾಗಿದೆ ಮತ್ತು ಹಿಂದೂ ಉತ್ತರಾಧಿಕಾರಿ (ತಿದ್ದುಪಡಿ) ಕಾಯ್ದೆ, 2005, ಇದರ ಮೂಲಕ ಈಕ ಹಿಂದೂ ಮಹಿಳೆಯರು ಉತ್ತರಾಧಿಕಾರದ ನಿರ್ಣಯದಲ್ಲಿ ಸಮಾನ ಹಕ್ಕು ಮತ್ತು ಬಾಧ್ಯಸ್ಥಿಕೆಯ ಅಧಿಕಾರ ಹೊಂದಿದ್ದಾರೆ. ಆದರೂ, ಹಿಂದೂ ಉತ್ತರಾಧಿಕಾರಿ ಕಾಯ್ದೆ, 1956, ಹಿಂದೂಗಳಿಗೆ ಮಾತ್ರ ಅನ್ವಯಿಸುತ್ತದೆ, ಮತ್ತು ಮೈಸೂರು ಮತ್ತು ಕೊಡಗು ಭಾಗದ ಮೂಲ ಕ್ರಿಶ್ಚಿಯನ್ನರು ಈಗಲೂ ಮೂಲರೂಪದ ವಾಡಿಕೆಯ ಹಿಂದೂ ಕಾನೂನಿನ ಪ್ರಕಾರ, ಆಳಲ್ಪಡುತ್ತಿದ್ದಾರೆ ಮತ್ತು ದುರಾದೃಷ್ಟವಶಾತ್ ಆಸ್ತಿ ಹಂಚಿಕೆಯಲ್ಲಿ ಅದು ಅವರಿಗೆ ಯಾವುದೇ ಸಮಾನ ಅಧಿಕಾರ ನೀಡುವುದಿಲ್ಲ.

ದುರಾದೃಷ್ಟವೆಂದರೆ, ಈ ಲೋಪವನ್ನು ಇಷ್ಟು ವರ್ಷಗಳವರೆಗೂ ಸರ್ಕಾರದಿಂದ ಗುರುತಿಸಲು ಸಾಧ್ಯವಾಗಲಿಲ್ಲ ಮತ್ತು ಸರಿಪಡಿಸಲಾಗಲಿಲ್ಲ, ಮತ್ತು ಮೈಸೂರು ಮತ್ತು ಕೊಡಗು ಭಾಗದ ಮೂಲ ಕ್ರಿಶ್ಚಿಯನ್ ಮಹಿಳೆಯರಿಗೆ ನ್ಯಾಯಯುತ ಮತ್ತು ಸಮಾನ ಅಧಿಕಾರವನ್ನು ನಿರಾಕರಿಸುತ್ತಲೇ ಬರಲಾಗುತ್ತಿದೆ. ಹೀಗಾಗಿ ಇದು, ಮೈಸೂರು ಮತ್ತು ಕೊಡಗು ಭಾಗದ ಮೂಲ ಕ್ರಿಶ್ಚಿಯನ್ ಮಹಿಳೆಯರಿಗೆ ಸಮಾನ ಹಕ್ಕನ್ನು ಖಾತರಿಪಡಿಸಲು ಕಾನೂನನ್ನು ಸೂಕ್ತವಾಗಿ ಬದಲಿಸಲು ಯೋಗ್ಯವಾದ ಪ್ರಕರಣ. ಭಾರತೀಯ ಉತ್ತರಾಧಿಕಾರ ಕಾಯಿದೆಯ 1925 ಕಲಂ 3(2) ರಲ್ಲಿರುವ ವಿಷಯದೆಡೆಗೆ ನಿಮ್ಮ ಗಮನ ಸೆಳೆಯುತ್ತೇನೆ. ಇದು ಒಂದು ಕಾಯ್ದೆಯ ಕಲಂನ ಕಾರ್ಯನಿರ್ವಹಣೆಯಿಂದ ಯಾವುದೇ ಜನಾಂಗ, ಬುಡಕಟ್ಟು ಅಥವಾ ಪಂಗಡವನ್ನು ಹೊರಗಿಟ್ಟಿರುವ ಆದೇಶವನ್ನು ಮೇಲೆತ್ತುವ ಅಧಿಕಾರವನ್ನು ರಾಜ್ಯ ಸರ್ಕಾರಕ್ಕೆ ನೀಡುತ್ತದೆ. ಹೀಗಾಗಿ ನಾನು, ಭಾರತೀಯ ಉತ್ತರಾಧಿಕಾರ ಕಾಯಿದೆಯ 1925 ಕಲಂ 3(2) ಕ್ಕೆ ಅನುಸಾರವಾಗಿರುವ ಮೈಸೂರು ಮತ್ತು ಕೊಡಗು ಭಾಗದ ಮೂಲ ಕ್ರಿಶ್ಚಿಯನ್ ಮಹಿಳೆಯರಿಗೆ ಸಮಾನ ಹಕ್ಕನ್ನು ನಿರಾಕರಿಸುವ ಅಧಿಸೂಚನೆಯನ್ನು ಮೇಲೆತ್ತಲು/ ಹಿಂತೆಗೆದುಕೊಳ್ಳಲು, ಈ ಮೂಲಕ ಆ ಸಮುದಾಯಗಳನ್ನು ಭಾರತೀಯ ಉತ್ತರಾಧಿಕಾರ ಕಾಯಿದೆಯ ಪರಿಧಿಗೆ ತಂದು, ಅವರಿಗೆ ಸಮಾನ ಸ್ಥಾನಮಾನ ಮತ್ತು ಆಸ್ತಿ ಉತ್ತರಾಧಿಕಾರತ್ವ ಕುರಿತಂತೆ ಸಮಾನ ಕಾನೂನಿನ ರಕ್ಷಣೆ ಸಿಗುವಂತೆ ಮಾಡಲು ಕ್ರಮ ಕೈಗೊಳ್ಳಬೇಕೆಂದು ತಮ್ಮ ಸರ್ಕಾರವನ್ನು ಆಗ್ರಹಿಸುತ್ತೇನೆ.

ಇಂತಿ ನಿಮ್ಮ ವಿಶ್ವಾಸಿ
ರಾಜೀವ್ ಚಂದ್ರಶೇಖರ್

ಗೆ:
ಶ್ರೀ ಎಸ್. ಸಿದ್ಧರಾಮಯ್ಯ,
ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳು,
ವಿಧಾನ ಸೌಧ,
ಬೆಂಗಳೂರು 560 001.

# 22

# ನೋಟಿಫಿಕೇಷನ್ ಹಾಗೂ ಡಿನೋಟಿಫಿಕೇಷನ್ ಪ್ರಕ್ರಿಯೆ ಭ್ರಷ್ಟಾಚಾರದ ಮೂಲವಾಗಿರುವ ಕುರಿತು ಮುಖ್ಯಮಂತ್ರಿಯವರಿಗೆ ಪತ್ರಗಳು

19 ನೇ ಫೆಬ್ರವರಿ, 2015

ಶ್ರೀ ಸಿದ್ದರಾಮಯ್ಯ ಅವರೇ,

ಅರ್ಕಾವತಿ ಬಡಾವಣೆ ಯೋಜನೆಯ ಮರುಪರಿವರ್ತಿತ ಯೋಜನೆಯ ಅಧಿಸೂಚನೆಯನ್ನು ಉಲ್ಲೇಖಿಸಿ ಈ ಪತ್ರವನ್ನು ಬರೆಯುತ್ತಿದ್ದೇನೆ.

ಈ ವಿಷಯದ ಕುರಿತು ಒಂದಷ್ಟು ಆರೋಪ– ಪ್ರತ್ಯಾರೋಪಗಳನ್ನು ಮಾಡಲಾಗುತ್ತಿರುವಾಗ, ಮುಖ್ಯಮಂತ್ರಿಗಳಾಗಿ ನೀವು ಆದಷ್ಟು ಬೇಗ ಗಮನಹರಿಸಲೇಬೇಕಾದ ಕೆಲವು ಮೂಲಭೂತ ಸತ್ಯಗಳನ್ನು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ.

ಭೂಮಿಯ ಹಂಚಿಕೆ, ಭೂಮಿಯ ವ್ಯವಹಾರ, ಅದರ ಬಳಕೆ ಮತ್ತು ತಡೆಯಿಲ್ಲದ ಆಡಳಿತಯಂತ್ರದ ದುರುಪಯೋಗ ಮತ್ತು ಇವುಗಳಲ್ಲಿ ರಾಜಕೀಯ ವಿವೇಚನೆ ಮತ್ತು ವಲಯಗಳಾಗಿ ಹಂಚುವಿಕೆ ಸರ್ಕಾರದಲ್ಲಿ ಭ್ರಷ್ಟಾಚಾರದ ನಿಜವಾದ ಮೂಲವಾಗುತ್ತಿದೆ/ ರಾಜಕೀಯದಲ್ಲಿ ಮತ್ತು ರಾಜಕೀಯ ಪಕ್ಷಗಳ ಬಂಡವಾಳ

ಮತ್ತು ಚಟುವಟಿಕೆಗಳಲ್ಲಿ ನಮ್ಮ ರಾಜಕೀಯದಲ್ಲಿ ಭೂ ವ್ಯವಹಾರಿಗಳು ಭೂ ಒಪ್ಪಂದಗಳ ದೊಡ್ಡ ಪ್ರಭಾವವಿರುವುದಕ್ಕೆ ಬೇಕಾದಷ್ಟು ಸಾಕ್ಷಿಗಳಿವೆ ಮತ್ತು ನಿಮಗೆ ಇದು ತಿಳಿದಿದೆ ಎಂದು ನಾನು ವಿಶ್ವಾಸದಿಂದ ನಂಬುತ್ತೇನೆ.

ನೀವು ನಿಮ್ಮ ಚುನಾವಣಾ ಪ್ರಚಾರದ ವೇಳೆ "ಉತ್ತಮ ಆಡಳಿತದ" ಭರವಸೆ ನೀಡಿರುವುದರಿಂದ, ಈ ಸಂಬಂಧವಾಗಿ ಮತ್ತು ಇದನ್ನು ಎದುರಿಸಲು ನಾನು ಹೃದಯಾಂತರಾಳದಿಂದ ಮನವಿ ಮಾಡುತ್ತಿದ್ದೇನೆ. ಅಧಿಸೂಚನೆ ಮತ್ತು ಅದನ್ನು ರದ್ದುಗೊಳಿಸುವ ಪ್ರಕ್ರಿಯೆ ಈಗ ಭ್ರಷ್ಟಾಚಾರದ ಮೂಲಗಳಾಗಿವೆ.

ಭೂಮಿಯ ಅಧಿಸೂಚನೆ ಮತ್ತು ಅದನ್ನು ರದ್ದುಗೊಳಿಸುವಿಕೆಯೊಂದಿಗೆ ತಳಕುಹಾಕಿಕೊಂಡಿರುವ ಭ್ರಷ್ಟಾಚಾರ ಈಗ ತುಂಬಾ ಪರಿಚಿತ ಮಾದರಿಯಾಗಿ ನೆಲೆಗೊಂಡಿದೆ. ಸರ್ಕಾರ ದೊಡ್ಡ ಮಟ್ಟದ ಪ್ರಯತ್ನ ಮತ್ತು ಜನರ ಹಣವನ್ನು ಭೂಮಿಗೆ ಹಾಕಿ ಅದನ್ನು ಸಾರ್ವಜನಿಕರ ಬಳಕೆಗಾಗಿ ಅಭಿವೃದ್ಧಿಪಡಿಸುತ್ತದೆ. ಇದು ಸಹಜವಾಗಿಯೇ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಭೂಮಿಯ ಬೆಲೆ ಏರುವಂತೆ ಮಾಡುತ್ತದೆ. ಆದರೂ, ಇಂತಹ ಅಭಿವೃದ್ಧಿ ಹೊಂದಿದ ಪ್ರದೇಶಗಳಲ್ಲಿ ಅಧಿಸೂಚನೆ ರದ್ದಾಗುವುದು ತುಂಬಾ ಕಡಿಮೆ ಅಥವಾ ಕಾಕತಾಳೀಯ ಎಂದೇ ಹೇಳಬಹುದು. ಹಿಂದೆ ನಡೆದ ಇಂತಹ ಅನೇಕ ಪ್ರಕರಣಗಳು ಇಂತಹ ಅಧಿಸೂಚನೆಗಳು ರದ್ದಾಗುವುದು ಪಟ್ಟಭದ್ರ ಹಿತಾಸಕ್ತಿಗಳ ಲಾಭಕ್ಕಾಗಿ ಎಂಬುದನ್ನು ಸಾಬೀತುಪಡಿಸುತ್ತವೆ.

ಸ್ವೇಚ್ಛಾನುಸಾರ ಭೂಮಿಯ ಅಧಿಸೂಚನೆ ಮತ್ತು ಸಾರ್ವಜನಿಕ ಭೂಮಿಯ ಅಧಿಸೂಚನೆಯನ್ನು ರದ್ದುಪಡಿಸುವುದರಡಿಯಲ್ಲಿ ನಾನು ಆಗಿನ ಮುಖ್ಯಮಂತ್ರಿಗಳಿಗೆ ಫೆಬ್ರವರಿ 5, 2010 (ಸೇರಿಸಿದೆ) ರಂದು ನೀಡಿದ ಒಂದು ಸಲಹೆಯಲ್ಲಿ ಪಟ್ಟಭದ್ರ ವಾಣಿಜ್ಯ ಹಿತಾಸಕ್ತಿಗಳಿಗೆ ಲಾಭ ಕಲ್ಪಿಸುವ ಈ ಅಭ್ಯಾಸಕ್ಕೆ ಅಂತ್ಯ ಹಾಡಲು ವಿನಂತಿಸಿದ್ದೆ. ಅದನ್ನು ನಾನು ಮತ್ತೊಮ್ಮೆ ನಿಮ್ಮ ಗಮನಕ್ಕೆ ಕಳುಹಿಸುತ್ತಿದ್ದೇನೆ:

1. ವಿಶಿಷ್ಟ ಉದ್ದೇಶದ ಅಧಿಸೂಚನೆ ಮತ್ತು ಅಧಿಸೂಚನೆ ರದ್ದುಪಡಿಸುವಿಕೆಯನ್ನು ಸಂಪೂರ್ಣವಾಗಿ ನಿಷೇಧಿಸುವುದು.

2. ನ್ಯಾಯಬದ್ಧ ಮತ್ತು ಶಾಲೆ, ಉದ್ಯಾನಗಳು, ಆಸ್ಪತ್ರೆಗಳು ಮೊದಲಾದ ಕಾನೂನಿನ ಪ್ರಕಾರ ಸಾಬೀತುಪಡಿಸಬಹುದಾದ ಸಾರ್ವಜನಿಕ ಉದ್ದೇಶಗಳಿಗೆ ಹೊರತಾಗಿ ಭೂಮಿಯ ಅಧಿಸೂಚನೆ ಮತ್ತು ಅಧಿಸೂಚನೆಯ ರದ್ದತಿಗೆ ಅವಕಾಶ ನೀಡಬಾರದು. ಖಾಸಗಿ ವಾಣಿಜ್ಯ ಉದ್ದೇಶಗಳಿಗಂತೂ ಇದನ್ನು ಬಳಸಿಕೊಳ್ಳಲೇಬಾರದು.

3. ಭೂ ನಿರ್ವಹಣೆಯ ಈಗಿನ ಪ್ರಕ್ರಿಯೆಯನ್ನು ಸರ್ಕಾರ ಕೂಡಲೇ ನಿಲ್ಲಿಸಬೇಕು ಮತ್ತು ಅದರ ಬದಲು ಪಾರದರ್ಶಕ ಮತ್ತು ಬಹಿರಂಗಪಡಿಸುವ ನೀತಿಯೊಂದಿಗಿನ ಪ್ರಕ್ರಿಯೆಯನ್ನು ಅಳವಡಿಸಿಕೊಳ್ಳಬೇಕು.

4. ಗಣಿ ಮತ್ತು ತರಂಗಾಂತರಗಳಿದ್ದಂತೆ, ಸಾರ್ವಜನಿಕ ಭೂಮಿ ಒಂದು ಸಂಪತ್ತು, ಮತ್ತು ಸರ್ಕಾರ ಈ ಮೂಲಗಳನ್ನು ಬಳಕೆ ಮಾಡುವಾಗ ಜಾಗ್ರೃತವಾಗಿರಬೇಕು ಮತ್ತು ಇವುಗಳನ್ನು ಜನರ ಕಲ್ಯಾಣಕ್ಕಾಗಿ ಮಾತ್ರ ಬಳಸಬೇಕು ಮತ್ತು ಬೊಕ್ಕಸವನ್ನು ಹೆಚ್ಚಿಸಲು ಸಾಮಾಜಿಕವಾಗಿ ಮತ್ತು ಮೂಲಸೌಕರ್ಯವೃದ್ಧಿಗೆ ಬಳಸುವುದು.

ನಾನು ನಿಮ್ಮ ಬಳಿ "ಉತ್ತಮ ಆಡಳಿತದ" ಭರವಸೆಯನ್ನು ಈಡೇರಿಸುವಂತೆ ಕೇಳಿಕೊಳ್ಳುತ್ತೇನೆ ಮತ್ತು ಅಧಿಸೂಚನೆ/ ಅಧಿಸೂಚನೆಯ ರದ್ದು ಕುರಿತಾದ ವಿವೇಚನೆಯನ್ನು ಬೇಕಾಬಿಟ್ಟಿಯಾಗಿ ದುರ್ಬಳಕೆ ಮಾಡುತ್ತಿರುವುದನ್ನು ತಡೆಯಲು ಈ ಬದಲಾವಣೆಗಳನ್ನು ಆರಂಭಿಸಿ. ಭ್ರಷ್ಟಾಚಾರ ಮತ್ತು ಭೂ ವ್ಯವಹಾರಸ್ಥರಿಂದ ರಾಜಕೀಯದಲ್ಲಿ ಹೂಡಿಕೆಗೆ ಸಂಪೂರ್ಣ ತಡೆ ಹಾಕಲು ಇದು ಸರಿಯಾದ ಸಮಯ.

ಈ ವಿಷಯದ ಕುರಿತು ನಿಮ್ಮ ಕ್ರಮಗಳನ್ನು ಎದುರು ನೋಡುತ್ತಿದ್ದೇನೆ.

ಇಂತಿ ನಿಮ್ಮ ವಿಶ್ವಾಸಿ
ರಾಜೀವ್ ಚಂದ್ರಶೇಖರ್

ಶ್ರೀ ಸಿದ್ಧರಾಮಯ್ಯ,
ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ,
ಬೆಂಗಳೂರು.

ಪ್ರತಿ:

ಕಾರ್ಯದರ್ಶಿ, ನ್ಯಾಯಮೂರ್ತಿ ಕೆಂಪಣ್ಣ ವಿಚಾರಣಾ ಆಯೋಗ, ಬೆಂಗಳೂರು

# 23

# ಬಿಬಿಎಂಪಿ ಆಯುಕ್ತರ ವಿಚಾರಣೆಗೆ ಅನುಮತಿ ಕೋರಿ ಮುಖ್ಯಮಂತ್ರಿಯವರಿಗೆ ಪತ್ರ

27 ನೇ ಫೆಬ್ರವರಿ, 2015

**ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ಮಿ. ಲಕ್ಷ್ಮೀ ನಾರಾಯಣರಿಗೆ ಕಾನೂನು ಕ್ರಮ**

ಪ್ರೀತಿಯ ಸರ್,

ಭಾರತೀಯ ದಂಡ ಸಂಹಿತೆ, 1860, ತಿದ್ದುಪಡಿಯಾದಂತೆ ("ಐಪಿಸಿ") ಮತ್ತು ಭ್ರಷ್ಟಾಚಾರ ನಿರ್ಮೂಲನಾ ಕಾಯಿದೆ, 1988, ತಿದ್ದುಪಡಿಯಾದಂತೆ ("ಪಿಸಿ ಕಾಯಿದೆ") ಯ ಅಡಿಯಲ್ಲಿ ಅಪರಾಧವೆಸಗಿದ್ದಕ್ಕಾಗಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ("ಬಿಬಿಎಮ್‌ಪಿ") ಆಯುಕ್ತರು ಮಿ. ಲಕ್ಷ್ಮೀ ನಾರಾಯಣರ ವಿರುದ್ಧ ಕಾನೂನು ಕ್ರಮಕ್ಕೆ ಮಂಜೂರಾತಿ ಪಡೆಯಲು ಈ ಪತ್ರವನ್ನು ಬರೆಯುತ್ತಿದ್ದೇನೆ.

ಕರ್ನಾಟಕದ ಕಲಂ 13 ರ ಅನುಸಾರವಾಗಿ ಜೂನ್ 2007 ರಲ್ಲಿ ಬೆಂಗಳೂರು ಪರಿಷ್ಕೃತ ಬೃಹತ್ ಯೋಜನೆ ("ಆರ್‌ಎಮ್‌ಪಿ 2015") ಕುರಿತು ಸೂಚನೆಯನ್ನು ನೀಡಲಾಗಿತ್ತು.

ನಗರ ಮತ್ತು ಗ್ರಾಮ ಯೋಜನೆ ಕಾಯಿದೆ, 1961 (the "KTCPಕಾಯಿದೆ"). 2015ರ ಪರಿಷ್ಕೃತ ಮಾಸ್ಟರ್ ಪ್ಲಾನ್ ಅಡಿಯಲ್ಲಿ ನಿಗದಿಗೊಳಿಸಿರುವ, ವಸತಿ ಪ್ರದೇಶಗಳಲ್ಲಿ ವಾಣಿಜ್ಯ ಬಳಕೆ ಅನುವು ಮಾಡಿಕೊಡಲು ಪ್ರಸ್ತಾಪಿಸಿರುವ "ಮಿಶ್ರಿತ ಜಾಗ ಬಳಕೆ" ಸಮಸ್ಯೆಯನ್ನು ಪರಿಹರಿಸುವಂತೆ ಕೋರಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು (PIL) ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲದೆದುರು 2008 ರಲ್ಲಿ ನಾಗರೀಕ ಕ್ರಿಯಾ ಸಮಿತಿ (ಹಾಗೂ ಇತರರು) ಸಲ್ಲಿಸಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಆಯುಕ್ತರು ಫೆಬ್ರವರಿ 2014ರಂದು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದೆದುರು ಅಫಿಡೆವಿಟ್ ಸಲ್ಲಿಸಿದ್ದು ಈ ರೀತಿ ಹೇಳಿರುತ್ತಾರೆ:

ಅದೇನೆಂದರೆ

(ಎ) ಸಂಬಂಧಪಟ್ಟ ರಸ್ತೆಗಳ ಅಗಲವು ನಲವತ್ತು (40) ಅಡಿಗಿಂತ ಕಡಿಮೆಯಿದ್ದಲ್ಲಿ ಮುಖ್ಯ ವಸತಿ ಮತ್ತು ಮಿಶ್ರ ವಸತಿ ಪ್ರದೇಶಗಳಲ್ಲಿ ವಾಣಿಜ್ಯ ಚಟುವಟಿಕೆಗಳನ್ನು ಅನುಮತಿಸುವಂತಿಲ್ಲ;

(ಬಿ) ಮುಖ್ಯ ವಸತಿ ಮತ್ತು ಮಿಶ್ರ ವಸತಿ ಪ್ರದೇಶಗಳಲ್ಲಿ, ರಸ್ತೆಯ ಅಗಲವು ನಲವತ್ತು ಅಡಿಗಿಂತ (40) ಹೆಚ್ಚಿಗೆ ಇದ್ದರಷ್ಟೇ ಅಫಿಡೆವಿಟ್ ಜೊತೆಯಲ್ಲಿ ಸಲ್ಲಿಸಲಾಗಿರುವ ಬಿಡಿಎ ತೀರ್ಮಾನದಲ್ಲಿ ನಮೂದಿಸಿರುವಂಥ ಹೆಚ್ಚುವರಿ ಬಳಕೆಗಳು ಮಾತ್ರವೇ ಅನುಮತಿಸಲ್ಪಡಬೇಕು.

(ಸಿ) 2015ರ ಪರಿಷ್ಕೃತ ಮಾಸ್ಟರ್ ಪ್ಲಾನಿನಲ್ಲಿ ವ್ಯಾಖ್ಯಾನಿಸಿರುವಂತೆ "ರಿಂಗ್ 3" ಪ್ರದೇಶಗಳಲ್ಲಿ ಮಾತ್ರವೇ ಸಹ ಬಳಕೆಯಿಂದ ಪ್ರಮುಖ ಬಳಕೆಗೆ ಪರಿವರ್ತನೆಗೆ ಅನುವು ಮಾಡಿಕೊಡಬೇಕು. "ರಿಂಗ್ 1" ಮತ್ತು "ರಿಂಗ್ 2" ಪ್ರದೇಶಗಳು 2015ರ RMP ಯಲ್ಲಿರುವಂತೆ ಇರಬೇಕು.

ಇದರ ಜೊತೆಯಲ್ಲಿ ಮೇಲೆ ಹೇಳಲಾದ ಪರಿಗಣಿಸಲಾಗುವ ಅಫಿಡೆವಿಟ್ ಜೊತೆ ಸಲ್ಲಿಸಲಾಗಿರುವ ಬಿಡಿಎಯ ತೀರ್ಮಾನದಲ್ಲಿ ಸೂಚಿಸಿರುವಂತೆ ಪ್ರಮುಖವಾಗಿ ವಸತಿ ಪ್ರದೇಶಗಳಲ್ಲಿ ಹಾಯ್ದುಹೋಗುವ ಪರಿವರ್ತನಾ ಪ್ರದೇಶದ ಭಾಗಗಳಲ್ಲಿ ವಾಣಿಜ್ಯ ಚಟುವಟಿಕೆಗಳನ್ನು ನಿರ್ಬಂಧಿಸುವುದನ್ನು ಪರಿಗಣಿಸಬೇಕು. ಈ ಅಫಿಡೆವಿಟ್ ಹಿನ್ನೆಲೆಯಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ಪರಿಷ್ಕೃತ ವಲಯ ವಿಂಗಡಣೆ ನಿಯಮಾವಳಿಗಳ ಕರಡನ್ನು ಸಿದ್ಧಗೊಳಿಸಬೇಕು ಎಂದು ಹೇಳಿದ್ದು ಇದನ್ನು ಅನುಮೋದನೆಗಾಗಿ ರಾಜ್ಯ ಸರ್ಕಾರಕ್ಕೆ ರವಾನಿಸಿದೆ. ಮಾನ್ಯ ಕರ್ನಾಟಕ

ಉಚ್ಚ ನ್ಯಾಯಾಲಯದ ಈ ಆದೇಶದ ಪ್ರತಿಯನ್ನು ಇಲ್ಲಿ ಅನುಬಂಧ ಎ ರೂಪದಲ್ಲಿ ಲಗತ್ತಿಸಲಾಗಿದೆ. ವಿಶೇಷ ಆಯುಕ್ತರಿಂದ (ಬಿಬಿಎಂಪಿ ಯೋಜನಾ ವಿಭಾಗ, ಫೆಬ್ರವರಿ 25, 2012ರ ನ್ಯಾಯಾಲಯದ ಮಧ್ಯಂತರ ಆದೇಶದ ತರುವಾಯ ಹೊರಡಿಸಲಾದ ಎಲ್ಲ ಪರವಾನಗಿ ಪ್ಲಾನ್ ರದ್ದುಪಡಿಸುವ ಮೂಲಕ ) ಕಚೇರಿ ಆದೇಶವನ್ನು ಕೂಡ ಹೊರಡಿಸಲಾಗಿದೆ ಎಂಬುದನ್ನು ಮಾನ್ಯ ನ್ಯಾಯಾಲಯವು ಗಮನಿಸಿದೆ.

ತರುವಾಯ ಮಾಸ್ಟರ್ ಪ್ಲಾನಿನ ವಲಯವಾರು ವಿಂಗಡಣೆ ನಿಯಮಾವಳಿಗೆ ಡಿಸೆಂಬರ್ 11, 2014ರಂದು ತಿದ್ದುಪಡಿಗಳನ್ನು ಮಾಡಲಾಗಿದ್ದು ಅವು ಕೆಟಿಸಿಪಿ ಕಾಯಿದೆಯ ಒದಗಣೆಗಳ ಪ್ರಕಾರ ಇರುತ್ತವೆ. ಒಂದು ವೇಳೆ ಈ ಪರಿಷ್ಕೃತ ನಿಯಮಾವಳಿಗಳಲ್ಲಿ ಉಚ್ಚ ನ್ಯಾಯಾಲಯದಡಿ ಪ್ರಸ್ತಾಪಿಸಿದ್ದ ನಿರ್ದಿಷ್ಟ ಅಂಶಗಳನ್ನು ಕೈಬಿಡಲಾಗಿದೆ. ಅನುಬಂಧ ಬಿಯಲ್ಲಿ 2015ರ ಮಾಸ್ಟರ್ ಪ್ಲಾನಿನ ತಿದ್ದುಪಡಿಗಳ ವಿವರಗಳನ್ನು ನೀಡಲಾಗಿದೆ. ಕರ್ನಾಟಕದ ಮಾನ್ಯ ಉಚ್ಚ ನ್ಯಾಯಾಲಯದ ಎದುರಿನಲ್ಲಿ ಸಲ್ಲಿಸಿದ ಅಫಿಡೆವಿಟ್ ಹಾಗೂ ಮಾಸ್ಟರ್ ಪ್ಲಾನಿಗೆ ಮಾಡಿದ ತಿದ್ದುಪಡಿಗಳ ನಡುವಿನ ವ್ಯತ್ಯಯಗಳನ್ನು ಅನುಬಂಧ ಸಿಯಲ್ಲಿ ಸಲ್ಲಿಸಲಾಗಿದೆ. ತರುವಾಯ ಮಾಸ್ಟರ್ ಪ್ಲಾನ್ ಮತ್ತು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುವ ಅಫಿಡೆವಿಟ್ ನಡುವಿನ ಈ ವ್ಯತ್ಯಯಗಳ ಕುರಿತು ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯೊಂದನ್ನು ಸಲ್ಲಿಸಲಾಗಿದ್ದು ಇದು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಎದುರಿನಲ್ಲಿದೆ.

ಕೆಟಿಸಿಪಿ ಕಾಯಿದೆಯ ಸೆಕ್ಷನ್ 4ರ ಪ್ರಕಾರ ಮಾಸ್ಟರ್ ಪ್ಲಾನ್ ಅಡಿಗೆ ಬರುವ ಪ್ರದೇಶದಲ್ಲಿ ಕೈಗೊಳ್ಳಲಾಗುವ ಯಾವುದೇ ಹೊಸ ಅಭಿವೃದ್ಧಿಯು ಹೇಳಲಾದ ಯೋಜನೆಯ ಒದಗಣೆಗಳಿಗೆ ಅನುಸಾರವಾಗಿ ಇರಬೇಕಾಗುತ್ತದೆ. ಬೆಂಗಳೂರು ಮಹಾನಗರ ಪಾಲಿಕೆಯ ಕಟ್ಟಡಗಳ ಉಪನಿಯಮಗಳು 2003ರ ಉಪನಿಯಮ 3ರ ಕರ್ನಾಟಕ ಮಹಾನಗರ ಪಾಲಿಕೆಗಳ ಕಾಯಿದೆ 1976ರ ಸೆಕ್ಷನ್ 295, 299 ಮತ್ತು 300ರ ಪ್ರಕಾರ ಯಾವುದೇ ವ್ಯಕ್ತಿ ಕಟ್ಟಡವನ್ನು ನಿರ್ಮಿಸಲು ಅಥವಾ ಮರುನಿರ್ಮಿಸಲು ಬಯಸಿದಲ್ಲಿ ಅಥವಾ ಪ್ರಸ್ತುತ ಸ್ಥಳದಲ್ಲಿ ದೃಷ್ಟಿಗೋಚರ ಬದಲಾವಣೆಗಳನ್ನು ಮಾಡಬಯಸಿದಲ್ಲಿ ಅದಕ್ಕೆ ಬಿಬಿಎಂಪಿಯ ಆಯುಕ್ತರ ಪರವಾನಗಿ ಅಗತ್ಯ. ಇದರ ಜೊತೆಯಲ್ಲಿ ನಗರ ಪ್ರದೇಶದಲ್ಲಿ ಕೆಲವು ವಾಣಿಜ್ಯ ಚಟುವಟಿಕೆಗಳನ್ನು ನಡೆಸುವುದಕ್ಕೆ ಕರ್ನಾಟಕ ಮಹಾನಗರ ಪಾಲಿಕೆಗಳ ಕಾಯಿದೆ 1976ರ ಸೆಕ್ಷನ್ 353ರ ಶೆಡ್ಯೂಲ್ ಫಿ ರ ಅನ್ವಯ ವಾಣಿಜ್ಯ ಪರವಾನಗಿಯು ಅಗತ್ಯವಾಗುತ್ತದೆ. ಇಂಥ ಅರ್ಜಿಯನ್ನು ಪರಿಗಣಿಸುವಾಗ ಆಯುಕ್ತರು 2015ರ ಪರಿಷ್ಕೃತ ಮಾಸ್ಟರ್ ಪ್ಲಾನ್ ಅಡಿಯಲ್ಲಿ

ಸೂಚಿಸಿರುವ ಸ್ಥಳ ಬಳಕೆಯನ್ನು ಪರಿಗಣಿಸಬೇಕಾದ ಅಗತ್ಯವಿದೆ.

ಪರಿಷ್ಕೃತ ಮಾಸ್ಟರ್ ಪ್ಲಾನಿಗೆ ಈ ತಿದ್ದುಪಡಿಗಳು ಮತ್ತು ಬಿಡಿಎ ಆಯುಕ್ತರು ಕರ್ನಾಟಕದ ಮಾನ್ಯ ಉಚ್ಚ ನ್ಯಾಯಾಲಯದ ಎದುರಲ್ಲಿ ಅಫಿಡೆವಿಟ್ ಸಲ್ಲಿಸಿದ ಹೊರತಾಗಿಯೂ ಬಿಬಿಎಂಪಿಯು ಕೆಲವು ವಸತಿ ಪ್ರದೇಶಗಳಲ್ಲಿ ವಾಣಿಜ್ಯ ಸಂಸ್ಥೆಗಳಿಗೆ ಅನುಮತಿ ನೀಡುವುದನ್ನು ಮುಂದುವರಿಸಿದ್ದು ಇದು 2015ರ ಪರಿಷ್ಕೃತ ಮಾಸ್ಟರ್ ಪ್ಲಾನ್ ಮತ್ತು ಬಿಡಿಎಯ ಮೇಲೆ ಹೇಳಲಾದ ಅಫಿಡೆವಿಟ್ಟಿನ ಉಲ್ಲಂಘನೆಯಾಗಿದೆ.

ಅಂಥ ಕೆಲವು ವಾಣಿಜ್ಯ ಸಂಸ್ಥೆಗಳ ಬಗ್ಗೆ ಈ ಕೆಳಗೆ ಕೊಡಲಾಗಿದೆ:

| ವಿಳಾಸ | ಸಂಸ್ಥೆಯ ಪ್ರಕಾರ |
|---|---|
| ಸಂ. 361, 6ನೇ ಮುಖ್ಯ ರಸ್ತೆ, 1ನೇ ಬ್ಲಾಕ್, ಕೋರಮಂಗಲ, ಬೆಂಗಳೂರು 560034 | ಸರ್ವಿಸ್ಡ್ ಅಪಾರ್ಟ್‌ಮೆಂಟ್ಸ್ |
| ಸಂ. 329, 5ನೇ ಮುಖ್ಯ ರಸ್ತೆ, 1ನೇ ಬ್ಲಾಕ್, ಕೋರಮಂಗಲ, ಬೆಂಗಳೂರು 560034 | ವ್ಯವಹಾರ: ರೆಡ್ ಬ್ಯಾರನ್ ಇಂಟರ್‌ನ್ಯಾಷನಲ್ |
| ಸಂ. 154, 8ನೇ ಮುಖ್ಯ ರಸ್ತೆ, ಜಕ್ಕಸಂದ್ರ ಬ್ಲಾಕ್, ಕೋರಮಂಗಲ, ಬೆಂಗಳೂರು 560034 | ವ್ಯವಹಾರ: ಬ್ರೆಕ್‌ಫಾಸ್ಟ್ ಕ್ಲಬ್, ತೇಜು ಬಾಟಿಕ್ |
| ಸಂ. 704, 6ನೇ ಬಿ ಅಡ್ಡರಸ್ತೆ, ಕೋರಮಂಗಲ 3ನೇ ಬ್ಲಾಕ್, ಬೆಂಗಳೂರು 560034 | ನಿರ್ಮಾಣ ಹಂತದಲ್ಲಿರುವುದು |
| ಸಂ. 736, 7ನೇ ಅಡ್ಡರಸ್ತೆ, ಕೋರಮಂಗಲ 3ನೇ ಬ್ಲಾಕ್, ಬೆಂಗಳೂರು 560034 | ನಿರ್ಮಾಣ ಹಂತದಲ್ಲಿರುವುದು |

ವಸತಿ ಎಂದು ಗುರುತಿಸಲಾಗಿರುವ ಪ್ರದೇಶದಲ್ಲಿ ತಲೆ ಎತ್ತಿರುವ ಈ ವಾಣಿಜ್ಯ ಅಭಿವೃದ್ಧಿಗಳು ಕಾನೂನುಬಾಹಿರವಾಗಿವೆ, ಏಕೆಂದರೆ ಅವು ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಲಾಗಿರುವ 2015ರ ಪರಿಷ್ಕೃತ ಮಾಸ್ಟರ್ ಪ್ಲಾನಿನಲ್ಲಿನ ಅಂಶಗಳಿಗೆ ಹಾಗೂ ಅಫಿಡೆವಿಟ್ ನಲ್ಲಿ ಸರ್ಕಾರ ಒಪ್ಪಿಕೊಂಡಿರುವುದಕ್ಕೆ ವಿರುದ್ಧವಾಗಿವೆ. ಕೋರಮಂಗಲದ ನಿವಾಸಿಗಳ ಹಿತಾಸಕ್ತಿ ಸಂಸ್ಥೆಗಳು ಈ

ಉಲ್ಲಂಘನೆಗಳನ್ನು ಲಿಖಿತವಾಗಿ ಬಿಬಿಎಂಪಿಯ ಗಮನಕ್ಕೆ ತರುವ ಮೂಲಕ ತಕ್ಷಣದ ಕ್ರಮಕ್ಕೆ ಕೋರುವುದಕ್ಕಾಗಿ ಪದೇ ಪದೇ ಪ್ರಯತ್ನಗಳನ್ನು ಕೈಗೊಂಡಿವೆ. ಸಾಕಷ್ಟು ಕಾಲಾವಕಾಶವನ್ನು ನೀಡಲಾಗಿದ್ದರೂ ಕೂಡ ಬಿಬಿಎಂಪಿಯು ಅರ್ಥಪೂರ್ಣವಾದ ಯಾವುದೇ ಕ್ರಮವನ್ನೂ ಕೈಗೊಂಡಿಲ್ಲ.

ಬಿಬಿಎಂಪಿಯ ಕಾರ್ಯನಿರ್ವಹಣಾಧಿಕಾರಿಯಾಗಿ ಅದರ ಆಯುಕ್ತರು ತಮ್ಮ ನಿಯಂತ್ರಣದಲ್ಲಿರುವ ಎಲ್ಲ ಕೆಳ ಅಧಿಕಾರಿಗಳ ಕ್ರಮ ಹಾಗೂ ನಿಷ್ಕ್ರಿಯತೆ ಎರಡಕ್ಕೂ ಅವರೇ ಜವಾಬ್ದಾರರು. ಮಾಹಿತಿ ಹಕ್ಕು ಕಾಯ್ದೆ 2005ರ ಒದಗಣೆಗಳ ಪ್ರಕಾರ ಸಲ್ಲಿಸಲಾಗಿರುವ ಅರ್ಜಿಯಂತೆ ಪಡೆಯಲಾಗಿರುವ ಅಧಿಕೃತ ದಾಖಲೆಗಳ ಪ್ರತಿಗಳ ಪ್ರಕಾರ ಕೋರಮಂಗಲದ ಜಕ್ಕಸಂದ್ರ ಬ್ಲಾಕಿನ 8ನೇ ಮುಖ್ಯರಸ್ತೆಯ ಪ್ಲಾಟ್ 154ರ "ಬ್ರೇಕ್‌ಫಾಸ್ಟ್ ಕ್ಲಬ್" ಎಂಬ ಸಂಸ್ಥೆಗೆ ವ್ಯಾಪಾರ ಪರವಾನಗಿಯನ್ನು ಒದಗಿಸುವುದಕ್ಕಾಗಿ ಬಿಬಿಎಂಪಿ ಆಯುಕ್ತವೇ ಸ್ವತಃ ಹಸ್ತಕ್ಷೇಪ ಮಾಡಿರುವುದಾಗಿ ತಿಳಿದುಬಂದಿದೆ. ವಾಸ್ತವವಾಗಿ ಬಿಬಿಎಂಪಿ ಆಯುಕ್ತರು ಡಿಸೆಂಬರ್ 1, 2014ರಂದು ವಾಣಿಜ್ಯ ಪರವಾನಗಿ ಪಡೆಯುವುದಕ್ಕಾಗಿ ಸಲ್ಲಿಸಲಾಗಿರುವ ಅರ್ಜಿಯಲ್ಲಿ "ವಾಣಿಜ್ಯ ಪರವಾನಗಿ ಪಡೆಯಲು ದಯವಿಟ್ಟು ಸಹಾಯ ಮಾಡಿ" ಎಂದು ಟಿಪ್ಪಣಿ ಹಾಕಿರುವುದು ಕಂಡುಬಂದಿದೆ. ಡಿಸೆಂಬರ್ 5, 2014ರಂದು ಬಿಬಿಎಂಪಿಯ ಆರೋಗ್ಯ ಅಧಿಕಾರಿಯು (ದಕ್ಷಿಣ) "ಬಿಬಿಎಂಪಿ ಆಯುಕ್ತರ ನಿರ್ದೇಶನದ ಪ್ರಕಾರ" ಎಂಬ ಟಿಪ್ಪಣಿಯೊಂದಿಗೆ ಪರವಾನಗಿಯನ್ನು ಹೊರಡಿಸಿರುತ್ತಾರೆ. ಈ ಸಂಸ್ಥೆಯು ವಸತಿ ಪ್ರದೇಶದಲ್ಲಿದ್ದು ಸ್ಥಳೀಯ ನಿವಾಸಿಗಳಿಗೆ ಗದ್ದಲವುಂಟುಮಾಡುವುದು ಎಂದು ಸ್ಥಳೀಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘವು ದೂರು ಸಲ್ಲಿಸಿ ಮೇಲಿನ ಪರವಾನಗಿಯನ್ನು ವಿರೋಧಿಸಿತ್ತು ಎಂಬುದನ್ನು ಈ ದಾಖಲೆಗಳನ್ನು ತೋರಿಸುತ್ತಿದ್ದು ಇವುಗಳ ಪ್ರತಿಗಳನ್ನು ಅನುಬಂಧ ಡಿಯಲ್ಲಿ ಲಗತ್ತಿಸಲಾಗಿದೆ.

ಬಿಬಿಎಂಪಿ ಆಯುಕ್ತರ ಕ್ರಮದಿಂದ ನಮಗೆ ಸ್ಪಷ್ಟವಾಗುವ ಅಂಶವೇನೆಂದರೆ, ಬೆಂಗಳೂರಿನ ನಿವಾಸಿಗಳ ಹಿತದ ವಿರುದ್ಧವಾಗಿ ಇಂಥ ಕಾನೂನುಬಾಹಿರ ಸಂಸ್ಥೆಗಳು ಸ್ಥಾಪನೆಗೊಳ್ಳಲು, ಕಾರ್ಯನಿರ್ವಹಣೆ ಮುಂದುವರಿಸಲು ಪರವಾನಗಿ ನೀಡುವುದು, ಇಂಥ ಸಂಸ್ಥೆಗಳನ್ನು ಪ್ರೋತ್ಸಾಹಿಸುವ ಬಿಬಿಎಂಪಿ ಆಯುಕ್ತರ ಕ್ರಮವು ಸ್ಪಷ್ಟಗೊಂಡಿದ್ದು ಇದು ವಸತಿ ಪ್ರದೇಶಗಳಲ್ಲಿ ಮಾಸ್ಟರ್ ಪ್ಲಾನ್ 2015ರ ಹಾಗೂ ಬಿಡಿಎಯು ಮಾನ್ಯ ಉಚ್ಚ ನ್ಯಾಯಾಲಯದೆದುರು ಸಲ್ಲಿಸಿದ ಅಫಿಡೆವಿಟ್‌ಗೆ ವಿರುದ್ಧವಾಗಿ ವಾಣಿಜ್ಯ ಚಟುವಟಿಕೆಗಳನ್ನು ಪ್ರೋತ್ಸಾಹಿಸುತ್ತದೆ.

ವಾಸ್ತವವಾಗಿ ಬಿಬಿಎಂಪಿ ಆಯುಕ್ತರು ವೈಯಕ್ತಿಕವಾಗಿ ಹಸ್ತಕ್ಷೇಪ ನಡೆಸಿದ್ದಾರೆ ಮತ್ತು ವಾಣಿಜ್ಯ ಸಂಸ್ಥೆಗಳಿಗೆ ವ್ಯಾಪಾರ ಪರವಾನಗಿಗಳನ್ನು ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ವಾಣಿಜ್ಯ ಮತ್ತು ನಿರ್ಮಾಣ ಹಿಸಾಸಕ್ತಿಗಳನ್ನು ಕಾಪಾಡುವುದಕ್ಕಾಗಿ ಈ ಕ್ರಮಗಳನ್ನು ಕೈಗೊಳ್ಳಲಾಗಿರುವುದು ಸ್ಪಷ್ಟವಾಗಿದ್ದು ಬೆಂಗಳೂರಿನ ನಾಗರೀಕರ ಹಿತಕ್ಕೆ ಕವಡೆ ಕಾಸಿನ ಕಿಮ್ಮತ್ತನ್ನೂ ನೀಡಲಾಗುತ್ತಿಲ್ಲ. ಇಂಥ ವಾಣಿಜ್ಯ ಮತ್ತು ನಿರ್ಮಾಣ ಹಿತಾಸಕ್ತಿಗಳಿಗೆ ನೆರವು ನೀಡುವ ಶ್ರೀ ಲಕ್ಷ್ಮೀ ನಾರಾಯಣ ಅವರ ಹಿಂದಿನ ಪ್ರೇರಣೆಗಳ ಬಗ್ಗೆ ಇದು ಪ್ರಶ್ನೆಗಳನ್ನೆಬ್ಬಿಸುತ್ತದೆ.

ಮೇಲಿನ ಕ್ರಮಗಳು ಮತ್ತು ಕ್ರಮ ಕೈಗೊಳ್ಳಲು ಬಿಬಿಎಂಪಿ ಆಯುಕ್ತರ ವೈಫಲ್ಯ ನೆಲದ ಕಾನೂನಿಗೆ ಮತ್ತು ಬೆಂಗಳೂರಿನ ನಾಗರೀಕರ ಹಿತಕ್ಕೆ ವ್ಯತಿರಿಕ್ತವಾಗಿದೆ

ಈ ಕ್ರಿಯೆಗಳು ಹಾಗೂ ಬಿಬಿಎಂಪಿಯ ಹಾಗೂ ಬಿಬಿಎಂಪಿ ಆಯುಕ್ತರ ಆಯ್ದ ನಿಷ್ಕ್ರಿಯತೆ ಉತ್ತಮ ನಗರಾಭಿವೃದ್ಧಿ ಮತ್ತು ನಗರ ಯೋಜನೆಗಾಗಿ ಬೆಂಗಳೂರಿನ ನಾಗರೀಕರ ಹಲವಾರು ವರ್ಷಗಳ ಪ್ರಯತ್ನವು ನೀರಿನಲ್ಲಿ ಹೋಮ ಎಂದಾಗುವಂತೆ ಮಾಡಿದೆ. ಈ ಹಿನ್ನೆಲೆಯಲ್ಲಿ ಐಪಿಸಿ ಮತ್ತು ಪಿಸಿ ಕಾಯಿದೆಯ ಕೆಳಗಿನ ಸೆಕ್ಷನ್ ಪ್ರಕಾರ ಶ್ರೀ ಲಕ್ಷ್ಮೀ ನಾರಾಯಣ ಅವರ ವಿರುದ್ಧ ತನಿಖೆ ಮಾಡುವುದು ಅನಿವಾರ್ಯವಾಗುತ್ತದೆ:

(ಎ) ಐಪಿಸಿಯ ಸೆಕ್ಷನ್ 166: ಸರ್ಕಾರಿ ಅಧಿಕಾರಿಯಾಗಿ ಕಾರ್ಯನಿರ್ವಹಿಸಬೇಕಾದ ರೀತಿಯಲ್ಲಿ ಕೆಲಸ ಮಾಡದೇ ಕಾನೂನನ್ನು ತಿಳಿದೂ ಉಲ್ಲಂಘಿಸಿರುವುದು, ಸಾರ್ವಜನಿಕರಿಗೆ ಹಾನಿಯಾಗುವುದೆಂದು ತಿಳಿದೂ ಈ ಕೃತ್ಯವನ್ನು ಮಾಡಿರುವುದು.

(ಬಿ) ಐಪಿಸಿಯ ಸೆಕ್ಷನ್ 167: ಸಾರ್ವಜನಿಕರಿಗೆ ಹಾನಿಯಾಗುವ ರೀತಿಯಲ್ಲಿ ಉದ್ದೇಶಪೂರ್ವಕವಾಗಿ ತಿಳಿದೂ ತಪ್ಪಾದ ರೀತಿಯಲ್ಲಿ ದಾಖಲೆಯೊಂದನ್ನು ಅರ್ಥೈಸುವುದು, ಈ ಮೂಲಕ ಸಾರ್ವಜನಿಕರಿಗೆ ಹಾನಿ ಮಾಡಿರುವುದಕ್ಕಾಗಿ ಸರ್ಕಾರಿ ಅಧಿಕಾರಿಯ ಮೇಲೆ ಮೊಕದ್ದಮೆ ಹೂಡುವುದು.

(ಸಿ) ಪಿಸಿ ಕಾಯಿದೆಯ ಸೆಕ್ಷನ್ 13(1): ಅಪರಾಧ ನಡವಳಿಕೆ, ಕಾನೂನುಬಾಹಿರವಾದ ರೀತಿಯಲ್ಲಿ ಪ್ರಯೋಜನ ಪಡೆಯುವುದು ಮತ್ತು ಸರ್ಕಾರಿ ಅಧಿಕಾರಿಯ ಹುದ್ದೆಯನ್ನು ದುರ್ಬಳಕೆ ಮಾಡಿಕೊಳ್ಳುವುದು.

ಇಲ್ಲಿನ ಅಪರಾಧಗಳು ಗಂಭೀರ ಪ್ರಮಾಣದವುಗಳಾಗಿದ್ದರೂ ಕೂಡ ಲಕ್ಷ್ಮೀ ನಾರಾಯಣ ಹಾಗೂ ಇನ್ನಿತರ ಅಧಿಕಾರಿಗಳ ವಿರುದ್ಧ ಯಾವುದೇ ಕ್ರಮಗಳನ್ನೂ

ಜರುಗಿಸಲಾಗಿಲ್ಲ ಎಂಬುದನ್ನು ಗಮನಿಸಬೇಕು.

ಶ್ರೀ ಲಕ್ಷ್ಮೀ ನಾರಾಯಣ ಅವರು ಐಪಿಸಿಯ ಸೆಕ್ಷನ್ 21ರ ಹಾಗೂ ಪಿಸಿ ಕಾಯಿದೆ ಸೆಕ್ಷನ್ 2(ಸಿ) ಅರ್ಥವ್ಯಾಪ್ತಿಯೊಳಗೆ ಬರುವ "ಸರ್ಕಾರಿ ಅಧಿಕಾರಿ".

ಪ್ರಸಕ್ತ ಪ್ರಕರಣದ ವಾಸ್ತವಾಂಶಗಳು ಮತ್ತು ಸನ್ನಿವೇಶಗಳು ಈ ವಿಷಯವನ್ನು ಸಮಗ್ರವಾಗಿ ತನಿಖೆ ಮಾಡುವುದು ಮತ್ತು ಪರಿಶೀಲನೆ ನಡೆಸುವುದು ಸಾರ್ವಜನಿಕರ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿದೆ.

ಹೀಗಾಗಿ ಪ್ರಸಕ್ತ ಪತ್ರವು ಶ್ರೀ ಲಕ್ಷ್ಮೀ ನಾರಾಯಣ ಅವರನ್ನು ವಿಚಾರಣೆ ನಡೆಸುವುದಕ್ಕಾಗಿ ಅನುಮತಿಯನ್ನು ಕೋರುತ್ತದೆ, ಏಕೆಂದರೆ ಶ್ರೀ ಲಕ್ಷ್ಮೀನಾರಾಯಣ ಅವರ ಮೇಲೆ ಆರೋಪಿಸಲಾದ ಆರೋಪಗಳು ಸರ್ಕಾರಿ ಅಧಿಕಾರಿಯಾಗಿ ಕೆಳಗಿನಂತೆ ಅವರ ಅಧಿಕಾರ ದುರುಪಯೋಗಕ್ಕೆ ಸಂಬಂಧಿಸಿವೆ. ಸರ್ಕಾರದ ಆಡಳಿತದಲ್ಲಿ ಪಾರದರ್ಶಕತೆಯನ್ನು ತರುವುದಕ್ಕಾಗಿ ಮತ್ತು ಬೆಂಗಳೂರಿನ ನಾಗರೀಕರ ಹಿತವನ್ನು ಕಾಯುವ ದೃಷ್ಟಿಯಿಂದ ಅಂಥ ನಿರ್ಬಂಧ ಅಗತ್ಯವಾಗುತ್ತದೆ.

ನಮ್ಮ ದೃಷ್ಟಿಯಲ್ಲಿ ಅಪರಾಧ ದಂಡ ಸಂಹಿತೆಯ ಸೆಕ್ಷನ್ 19 ಅಪರಾಧ ಕಾಯಿದೆ ಸೆಕ್ಷನ್ 19 ರ ಪ್ರಕಾರ ಐಒಸಿ ಸೆಕ್ಷನ್ 166 ಹಾಗೂ 167 ಅಡಿ ಮತ್ತು ಅಪರಾಧ ಕಾಯಿದೆಯ ಸೆಕ್ಷನ್ 13(1)(ಜ) ಪ್ರಕಾರ ನಿರ್ಬಂಧ ಹೇರುವುದಕ್ಕೆ ಇದೊಂದು ಅರ್ಹವಾದ ಪ್ರಕರಣವಾಗಿದೆ ಹಾಗೂ ನಿರ್ಬಂಧದ ವಿನಂತಿಯನ್ನು ಮನ್ನಿಸಬೇಕು. ಹೆಚ್ಚಾಗಿ ಯಾವುದೇ ರೀತಿಯಲ್ಲಿ ತನಿಖೆಗೆ ಸಹಕರಿಸಲು ನಾವು ಸಿದ್ಧರಾಗಿದ್ದೇವೆ ಮತ್ತು ಅಗತ್ಯವಿರುವ ಯಾವುದೇ ಮಾಹಿತಿ ಅಥವಾ ಸ್ಪಷ್ಟೀಕರಣವನ್ನು ನಿಮಗೆ ನೀಡಬಲ್ಲೆವು.

ನಿಮಗೆ ಯಾವುದೇ ಹೆಚ್ಚಿನ ಸ್ಪಷ್ಟೀಕರಣಗಳು ಅಗತ್ಯವಿದ್ದಲ್ಲಿ ದಯವಿಟ್ಟು ಕೆಳಗೆ ಸಹಿಮಾಡಿರುವವರನ್ನು ಸಂಪರ್ಕಿಸಿ.

ಲಗತ್ತಿಸಿದೆ: ಮೇಲಿನಂತೆ.

ಇವರಿಗೆ ಪ್ರತಿಗಳು:
ಶ್ರೀ ರಾಮಲಿಂಗ ರೆಡ್ಡಿ
ಸಾರಿಗೆ ಮತ್ತು ಬೆಂಗಳೂರು ಜಿಲ್ಲಾ ಉಸ್ತುವಾರಿ ಸಚಿವರು
ಕರ್ನಾಟಕ ಸರ್ಕಾರ,
ವಿಧಾನ ಸೌಧ

ಬೆಂಗಳೂರು–560001

ಶ್ರೀ ರಾಜೀವ್ ಚಂದ್ರಶೇಖರ್
ಸಂಸತ್ ಸದಸ್ಯರು,
ರಾಜ್ಯ ಸಭೆ
11 ನೇ ಮಹಡಿ,
ವಿಶ್ವೇಶ್ವರಯ್ಯ ಟವರ್ಸ್,
ಡಾ. ಅಂಬೇಡ್ಕರ್ ರಸ್ತೆ,
ಬೆಂಗಳೂರು–560001

ಶ್ರೀ ಟಿ. ಕೆ. ಅನಿಲ್ ಕುಮಾರ್
ಕರ್ನಾಟಕ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ
ವಿಕಾಸ ಸೌಧ,
ಬೆಂಗಳೂರು

ಇವರಿಗೆ,
ಶ್ರೀ ಡಿ. ಸತ್ಯಮೂರ್ತಿ
ಕರ್ನಾಟಕ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ
ಹೆಚ್ಚುವರಿ ಮುಖ್ಯ ಕಾರ್ಯದರ್ಶಿ
ವಿಕಾಸ ಸೌಧ,
ಬೆಂಗಳೂರು

# 24

# ಡಿ. ಕೆ. ರವಿಯವರ ಮೃತ್ಯು ಮತ್ತು ಆಡಳಿತದ ಕುರಿತು ಮುಖ್ಯಮಂತ್ರಿಯವರಿಗೆ ಪತ್ರ

30ನೇ ಮಾರ್ಚ್, 2015

ಶ್ರೀ ಸಿದ್ಧರಾಮಯ್ಯನವರೇ,

ಬೆಂಗಳೂರನ್ನು ಪ್ರತಿನಿಧಿಸುವ ಸಂಸತ್ ಸದಸ್ಯನಾಗಿ, ಬೆಂಗಳೂರಿನ ನಾಗರೀಕನಾಗಿ ಇಂದು ಈ ಪತ್ರವನ್ನು ಬರೆಯುತ್ತಿದ್ದು ಭ್ರಷ್ಟ ಹಾಗೂ ಪಟ್ಟಭದ್ರ ಹಿತಾಸಕ್ತಿಗಳು ಗೊಂದಲ ಸೃಷ್ಟಿಸುತ್ತ ಸನ್ನಿವೇಶವನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವ ಬಗ್ಗೆ ನಿಮ್ಮ ಗಮನ ಸೆಳೆಯಲಿಚ್ಛಿಸುತ್ತೇನೆ.

ನಗರವು ಎದುರಿಸುತ್ತಿರುವ ತೊಂದರೆಗಳ ಕುರಿತು ತಮ್ಮ ಗಮನ ಸೆಳೆಯುವುದಕ್ಕಾಗಿ ನಾನು ನಿಮಗೆ ಹಿಂದೆಯೂ ಹಲವಾರು ಪತ್ರಗಳನ್ನು ಬರೆದಿರುತ್ತೇನೆ ಮತ್ತು ನಿಮ್ಮನ್ನು ಸ್ವತಃ ಮಧ್ಯಪ್ರವೇಶಿಸಿ ನಗರದ ಸ್ಥಿತಿಯನ್ನು ಬದಲಿಸುವಂತೆ ಆಗ್ರಹಿಸಿರುತ್ತೇನೆ. ಆದರೆ ಇಂದಿನವರೆಗೂ ನೀವು ನಮ್ಮ ನಗರಕ್ಕಾಗಿ, ನಗರವನ್ನು ಸ್ವಚ್ಛಗೊಳಿಸುವುದಕ್ಕಾಗಿ ಹಾಗೂ ಇಲ್ಲಿ ರಾಜಾರೋಷವಾಗಿ ಬೇರೂರಿರುವ ಭ್ರಷ್ಟಾಚಾರವನ್ನು ನಿಗ್ರಹಿಸುವುದಕ್ಕಾಗಿ ಏನನ್ನೂ ಮಾಡಿರುವುದಿಲ್ಲ

ಡಿಕೆ ರವಿಯವರ ಸಾವು ಮತ್ತು ಅದರ ನಂತರ ರಾಜಾರೋಷವಾಗಿರುವ ಭ್ರಷ್ಟಾಚಾರ, ಅಪಾರದರ್ಶಕತೆ ಮತ್ತು ನಗರದ ಆಡಳಿತವನ್ನು ಪಟ್ಟಭದ್ರ ಹಿತಾಸಕ್ತಿಗಳು ನಡೆಸುತ್ತಿರುವ ಬಗ್ಗೆ ಸಾರ್ವಜನಿಕರ ಆಕ್ರೋಶ ನಾಗರೀಕರ ನಡುವೆ ಸರ್ವವ್ಯಾಪಿಯಾಗಿದೆ. ಈ ಅಧಿಕಾರಿಯ ಬೇಡವಾಗಿದ್ದ ಸಾವಿನ ಕುರಿತು ತನಿಖೆಗಳಷ್ಟೇ ನಮಗೆ ಹೆಚ್ಚಿನ ವಿಷಯ ತಿಳಿಸಬಹುದಾಗಿದ್ದು, ಈ ವಿಷಯದ ಬಗ್ಗೆ ಎದ್ದಿರುವ ಜನಾಕ್ರೋಶವು ಗಮನ ಹರಿಸಬೇಕಾದ ವಿಷಯವಾಗಿದೆ. ಅವರು ಸಾವನ್ನಪ್ಪಿರುವುದಕ್ಕಿಂತ ಅವರು ಏತಕ್ಕಾಗಿ ಬದುಕಿದರು ಎಂಬುದರ ಬಗ್ಗೆ ಗಮನಿಸಬೇಕಾಗಿದೆ. ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ ಧೈರ್ಯದಿಂದ ಅವರು ಹೋರಾಡಿದರು. ತಮ್ಮ ಮುಖ್ಯಮಂತ್ರಿಯಾಗಿ ನಿಮ್ಮನ್ನು ನಾಗರೀಕರು ವಿನಂತಿಸುವುದೂ ಇದನ್ನೇ.

ಬೆಂಗಳೂರಿನಲ್ಲಿ ಈ ಬಗೆಯ ರಾಜಾರೋಷ ಲೂಟಿ ಮತ್ತು ಹಿತಾಸಕ್ತಿಯ ಸಂಘರ್ಷದ ಬಗ್ಗೆ ಜನರ ಅಸಹನೆಯ ಬಗಗೆ ನಿಮಗೆ ಎಚ್ಚರಿಸಲು ನಾನು ನಿಮಗೆ ಈ ಪತ್ರವನ್ನು ಬರೆಯುತ್ತಿದ್ದೇನೆ. ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರದಲ್ಲಿರುವ ಹಲವರು ಮತ್ತು ಸ್ವತಃ ಸರಕಾರ ಲಜ್ಜೆಗೆಟ್ಟ ಭ್ರಷ್ಟಾಚಾರದಿಂದಾಗಿ ಮತ್ತು ಬದಲಾವಣೆಗೆ ಜನರ ಕರೆಗಳನ್ನು ನಿರ್ಲಕ್ಷಿಸಿದ  ಪರಿಣಾಮವಾಗಿ ಯಾವ ಅಧೋಗತಿ ತಲುಪಿತು ಎಂಬುದನ್ನು ಗೌರವಾನ್ವಿತವಾಗಿ ನೆನಪಿಸಲು ನಾನು ಬಯಸುತ್ತೇನೆ. ಇಂದಿನ ರಾಜಕೀಯ ಮತ್ತು ಪ್ರಜಾಪ್ರಭುತ್ವದ ವಾಸ್ತವ ಎಂದರೆ, ಯಾವುದೇ ರಾಜಕೀಯ ಚಳುವಳಿ ಅಥವಾ ಸರಕಾರವು ತಾನು ಸೇವೆ ಸಲ್ಲಿಸಬೇಕಾದ ಜನರ ವಿಶ್ವಾಸವನ್ನು ಕಳೆದುಕೊಳ್ಳುವಂತಿಲ್ಲ. ನಿಮ್ಮ ಸರ್ಕಾರ ಎಲ್ಲ ಜನರಿಗಾಗಿ ಮತ್ತು ಜನರಿಂದ ಚುನಾಯಿತಗೊಂಡಿದ್ದು ಜನರದ್ದೇ ಆಗಿದೆ, ಪಟ್ಟಭದ್ರ ಹಿತಾಸಕ್ತಿಗಳದ್ದಲ್ಲ, ಪಟ್ಟಭದ್ರ ಹಿತಾಸಕ್ತಿಗಳಿಗಾಗಿಯಲ್ಲ ಮತ್ತು ಅವರಿಂದ ಚುನಾಯಿತಗೊಳ್ಳಲೂ ಇಲ್ಲ – ಆದರೆ ಅದು ಹೀಗೇ ಆಗಿರುವಂತೆ ತೋರುತ್ತಿದೆ.

ಈ ವರ್ಷದುದ್ದಕ್ಕೂ ನಾನು ಬೆಂಗಳೂರನ್ನು ಪ್ರತಿನಿಧಿಸಿದ್ದೇನೆ, ಆಡಳಿತ ಸುಧಾರಣೆಗಳಿಗೆ ಹೊಸ ವಿಧಾನದೊಂದಿಗೆ ಭ್ರಷ್ಟಾಚಾರಕ್ಕೆ ಯಾವುದೇ ಸಹಿಷ್ಣುತೆ ಬೇಡವೆಂದು ನಾನು ಕೋರಿದೆ. ಮುಖ್ಯಮಂತ್ರಿಯಾಗಿ ಮತ್ತು ಸರ್ಕಾರದ ಮುಖ್ಯಸ್ಥರಾಗಿ ನಿಮ್ಮ ಜವಾಬ್ದಾರಿಯನ್ನು ಪೂರೈಸಲು ಈ ಕೆಳಗಿನ ಕ್ರಮಗಳನ್ನು ತಕ್ಷಣ ಜಾರಿಗೊಳಿಸಲು ನಾನು ನಿಮ್ಮನ್ನು ಕೇಳಿಕೊಳ್ಳುತ್ತೇನೆ.

1. ಭೂ ವ್ಯವಹಾರಗಳು ಮತ್ತು ಒಪ್ಪಂದಗಳನ್ನು ಸಂಪೂರ್ಣವಾಗಿ ಪಾರದರ್ಶಕವಾಗಿ ಮಾಡಿ: ಸಾರ್ವಜನಿಕ ಒಪ್ಪಂದಗಳು ಮತ್ತು ಭೂಮಿಯ

ನೋಟಿಫಿಕೇಷನ್/ಡಿನೋಟಿಫಿಕೇಷನ್ ಕ್ರಮಗಳು ಭ್ರಷ್ಟಾಚಾರ ಮತ್ತು ರಾಜಕೀಯ ಹಣಕಾಸಿನ ಮೂಲಗಳಾಗಿವೆ. ನಿಮ್ಮ ಸರ್ಕಾರ ಇದನ್ನು ಬದಲಿಸಲು ಏನೂ ಮಾಡಲಿಲ್ಲ ಮತ್ತು ಪ್ರಮುಖ ಗುತ್ತಿಗೆದಾರರು, ರಿಯಲ್ ಎಸ್ಟೇಟ್ ಯೋಜನೆಗಳು ಮತ್ತು ನಿರ್ಮಾಣಗಾರರಿಗೆ ಪ್ರಯೋಜನ ನೀಡುವುದನ್ನು ಮುಂದುವರೆಸುವ ಆರೋಪ ಹೊತ್ತಿದೆ. ಕಾಲಕಾಲಕ್ಕೆ ಲೆಕ್ಕಪರಿಶೋಧನೆ ಸೇರಿದಂತೆ ಒಪ್ಪಂದ ಮತ್ತು ಭೂ ವ್ಯವಹಾರಗಳೆರಡರಲ್ಲಿ ಸಂಪೂರ್ಣ ಪಾರದರ್ಶಕತೆ, ಅತ್ಯಗತ್ಯವಾಗಿರುತ್ತದೆ. ಸಿಎಜಿ ಮೂಲಕ ತೆರಿಗೆದಾರರ/ಸಾರ್ವಜನಿಕರ ಹಣ ಮತ್ತು ಭೂಮಿಯನ್ನು ಸರ್ಕಾರವು ಹೇಗೆ ಬಳಸುತ್ತಿದೆ ಎಂಬುದು ತಿಳಿಯುವ ರೀತಿಯಲ್ಲಿ ಇದನ್ನು ನಡೆಸಬೇಕು. ಮಧ್ಯಂತರ ನೋಟಿಫಿಕೇಷನ್/ಡಿನೋಟಿಫಿಕೇಷನ್ ಪ್ರಕ್ರಿಯೆಯ ಮೇಲೆ ಸಂಪೂರ್ಣ ನಿಷೇಧ ಹೇರಬೇಕು ಮತ್ತು ಶಾಲೆಗಳು, ಉದ್ಯಾನವನಗಳು, ಆಸ್ಪತ್ರೆಗಳು ಮುಂತಾದ ಸಮರ್ಥನೀಯ ಮತ್ತು ಕಾನೂನುಬದ್ಧವಾಗಿ ಸಮರ್ಥನೀಯ ಸಾರ್ವಜನಿಕ ಹಿತಾಸಕ್ತಿಗಳಿಗೆ ಮಾತ್ರ ಅಂಥ ನೋಟಿಫಿಕೇಷನ್/ಡಿನೋಟಿಫಿಕೇಷನ್ ಪ್ರಕ್ರಿಯೆ ಅನುಮತಿಸಬೇಕು. ಖಾಸಗಿ ವಾಣಿಜ್ಯ ಹಿತಾಸಕ್ತಿಗಳಲ್ಲ.

ಭೂಮಿ ನಿರ್ವಹಣೆಯ ಪ್ರಸ್ತುತ ಪ್ರಕ್ರಿಯೆಯನ್ನು ಸರಕಾರ ಸ್ಥಗಿತಗೊಳಿಸಬೇಕು ಮತ್ತು ಅದನ್ನು ಪಾರದರ್ಶಕ ಮತ್ತು ಬಹಿರಂಗಪಡಿಸುವಿಕೆಯನ್ನು ಪ್ರಮುಖವಾಗಿ ಉಳ್ಳ ಪ್ರಕ್ರಿಯೆಯಾಗಿ ಬದಲಿಸಬೇಕು.

2. ಬೆಂಗಳೂರು ಅಭಿವೃದ್ಧಿಗೆ ಯೋಜಿತ ಕ್ರಿಯೆ: ಪಾರದರ್ಶಕ ಸಾರ್ವಜನಿಕ ಸಮಾಲೋಚನೆಯ ಮೂಲಕ ಶಾಸನಬದ್ಧ ಅಭಿವೃದ್ಧಿ ಯೋಜನೆಯನ್ನು ಅಳವಡಿಸಿಕೊಳ್ಳಿ. ಪಟ್ಟಭದ್ರ ಹಿತಾಸಕ್ತಿಗಳು, ಭ್ರಷ್ಟ ರಾಜಕಾರಣಿಗಳು ಮತ್ತು ಅಧಿಕಾರಿಗಳು ಯೋಜನೆಗಳನ್ನು ಇಷ್ಟಪಡುವುದಿಲ್ಲ. ಏಕೆಂದರೆ ಅವು ಅಧಿಕಾರಿಗಳ ವಿವೇಚನೆ, ವ್ಯವಹಾರಗಳು ಅಥವಾ ಪಕ್ಷಪಾತಗಳಿಗೆ ಯಾವುದೇ ಅವಕಾಶ ನೀಡುವುದಿಲ್ಲ. ಆಡಳಿತದಲ್ಲಿ ಪಾರದರ್ಶಕತೆಯ ಕೊರತೆ, ಮಧ್ಯಂತರ ಗುತ್ತಿಗೆ ವ್ಯವಸ್ಥೆ ಮತ್ತು ಅಭಿವೃದ್ಧಿಯನ್ನು ಹಣವೇ ಪ್ರಧಾನವಾಗಿ ನುಂಗಿ ಹಾಕಿರುವುದು – ಈ ಎಲ್ಲ ಸಮಸ್ಯೆಗಳಿಗೆ ಶಾಸನಬದ್ಧ ಯೋಜನೆ ರೂಪಿಸುವಿಕೆಯ ಕೊರತೆಯೇ ನೇರವಾಗಿ ಕಾರಣವಾಗಿದೆ. ಇದರಲ್ಲಿ ನಿಮ್ಮ ಸರಕಾರದ ಪ್ರಯತ್ನದ ಕೊರತೆಯು ಪಟ್ಟಭದ್ರ ಹಿತಾಸಕ್ತಿಗಳಿಗೆ ಮಾತ್ರವೇ ಪ್ರೋತ್ಸಾಹದಾಯಕ ಸಂದೇಶವನ್ನು ಕಳುಹಿಸುತ್ತದೆ. ಭ್ರಷ್ಟಾಚಾರವನ್ನು ಅಂತ್ಯಗೊಳಿಸಲು ಬದ್ಧವಾಗಿರುವ ಸರ್ಕಾರವು ಸರಿಯಾದ ನಾಗರೀಕ ಸಮಾಲೋಚನೆಯ ಮೂಲಕ ರೂಪುಗೊಂಡ ಸಮಗ್ರ,

ಬಹು–ವರ್ಷಗಳ, ಶಾಸನಬದ್ಧ ಯೋಜನೆ ರೂಪಿಸಲು ಪ್ರಯತ್ನಿಸಬೇಕು.

3. ಮೆಟ್ರೊಪಾಲಿಟನ್ ಯೋಜನೆ ಸಮಿತಿಯ (ಎಂಪಿಸಿ) ಮರುರಚನೆ ಮತ್ತು ಸಕ್ರಿಯಗೊಳಿಸುವುದು: ಚುನಾಯಿತ ಪ್ರತಿನಿಧಿಗಳು ಮತ್ತು ಆಡಳಿತಾಧಿಕಾರಿಗಳ ವಿವೇಚನೆಯ ತೀರ್ಮಾನಗಳನ್ನು ಎದುರಿಸಲು ಎಂಪಿಸಿ ಪರಿಣಾಮಕಾರಿಯಾದ ಮಾರ್ಗವಾಗಿದೆ. ಆದರೂ, ನಿಮ್ಮ ಸರ್ಕಾರವು ಎಂಪಿಸಿ ಮೂಲಕ ಪಾರದರ್ಶಕತೆಯನ್ನು ಹೆಚ್ಚಿಸುವುದರ ಲಾಭ ಪಡೆಯಲು ವಿಫಲವಾಗಿದೆ ಎಂಬುದು ಪರಿಸ್ಥಿತಿಯ ವ್ಯಂಗ್ಯ. ಕಳೆದ ವರ್ಷ ಎಂಪಿಸಿಯನ್ನು ಆಯ್ಕೆ ಮಾಡುವ ಮೂಲಕ ನಿಮ್ಮ ಸರ್ಕಾರವು ಆರಂಭಿಕ ಕ್ರಮಗಳನ್ನು ಕೈಗೊಂಡಿತಾದರೂ, ನಂತರ ಅದು ನಿಷ್ಕ್ರಿಯ ಅಂಗವೆಂದು ಸಾಬೀತಾಯಿತು. ಅದು ಚುನಾಯಿತವಾದಾಗಿನಿಂದ ಒಂದೇ ಒಂದು ಸಭೆ ನಡೆಸಿಲ್ಲ ಮತ್ತು 20 ಚುನಾಯಿತ ಸದಸ್ಯರ ಸಭೆಗಾಗಿ ಒಂದು ಕೊಠಡಿಯನ್ನು ಸಹ ನೀಡಲಾಗಿಲ್ಲ! ಎಂಪಿಸಿಗೆ ಮಾಜಿ ಅಧಿಕಾರಿಯೊಬ್ಬರನ್ನು ಅಧ್ಯಕ್ಷರಾಗಿ ಮಾಡಿ ಹೊಸ ಬಿಬಿಎಂಪಿ ಚುನಾವಣೆಗಳಿಗೆ ಅವಕಾಶ ನೀಡಿದ ಬಳಿಕ ಎಂಪಿಸಿ ಮರುರಚನೆ ಮಾಡಲು ನಾನು ನಿಮ್ಮನ್ನು ಕೇಳಿಕೊಳ್ಳುತ್ತೇನೆ. ಏಕೆಂದರೆ ಚುನಾವಣೆಯ ನಂತರ ಎಂಪಿಸಿಯ ಸ್ವತಂತ್ರ ಮತ್ತು ಪರಿಣಾಮಕಾರಿ ಕಾರ್ಯನಿರ್ವಹಣೆಗೆ ಸ್ವಾತಂತ್ರ್ಯ ಮತ್ತು ಸಂಪನ್ಮೂಲಗಳು ಲಭ್ಯವಾಗಬಹುದು.

4. ಚುನಾಯಿತ ಪ್ರತಿನಿಧಿಗಳಿಗೆ ಮತ್ತು ಅಧಿಕಾರಿಗಳಿಗೆ ಒಂದು ನೀತಿ ಸಂಹಿತೆಯನ್ನು ರಚಿಸುವುದು: ಬೆಂಗಳೂರಿನಲ್ಲಿ ಪ್ರತಿಯೊಬ್ಬ ಬಿಲ್ಡರ್ ಮತ್ತು ಗುತ್ತಿಗೆದಾರರ ಹಿಂದೆ ಎಂ.ಎಲ್.ಎ ಅಥವಾ ಸಚಿವರ ಹಿತಾಸಸಕ್ತಿಯ ಸಂಘರ್ಷದಲ್ಲಿ ಕೆಲಸ ಮಾಡುತ್ತದೆ ಎಂದು ನಾನು ಹೇಳುತ್ತೇನೆ. ಸಾರ್ವಜನಿಕ ಜೀವನದಲ್ಲಿದ್ದು ಅಥವಾ ಸರ್ಕಾರದಲ್ಲಿದ್ದು ಗುತ್ತಿಗೆಗಳಿಂದ ಅಥವಾ ಯಾವುದೇ ಸಾರ್ವಜನಿಕ ಸ್ವತ್ತುಗಳಿಂದ ಪ್ರಯೋಜನ ಪಡೆಯುವುದನ್ನು ನೀವು ಕಾನೂನುಬಾಹಿರ ಮತ್ತು ಅಪರಾಧವೆಂದು ಪರಿಗಣಿಸಬೇಕಿದೆ. ಚುನಾಯಿತ ಪ್ರತಿನಿಧಿಗಳನ್ನು ಅವರು ಸ್ವಚ್ಛ ವ್ಯವಹಾರ ಇಟ್ಟುಕೊಳ್ಳಬೇಕು ಮತ್ತು ಯಾವುದೇ ಹಿತಾಸಕ್ತಿ ಸಂಘರ್ಷವನ್ನು ಬಹಿರಂಗಪಡಿಸಬೇಕು ಎಂದು ಎಚ್ಚರಿಕೆ ನೀಡಬೇಕು. ಇಲ್ಲದಿದ್ದಲ್ಲಿ ಯುಪಿಎದಲ್ಲಿ ಹಲವಾರು ಸಚಿವರು ಏನು ಮಾಡಿದರೋ ಅದೇ ರೀತಿ ಕಾನೂನಿನ ಉಲ್ಲಂಘನೆ ನಡೆಯುವುದು. ಭ್ರಷ್ಟಾಚಾರ ಮತ್ತು/ಅಥವಾ ನಿರ್ಲಕ್ಷ್ಯ ಪ್ರಕರಣಗಳು ಕಂಡುಬಂದಾಗ ಬಿಬಿಎಂಪಿ ಆಯುಕ್ತರು ಸೇರಿದಂತೆ ನಗರದ ಸರ್ಕಾರಿ ಸಂಸ್ಥೆಗಳಲ್ಲಿನ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಜವಾಬ್ದಾರರಾಗಿ ಮಾಡಬೇಕು.

5. ಅಕ್ರಮ ಸಕ್ರಮದಂತಹ ಯೋಜನೆಗಳ ಮೂಲಕ ಕಾನೂನು ಮುರಿಯುವವರಿಗೆ ಪುರಸ್ಕಾರ ನೀಡುವುದನ್ನು ನಿಲ್ಲಿಸಿ: ಬೆಂಗಳೂರಿನ ಭ್ರಷ್ಟ ರಾಜಕೀಯದಲ್ಲಿ ಭೂಮಿಯ ದುರ್ಬಳಕೆ ಮತ್ತು ಭೂಮಿಯ ಅವ್ಯವಹಾರಗಳು ಪ್ರಮುಖವಾಗಿವೆ. ಅಕ್ರಮ ಸಕ್ರಮದಂತಹ ಕಾನೂನುಗಳೊಂದಿಗೆ ಸರ್ಕಾರವು ಭ್ರಷ್ಟಾಚಾರದ ಈ ಸಂಸ್ಕೃತಿಯನ್ನು ಉತ್ತೇಜಿಸುತ್ತಿದೆ ಮತ್ತು ಸಕ್ರಿಯವಾಗಿ ಪುರಸ್ಕರಿಸುತ್ತಿದೆ. ಅಕ್ರಮ ಸಕ್ರಮ ಪ್ರಸ್ತುತ ರೂಪದಲ್ಲಿ ಕಳುಹಿಸುವ ಸಂದೇಶವು ಸಾಕಷ್ಟು ಸ್ಪಷ್ಟವಾಗಿದೆ: ಕಾನೂನು ಪಾಲಿಸುವ ನಾಗರೀಕರಿಗಿಂತ ಕಾನೂನು ಭಂಜಕನಾಗಿರುವುದು ಉತ್ತಮ ಅಕ್ರಮ ಸಕ್ರಮ ಬಡವರಿಗೆ ಮಾತ್ರ ಮತ್ತು ಬಿಲ್ಡರುಗಳಿಗಲ್ಲ ಎಂಬುದನ್ನು ಖಾತ್ರಿಪಡಿಸುವ ಪರಿಷ್ಕೃತ ಪ್ರಸ್ತಾಪವನ್ನು ಪರಿಗಣಿಸಲು ನಾನು ಪುನರಾವರ್ತಿತವಾಗಿ ನಿಮ್ಮನ್ನು ಒತ್ತಾಯಿಸಿದ್ದೇನೆ. ಬಡವರ ಬಗ್ಗೆ ಸರ್ಕಾರಕ್ಕೆ ನಿಜವಾದ ಕಾಳಜಿಯಿದ್ದರೆ, ಬಡವರು ಮತ್ತು ನಿಜವಾದ ಯೋಗ್ಯರು ಲಾಭ ಪಡೆವುದನ್ನು ಖಚಿತಪಡಿಸಿಕೊಳ್ಳಲು ಬಲವಾದ ಅರ್ಹತೆಯ ಮಾನದಂಡವನ್ನು ಖಾತ್ರಿಪಡಿಸಿಕೊಳ್ಳಲು ಅಕ್ರಮ ಸಕ್ರಮ ಯೋಜನೆಯೊಂದನ್ನು ಅದು ಪರಿಷ್ಕರಿಸಬೇಕು. ಬಿಡಬ್ಲ್ಯುಎಸ್ಎಸ್ ಬಿ ಮತ್ತು ಬೆಸ್ಕಾಂ ರಾಜಕೀಯವಾಗಿ ಸಂಪರ್ಕ ಹೊಂದಿದ ಅನೇಕ ಯೋಜನೆಗಳಿಂದಾಗಿ ಹಾನಿಗೊಳಗಾದವು. ಸರ್ಕಾರವು ಈ ಸೋರಿಕೆಗಳು ಮತ್ತು ಅಕ್ರಮಗಳ ಲೆಕ್ಕಪರಿಶೋಧನೆ ನಡೆಸಬೇಕು, ಏಕೆಂದರೆ ಕಾನೂನು ಪಾಲಿಸುವ ನಾಗರೀಕರು ಭ್ರಷ್ಟಾಚಾರದ ಈ ಕಾರ್ಯಗಳಿಗಾಗಿ ಪಾವತಿಸಬೇಕಾಗುತ್ತದೆ.

6. ಸಮಯಕ್ಕೆ ಬಿಬಿಎಂಪಿ ಚುನಾವಣೆಯನ್ನು ನಡೆಸುವುದು, ಏಕೆಂದರೆ ನಗರ ಮತ್ತು ನಾಗರೀಕರು ಅರ್ಹರು ಒಳ್ಳೆಯ ಚುನಾಯಿತ ಕಾರ್ಪೋರೇಟರುಗಳು ತ್ರಿಭಾಗವು ನಗರದ ಭ್ರಷ್ಟಾಚಾರ ಅಥವಾ ಅದರ ಆಡಳಿತದ ಕಾಯಿಲೆಗೆ ಪರಿಹಾರವಲ್ಲ. ತ್ರಿಭಜನೆ ನೆವ ಬಳಸಿ ಬಿಬಿಎಂಪಿ ಚುನಾವಣೆಗಳಿಗೆ ವಿಳಂಬ ಮಾಡುವಂತಿಲ್ಲ. ತ್ರಿಭಜನೆ ಮಾಡಲು ಪ್ರಯತ್ನಿಸಿದರೆ, ನಾಗರೀಕರಿಂದ ಇದು ಪ್ರತಿರೋಧವನ್ನು ಉಂಟುಮಾಡುತ್ತದೆ ಮತ್ತು ರಾಜಕೀಯ ಪಕ್ಷಗಳು ಆಡುವ ರಾಜಕೀಯ ಕುಶಲತೆಯ ಆಟಗಳು ಮತ್ತು ರೂಪಿಸುವ ತಂತ್ರಗಳಿಗೆ ಜನರು ಮೌನವಾಗಿ ಉಳಿಯುವುದಿಲ್ಲ.

ಉತ್ತಮ ಆಡಳಿತದ ನಿಮ್ಮ ಭರವಸೆಯನ್ನು ಪೂರೈಸಲು ಮತ್ತು ಈ ಬದಲಾವಣೆಗಳನ್ನು ಪ್ರಾರಂಭಿಸಿ ಬೆಂಗಳೂರನ್ನು ಸ್ವಚ್ಛಗೊಳಿಸಲು ನಾನು ಒತ್ತಾಯಿಸುತ್ತೇನೆ. ಇತ್ತೀಚಿನ ಬೆಳವಣಿಗೆಗಳು ನಮ್ಮ ದೇಶದ ರಾಜಕೀಯದಲ್ಲಿ ಗ್ರಹಿಸಬಹುದಾದ ಬದಲಾವಣೆಯನ್ನು ಸೂಚಿಸಿವೆ, ಭ್ರಷ್ಟರಿಗೆ ಸರಳವಾಗಿ ಯಾವುದೇ ಸ್ಥಾನವಿಲ್ಲದ ರಾಜಕೀಯ ವ್ಯವಸ್ಥೆಗೆ

ಕ್ರಮೇಣವಾಗಿ ಬದಲಾಗುತ್ತಿದ್ದೇವೆ. ಈ ರೀತಿಯ ಭ್ರಷ್ಟಾಚಾರವು ಹೊಸ ರಾಜಕೀಯ ವ್ಯವಸ್ಥೆಯಲ್ಲಿ ಇನ್ನು ಸ್ವೀಕಾರಾರ್ಹವಲ್ಲ. ಇತ್ತೀಚಿನ ಇತಿಹಾಸವು ತೋರಿಸಿದಂತೆ, ಮಾಜಿ ಪ್ರಧಾನ ಮಂತ್ರಿ ಮತ್ತು ಹಿರಿಯ ಸಚಿವರು ಸಹ ಭ್ರಷ್ಟಾಚಾರವನ್ನು ತೊರೆಯುವ ನಾಗರೀಕರ ಬಯಕೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

ಇದರ ಕುರಿತು ನಿಮ್ಮ ಆರಂಭಿಕ ಪ್ರತಿಕ್ರಿಯೆಗಾಗಿ ನಾನು ಎದುರು ನೋಡುತ್ತೇನೆ

ನಿಮ್ಮ ವಿಶ್ವಾಸಿ
ರಾಜೀವ್ ಚಂದ್ರಶೇಖರ್

# 25

# ಬಿಬಿಎಂಪಿ ಚುನಾವಣೆಗಳ ವಿಳಂಬದ ಕುರಿತು ಕರ್ನಾಟಕದ ರಾಜ್ಯಪಾಲರಿಗೆ ಪತ್ರ

9 ನೇ ಏಪ್ರಿಲ್, 2015

ಪೂಜ್ಯರೇ,

**ಸಕಾಲಿಕ ಚುನಾವಣೆಗೆ ಬೆಂಗಳೂರಿಗರ ಸಂವಿಧಾನಾತ್ಮಕ ಹಕ್ಕುಗಳನ್ನು ನಿರಾಕರಿಸಬಾರದು**

ಕಳೆದ ಕೆಲವು ವಾರಗಳಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಚುನಾವಣೆ ವಿಳಂಬ ಮಾಡಲು ಅಥವಾ ಮುಂದೂಡಲು ಸಿದ್ದರಾಮಯ್ಯ ಸರ್ಕಾರವು ಪ್ರಯತ್ನಿಸುತ್ತಿದೆ. ಇದು ಸಾಂವಿಧಾನಿಕ ಒಮ್ಮತಗಳ ಪ್ರಕಾರ, 2015 ರ ಏಪ್ರಿಲ್ 22 ರಂದು ಅಥವಾ ಮೊದಲು ನಡೆಯಬೇಕಿತ್ತು. ಅಂತಹ ಕ್ರಮವು ಬೆಂಗಳೂರಿಗೆ ಪ್ರಜಾಪ್ರಭುತ್ವದಿಂದ ಚುನಾಯಿತವಾದ ನಗರ ಸಮಿತಿಯನ್ನು ಹೊಂದಲು ಅವಕಾಶವನ್ನು ನಿರಾಕರಿಸುವಂಥದ್ದು ಮತ್ತು ಬದಲಿಗೆ ಮುಖ್ಯಮಂತ್ರಿ ಮತ್ತು ರಾಜ್ಯ ಸರಕಾರದಿಂದ ನಿಯಂತ್ರಿಸಲ್ಪಡುವ ಪುರಸಭೆಯ ಆಡಳಿತಗಾರರಿಗೆ

ಒಳಪಟ್ಟಿರುತ್ತದೆ ಎಂಬಂಥ ಪರಿಸ್ಥಿತಿಯನ್ನು ಸೃಷ್ಟಿಸುತ್ತದೆ – ಇದು ಈಗಾಗಲೇ ರಾಜಾರೋಷವಾಗಿ ನಡೆಯುತ್ತಿರುವ ಮಧ್ಯಂತರ ಆಡಳಿತ, ವಿವೇಚನೆ ಮತ್ತು ಆಡಳಿತದಲ್ಲಿನ ಭ್ರಷ್ಟಾಚಾರದ ಅತಿರೇಕದ ಸಂಸ್ಕೃತಿಯನ್ನು ಮತ್ತಷ್ಟು ಬೆಳೆಸುವ ಉದ್ದೇಶ ಹೊಂದಿದೆ ಎಂಬ ಗ್ರಹಿಕೆಯನ್ನು ಬಲಪಡಿಸುತ್ತದೆ.

ನಮ್ಮ ನಾಗರೀಕರಿಗೆ ಮತ ಚಲಾಯಿಸುವ ಅವಕಾಶವನ್ನು ನಿರಾಕರಿಸುವುದು, ಅವರ ಧ್ವನಿಯನ್ನು ಪ್ರದರ್ಶಿಸುವ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಆಡಳಿತ ನಡೆಸಲು ಹೊಸ ಕಾರ್ಪೊರೇಟರುಗಳನ್ನು ಆಯ್ಕೆ ಮಾಡುವ ಮೂಲಭೂತ ಹಕ್ಕನ್ನು ನಿರಾಕರಿಸುತ್ತದೆ. 2013 ರ ಜನಗಣತಿಯ ಅಂಕಿಅಂಶಗಳ ಪ್ರಕಟಣೆಯ ಹೊರತಾಗಿಯೂ, ರಾಜ್ಯ ಸರ್ಕಾರವು ಉದ್ದೇಶಪೂರ್ವಕವಾಗಿ ವಾರ್ಡುಗಳ ಡಿಲಿಮಿಟೇಶನ್ ಕಾರ್ಯವನ್ನು ಕೈಗೊಳ್ಳಲು ವಿಫಲವಾಗಿದೆ, ಬಿಬಿಎಂಪಿ ಚುನಾವಣೆಯನ್ನು ಮುಂದೂಡಲು ಸರಕಾರಕ್ಕೆ ಪುನಃ ಇದು ಮತ್ತೊಂದು ತಂತ್ರವಾಗಿದೆ.

ಭಾರತದ ಸಂವಿಧಾನದ 243–ಯು ವಿಧಿಯು ನಿಸ್ಸಂದಿಗ್ಧವಾಗಿ ಹೇಳುವುದೆಂದರೆ, ಸ್ಥಳೀಯ ಸಂಸ್ಥೆಯ ಚುನಾವಣೆಗಳನ್ನು ಅದರ ಅವಧಿ ಮುಗಿಯುವುದಕ್ಕೂ ಮುಂಚಿತವಾಗಿ ಪೂರ್ಣಗೊಳಿಸಬೇಕು, ಅಂದರೆ ಐದು ವರ್ಷಗಳ ಅವಧಿ. ಆಡಳಿತಗಾರರ ನೇಮಕದ ಸಂದರ್ಭದಲ್ಲಿ ಸಹ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳನ್ನು ಐದು ವರ್ಷ ಅವಧಿಯೊಳಗೆ ನಡೆಸಬೇಕು ಎಂಬ ಆದೇಶವೂ ಅದರಲ್ಲಿದೆ. ಪರಿಣಾಮವಾಗಿ, ತ್ರಿಭಜನೆ ಅಥವಾ ಬೇರಾವುದೇ ಕಾರಣಗಳ ಮೇಲೆ ಬಿಬಿಎಂಪಿ ಚುನಾವಣೆಯನ್ನು ಮುಂದೂಡುವುದು ಸಾಂವಿಧಾನಿಕವಾಗಿ ಅಸಮರ್ಥನೀಯವಾಗಿದೆ. ಕಿಶನ್ ಸಿಂಗ್ ತೋಮರ್ (2006) ಪ್ರಕರಣದಲ್ಲಿ ಗೌರವಾನ್ವಿತ ಸುಪ್ರೀಂ ಕೋರ್ಟ್ ಸಂವಿಧಾನದ 243–ಯು ವಿಧಿಯ ಅನುಸಾರ, ನೈಸರ್ಗಿಕ ವಿಕೋಪಗಳ ಕಾರಣ ಹೊರತುಪಡಿಸಿ ನಿಸ್ಸಂದಿಗ್ಧವಾಗಿ ಮೇಲಿನ ವಿಷಯವನ್ನು ಘೋಷಿಸಿತ್ತು ಮತ್ತು ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳನ್ನು ಐದು ವರ್ಷಗಳ ಅವಧಿ ಮುಗಿಯುವುದಕ್ಕೂ ಮುಂಚಿತವಾಗಿ ಅಗತ್ಯವಾಗಿ ನಡೆಸಬೇಕು ಎಂದು ಸಾರಿತ್ತು.

ಕಳೆದ 2 ವರ್ಷಗಳಲ್ಲಿ, ಈ ಸರ್ಕಾರವು ನಗರದ ನೈಜ ಸಮಸ್ಯೆಗಳನ್ನು ಪರಿಹರಿಸಲು ನಿಜವಾದ ಪ್ರಯತ್ನವನ್ನು ಪ್ರಾರಂಭಿಸಲು ಮಾಡಿದ್ದೇನೂ ಇಲ್ಲ, ಅತಿ ಭ್ರಷ್ಟಾಚಾರ ಮತ್ತು ಹಿತಾಸಕ್ತಿಯ ಘರ್ಷಣೆಗಳೇ ಸರ್ಕಾರದ ಸಾಧನೆ. ಸಂವಿಧಾನದ 243–ಝೆಡ್ ಇ ವಿಧಿಯ ಅನುಸಾರ ಮೆಟ್ರೋಪಾಲಿಟನ್ ಯೋಜನಾ ಸಮಿತಿಯನ್ನು ರೂಪಿಸುವ ಪ್ರಯತ್ನ ಕೂಡ ವಿಳಂಬವಾದ ಪ್ರಕ್ರಿಯೆಯಾಗಿದೆ.

ಬಿಬಿಎಂಪಿ ಚುನಾವಣೆಗಳನ್ನು ವಿಳಂಬಗೊಳಿಸುವ ಸರ್ಕಾರದ ನಿಷ್ಕ್ರಿಯತೆಗೆ ಕರ್ನಾಟಕದ ಉಚ್ಚ ನ್ಯಾಯಾಲಯವು ಛೀಮಾರಿ ಹಾಕಿದೆ. ಮೇ 30, 2015 ರಂದು ಅಥವಾ ಮೊದಲು ಬಿಬಿಎಂಪಿಗೆ ಚುನಾವಣೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಮಾರ್ಚ್ 30, 2015 ರ ಆದೇಶದಲ್ಲಿ ಉಚ್ಚ ನ್ಯಾಯಾಲಯದ ಏಕ ನ್ಯಾಯಾಧೀಶರು ರಾಜ್ಯವನ್ನು ನಿರ್ದೇಶಿಸಿದ್ದಾರೆ. ಹೈಕೋರ್ಟ್ ಮತ್ತಷ್ಟು ನಿರ್ದೇಶನಗಳನ್ನು ನೀಡಿದ್ದು, ಏಪ್ರಿಲ್ 13, 2015 ರಂದು ಅಥವಾ ಮೊದಲು ಮೀಸಲಾತಿ ವಿಭಾಗಗಳಿಗೆ ಸ್ಥಾನಗಳನ್ನು ನಿಗದಿಗೊಳಿಸುವ ಬಗ್ಗೆ ರಾಜ್ಯ ಸರ್ಕಾರವು ಅಧಿಸೂಚನೆಯನ್ನು ಪ್ರಕಟಿಸಬೇಕು ಎಂದು ಹೇಳಿದೆ.

**ತ್ರಿಭಜನೆ: ಬಿಬಿಎಂಪಿ ಚುನಾವಣೆ ವಿಳಂಬ ಮಾಡಲು ಒಂದು ನೆವ**

ಬಿಬಿಎಂಪಿ ಚುನಾವಣೆಗಳಿಗೆ ವಿಳಂಬಿಸಲು ಬಿಬಿಎಂಪಿಯನ್ನು ತ್ರಿಭಜಿಸುವ ಕ್ರಮವನ್ನು ಬಳಸಲು ಸರ್ಕಾರ ಪ್ರಯತ್ನಿಸುತ್ತಿದೆ. ಸರಕಾರದಲ್ಲಿರುವವರು ತ್ರಿಭಜನೆಯು ಪಕ್ಷದ ಚುನಾವಣೆ ಪ್ರಣಾಳಿಕೆಯ ಭಾಗವಾಗಿತ್ತು ಎಂದು ಹೇಳುತ್ತಿರುವುದು ಅಷ್ಟೇ ಮೂರ್ಖತನದ್ದಾಗಿದೆ. ಇದು ಪ್ರಶ್ನೆಯೊಂದಕ್ಕೆ ದಾರಿ ಮಾಡಿಕೊಡುತ್ತದೆ – ಈಗ ಆತುರಪಡುವ ಬದಲಿಗೆ ಮುಂಚೆಯೇ ಈ ಕೆಲಸ ಮಾಡಲು ಸರ್ಕಾರವು ಏಕೆ ಮುಂದಾಗಲಿಲ್ಲ? ಇದೀಗ ನಗರಕ್ಕೆ ಆ ಕ್ರಮದ ಅಗ್ಯವಿದೆ ಎಂದು ಹೇಳುವ ಸರ್ಕಾರವು 6 ತಿಂಗಳುಗಳ ಹಿಂದೆಯೇ ಏಕೆ ಈ ತ್ರಿಭಜನೆಯನ್ನು ಪ್ರಸ್ತಾಪಿಸಲಿಲ್ಲ?

ತ್ರಿಭಜನೆಯ ಪ್ರಯೋಜನಗಳ ವಿರುದ್ಧ ಪುರಾವೆಗಳನ್ನು ಗಮನಿಸಿದಲ್ಲಿ ಬಿಬಿಎಂಪಿ ಚುನಾವಣೆಗಳಿಗೆ ವಿಳಂಬ ಮಾಡುವ ಉದ್ದೇಶದಿಂದ ಸರಕಾರ ತ್ರಿಭಜನೆಯನ್ನು ಪ್ರಸ್ತಾಪಿಸಿದ ಸಂಗತಿ ಅರಿವಾಗುತ್ತದೆ. ಇದರ ಬಗ್ಗೆ ಯಾವುದೇ ಪುರಾವೆ ಯಾರಿಗಾದರಲೂ ಅಗತ್ಯವಿದ್ದರೆ, ಅದು ಸುಗ್ರೀವಾಜ್ಞೆಯನ್ನು ಹೇಗೆ ಪ್ರಸ್ತಾಪಿಸಲು ಪ್ರಯತ್ನಿಸಿತು ಎಂಬುದನ್ನು ಪರಿಗಣಿಸಿ. ಒಂದು ತುರ್ತು ಸಭೆಯಲ್ಲಿ ಸುಗ್ರೀವಾಜ್ಞೆ ಆದೇಶಕ್ಕೆ ನಿರ್ಧರಿಸಿದ ನಂತರ, ಕ್ಯಾಬಿನೆಟ್ ವಿಚಿತ್ರವಾದ ರೀತಿಯಲ್ಲಿ ಪತ್ರಿಕಾಗೋಷ್ಠಿಯನ್ನು ರದ್ದುಗೊಳಿಸಿತು, ಸಾಮಾನ್ಯವಾಗಿ ಕ್ಯಾಬಿನೆಟ್ ಸಭೆಯ ನಂತರ ಪತ್ರಿಕಾಗೋಷ್ಠಿ ಇದ್ದೇ ಇರುತ್ತದೆ! ಇದೇ ರೀತಿ ಯಾವುದೇ ಸಮಾಲೋಚನಾ ಪ್ರಕ್ರಿಯೆಗೆ ತುಟಿ–ಸೇವೆಯನ್ನು ಮಾತ್ರ ಒದಗಿಸುವ ಅದರ ಕ್ರಿಯೆಗಳ ಮಾದರಿಯೊಂದಿಗೆ, ಈ ಕ್ರಮವನ್ನು ಚರ್ಚಿಸಲು ವಿಶೇಷವಾಗಿ ರಚಿಸಿದ ಮೂರು ಸದಸ್ಯರ ಬಿಬಿಎಂಪಿ ಪುನರ್ರಚನಾ ಸಮಿತಿಯ ಶಿಫಾರಸುಗಳನ್ನು ಸಂಪೂರ್ಣವಾಗಿ ಕಡೆಗಣಿಸಿದ್ದು! ನಾಗರೀಕರಿಗೆ ಚೆನ್ನಾಗಿ ಅರ್ಥವಾಗಿದ್ದರೂ ಸರ್ಕಾರೇತರ ಸಂಸ್ಥೆಗಳು ಮತ್ತು ನಿವಾಸಿಗರ

ಕ್ಷೇಮಾಭಿವೃದ್ಧಿ ಸಂಸ್ಥೆಗಳು ಸಮಿತಿಗೆ ಪ್ರತಿನಿಧಿ ಸಲಹೆಗಳನ್ನು ನೀಡಿದರು, ಸರ್ಕಾರ ಅವನ್ನು ಪರಿಗಣಿಸಲಿಲ್ಲ, ತಾನೇ ಸ್ವತಃ ಸಮಿತಿಯನ್ನು ಸ್ಥಾಪಿಸಿತು! ನೆರೆಯ ನಗರ ಪುರಸಭೆಗಳ ಇಡೀ ಸಂರಚನೆಯೊಂದಿಗೆ ನಗರದ ಒಂದು ಸಂಯೋಜನೆಯಾಗಿ ಬಿಬಿಎಂಪಿ ರಚಿಸಲ್ಪಟ್ಟಿತು. ತ್ರಿಭಜನೆಯ ಬಗ್ಗೆ ಸಮಾಲೋಚನೆಗಳನ್ನು ಬದಿಗೊತ್ತಿ ತುರ್ತಾಗಿ ತ್ರಿಭಜನೆಗೆ ಮುಂದಾದ ಕಾರಣಗಳನ್ನು ಕಂಡುಹಿಡಿಯಲು ಸಾಧ್ಯವಿಲ್ಲ.

ಮೀಸಲಾತಿ ಪಟ್ಟಿಯ ಸಂಪೂರ್ಣ ಅಧಿಸೂಚನೆ ಕೂಡ ತಪ್ಪಾಗಿದೆ, ಸರ್ಕಾರದ ನಿರ್ಲಕ್ಷ್ಯವನ್ನು ಇದು ಸೂಚಿಸುತ್ತದೆ. ಇದು ಇವುಗಳನ್ನು ಹೊಂದಿದೆ:

ಮಹಿಳೆಯರಿಗೆ 50% ಸ್ಥಾನಗಳನ್ನು ಮೀಸಲು ಮಾಡುವ ನಿರ್ಧಾರವನ್ನು ಮಾಡಿದೆ, ಧನಾತ್ಮಕ ಬಲವರ್ಧನೆಯ ವೇಷದಲ್ಲಿ ಮಹಿಳಾ ಕಾರ್ಪೊರೇಟರುಗಳನ್ನು ಸಮರ್ಪಕವಾಗಿ ಪ್ರತಿನಿಧಿಸುವ ಉದ್ದೇಶವೆನ್ನಲಾಗಿದೆ. ಈ ಮೀಸಲಾತಿ ಹೊಂದಿರುವ ಕ್ಷೇತ್ರಗಳನ್ನು ಗುರುತಿಸುವ ತಾತ್ಕಾಲಿಕ ಸ್ವಭಾವವು ಸರ್ಕಾರದ ಕುತಂತ್ರವನ್ನು ತೋರಿಸುತ್ತದೆ. ಮೀಸಲಾತಿ ಪಟ್ಟಿಯನ್ನು ನೋಡಿದಲ್ಲಿ ಮೇಲ್ನೋಟಕ್ಕೆ ಹೆಚ್ಚಿನ ಮೀಸಲಾತಿ ಹೊಂದಿರುವ ಕ್ಷೇತ್ರಗಳು, ಪ್ರತಿಸ್ಪರ್ಧಿ ಪಕ್ಷಗಳನ್ನು ಶಾಸಕರನ್ನಾಗಿ ಹೊಂದಿದ ಕ್ಷೇತ್ರಗಳು ಎಂಬುದು ಸ್ಪಷ್ಟ– ಮುಂಬರುವ ಚುನಾವಣೆಯಲ್ಲಿ ತಮ್ಮ ಸ್ಥಾನಗಳನ್ನು ಕಳೆದುಕೊಳ್ಳುವವರು ಈ ಮೀಸಲಾತಿ ಕಾರಣದಿಂದ. ಆದಾಗ್ಯೂ, ಸರ್ಕಾರವು ಎರಡೂ ರೀತಿಯಲ್ಲಿ ಜಯಗಳಿಸುವುದನ್ನು ಇದು ಖಾತ್ರಿಗೊಳಿಸುತ್ತದೆ. ಮೀಸಲಾತಿ ಪಟ್ಟಿಯನ್ನು ಪ್ರಶ್ನಿಸಲು ನ್ಯಾಯಾಲಯಕ್ಕೆ ಯಾರಾದರೂ ಹೋದಲ್ಲಿ, ನ್ಯಾಯಾಲಯದ ವಿಚಾರಣೆ ಚುನಾವಣೆಯನ್ನು ವಿಳಂಬಗೊಳಿಸುತ್ತವೆ, ಅಂತಿಮವಾಗಿ ಸರಕಾರ ತನ್ನ ಕಾರ್ಯಸೂಚಿಯನ್ನು ಮುಂದುವರೆಸಲು ಅವಕಾಶ ನೀಡುತ್ತದೆ.

**ತ್ರಿಭಜನೆಯ ಪ್ರಕ್ರಿಯೆಯು ನ್ಯಾಯಾಂಗ ಪ್ರಕ್ರಿಯೆಯೊಡನೆ ಸಂಘರ್ಷವುಂಟುಮಾಡುತ್ತದೆ**

ಬಿಬಿಎಂಪಿಯನ್ನು ತ್ರಿಭಜನೆ ಮಾಡಲು ಸುಗ್ರೀವಾಜ್ಞೆ ಹೊರಡಿಸಲು ಸರ್ಕಾರದ ಪ್ರಸ್ತಾಪವು ಬಿಬಿಎಂಪಿ ಚುನಾವಣೆಗಳನ್ನು ವಿಳಂಬ ಮಾಡುವ ಸರಕಾರದ ಪ್ರಸ್ತಾಪವಾಗಿದ್ದು, ನ್ಯಾಯಾಂಗ ಪ್ರಕ್ರಿಯೆ ಮತ್ತು ನ್ಯಾಯಾಂಗ ಸ್ವಾತಂತ್ರ್ಯದ ಮೇಲೆ ಪ್ರಹಾರವಾಗಿದ್ದು ಅಸಂವಿಧಾನಿಕವಾಗಿದೆ. 2015 ರ ಮೇ 30 ರಂದು ಅಥವಾ ಮೊದಲು ಬಿಬಿಎಂಪಿ ಚುನಾವಣೆಗಾಗಿ ಇಡೀ ಚುನಾವಣಾ ಪ್ರಕ್ರಿಯೆಯನ್ನು ನಡೆಸಲು ಮತ್ತು ಪೂರ್ಣಗೊಳಿಸಲು ಕರ್ನಾಟಕ ಉಚ್ಚ ನ್ಯಾಯಾಲಯದ ಏಕ ನ್ಯಾಯಾಧೀಶರು ಮಾರ್ಚ್ 30, 2015 ರಂದು ರಾಜ್ಯವನ್ನು ನಿರ್ದೇಶಿಸಿದ್ದಾರೆ. ಪ್ರಸ್ತಾಪಿಸಿದ ತ್ರಿಭಜನೆಯ ವಿಚಾರದ ಕಾರಣದಿಂದಾಗಿ ಬಿಬಿಎಂಪಿಗೆ ಚುನಾವಣೆ

ಮುಂದೂಡಬಹುದಾಗಿದೆ ಎಂಬ ರಾಜ್ಯದ ವಾದಗಳನ್ನು ಗೌರವಾನ್ವಿತ ನ್ಯಾಯಾಲಯ ತಿರಸ್ಕರಿಸಿದೆ. ರಾಜ್ಯವು ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿದೆ. ನ್ಯಾಯಾಂಗದಿಂದ ಮೇಲ್ಮನವಿ ಪರಿಗಣಿಸಲ್ಪಡುವ ಮುಂಚೆಯೇ, ರಾಜ್ಯವು ಸುಗ್ರೀವಾಜ್ಞೆಯ ಮೂಲಕ ನ್ಯಾಯಾಂಗದ ನಿರ್ಧಾರವನ್ನು ಅತಿಕ್ರಮಿಸಲು ಪ್ರಯತ್ನಿಸುತ್ತಿದೆ, ಈ ಕ್ರಮವು ಅಸಂವಿಧಾನಿಕವಾಗಿದ್ದು ಮಾನ್ಯ ನ್ಯಾಯಾಲಯದ ನ್ಯಾಯಾಂಗದ ಅಧಿಕಾರದ ಮೇಲೆ ಆಕ್ರಮಣವಾಗಿದೆ. ರಾಜ್ಯದಲ್ಲಿ ಸಂವಿಧಾನದ ರಕ್ಷಕರಾಗಿ ಮಾನ್ಯ ರಾಜ್ಯಪಾಲರು ಇಂತಹ ಆದೇಶಕ್ಕೆ ತಮ್ಮ ಅನುಮತಿಯನ್ನು ನೀಡಬಾರದು.

**ಬೆಂಗಳೂರಿಗೆ ಸುಧಾರಣೆಗಳು ಮತ್ತು ಪಾರದರ್ಶಕತೆ ಅಗತ್ಯವಿದೆ.**

ಆಡಳಿತ ಘಟಕಗಳ ರೂಪದಲ್ಲಿ ಬಿಬಿಎಂಪಿಯನ್ನು ಈಗಾಗಲೇ ಆಡಳಿತಾತ್ಮಕವಾಗಿ 198 ವಾರ್ಡುಗಳಾಗಿ ವಿಭಾಗಿಸಲಾಗಿದೆ. ಒಂದು ಪ್ರಾಮಾಣಿಕ ಸರ್ಕಾರವು ಈ 198 ವಾರ್ಡುಗಳಲ್ಲಿ ಪ್ರತಿಯೊಂದಕ್ಕೂ ಸಾರ್ವಜನಿಕ ಸೇವೆಗಳು ಮತ್ತು ಮೂಲಭೂತ ಸೌಕರ್ಯಗಳನ್ನು ತಲುಪುವಲ್ಲಿ ಗಮನಹರಿಸುತ್ತದೆ. ಸಾಮಾನ್ಯ ಜ್ಞಾನವು ನಮಗೆ 198 ವಾರ್ಡುಗಳಲ್ಲಿ ಯಾವುದೇ ಪುನಾರಚನೆ ಅಥವಾ ವಿಭಜನೆ ಅಗತ್ಯವಿಲ್ಲ ಎಂಬುದನ್ನು ಹೇಳುತ್ತದೆ. ಸರ್ಕಾರವು ಬೆಂಗಳೂರಿನ ನೈಜ ಸಮಸ್ಯೆಗಳ ಮೇಲೆ ಕೇಂದ್ರೀಕರಿಸಬೇಕು. ರಾಜಾರೋಷ ಭ್ರಷ್ಟಾಚಾರ, ಖಾಸಗಿ ಪುಷ್ಟೀಕರಣಕ್ಕಾಗಿ ಸಂಬಂಧಿಸಿದ ಒಪ್ಪಂದಗಳ ದುರುಪಯೋಗ, ನಾಗರೀಕರ ವೆಚ್ಚದಲ್ಲಿ ಪಟ್ಟಭದ್ರ ಹಿತಾಸಕ್ತಿಗಳಿಗೆ ಅನುಕೂಲವಾಗುವಂತೆ ಹಲವಾರು ಆಡಳಿತಾತ್ಮಕ ವಿವೇಚನೆಗಳ ಬಳಕೆ ಮತ್ತು ನಗರದ ಪಾಲಿಕೆಯ ಸಂಸ್ಥೆಗಳ ಪುರಸಭೆಯ ಹೊಣೆಗಾರಿಕೆಯ ಒಟ್ಟು ಕೊರತೆ ಇದರ ಜೊತೆಯಲ್ಲಿ, ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳಲ್ಲಿ ಅಪರಿಮಿತ ಸಂದರ್ಭಗಳಲ್ಲಿ ನೀತಿ ಸಂಹಿತೆಯ ಕೊರತೆ, ಸಾರ್ವಜನಿಕ ಸ್ವತ್ತುಗಳನ್ನು ವಿಲೇವಾರಿ ಮಾಡುವಲ್ಲಿ ಸ್ಪಷ್ಟವಾದ ಹಿತಾಸಕ್ತಿಯ ಸಂಘರ್ಷವನ್ನು ತೋರಿಸಿದೆ. ನಗರವು ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳಿದ್ದು ಪಾಲಿಕೆಯನ್ನು ಸಣ್ಣ ಘಟಕಗಳಾಗಿ ವಿಂಗಡಿಸಲ್ಪಟ್ಟರೆ ಅವುಗಳಲ್ಲಿ ಯಾವುದನ್ನೂ ಬಗೆಹರಿಸಲಾಗುವುದಿಲ್ಲ.

ವಾಸ್ತವವಾಗಿ, ಸರ್ಕಾರದ ತ್ರಿಭಜನೆಯ ಪರಿಹಾರದ ಗುಣಪಡಿಸುವ ಅದರ ಆಶಯಕ್ಕಿಂತ ಕೆಟ್ಟದಾಗಿದೆ, ಏಕೆಂದರೆ ಇದು ಆಡಳಿತದ ವೆಚ್ಚವನ್ನು ಹೆಚ್ಚಿಸುತ್ತದೆ ಮತ್ತು ಪಟ್ಟಭದ್ರ ಹಿತಾಸಕ್ತಿಗಳ ಅಂಗಣಗಳನ್ನು ಸೃಷ್ಟಿಸುತ್ತದೆ.

ಬೆಂಗಳೂರಿಗರು ಎದುರಿಸುತ್ತಿರುವ ಸಮಸ್ಯೆಗಳು ಹಲವು ವರ್ಷಗಳ ನಿರ್ಲಕ್ಷ್ಯದ ಪರಿಣಾಮವಾಗಿವೆ ಮತ್ತು ಮಹಾನಗರದ ಪ್ರಾದೇಶಿಕ ಅಭಿವೃದ್ಧಿಯ ಯೋಜನೆಗಾಗಿ ಎಂಪಿಸಿ ಮೂಲಕ ಆರಂಭಿಕ ಸಮಾಲೋಚನೆ ಸೇರಿದಂತೆ ನಗರದ ಎಲ್ಲಾ 198 ವಾರ್ಡುಗಳ ಜನರಿಗೆ ಸರ್ಕಾರವು ಸೇವೆ ನೀಡುವ ರೀತಿಯಲ್ಲಿ ಮಾಡುವ ಸತತ ಸುಧಾರಣೆಗಳಿಂದ ಮಾತ್ರ ಪರಿಹರಿಸಬಹುದು. ತ್ರಿಭಜನೆಯ ಬದಲು ನೈಜ ಸುಧಾರಣೆಗಳು!

**ತ್ರಿಭಜನೆ ಆಳವಾಗಿ ದೋಷಪೂರಿತವಾಗಿದೆ ಮತ್ತು ಹೆಚ್ಚು ಸಮಸ್ಯೆಗಳನ್ನು ಉಂಟುಮಾಡುತ್ತದೆ**

ತ್ರಿಭಜನೆ ಮತ್ತೊಂದು ಮಹತ್ವದ ಋಣಾತ್ಮಕ ಪರಿಣಾಮವನ್ನು ಹೊಂದಿದೆ. ಇದು ಮೂರು ರಚನೆಗಳನ್ನು ಸೃಷ್ಟಿಸುತ್ತದೆ, ಆಡಳಿತದ ವೆಚ್ಚವನ್ನು ಹೆಚ್ಚಿಸುತ್ತದೆ ಮತ್ತು ಬೆಂಗಳೂರಿನ ವಿಭಿನ್ನ ಆರ್ಥಿಕ ಕಾರ್ಯಸಾಧ್ಯತೆಯನ್ನು ಮೂರು ಗುಚ್ಛಗಳಾಗಿ ವಿಭಜಿಸುತ್ತದೆ, ಈ ಮೂರು ಗುಚ್ಛಗಳಲ್ಲಿರುವ ನಾಗರೀಕರ ಮೇಲೆ ಅಂತಹ ಕ್ರಿಯೆಯ ಪರಿಣಾಮಗಳನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನ ನಡೆದಿಲ್ಲ. ಮೂರು ಹೊಸ ನಿಗಮಗಳು ಕೇವಲ ಆರ್ಥಿಕ ಗುಚ್ಛಗಳಾಗುತ್ತವೆ ಮತ್ತು ಸಂಪನ್ಮೂಲ–ಸಮೃದ್ಧ ನಿಗಮವು ಸಮೃದ್ಧಿಯ ಪ್ರದೇಶಗಳನ್ನು ನಿರ್ಮಿಸಿದರೆ, ಸಂಪನ್ಮೂಲವಿಲ್ಲದ ಭಾಗಗಳು ನಾಗರೀಕರಿಗೆ ಮೂಲಭೂತ ಸೇವೆಗಳನ್ನು ಒದಗಿಸಲು ಸಾಧ್ಯವಾಗದೇ ಬಳಲುತ್ತವೆ. ಪುರಾವೆಗಾಗಿ ಹೊಸದಿಲ್ಲಿಯನ್ನೇ ನೋಡಿ. ದೆಹಲಿ ಕಾರ್ಪೊರೇಷನ್ ಇದೇ ರೀತಿಯಲ್ಲೇ 2011 ರಲ್ಲಿ ತ್ರಿಭಜನೆಗೊಂಡಿತು. ಆದಾಗ್ಯೂ, ಅಸಮಾನ ಆದಾಯದಿಂದ ಬಳಲುತ್ತಿರುವ ಮಹಾನಗರಪಾಲಿಕೆಗಳನ್ನು ಈಗ ಮರು–ವಿಲೀನಕ್ಕಾಗಿ ಪರಿಗಣಿಸಲಾಗುತ್ತಿದೆ. ಇಂತಹ ವಿಪರೀತದ ತ್ರಿಭಜನೆಯನ್ನು ತುರ್ತಾಗಿ ಮಾಡಿದರೆ ಬೆಂಗಳೂರಿನ ಭವಿಷ್ಯವನ್ನು ಮುಂಗಾಣಬಹುದು.

ನಗರದ ಯಾವುದೇ ಸಮಸ್ಯೆಗಳಿಗೆ ಮತ್ತು ಸವಾಲುಗಳಿಗೆ ತ್ರಿಭಜನೆ ಪರಿಹಾರವಲ್ಲ. ನಿಜವಾದ ರಾಜಕೀಯ ಉದ್ದೇಶವಾಗಿರುವ ಬಿಬಿಎಂಪಿ ಚುನಾವಣೆಯನ್ನು ವಿಳಂಬ ಮಾಡುವುದನ್ನು ಮರೆಮಾಚುವ ಪರದೆಯಿದು. ಸುಗ್ರೀವಾಜ್ಞೆಯನ್ನು ಹಿಂದಿರುಗಿಸಲು, ಗೌರವಾನ್ವಿತ ಉಚ್ಚ ನ್ಯಾಯಾಲಯದ ನಿರ್ದೇಶನಗಳಿಗೆ ಅನುಸಾರವಾಗಿ ಸರ್ಕಾರವನ್ನು ನಿರ್ದೇಶಿಸಲು ಮತ್ತು ಬಿಬಿಎಂಪಿ ಚುನಾವಣೆಗಳನ್ನು ಮೇ 30, 2015ರಂದು ಅಥವಾ ಅದಕ್ಕೂ ಮೊದಲು ಮುಗಿಸಲಾಗುವುದು ಎಂದು ಖಚಿತಪಡಿಸಿಕೊಳ್ಳಲು ರಾಜ್ಯಪಾಲರಿಗೆ ನಾನು ಮನವಿ ಮಾಡುತ್ತೇನೆ.

ಇಂತಿ ನಿಮ್ಮ ವಿಶ್ವಾಸಿ
ರಾಜೀವ್ ಚಂದ್ರಶೇಖರ್

ಶ್ರೀ ವಾಜುಬಾಯ್ ವಾಲಾ,
ಕರ್ನಾಟಕದ ರಾಜ್ಯಪಾಲರು,
ರಾಜ್ ಭವನ,
ರಾಜ್ ಭವನ್ ರಸ್ತೆ,
ಬೆಂಗಳೂರು 560 001.

# 26

# 2015ರ ಪರಿಷ್ಕೃತ ಮಾಸ್ಟರ್ ಪ್ಲಾನ್ ಉಲ್ಲಂಘನೆ ಕುರಿತು ಬಿಬಿಎಂಪಿ ಆಯುಕ್ತರಿಗೆ ಪತ್ರ

23 ನೇ ಏಪ್ರಿಲ್, 2015

ಶ್ರೀ ನಾಯಕ್,

ಪರಿಷ್ಕೃತ ಮಾಸ್ಟರ್ ಪ್ಲ್ಯಾನ್ (ಆರ್ ಎಂ ಪಿ) 2015 ರ ಉಲ್ಲಂಘನೆಯೊಂದಿಗೆ ಬೆಂಗಳೂರಿನ ವಸತಿ ಪ್ರದೇಶಗಳಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಹೊರಡಿಸಿದ ವಾಣಿಜ್ಯ ಪರವಾನಗಿಗಳ ಬಗ್ಗೆ ನಮ್ಮ ಬೆಂಗಳೂರು ಫೌಂಡೇಶನ್ (ಎನ್ ಬಿ ಎಫ್) ಮತ್ತು ಬೆಂಗಳೂರು ನಿವಾಸಿಗಳ ಸಂಘಟನೆಗಳ ಸಂಯೋಜಿತ ಒಕ್ಕೂಟ (ಬ್ರೇಸ್) ಪ್ರತಿನಿಧಿಯಾಗಿ ನಾನು ನಿಮಗೆ ಈ ಪತ್ರ ಬರೆಯುತ್ತಿದ್ದೇನೆ.

ಕರ್ನಾಟಕ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಫೆಬ್ರವರಿ 27 ರ ದಿನಾಂಕದಂದು ಬರೆದ ಪತ್ರವು ನನಗೆ ಗುರುತಿಸಲಾಗಿರುವ ನಕಲಿನಲ್ಲಿ (ಇದರೊಂದಿಗೆ ಲಗತ್ತಿಸಿದೆ), ವಸತಿ ಪ್ರದೇಶಗಳಲ್ಲಿ ಅಕ್ರಮ ವಾಣಿಜ್ಯ ಬೆಳವಣಿಗೆಗಳ

ಅನೇಕ ನಿದರ್ಶನಗಳನ್ನು ಎತ್ತಿಹಿಡಿದಿದೆ.

ಆರ್ ಎಂ ಪಿ 2015 ರ ತಿದ್ದುಪಡಿಗಳನ್ನು ಆಧರಿಸಿ ನಾಗರೀಕ ಗುಂಪುಗಳು ಸಲ್ಲಿಸಿದ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು ಆಧಾರವಾಗಿಟ್ಟುಕೊಂಡು ಮುಖ್ಯ ವಸತಿ ಮತ್ತು ವಸತಿ ಮಿಶ್ರ ವಲಯಗಳಲ್ಲಿ ನಲವತ್ತು ಅಡಿ ಅಥವಾ ಕಡಿಮೆ ಅಗಲವಿರುವ ರಸ್ತೆಗಳಿದ್ದಲ್ಲಿ ಯಾವುದೇ ಹೊಸ ವಾಣಿಜ್ಯ ಚಟುವಟಿಕೆಗಳನ್ನು ಅನುಮತಿಸುವಂತಿಲ್ಲ ಎಂಬ ಮನವಿಗೆ ಪೂರಕವಾಗಿ ಉಚ್ಚ ನ್ಯಾಯಾಲಯಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಆಯುಕ್ತರು ಅಫಿಡವಿಟ್ ಸಲ್ಲಿಸಿದ್ದರೂ ಬಿಬಿಎಂಪಿಯು ತಿದ್ದುಪಡಿ ಆರ್‌ಎಂಪಿ 2015 ಮತ್ತು ಬಿಡಿಎ ಅಫಿಡವಿಟ್ ಉಲ್ಲಂಘಿಸಿ ಬೆಂಗಳೂರಿನ ಕೆಲವು ವಸತಿ ಪ್ರದೇಶಗಳಲ್ಲಿ ವಾಣಿಜ್ಯ ಚಟುವಟಿಕೆಗಳಿಗೆ ಅನುಮತಿ ನೀಡಿದೆ.

ಆರ್‌ಎಂಪಿ 2015 ರ ಉಲ್ಲಂಘನೆಯಲ್ಲಿ ನಿರ್ಮಿಸಲಾದ ಈ ಹಲವಾರು ಅಕ್ರಮ ವಾಣಿಜ್ಯ ಘಟಕಗಳ ಪತ್ರಗಳ ವಿಳಾಸಗಳನ್ನು ಪತ್ರವು ಒಳಗೊಂಡಿದೆ. ವಿಷಯವನ್ನು ಬಿಬಿಎಂಪಿ ಗಮನಕ್ಕೆ ತರಲು ನಾಗರೀಕರು ಹಲವಾರು ಪ್ರಯತ್ನಗಳನ್ನು ನಡೆಸಿದ ಹೊರತಾಗಿಯೂ ಈ ಅಕ್ರಮಗಳ ವಿರುದ್ಧ ಅರ್ಥಪೂರ್ಣವಾದ ಕ್ರಮವನ್ನು ಆರಂಭಿಸಲು ಬಿಬಿಎಂಪಿ ವಿಫಲವಾಗಿದೆ ಎಂದು ಆರೋಪಿಸಲಾಗಿದೆ. ಬಿಬಿಎಂಪಿ ಅನುಮತಿ ನೀಡುವ ಮತ್ತು ಅಂತಹ ಅಕ್ರಮ ವಾಣಿಜ್ಯ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡುವುದರಲ್ಲಿ ನಾಗರೀಕರ ಹಿತಾಸಕ್ತಿಗಳಿಗೆ ಸ್ಪಷ್ಟವಾಗಿ ವಿರುದ್ಧವಾಗಿ ವರ್ತಿಸಿದೆ ಎಂದು ಈ ಆರೋಪಗಳು ತಿಳಿಸುತ್ತವೆ.

ಬಿಬಿಎಂಪಿಯ ಈ ಕ್ರಮಗಳು, ಬೆಂಗಳೂರಿನ ನಾಗರೀಕರ ಹಿತಕ್ಕೆ ಸಂಬಂಧಿಸಿ ಯಾವುದೇ ಅಂಶವನ್ನೂ ಪರಿಗಣಿಸದೆ ಖಾಸಗಿ ವಾಣಿಜ್ಯ ಮತ್ತು ನಿರ್ಮಾಣ ಹಿತಾಸಕ್ತಿಗಳಿಗೆ ಅನುಕೂಲವಾಗುವಂತೆ ಇಂತಹ ಉಲ್ಲಂಘನೆಗಳನ್ನು ಅನುಮತಿಸುವ ಸ್ಪಷ್ಟ ಉದ್ದೇಶವನ್ನು ಬಹಿರಂಗಗೊಳಿಸುತ್ತವೆ. ನೀವು ಬಿಬಿಎಂಪಿ ಹೊಸ ಆಯುಕ್ತರಾಗಿ ಅಧಿಕಾರ ವಹಿಸಿಕೊಂಡರೆ, ಸರ್ಕಾರಿ ಮಾಹಿತಿಯ ದುರುಪಯೋಗ, ಅಧಿಕಾರದ ದುರ್ಬಳಕೆ, ಹಿತಾಸಕ್ತಿಯ ಸಂಘರ್ಷ ಮತ್ತು ಸಾರ್ವಜನಿಕ ಸಂಪನ್ಮೂಲಗಳ ದುರುಪಯೋಗದ (ವಂಚನೆ ಮತ್ತು ದುರುಪಯೋಗ ಸೇರಿದಂತೆ) ಮೂಲಕ ಬೆಂಗಳೂರು ನಗರದಲ್ಲಿ ಮೂಲಭೂತ ನಗರ ಸೌಲಭ್ಯವನ್ನು ಒದಗಿಸದೇ ನಾಗರೀಕರನ್ನು ದೋಚುವವರ ಬಗ್ಗೆ ಎಚ್ಚರವಾಗಿರಿ. ಇವೆಲ್ಲವನ್ನು ಪರಿಗಣಿಸಿ, ಈ ಉಲ್ಲಂಘನೆಗಳ ವಿಚಾರವನ್ನು ಸಂಪೂರ್ಣವಾಗಿ ತನಿಖೆ ಮಾಡಬೇಕೆಂಬುದು ಒಂದು ಮಹತ್ವದ ಅಂಶವಾಗಿದೆ ಎಂಬುದನ್ನು ವಾಸ್ತವಾಂಶಗಳು ಮತ್ತು ಸನ್ನಿವೇಶಗಳು

ಸೂಚಿಸುತ್ತವೆ. ಬಿಬಿಎಂಪಿಯ ಹೊಸ ಕಮಿಷನರ್ ಆಗಿ ಈ ವಿಷಯದ ಬಗ್ಗೆ ತಕ್ಷಣದ ಮತ್ತು ತುರ್ತು ತನಿಖೆಯನ್ನು ಖಚಿತಪಡಿಸಿಕೊಳ್ಳಲು ನಿಮ್ಮನ್ನು ನಾನು ಕೋರುತ್ತೇನೆ. ಪರಿಷ್ಕೃತ ಮಾಸ್ಟರ್ ಪ್ಲಾನ್ 2015ರ ಉಲ್ಲಂಘನೆ ಮಾಡುವ ಮೂಲಕ ವಾಣಿಜ್ಯ ಹಿತಾಸಕ್ತಿಗಳಿಗೆ ಅವಕಾಶ ಮಾಡಿಕೊಟ್ಟು ಸಾರ್ವಜನಿಕ ಹಿತಾಸಕ್ತಿಯ ಮೇಲೆ ಪ್ರಹಾರ ಮಾಡುತ್ತಿರುವ ಪರಿಷ್ಕೃತ ಮಾಸ್ಟರ್ ಪ್ಲಾನ್ ಉಲ್ಲಂಘನೆ ಕಾರಣಗಳ ಬಗ್ಗೆ ತನಿಖೆ ನಡೆಸಲು ನಾನು ನಿಮ್ಮನ್ನು ಮುಂದಾಗಿ ಕೇಳಿಕೊಳ್ಳುತ್ತೇನೆ.

**ಈ ವಿಷಯದ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ನಾನು ಎದುರು ನೋಡುತ್ತೇನೆ**

ಇಂತಿ ನಿಮ್ಮ ವಿಶ್ವಾಸಿ
ರಾಜೀವ್ ಚಂದ್ರಶೇಖರ್

ಶ್ರೀ ಜಿ. ಕುಮಾರ್ ನಾಯಕ್,
ಐಎಎಸ್ ಆಯುಕ್ತರು,@
ಬಿಬಿಎಂಪಿ,
ಬೆಂಗಳೂರು.

ಸಿಸಿ:
ಶ್ರೀ ಟಿ ಎಂ ವಿಜಯ್ ಭಾಸ್ಕರ್,
ಐಎಎಸ್, ಆಡಳಿತಗಾರ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.

# 27

# ರಿಯಲ್ ಎಸ್ಟೇಟ್ ಯೋಜನೆಗಳು ಬೆಂಗಳೂರಿನ ಕೆರೆಗಳಿಗೆ ಬೆದರಿಕೆಯೊಡ್ಡಿರುವ ಕುರಿತು ಪರಿಸರ ಮತ್ತು ಅರಣ್ಯ ಖಾತೆಯ ಸಚಿವರಿಗೆ ಪತ್ರ

30 ಏಪ್ರಿಲ್ 2015

ಪ್ರಕಾಶ್ ಜಿ,

**ವಿಷಯ: ರಿಯಲ್ ಎಸ್ಟೇಟ್ ಯೋಜನೆಗಳಿಂದಾಗಿ ಬೆಂಗಳೂರಿನಲ್ಲಿ ಪರಿಸರ ಮತ್ತು ಪರಿಸರ ಸೂಕ್ಷ್ಮ ಪ್ರದೇಶಗಳಿಗೆ ಅಪಾಯ ಹೆಚ್ಚಳ**

ಪರಿಸರೀಯ ಮತ್ತು ಪರಿಸರದ ಸೂಕ್ಷ್ಮ ಪ್ರದೇಶಗಳಾದ ಕೆರೆ ಅಚ್ಚುಕಟ್ಟು, ಕೆರೆಯ ಸುತ್ತಮುತ್ತಲಿನ ಪ್ರದೇಶಗಳು, ಮತ್ತು ಕಣಿವೆಯ ವಲಯಗಳ ಮೇಲೆ ಬೆಂಗಳೂರಿನ ರಿಯಲ್ ಎಸ್ಟೇಟ್ ಯೋಜನೆಗಳು ಅಪಾಯ ಹೆಚ್ಚಿಸುವ ಬಗ್ಗೆ ನಾನು ನಿಮಗೆ ಬರೆಯುತ್ತಿದ್ದೇನೆ.

ಬೆಂಗಳೂರಿನ ನಗರವು ಒಂದು ನದಿ ದಡದಲ್ಲಿಲ್ಲ ಮತ್ತು ಅದರ 1 ಕೋಟಿ ಜನಸಂಖ್ಯೆ ಮತ್ತು ಅಂತರ್ಜಲ ಮಟ್ಟಗಳ ನೀರಿನ ಅಗತ್ಯಗಳು ಹೆಚ್ಚಾಗಿ ಕೆರೆಗಳು ಮತ್ತು ಭೂಗತ ನೀರಿನ ಮೂಲಗಳ ಜಾಲವನ್ನು ಅವಲಂಬಿಸಿವೆ. ಈ ಕೆರೆಗಳು ಕೆಳಜಾರುವ ಸರಪಳಿಯ ಒಂದು ಭಾಗವಾಗಿದ್ದು, ಸ್ವಾಭಾವಿಕವಾಗಿ ಮತ್ತು ಅನೇಕ ವರ್ಷಗಳಿಂದ ಬೆಂಗಳೂರಿನ ಮತ್ತು ಅದರ ಪರಿಸರ ವಿಜ್ಞಾನದ ಕಾಳಜಿಗಾಗಿ ಅಭಿವೃದ್ಧಿ ಹೊಂದಿದವು.

ಹಲವಾರು ವಾಣಿಜ್ಯ ಕಾಮಗಾರಿಗಳು ಹೆಬ್ಬಾಳ ಕೆರೆ, ಬೆಳ್ಳಂದೂರು ಕೆರೆ, ನಾಗಸೆಟ್ಟಿಹಳ್ಳಿ ಕೆರೆ, ಬೈರಸಂದ್ರ, ಇಬ್ಬಲೂರು, ಚಿಕ್ಕಲಸಂದ್ರ ಮತ್ತು ವೆಂಕಟನಾರಾಯಣ ಕೆರೆಯಂತಹ ಹಲವಾರು ಕೆರೆಗಳನ್ನು ಒತ್ತುವರಿ ಮಾಡಿಕೊಂಡಿವೆ ಅಥವಾ ಮಾಡಿಕೊಳ್ಳಲು ಹೊರಟಿವೆ. ಸಾಮಾನ್ಯವಾಗಿರುವ ನಗರದ ನೈಸರ್ಗಿಕ ಜಲಶಾಸ್ತ್ರ ಮತ್ತು ಸುತ್ತಲಿನ ಪರಿಸರವು ದೊಡ್ಡ ಬೆಲೆ ತೆರುವಂತಿದ್ದರೂ ಸಹ ಈ ದೊಡ್ಡ ಯೋಜನೆಗಳನ್ನು ನಿರ್ಮಿಸಲಾಗುತ್ತಿದೆ. ಈ ಅತಿರೇಕದ, ಪಟ್ಟಭದ್ರ ಹಿತಾಸಕ್ತಿಗಳು ನಡೆಸುವ ಭ್ರಷ್ಟಾಚಾರವು ನಾಗರೀಕರನ್ನು ಹತಾಶರನ್ನಾಗಿಸುತ್ತಿದ್ದು, ಅವರು ಸಾರ್ವಜನಿಕ ಹಿತಾಸಕ್ತಿ ಕಾನೂನಿಗೆ (ಪಿಐಎಲ್‌ಗಳು) ಅರ್ಜಿ ಸಲ್ಲಿಸಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಮತ್ತು ಇತರ ನ್ಯಾಯಾಲಯಗಳ ಮಧ್ಯಸ್ಥಿಕೆಗಾಗಿ ಆಗ್ರಹಿಸುವಂತೆ ಮಾಡಿದೆ.

ಉದಾಹರಣೆಗೆ, ನಗರದ ಆಗ್ನೇಯ ಭಾಗದಲ್ಲಿರುವ ಬೆಳ್ಳಂದೂರು ಸರೋವರದ ವಿಷಯದಲ್ಲಿ, ಪರಿಸರ ಮತ್ತು ಅರಣ್ಯ ಸಚಿವಾಲಯವು ಯೋಜನೆಯೊಂದಕ್ಕೆ ಆರಂಭಿಕ ಪರಿಸರ ಅನುಮತಿಗಳನ್ನು ನೀಡಿದ ನಂತರ, 2011 ರಲ್ಲಿ ಭೇಟಿ ನೀಡಿದ ಸಚಿವಾಲಯದ ತಂಡವು ಮೇಲ್ವಿಚಾರಣೆ ಸಂದರ್ಭದಲ್ಲಿ ಪರಿಸರ ಅನುಮತಿ ಷರತ್ತುಗಳಿಗೆ ವ್ಯತಿರಿಕ್ತವಾಗಿ ಯೋಜನೆಯ ಪ್ರವರ್ತಕರು ನಡೆದುಕೊಂಡಿರುವುದನ್ನು ವರದಿ ಮಾಡಿತು. ಅಗಸ್ಟ್ 2013 ರಲ್ಲಿ, 15 ತಿಂಗಳುಗಳ ಹಿಂದೆ ನೀಡಿದ ಪ್ರತಿಕೂಲ ವರದಿಯ ಹೊರತಾಗಿಯೂ ಈ ಯೋಜನೆಯ ವಿರುದ್ಧ ಯಾವುದೇ ಕ್ರಮವನ್ನು ಕೈಗೊಳ್ಳಲಾಗಿಲ್ಲ.

ಪರಿಸರದ ಕಣ್ಗಾವಲು ಸಂಸ್ಥೆಯಾಗಿ ಪರಿಸರ ಮತ್ತು ಅರಣ್ಯ ಸಚಿವಾಲಯವು ಪಟ್ಟಭದ್ರ ಹಿತಾಸಕ್ತಿಗಳಿಗೆ ಸಹಾಯ ಮಾಡುವಂತಹ ಅಜಾಗರೂಕ ವಾಣಿಜ್ಯೀಕರಣಕ್ಕೆ ಬೆಂಗಳೂರಿನ ಕೆರೆಗಳು ಬಲಿಯಾಗದಿರುವುದನ್ನು ಖಚಿತಪಡಿಸಿಕೊಳ್ಳಲು ಕ್ರಮ ಕೈಗೊಳ್ಳಬೇಕು. ಪರಿಸರ ಸಂರಕ್ಷಣೆ ಕಾಯಿದೆ 1986 ರ ಸೆಕ್ಷನ್ 5 ರ ಪ್ರಕಾರ ಕೇಂದ್ರ ಸರ್ಕಾರವು ತನ್ನ ಅಧಿಕಾರದ ಹಾಗೂ ಕಾರ್ಯನಿರ್ವಹಣೆಯ ಅಡಿ, ಇತರ

ವಿಷಯಗಳ ಜೊತೆಯಲ್ಲಿ, ಯಾವುದೇ ಉದ್ಯಮವನ್ನು ಮುಚ್ಚುವುದು, ನಿಷೇಧ ಮಾಡುವುದು ಅಥವಾ ನಿಬಂಧನೆಗಳು, ಯಾವುದೇ ವ್ಯಕ್ತಿ, ಅಧಿಕಾರಿ ಅಥವಾ ಯಾವುದೇ ಪ್ರಾಧಿಕಾರಕ್ಕೆ ಸಂಬಂಧಿಸಿ ಕಾರ್ಯಾಚರಣೆ ನಡೆಸಬಹುದಾಗಿದ್ದು ಮತ್ತು ಅಂತಹ ವ್ಯಕ್ತಿ, ಅಧಿಕಾರಿ ಅಥವಾ ಪ್ರಾಧಿಕಾರವು ಅಂತಹ ನಿರ್ದೇಶನಗಳನ್ನು ಪಾಲಿಸಲು ಬದ್ಧರಾಗಿರಬೇಕು ಎಂದು ಹೇಳುತ್ತದೆ.

ಇಲ್ಲಿನ ಸಮಸ್ಯೆಯು ನೀರಿನ ಅಗತ್ಯತೆಗಳು ಮತ್ತು ಅಂತಹ ಪರಿಶೀಲಿಸದ ಮತ್ತು ಅತಿರೇಕದ ಬೆಳವಣಿಗೆಯ ದೀರ್ಘಕಾಲಿಕ ಪರಿಸರೀಯ ಪರಿಣಾಮವಾಗಿದೆ, ಪರಿಸರದ ಎಲ್ಲಾ ನಿಯಮಗಳನ್ನು ಉಲ್ಲಂಘಿಸುವ ಮತ್ತು ನಗರದ ಕೆರೆಗಳನ್ನು ಅತಿಕ್ರಮಿಸಲು ಬರುವ ದೊಡ್ಡ ಯೋಜನೆಗಳಿಂದ,

ನನ್ನ ನಗರ ಬೆಂಗಳೂರಿನ ಮೇಲೆ ಗಮನಾರ್ಹ ಪರಿಣಾಮವುಂಟಾಗುತ್ತದೆ. ಈ ಯೋಜನೆಗಳಿಗೆ ಅನುಮತಿಗಳು ಮತ್ತು ಅನುಮೋದನೆಗಳನ್ನು ಅಕ್ರಮ ಅಥವಾ ಭ್ರಷ್ಟಾಚಾರದ ಆಧಾರದ ಮೇಲೆ ನೀಡಲಾಗಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲು, ಕೆರೆ ಅಚ್ಚುಕಟ್ಟುಗಳಲ್ಲಿ ಮತ್ತು ಬೆಂಗಳೂರಿನಲ್ಲಿನ ಪರಿಸರಕ್ಕೆ ಸಂಬಂಧಿಸಿದಂತೆ ಸೂಕ್ಷ್ಮವಾಗಿರುವ ಸ್ಥಳಗಳಲ್ಲಿ ನೀಡಿರುವ ಎಲ್ಲಾ ಅನುಮತಿಗಳು ಮತ್ತು ಅನುಮೋದನೆಗಳ ಲೆಕ್ಕಪರಿಶೋಧನೆ ಮತ್ತು ವಿಮರ್ಶೆಯನ್ನು ತುರ್ತು ಆಧಾರದ ಮೇಲೆ ಮಾಡಬೇಕು.

ಅಂತಹ ಯೋಜನೆಗಳ ಪರಿಸರೀಯ ಸ್ಥಿತಿಗತಿಗಳಿಗೆ ಅನುಗುಣವಾಗಿ ನಿಯಮಪಾಲನೆಯನ್ನು ಇದು ಅಧ್ಯಯನ ನಡೆಸಬೇಕು ಮತ್ತು ಅಂಥ ವರದಿಗಳನ್ನು ಸಾರ್ವಜನಿಕಗೊಳಿಸಬೇಕು ಮತ್ತು ಕಡ್ಡಾಯ ಪರಿಸರೀಯ ಷರತ್ತುಗಳನ್ನು ಅನುಸರಿಸಲು ವಿಫಲವಾದ ಅಂತಹ ಯೋಜನೆಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು. ಹೆಚ್ಚುವರಿಯಾಗಿ ಅರಣ್ಯ ಮತ್ತು ಪರಿಸರ ಸಚಿವಾಲಯವು ಸೂಕ್ತ ಪರಿಶೀಲನೆ ನಡೆಸದೇ ಅನುಮತಿಯನ್ನು ಖಚಿತಪಡಿಸಿದ ಅಥವಾ ನಿಯಮಪಾಲನೆಯನ್ನು ಸಮರ್ಪಕವಾಗಿ ಮೇಲ್ವಿಚಾರಣೆ ಮಾಡುವಲ್ಲಿ ವಿಫಲರಾಗಿ ನಿರ್ಲಕ್ಷ್ಯವನ್ನು ತೋರಿದ ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮವನ್ನೂ ಸಹ ಕೈಗೊಳ್ಳಬೇಕು. ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯದ ಒಳಗಿನ ಮತ್ತು ಹೊರಗಿನ ಇಂತಹ ಕ್ರಮಗಳು ಬೆಂಗಳೂರಿನ ಪ್ರಾಕೃತಿಕ ಸ್ವತ್ತು ದುರದೃಷ್ಟಕರ ರೀತಿಯಲ್ಲಿ ಪಟ್ಟಭದ್ರ ಹಿತಾಸಕ್ತಿಗಳ ಪಾಲಾಗುವುದಿಲ್ಲ ಎಂದು ಖಚಿತಪಡಿಸಿಕೊಳ್ಳುವ ಮೊದಲ ಹೆಜ್ಜೆಯಾಗಿದೆ. ಅಕ್ರಮ ಮತ್ತು ಭ್ರಷ್ಟಾಚಾರದ ಆಧಾರದ ಮೇಲೆ ಅನುಮತಿಗಳನ್ನು

ಪಡೆದ ಯೋಜನೆಗಳಿಂದ ಪರಿಸರ ಮತ್ತು ಪರಿಸರೀಯ ಸೂಕ್ಷ್ಮ ಪ್ರದೇಶಗಳಾದ ಕೆರೆಗಳು, ಕೆರೆಯ ಸುತ್ತಲಿನ ಪ್ರದೇಶಗಳು ಮತ್ತು ಕಣಿವೆಯ ವಲಯಗಳನ್ನು ರಕ್ಷಿಸಿಕೊಳ್ಳಲು ತಕ್ಷಣದ ಕ್ರಮಗಳನ್ನು ನೀವು ತೆಗೆದುಕೊಳ್ಳುವುದನ್ನು ನಾನು ಎದುರುನೋಡುತ್ತೇನೆ.

ಇಂತಿ ನಿಮ್ಮ ವಿಶ್ವಾಸಿ
ರಾಜೀವ್ ಚಂದ್ರಶೇಖರ್

ಶ್ರೀ ಪ್ರಕಾಶ್ ಜಾವಡೇಕರ್,
ಭಾರತ ಸರ್ಕಾರದ ಪರಿಸರ,
ಅರಣ್ಯ ಮತ್ತು ಹವಾಮಾನ ಬದಲಾವಣೆ ಇಲಾಖೆಯ ಗೌರವಾನ್ವಿತ ಸಚಿವರು,
ನವದೆಹಲಿ.

# 28

# ಬೆಂಗಳೂರಿನ ಕೆರೆಗಳು ಮತ್ತು ಕೆರೆ ಅಚ್ಚುಕಟ್ಟು ಪ್ರದೇಶಗಳ ರಕ್ಷಣೆಗಾಗಿ ಶೂನ್ಯವೇಳೆಯ ಚರ್ಚೆಯಲ್ಲಿ ಪ್ರಸ್ತಾಪ

ರಾಜ್ಯಸಭೆ 7 ಮೇ 2015

ಮಾನ್ಯರೇ,

ಬೃಹತ್ ರಿಯಲ್ ಎಸ್ಟೇಟ್ ಯೋಜನೆಗಳು ಮತ್ತು ಸಂಸ್ಕರಿಸದ ಮಲಿನ ನೀರು ಮಾಲಿನ್ಯವನ್ನು ಹೆಚ್ಚಿಸುವುದರಿಂದ ಬೆಂಗಳೂರಿನ ಸರೋವರಗಳು ಮತ್ತು ಕಣಿವೆಯ ವಲಯಗಳಂತಹ ಪರಿಸರ ಸೂಕ್ಷ್ಮ ಪ್ರದೇಶಗಳಿಗೆ ಅಪಾಯವನ್ನು ಹೆಚ್ಚಿಸುತ್ತವೆ ಎಂಬ ಬಗ್ಗೆ ನಾನು ಸಭೆಯ ಗಮನವನ್ನು ಸೆಳೆಯಲು ಬಯಸುತ್ತೇನೆ.

ಬೆಂಗಳೂರಿನ ನಗರವು ಒಂದು ನದಿ ದಡದಲ್ಲಿಲ್ಲ ಮತ್ತು ಅದರ 1 ಕೋಟಿಗೂ ಅಧಿಕ ಜನಸಂಖ್ಯೆ ಮತ್ತು ಅಂತರ್ಜಲ ಮಟ್ಟಗಳ ನೀರಿನ ಅಗತ್ಯಗಳು ಹೆಚ್ಚಾಗಿ ಕೆರೆಗಳು ಮತ್ತು ಭೂಗತ ನೀರಿನ ಮೂಲಗಳ ಜಾಲವನ್ನು ಅವಲಂಬಿಸಿವೆ. ಈ ಕೆರೆಗಳು ಕೆಳಜಾರುವ ಜಲ ಸರಪಳಿಯ ಒಂದು ಭಾಗವಾಗಿದ್ದು, ಸ್ವಾಭಾವಿಕವಾಗಿ ಮತ್ತು ಅನೇಕ ವರ್ಷಗಳಿಂದ ಬೆಂಗಳೂರಿನ ಮತ್ತು ಅದರ ಪರಿಸರ ವಿಜ್ಞಾನದ ಕಾಳಜಿಗಾಗಿ ಅಭಿವೃದ್ಧಿ ಹೊಂದಿದವು.

ಇತ್ತೀಚಿನ ವರ್ತೂರು ಕೆರೆಯ ಘಟನೆಯು ಅತಿಯಾದ ರಾಸಾಯನಿಕ ಮಿಶ್ರಣಗೊಂಡಿರುವುದರ ಒಂದು ಉದಾಹರಣೆಯಾಗಿದೆ.

ಹಲವಾರು ವಾಣಿಜ್ಯ ಕಾಮಗಾರಿಗಳು ಹೆಬ್ಬಾಳ ಕೆರೆ, ಬೆಳ್ಳಂದೂರು ಕೆರೆ, ನಾಗಸೆಟ್ಟಿಹಳ್ಳಿ ಕೆರೆ, ಬೈರಸಂದ್ರ, ಇಬ್ಬಲೂರು, ಚಿಕ್ಕಲಸಂದ್ರ ಮತ್ತು ವೆಂಕಟನಾರಾಯಣ ಕೆರೆ ಹೀಗೆ ಹಲವಾರು ಕೆರೆಗಳನ್ನು ಒತ್ತುವರಿ ಮಾಡಿಕೊಂಡಿವೆ ಅಥವಾ ಮಾಡಿಕೊಳ್ಳಲು ಹೊರಟಿವೆ. ಅತಿಕೆಟ್ಟದೆಂದರೆ ಈ ಅಭಿವೃದ್ಧಿ ಕಾರ್ಯಗಳಿಂದ ಹೊರಹೊಮ್ಮುವ ದ್ರವ್ಯಗಳು ಮತ್ತು ಇತರ ಮಾಲಿನ್ಯಕಾರಕಗಳ ಹರಿವು ಈ ಸರೋವರಗಳಲ್ಲಿನ ಜೀವವೈವಿಧ್ಯಕ್ಕೆ ದೊಡ್ಡ ಅಪಾಯವನ್ನು ಉಂಟುಮಾಡಿದೆ. ನಗರದ ನೈಸರ್ಗಿಕ ಜಲಶಾಸ್ತ್ರ ಮತ್ತು ಸುತ್ತಲಿನ ಪರಿಸರವು ದೊಡ್ಡ ಬೆಲೆ ತೆರುವಂತಿದ್ದರೂ ಸಹ ಈ ದೊಡ್ಡ ಯೋಜನೆಗಳನ್ನು ನಿರ್ಮಿಸಲಾಗುತ್ತಿದೆ. ಈ ಅತಿರೇಕದ, ಪಟ್ಟಭದ್ರ ಹಿತಾಸಕ್ತಿಗಳು ನಡೆಸುವ ಭ್ರಷ್ಟಾಚಾರವು ನಾಗರೀಕರನ್ನು ಹತಾಶರನ್ನಾಗಿಸುತ್ತಿದ್ದು, ಅವರು ಸಾರ್ವಜನಿಕ ಹಿತಾಸಕ್ತಿ ಕಾನೂನಿಗೆ (ಪಿಐಎಲ್‌ಗಳು) ಅರ್ಜಿ ಸಲ್ಲಿಸಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಮತ್ತು ಇತರ ನ್ಯಾಯಾಲಯಗಳ ಮಧ್ಯಸ್ಥಿಕೆಗಾಗಿ ಆಗ್ರಹಿಸುವಂತೆ ಮಾಡಿದೆ.

ಉದಾಹರಣೆಗೆ, ನಗರದ ಆಗ್ನೇಯ ಭಾಗದಲ್ಲಿರುವ ಬೆಳ್ಳಂದೂರು ಸರೋವರದ ವಿಷಯದಲ್ಲಿ, ಪರಿಸರ ಮತ್ತು ಅರಣ್ಯ ಸಚಿವಾಲಯವು ಯೋಜನೆಯೊಂದಕ್ಕೆ ಆರಂಭಿಕ ಪರಿಸರ ಅನುಮತಿಗಳನ್ನು ನೀಡಿದ ನಂತರ, 2011 ರಲ್ಲಿ ಭೇಟಿ ನೀಡಿದ ಸಚಿವಾಲಯದ ತಂಡವು ಮೇಲ್ವಿಚಾರಣೆ ಸಂದರ್ಭದಲ್ಲಿ ಪರಿಸರ ಅನುಮತಿ ಷರತ್ತುಗಳಿಗೆ ವ್ಯತಿರಿಕ್ತವಾಗಿ ಯೋಜನೆಯ ಪ್ರವರ್ತಕರು ನಡೆದುಕೊಂಡಿರುವುದನ್ನು ವರದಿ ಮಾಡಿತು.

ಅಗಸ್ಟ್ 2013 ರಲ್ಲಿ, 15 ತಿಂಗಳುಗಳ ಹಿಂದೆ ನೀಡಿದ ಪ್ರತಿಕೂಲ ವರದಿಯ ಹೊರತಾಗಿಯೂ ಈ ಯೋಜನೆಯ ವಿರುದ್ಧ ಯಾವುದೇ ಕ್ರಮವನ್ನು ಕೈಗೊಳ್ಳಲಾಗಿಲ್ಲ.

ಈ ರಿಯಲ್ ಎಸ್ಟೇಟ್ ಯೋಜನೆಗಳು ಮತ್ತು ಇತರ ಮೂಲಗಳ ಸಂಸ್ಕರಿಸದ ಒಳಚರಂಡಿಯಿಂದ ಈ ಸರೋವರಗಳಿಗೆ ಉಂಟಾಗುವ ಮಾಲಿನ್ಯವು ಅತಿಯಾದ ಒತ್ತುವರಿಯ ಅಪಾಯವನ್ನು ಹೆಚ್ಚಿಸುತ್ತದೆ. ಉದಾಹರಣೆಗೆ, ವರ್ತೂರು ಕೆರೆಯನ್ನು ತೆಗೆದುಕೊಂಡರೆ, ಕೆರೆಯ ಪರಿಧಿಯಲ್ಲಿ ನಡೆಯುತ್ತಿದ್ದ ಅಕ್ರಮ ನಿರ್ಮಾಣ ಮತ್ತು ಕೆರೆಯಲ್ಲಿ ತ್ಯಾಜ್ಯ ಸುರಿಯುವುದು ಅಲ್ಲಿನ ಸಿಹಿನೀರಿನ ಪರಿಸರ ವ್ಯವಸ್ಥೆಗೆ ಮತ್ತು ಜೀವವೈವಿಧ್ಯಕ್ಕೆ ಬೃಹತ್ ಪ್ರಮಾಣದ ಹೊಡೆತವನ್ನು ನೀಡಿದೆ. ಇದು ನಗರದ

ಅತಿದೊಡ್ಡ ಕೆರೆಗಳಲ್ಲೊಂದನ್ನು "ಇಲ್ಲವಾದ" ಕೆರೆ ಎಂದು ಘೋಷಿಸಲು ಕಾರಣವಾಯಿತು.

ಯಾವುದೇ ಸರ್ಕಾರಿ ಸಂಸ್ಥೆ ಕೂಡ ಅತಿಕ್ರಮಣವನ್ನಾಗಲಿ ಅಥವಾ ಮಾಲಿನ್ಯವನ್ನಾಗಲಿ ಸಮೀಕ್ಷೆ ಮಾಡಿಲ್ಲ. ಪರಿಸರದ ಕಣ್ಗಾವಲು ಸಂಸ್ಥೆಯಾಗಿ ಪರಿಸರ ಮತ್ತು ಅರಣ್ಯ ಸಚಿವಾಲಯವು ಮಾಲಿನ್ಯಕ್ಕೆ ಪೂರಕವಾಗುವಂಥ ಅಜಾಗರೂಕ ವಾಣಿಜ್ಯೀಕರಣಕ್ಕೆ ಬೆಂಗಳೂರಿನ ಕೆರೆಗಳು ಬಲಿಯಾಗದಿರುವುದನ್ನು ಖಚಿತಪಡಿಸಿಕೊಳ್ಳಲು ಕ್ರಮ ಕೈಗೊಳ್ಳಬೇಕು. 1986 ರ ಪರಿಸರ ಸಂರಕ್ಷಣಾ ಕಾಯಿದೆಯ ಸೆಕ್ಷನ್ 5 ಹೇಳುವ ಪ್ರಕಾರ ಕೇಂದ್ರ ಸರ್ಕಾರವು

ತನ್ನ ಅಧಿಕಾರದ ಹಾಗೂ ಕಾರ್ಯನಿರ್ವಹಣೆಯ ಅಡಿ, ಇತರ ವಿಷಯಗಳ ಜೊತೆಯಲ್ಲಿ, ಯಾವುದೇ ಉದ್ಯಮವನ್ನು ಮುಚ್ಚುವುದು, ನಿಷೇಧ ಮಾಡುವುದು ಅಥವಾ ನಿಬಂಧನೆಗಳು, ಯಾವುದೇ ವ್ಯಕ್ತಿ, ಅಧಿಕಾರಿ ಅಥವಾ ಯಾವುದೇ ಪ್ರಾಧಿಕಾರಕ್ಕೆ ಸಂಬಂಧಿಸಿ ಕಾರ್ಯಾಚರಣೆ ನಡೆಸಬಹುದಾಗಿದ್ದು ಮತ್ತು ಅಂತಹ ವ್ಯಕ್ತಿ, ಅಧಿಕಾರಿ ಅಥವಾ ಪ್ರಾಧಿಕಾರವು ಅಂತಹ ನಿರ್ದೇಶನಗಳನ್ನು ಪಾಲಿಸಲು ಬದ್ಧರಾಗಿರಬೇಕು ಎಂದು ಹೇಳುತ್ತದೆ.

ಇಲ್ಲಿನ ಸಮಸ್ಯೆಯು ನೀರಿನ ಅಗತ್ಯತೆಗಳು ಮತ್ತು ಅಂತಹ ಪರಿಶೀಲಿಸದ ಮತ್ತು ಅತಿರೇಕದ ಬೆಳವಣಿಗೆಯ ದೀರ್ಘಕಾಲಿಕ ಪರಿಸರೀಯ ಪರಿಣಾಮವಾಗಿದೆ, ಪರಿಸರದ ಎಲ್ಲಾ ನಿಯಮಗಳನ್ನು ಉಲ್ಲಂಘಿಸುವ ಮತ್ತು ನಗರದ ಕೆರೆಗಳನ್ನು ಅತಿಕ್ರಮಿಸಲು ಬರುವ ದೊಡ್ಡ ಯೋಜನೆಗಳಿಂದ ನನ್ನ ನಗರ ಬೆಂಗಳೂರಿನ ಮೇಲೆ ಗಮನಾರ್ಹ ಪರಿಣಾಮವುಂಟಾಗುತ್ತದೆ.

ಈ ವಿಷಯಕ್ಕೆ ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯವು ಜವಾಬ್ದಾರವಾಗಿದೆ. ಇದಲ್ಲದೇ ಸುಂದರ ಮತ್ತು ಸುಸ್ಥಿರ ನಗರಗಳನ್ನು ರಚಿಸುವ ಸರ್ಕಾರದ ಧ್ಯೇಯವನ್ನು ಪೂರೈಸಬೇಕಾದಲ್ಲಿ ಕೇಂದ್ರ ಪರಿಸರ ಹಾಗೂ ಅರಣ್ಯ ಸಚಿವಾಲಯವು ಕಣ್ಗಾವಲು ನಡೆಸಬೇಕು ಮತ್ತು ಅಂಥ ಅತಿಯಾದ ಉಲ್ಲಂಘನೆ ಮತ್ತು ಅದರ ಪರಿಣಾಮವಾಗಿ ಉಂಟಾಗುವ ಮಾಲಿನ್ಯವನ್ನು ನಿಯಂತ್ರಿಸಬೇಕು.

ಈ ಯೋಜನೆಗಳಿಗೆ ಅನುಮತಿಗಳು ಮತ್ತು ಅನುಮೋದನೆಗಳನ್ನು ಅಕ್ರಮ ಅಥವಾ ಭ್ರಷ್ಟಾಚಾರದ ಆಧಾರದ ಮೇಲೆ ನೀಡಲಾಗಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲು, ಕೆರೆ ಅಚ್ಚುಕಟ್ಟುಗಳಲ್ಲಿ ಮತ್ತು ಬೆಂಗಳೂರಿನಲ್ಲಿನ ಪರಿಸರಕ್ಕೆ ಸಂಬಂಧಿಸಿದಂತೆ

ಸೂಕ್ಷ್ಮವಾಗಿರುವ ಸ್ಥಳಗಳಲ್ಲಿ ನೀಡಿರುವ ಎಲ್ಲಾ ಅನುಮತಿಗಳು ಮತ್ತು ಅನುಮೋದನೆಗಳ ಲೆಕ್ಕಪರಿಶೋಧನೆ ಮತ್ತು ವಿಮರ್ಶೆಯನ್ನು ತುರ್ತು ಆಧಾರದ ಮೇಲೆ ಮಾಡಬೇಕೆಂದು ಆಕ್ರೋಶಗೊಂಡಿರುವ ಬೆಂಗಳೂರಿನ ಜನರ ಪರವಾಗಿ ನಾನು ನಿಮ್ಮನ್ನು ವಿನಂತಿಸುತ್ತೇನೆ.

ಅಂತಹ ಯೋಜನೆಗಳ ಪರಿಸರೀಯ ಸ್ಥಿತಿಗತಿಗಳಿಗೆ ಅನುಗುಣವಾಗಿ ನಿಯಮಪಾಲನೆಯನ್ನು ಇದು ಅಧ್ಯಯನ ನಡೆಸಬೇಕು ಮತ್ತು ಅಂಥ ವರದಿಗಳನ್ನು ಸಾರ್ವಜನಿಕಗೊಳಿಸಬೇಕು ಮತ್ತು ಕಡ್ಡಾಯ ಪರಿಸರೀಯ ಷರತ್ತುಗಳನ್ನು ಅನುಸರಿಸಲು ವಿಫಲವಾದ ಅಂತಹ ಯೋಜನೆಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು. ಬೆಂಗಳೂರಿನ ಪ್ರತಿಯೊಂದು ಕೆರೆಯ ಮಾಲಿನ್ಯದ ಮಟ್ಟಗಳ ಮೇಲೆ ಪರಿಶೋಧನೆ ನಡೆಸಲು ಮತ್ತು ಈ ಹೆಚ್ಚುತ್ತಿರುವ ಮಾಲಿನ್ಯ ಮಟ್ಟಗಳಿಗೆ ಕಾರಣಗಳನ್ನು ತನಿಖೆ ಮಾಡಲು ನಾನು ಕೇಂದ್ರ ಪರಿಸರ ಹಾಗೂ ಅರಣ್ಯ ಸಚಿವಾಲಯವನ್ನು ಮುಂದಾಗಿ ಕೇಳಿಕೊಳ್ಳುತ್ತೇನೆ. ಸಂಸ್ಕರಿಸದ ರಾಸಾಯನಿಕ ತ್ಯಾಜ್ಯವನ್ನು ಕೆರೆಗಳಿಗೆ ಸುರಿಯುತ್ತಿರುವ ರಿಯಲ್ ಎಸ್ಟೇಟ್ ಕಂಪೆನಿಗಳು ಮತ್ತು ಇತರ ಸಂಸ್ಥೆಗಳ ಮೇಲೆ ಕಠಿಣ ದಂಡಗಳನ್ನು ವಿಧಿಸಬೇಕು.

ಹೆಚ್ಚುವರಿಯಾಗಿ ಅರಣ್ಯ ಮತ್ತು ಪರಿಸರ ಸಚಿವಾಲಯವು ಸೂಕ್ತ ಪರಿಶೀಲನೆ ನಡೆಸದೇ ಅನುಮತಿ ನೀಡಿದ ಅಥವಾ ನಿಯಮಪಾಲನೆಯನ್ನು ಸಮರ್ಪಕವಾಗಿ ಮೇಲ್ವಿಚಾರಣೆ ಮಾಡುವಲ್ಲಿ ವಿಫಲರಾಗಿ ನಿರ್ಲಕ್ಷ್ಯವನ್ನು ತೋರಿದ ಅಥವಾ ಸಂಸ್ಕರಿಸದ ಒಳಚರಂಡಿಯನ್ನು ಕೆರೆಗಳಿಗೆ ಬಿಡಲು ಅವಕಾಶ ನೀಡಿದ ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮವನ್ನೂ ಸಹ ಕೈಗೊಳ್ಳಬೇಕು.

ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯದ ಒಳಗಿನ ಮತ್ತು ಹೊರಗಿನ ಇಂತಹ ಕ್ರಮಗಳು ಬೆಂಗಳೂರಿನ ಪ್ರಾಕೃತಿಕ ಸ್ವತ್ತು ದುರದೃಷ್ಟಕರ ರೀತಿಯಲ್ಲಿ ಪಟ್ಟಭದ್ರ ಹಿತಾಸಕ್ತಿಗಳ ಪಾಲಾಗುವುದಿಲ್ಲ ಮತ್ತು ಮಾಲಿನ್ಯಕ್ಕೆ ತುತ್ತಾಗುವುದಿಲ್ಲ ಎಂದು ಖಚಿತಪಡಿಸಿಕೊಳ್ಳುವ ಮೊದಲ ಹೆಜ್ಜೆಯಾಗಿದೆ.

# 29

# ಎಳೆಯರಲ್ಲಿನ ಮದ್ಯಪಾನ ಚಟದ ಕುರಿತು ಮುಖ್ಯಮಂತ್ರಿಯವರಿಗೆ ಪತ್ರ

16 ನೇ ಜೂನ್, 2015

ಶ್ರೀ ಸಿದ್ದರಾಮಯ್ಯ ಅವರೆ,

ಮುಖ್ಯಮಂತ್ರಿ ಮತ್ತು ರಾಜ್ಯ ಅಬಕಾರಿ ಸಚಿವರಾಗಿರುವ ತಮಗೆ ನಾನು ಈ ಪತ್ರವನ್ನು ಬರೆಯುತ್ತಿದ್ದೇನೆ. ಇತ್ತೀಚಿನ ದಿನಗಳಲ್ಲಿ, ಶಾಲಾ ಮಕ್ಕಳ ಪಾಲಕರು ಮತ್ತು ಶಾಲಾ ಶಿಕ್ಷಕರು, ನಗರದಲ್ಲಿನ ಹೆಚ್ಚಿನ ರೆಸ್ಟೋರೆಂಟುಗಳು, ಲೌಂಜ್ಸ್ ಮತ್ತು ಬಾರುಗಳು ಅಪ್ರಾಪ್ತ ವಯಸ್ಕರಿಗೆ ಮದ್ಯವನ್ನು ಒದಗಿಸುತ್ತಿರುವ ಬಗ್ಗೆ ಮತ್ತು ಹೆಚ್ಚುತ್ತಿರುವ ಇಂಥ ಘಟನೆಗಳ ಬಗ್ಗೆ ಗಮನ ಸೆಳೆದು ನನ್ನ ಬಳಿ ತಮ್ಮ ಕಳವಳವನ್ನು ವ್ಯಕ್ತಪಡಿಸುತ್ತಿದ್ದಾರೆ. ಬೆಂಗಳೂರಿನ ಜನಪ್ರಿಯ ಸಂಸ್ಥೆಗಳಾದ ಬ್ರೂ ವರ್ಕ್ಸ್, ದಿ ಗ್ಲಾಸ್ಹೌಸ್, ಸ್ಕೈಯೆ ಮತ್ತು ದಿ ಸೋಶಿಯಲ್ ಸೇರಿದಂತೆ ನಗರದ ಜನಪ್ರಿಯ ಸಂಸ್ಥೆಗಳು 21 ವರ್ಷದೊಳಗಿನ ಗ್ರಾಹಕರಿಗೆ ಮದ್ಯ ಸರಬರಾಗು ಮಾಡುತ್ತಿರುವುದು ನಿಯಮದ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ಆರೋಪಿಸಿದ್ದಾರೆ.

ನಾನು ಹಿಂದೆ ಈ ವಿಷಯವನ್ನು ಡಿಸೆಂಬರ್ 26, 2013 ರ ದಿನಾಂಕದಂದು ಅಬಕಾರಿ ಆಯುಕ್ತರಿಗೆ ಬರೆದಿರುವ ಪತ್ರದಲ್ಲಿ ಎತ್ತಿ ಹಿಡಿದಿದ್ದೇನೆ ಮತ್ತು ಅಂತಹ ಉಲ್ಲಂಘನೆಗಳ ದೊಡ್ಡ ಪ್ರಮಾಣದ ಸಾಕ್ಷ್ಯದತ್ತ ಬೊಟ್ಟುಮಾಡಿದ್ದೇನೆ. ಕಾನೂನಿನ ಕಟ್ಟುನಿಟ್ಟಾದ ಜಾರಿಗಾಗಿ ತಕ್ಷಣದ ಕ್ರಮಗಳನ್ನು ಕೈಗೊಳ್ಳಲು ಸರ್ಕಾರವನ್ನು ಒತ್ತಾಯಿಸಿದ್ದೆನೆ. ಆದಾಗ್ಯೂ, ಹಲವು ಉನ್ನತ ಜನರ ಲೌಂಜ್ಸ್, ರೆಸ್ಟೋರೆಂಟುಗಳು ಮತ್ತು ಬಾರುಗಳು ನಗರದಲ್ಲಿ ನಿಯಮಗಳನ್ನು ಮುರಿಯುವುದನ್ನು ಮುಂದುವರಿಸುತ್ತಿದ್ದು ಕೆಲವು ಸಂದರ್ಭಗಳಲ್ಲಿ ಶಾಲಾ ಮಕ್ಕಳು ಸೇರಿದಂತೆ ಎಳೆಯರಿಗೆ ಮದ್ಯ ಸರಬರಾಗು ಮಾಡುತ್ತಿರುವುದು ಕಂಡುಬರುತ್ತಿದೆ.

ಅಕ್ರಮ ಉಲ್ಲಂಘನೆಯನ್ನು ತಡೆಗಟ್ಟಲು ಹಾಗೂ ಕಾನೂನಿನ ಸರಿಯಾದ ಜಾರಿಗೊಳಿಸುವಿಕೆಯನ್ನು ಖಚಿತಪಡಿಸಿಕೊಳ್ಳುವುದು ಅಬಕಾರಿ ಇಲಾಖೆಯ ಜವಾಬ್ದಾರಿಯಾಗಿದ್ದು ಮತ್ತು ಮದ್ಯ ಸೇವೆ ನೀಡುವ ಸಂಸ್ಥೆಗಳು ಒಂದೇ ರೀತಿಯ ಕಟ್ಟುನಿಟ್ಟಿನ ಅನುಸರಣೆಯನ್ನು ಖಚಿತಪಡಿಸಿಕೊಳ್ಳಬೇಕಾಗುತ್ತದೆ.

ಮದ್ಯ ಸೇವನೆಗೆ ಸಂಬಂಧಪಟ್ಟ ನಿಯಮಗಳನ್ನು ಮತ್ತು ಕಟ್ಟುಪಾಡುಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಅಂತಹ ಸಂಸ್ಥೆಗಳಿಗೆ ಆದೇಶ ನೀಡಬೇಕು ಮತ್ತು ಎಳೆಯರಂತೆ ಕಾಣಿಸುವ ಗ್ರಾಹಕರಿಗೆ ವಯಸ್ಸಿನ ಗುರುತನ್ನು ವಿನಂತಿಸುವುದನ್ನು ರೂಢಿ ಮಾಡಿಕೊಳ್ಳಬೇಕು.

ಎಳೆಯರಿಗೆ ಮದ್ಯ ಸರ್ವ್ ಮಾಡುವುದು ಕಾನೂನಿನ ಉಲ್ಲಂಘನೆಯಷ್ಟೇ ಅಲ್ಲ, ಮಕ್ಕಳ ವಿರುದ್ಧದ ಅಪರಾಧವಾಗಿದೆ. ನಿಯಮಗಳನ್ನು ಉಲ್ಲಂಘಿಸುವ ಉಪಾಹರಗೃಹಗಳು, ಬಾರುಗಳು ಮತ್ತು ಇತರ ವಾಣಿಜ್ಯ ಸಂಸ್ಥೆಗಳ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು ಮತ್ತು ದಂಡ ವಿಧಿಸಬೇಕು. ಈ ಮೂಲಕ ಎಳೆವಯಸ್ಸಿನವರಲ್ಲಿ ಕುಡಿತದ ಚಟ ಮತ್ತು ಇದಕ್ಕೆ ಬೆಳೆಸಲು ಕಾರಣರಾಗುವ ಮೂಲಕ ಕಾನೂನುಬಾಹಿರ ಕೃತ್ಯದಲ್ಲಿ ಶಾಮೀಲಾಗಿರುವವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಕಾನೂನಿನ ಕಟ್ಟುನಿಟ್ಟಾದ ಜಾರಿಗಾಗಿ ಇಂತಹ ಸಂಸ್ಥೆಗಳ ಸಂಪೂರ್ಣ ಲೆಕ್ಕಪರಿಶೋಧನೆಗಳನ್ನು ಕೈಗೊಳ್ಳಲು ಮತ್ತು ಅಚ್ಚರಿಯ ತಪಾಸಣೆ ನಡೆಸಲು ನಾನು ಸರಕಾರವನ್ನು ಒತ್ತಾಯಿಸುತ್ತೇನೆ. ಈ ರೀತಿ ಮಾಡಲು ವಿಫಲವಾದಲ್ಲಿ ಮತ್ತು ಈ ಪುನರಾವರ್ತಿತ ಉಲ್ಲಂಘನೆಗಳನ್ನು ಪರಿಶೀಲಿಸಿ ಅಧಿಕಾರಿಗಳ ಮೇಲೆ ಕಾನೂನಿನ ಅಡಿಯಲ್ಲಿ ಹೊಣೆ ಹೊರಿಸಿ ಕ್ರಮ ಜರುಗಿಸಬೇಕು. ಸರಕಾರ/ ಅಬಕಾರಿ ಸಚಿವಾಲಯವು ಕಾನೂನನ್ನು ಜಾರಿಗೊಳಿಸದಿದ್ದಲ್ಲಿ, ಅವರ ಕರ್ತವ್ಯದಲ್ಲಿ

ವಿಫಲರಾದವರಿಗೆ ಎರಡೂ ಪರಿಹಾರಗಳನ್ನು ನಾನು ರೂಪಿಸಬೇಕಾಗುತ್ತದೆ – ಒಂದು ನಿಯಮಪಾಲನೆ ಎರಡನೆಯದು ಲೋಪ ಎಸಗಿದವರ ಮೇಲೆ ಕ್ರಮ ಜರುಗಿಸುವುದು.

ಈ ವಿಷಯದ ಬಗ್ಗೆ ನಿಮ್ಮ ಪ್ರತಿಕ್ರಿಯೆಗೆ ಹಾಗೂ ತುರ್ತು ಕ್ರಮಕ್ಕೆ ನಾನು ಎದುರುನೋಡುತ್ತೇನೆ.

ನಿಮ್ಮ ವಿಶ್ವಾಸಿ
ರಾಜೀವ್ ಚಂದ್ರಶೇಖರ್

ಶ್ರೀ ಸಿದ್ದರಾಮಯ್ಯ,
ಮಾನ್ಯ ಮುಖ್ಯಮಂತ್ರಿ,
ಕರ್ನಾಟಕ ಸರ್ಕಾರ

# 30

# ಎಳೆಯರಲ್ಲಿನ ಮದ್ಯಪಾನ ಚಟದ ಕುರಿತು ಅಬಕಾರಿ ಆಯುಕ್ತರಿಗೆ ಪತ್ರ

ಜೂನ್ 19, 2015

ಶ್ರೀ ಉಮಾಶಂಕರ್,

ಬೆಂಗಳೂರಿನಲ್ಲಿನ ಹಲವಾರು ರೆಸ್ಟೋರೆಂಟ್ ಮತ್ತು ಬಾರುಗಳು ಅಪ್ರಾಪ್ತ ವಯಸ್ಕರಿಗೆ ಮದ್ಯ ಸರಬರಾಜು ಮಾಡುವ ಮೂಲಕ ಕಾನೂನನ್ನು ಉಲ್ಲಂಘಿಸುವ ವಿಷಯದ ಬಗ್ಗೆ 16 ಜೂನ್ 2015 (ನಕಲು ನಿಮಗೆ ಗುರುತಿಸಲಾಗಿದೆ) ರಂದು ಕರ್ನಾಟಕದ ಮುಖ್ಯಮಂತ್ರಿಯವರಿಗೆ ಪತ್ರ ಬರೆದಿದ್ದು,

ಎಲ್ಲಾ ಪಬ್, ಬಾರ್, ರೆಸ್ಟೋರೆಂಟುಗಳು ಮತ್ತು ಇತರ ವಾಣಿಜ್ಯ ಸಂಸ್ಥೆಗಳು ಅಪ್ರಾಪ್ತ ವಯಸ್ಕರಿಗೆ ಮದ್ಯ ಸರಬರಾಜು ಮಾಡುವ ವಿರುದ್ಧ ಕಟ್ಟುನಿಟ್ಟಾಗಿ ಸೂಚನೆ/ಸರ್ಕ್ಯೂಲರ್ ಹೊರಡಿಸಬೇಕೆಂದು ನಿಮ್ಮನ್ನು ಕೋರುತ್ತೇನೆ. ಈ ಸಮಸ್ಯೆಯ ಬಗ್ಗೆ ಮತ್ತು ಬೆಂಗಳೂರಿನ ಹಲವು ಪಬ್ಬು/ರೆಸ್ಟೋರೆಂಟುಗಳಿಂದ ನಿಯಮಗಳ ಉಲ್ಲಂಘನೆಯ ಬಗ್ಗೆ ಅನೇಕ ಪೋಷಕರು ನನ್ನನ್ನು ಸಂಪರ್ಕಿಸಿದ್ದು ಈ ವಿಷಯದ ಬಗ್ಗೆ ನನ್ನ ಹಸ್ತಕ್ಷೇಪ ಬಯಸಿದ್ದಾರೆ.

ಪೋಷಕರು ವರದಿ ಉಲ್ಲಂಘನೆಗಳ ಬಗ್ಗೆ ದೂರು ನೀಡುವುದಕ್ಕಾಗಿ, ಕಾನೂನುಬದ್ಧವಾಗಿ ಅನುಮತಿಯಿರುವ 21 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ಮದ್ಯ ಸರಬರಾಜು ಮಾಡುವ ನಗರದಲ್ಲಿನ ಪಬ್, ಬಾರ್ ಮತ್ತು ರೆಸ್ಟಾರೆಂಟುಗಳ ವಿರುದ್ಧ ಪ್ರಕರಣಗಳನ್ನು ವರದಿ ಮಾಡಲು ವಿಶೇಷ ಇಮೇಲ್ ಹಾಟ್ಲೈನ್ protectourchildren@rajeev.in ಅನ್ನು ನಾನು ಪ್ರಾರಂಭಿಸಿದ್ದೇನೆ.

ಅಬಕಾರಿ ಇಲಾಖೆ ಈ ಕಾನೂನುಗಳನ್ನು ಮೇಲ್ವಿಚಾರಣೆ ಮಾಡುವ ಮತ್ತು ಜಾರಿಗೊಳಿಸುವಿಕೆಯನ್ನು ಸರ್ಕಾರದ ಇಲಾಖೆಯೆಂದು ಪರಿಗಣಿಸಲಾಗಿದೆ ಮತ್ತು ಅದರ ಕಾನೂನುಜಾರಿ ವಿಭಾಗವು ಈ ಸಮಸ್ಯೆ ಪರಿಹರಿಸಲು ಕ್ರಮ ಕೈಗೊಳ್ಳಬೇಕು ಮತ್ತು ಸರ್ಕ್ಯೂಲರ್ ಅನ್ನು ನೀವು ತಕ್ಷಣವೇ ಪ್ರಕಟಿಸಿ ಮತ್ತು ಬಾರುಗಳು ಮತ್ತು ಪಬ್ಬುಗಳ ಸಕಾಲಿಕ ಪರಿಶೋಧನೆ ಮತ್ತು ಪರಿಶೀಲನೆಗಳೊಂದಿಗೆ ಅದನ್ನು ಅನುಸರಿಸುತ್ತೀರಿ ಎಂದು ನಾನು ಭಾವಿಸುತ್ತೇನೆ.

ನಾನು ಈ ವಿಷಯದ ಬಗ್ಗೆ ಗಮನಹರಿಸುತ್ತಿರುತ್ತೇನೆ ಮತ್ತು ನನಗೆ ವರದಿ ಮಾಡಲಾದ ಯಾವುದೇ ಉಲ್ಲಂಘನೆಗಳನ್ನು ಕ್ರಮ ಕೈಗೊಳ್ಳುವುದಕ್ಕಾಗಿ ನಿಮಗೆ ಕಳುಹಿಸುತ್ತೇನೆ.

ಧನ್ಯವಾದಗಳೊಂದಿಗೆ

ನಿಮ್ಮ ವಿಶ್ವಾಸಿ,
ರಾಜೀವ್ ಚಂದ್ರಶೇಖರ್

ಶ್ರೀ ಎಸ್.ಆರ್ ಉಮಾಶಂಕರ್,
ಐಎಎಸ್, ಆಯುಕ್ತರು,
ಅಬಕಾರಿ ಇಲಾಖೆ,
ಕರ್ನಾಟಕ ಸರ್ಕಾರ,
ಬೆಂಗಳೂರು.

# 31

# ಮಕ್ಕಳ ರಕ್ಷಣೆಗಾಗಿ ಸರ್ಕಾರ–ನಾಗರೀಕರ ಸಹಭಾಗಿತ್ವದ ಕುರಿತು ಮುಖ್ಯಮಂತ್ರಿಯವರಿಗೆ ಪತ್ರ

24ನೇ ಜೂನ್, 2015

ಶ್ರೀ ಸಿದ್ದರಾಮಯ್ಯ ಅವರೆ,

ಜೂನ್ 16, 2015 ರ ದಿನಾಂಕದ ನಗರದೊಳಗಿನ ಬಾರ್, ರೆಸ್ಟಾರೆಂಟ್ ಮತ್ತು ಪಬ್ಬುಳಲ್ಲಿ ಅಪ್ರಾಪ್ತ ವಯಸ್ಕರಿಗೆ ಮದ್ಯ ಸರಬರಾಜು ಮಾಡುತ್ತಿರುವ ಘಟನೆಗಳನ್ನು ಎತ್ತಿಹಿಡಿದ ನನ್ನ ಪತ್ರದ  ಬಗ್ಗೆ ಪ್ರಸ್ತಾಪಿಸಿದ್ದಕ್ಕೆ ಧನ್ಯವಾದಗಳನ್ನು ಅರ್ಪಿಸುವುದಕ್ಕಾಗಿ ಈ ಪತ್ರ ಬರೆಯುತ್ತಿದ್ದೇನೆ. ಅಪ್ರಾಪ್ತ ವಯಸ್ಕರಿಗೆ ಮದ್ಯ ಪೂರೈಸುವುದು ಕೇವಲ ಕಾನೂನಿನ ಉಲ್ಲಂಘನೆಯಷ್ಟೇ ಅಲ್ಲ, ಬದಲಿಗೆ ಮಕ್ಕಳ ವಿರುದ್ಧದ ಅಪರಾಧವಾಗಿದೆ. ಈ ವಿಷಯವು ನಿಮ್ಮ ಸರ್ಕಾರ ಮತ್ತು ಅಬಕಾರಿ ಆಯುಕ್ತರ ಗಮನ ಸೆಳೆದಿದ್ದು ನನಗೆ ಖುಷಿ ನೀಡಿದೆ.

ಅಬಕಾರಿ ಇಲಾಖೆಯೊಳಗೆ ಸಾಕಷ್ಟು ಸಿಬ್ಬಂದಿ ಕೊರತೆಯು ಕಾನೂನಿನ ಕಟ್ಟುನಿಟ್ಟಿನ ಜಾರಿಯಲ್ಲಿ ಅಡಚಣೆ ಎನಿಸಿದೆ, ನಮ್ಮ ಮಕ್ಕಳನ್ನು ರಕ್ಷಿಸಲು ಸರ್ಕಾರ–ನಾಗರೀಕ

ಪಾಲುದಾರಿಕೆಯನ್ನು ರಚಿಸುವ ಅಗತ್ಯವಿದೆಯೆಂದು ನಾನು ನಂಬುತ್ತೇನೆ. ಈ ನಿಟ್ಟಿನಲ್ಲಿ, ಈ ಕೆಳಗಿನ ಶಿಫಾರಸುಗಳನ್ನು ಪರಿಗಣಿಸಲು ನಾನು ನಿಮ್ಮನ್ನು ಕೇಳಿಕೊಳ್ಳುತ್ತೇನೆ:

1. **ಎಕ್ಸೈಸ್ ಇಲಾಖೆ/ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳು ಮದ್ಯವನ್ನು ಪೂರೈಸುವ ಸಂಸ್ಥೆಗಳಿಗೆ ಕಾಲಕಾಲಕ್ಕೆ ಅನಿರೀಕ್ಷಿತ ಭೇಟಿಗಳನ್ನು ನಡೆಸುವ ಮೂಲಕ ಪರಿಶೀಲನೆ/ಮೇಲ್ವಿಚಾರಣೆ ಕೈಗೊಳ್ಳಬೇಕು:**

ಇದು ಕಾನೂನಿನ ಕಟ್ಟುನಿಟ್ಟಾದ ಜಾರಿಯನ್ನು ಖಚಿತಪಡಿಸುತ್ತದೆ. ನಿಯಮಗಳನ್ನು ಉಲ್ಲಂಘಿಸುವ ಉಪಾಹರಗೃಹಗಳು, ಬಾರುಗಳು ಮತ್ತು ಇತರ ವಾಣಿಜ್ಯ ಸಂಸ್ಥೆಗಳ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು ಮತ್ತು ದಂಡ ವಿಧಿಸಬೇಕು. ಈ ಮೂಲಕ ಎಳೆವಯಸ್ಸಿನವರಲ್ಲಿ ಕುಡಿತದ ಚಟ ಮತ್ತು ಇದಕ್ಕೆ ಬೆಳೆಸಲು ಕಾರಣರಾಗುವ ಮೂಲಕ ಕಾನೂನುಬಾಹಿರ ಕೃತ್ಯದಲ್ಲಿ ಶಾಮೀಲಾಗಿರುವವರ ವಿರುದ್ಧ ಕ್ರಮ ಕೈಗೊಳ್ಳಬೇಕು.

2. **ಉಲ್ಲಂಘನೆಯ ಮೇಲೆ ಇ–ಮೇಲ್ ಮತ್ತು ಕರೆಗಳನ್ನು ಸ್ವೀಕರಿಸುವುದಕ್ಕಾಗಿ ಅಬಕಾರಿ ಇಲಾಖೆ/ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಜಂಟಿಯಾಗಿ ಹಾಟ್ಲೈನ್ ಪ್ರಾರಂಭಿಸಬೇಕು:**

ಇದು ಪೋಷಕ ಗುಂಪುಗಳು, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು (ಆರ್ ಡಬ್ಲ್ಯು ಎಗಳು) ಮತ್ತು ಇತರ ನಾಗರೀಕರನ್ನು ಕಾನೂನುಜಾರಿ ಪ್ರಕ್ರಿಯೆಯಲ್ಲಿ ತೊಡಗಿಸುತ್ತದೆ ಮತ್ತು ಅವರು ಅಂತಹ ಉಲ್ಲಂಘನೆಗಳನ್ನು ವರದಿ ಮಾಡುವುದಕ್ಕಾಗಿ ಮೇಲ್/ಕರೆ ಮಾಡಬೇಕು.

21 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ಮದ್ಯ ಪೂರೈಸುವ ನಗರದಲ್ಲಿನ ಬಾರ್, ರೆಸ್ಟಾರೆಂಟ್ ಮತ್ತು ಪಬ್ಬುಗಳ ಬಗ್ಗೆ ಪೋಷಕರು ಮತ್ತು ನಾಗರೀಕರು ಅನಾಮಧೇಯವಾಗಿ ವರದಿ ಮಾಡಲು/ದೂರು ನೀಡಲು rotectourchildren@ rajeev.in ಎಂಬ ಇದೇ ಮಾದರಿಯ ಹಾಟ್ಲೈನ್ ಅನ್ನು ನಾನು ಪ್ರಾರಂಭಿಸಿದ್ದೇನೆ. ನಿಮ್ಮ ಪರಿಗಣನೆಗಾಗಿ ಮತ್ತು ಕ್ರಮ ಕೈಗೊಳ್ಳುವುದಕ್ಕಾಗಿ ಹಾಟ್ಲೈನಿನಲ್ಲಿ ನಾನು ಸ್ವೀಕರಿಸಿರುವ ಹಲವು ದೂರುಗಳನ್ನು ಲಗತ್ತಿಸಿದ್ದೇನೆ.

ರೆಸ್ಟೋರೆಂಟ್, ಬಾರ್ ಮತ್ತು ಇತರ ವಾಣಿಜ್ಯ ಸಂಸ್ಥೆಗಳು ತುಂಬ ಕಾಲದಿಂದ ಸಕ್ರಿಯವಾಗಿ ಅಪ್ರಾಪ್ತ ವಯಸ್ಕರಿಗೆ ಮದ್ಯ ಪೂರೈಸುತ್ತ ಬಂದಿದ್ದು ಈ ವ್ಯಾಧಿಯನ್ನು

ಪರಿಹರಿಸಲು ಸರ್ಕಾರ–ನಾಗರೀಕರ ಪಾಲುದಾರಿಕೆಯು ಮಹತ್ವದ ಪಾತ್ರವನ್ನು ವಹಿಸಬೇಕಿದೆ. ಕುಡಿತವು ನಮ್ಮ ಮಕ್ಕಳನ್ನು ಹಾನಿಗೊಳಿಸುವುದನ್ನು ತಪ್ಪಿಸುವುದಕ್ಕಾಗಿ ಇಂತಹ ಪಾಲುದಾರಿಕೆಯನ್ನು ಸರ್ಕಾರ ಮತ್ತು ಅಬಕಾರಿ ಇಲಾಖೆಯು ಬೆಳೆಸಬೇಕೆಂದು ನಾನು ಕೋರುತ್ತೇನೆ. ಈ ವಿಷಯದ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ನಾನು ಎದುರು ನೋಡುತ್ತೇನೆ

ನಿಮ್ಮ ವಿಶ್ವಾಸಿ<br>
ರಾಜೀವ್ ಚಂದ್ರಶೇಖರ್

ಶ್ರೀ ಸಿದ್ದರಾಮಯ್ಯ,<br>
ಮಾನ್ಯ ಮುಖ್ಯಮಂತ್ರಿ,<br>
ಕರ್ನಾಟಕ ಸರ್ಕಾರ,<br>
ವಿಧಾನ ಸೌಧ,<br>
ಬೆಂಗಳೂರು.

ಇವರಿಗೆ ಪ್ರತಿಗಳು:

1. ಶ್ರೀಮತಿ ಉಮಾಶ್ರೀ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು, ವಿದಾನ ಸೌಧ, ಬೆಂಗಳೂರು

2. ಡಾ. ರಜನೀಶ್ ಗೋಯೆಲ್, ಐಎಎಸ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ಎಂ.ಎಸ್. ಬಿಲ್ಡಿಂಗ್, ಬೆಂಗಳೂರು

ಶ್ರೀ ಎಸ್.ಆರ್ ಉಮಾಶಂಕರ್, ಐಎಎಸ್, ಅಬಕಾರಿ ಆಯುಕ್ತರು, ಕರ್ನಾಟಕ ಸರ್ಕಾರ.

# 32

# ಬಿಬಿಎಂಪಿ ಹಣಕಾಸುಗಳ ಸಿಎಜಿ ಲೆಕ್ಕಪರಿಶೋಧನೆಗೆ ಒತ್ತಾಯಿಸಿ ಮುಖ್ಯಮಂತ್ರಿಯವರಿಗೆ ಪತ್ರ

8 ನೇ ಅಕ್ಟೋಬರ್, 2015

ಶ್ರೀ ಸಿದ್ದರಾಮಯ್ಯ ಅವರೆ,

**ವಿಷಯ: ಬಿಬಿಎಂಪಿ ಖಾತೆಗಳ ಸಿಎಜಿ ಲೆಕ್ಕಪರಿಶೋಧನೆ ಕೋರಿಕೆ**

ನಮ್ಮ ನಗರ ಬೆಂಗಳೂರು ಎದುರಿಸುತ್ತಿರುವ ಸಮಸ್ಯೆಗಳನ್ನು ನಿಮ್ಮ ಗಮನಕ್ಕೆ ತರುವುದಕ್ಕಾಗಿ ಮತ್ತು ವಿಶೇಷವಾಗಿ ಈ ಸಮಸ್ಯೆಗಳನ್ನು ಉಂಟುಮಾಡುವ ಅತಿದುರ್ಬಲ ಆಡಳಿತದ ಕುರಿತು ಡಿಸೆಂಬರ್ 16, 2013 ಮತ್ತು 2 ನೇ ಏಪ್ರಿಲ್ 2015 ರಂದು ಬರೆದ ಪತ್ರಗಳ ಮುಂದುವರಿದ ಭಾಗವಾಗಿ ನಾನು ಈ ಪತ್ರವನ್ನು ಬರೆಯುತ್ತಿದ್ದೇನೆ.

ಇಂದು ನಗರವು ಎದುರಿಸುತ್ತಿರುವ ಹೆಚ್ಚಿನ ಸಮಸ್ಯೆಗಳು – ಕೆಟ್ಟ ರಸ್ತೆಗಳು,

ಅಸಮರ್ಪಕ ಕಸ ನಿರ್ವಹಣಾ ಸಾಮರ್ಥ್ಯಗಳು ಇತ್ಯಾದಿಗೆ ಆರ್ಥಿಕ ಸಂಪನ್ಮೂಲಗಳ ಕೊರತೆಯೇ ಕಾರಣ ಎಂದು ಹೇಳಲಾಗುತ್ತಿದೆ. ಡಿಸೆಂಬರ್ 2013 ರಲ್ಲಿ ನಾನು ಆದಾಯ ಸಂಗ್ರಹಣೆ ಮತ್ತು ಸೋರಿಕೆಗಳಿಗೆ ಕಾರಣವಾಗಿರುವ ಲೋಪದೋಷಗಳ ಬಗ್ಗೆ ಈ ವಿಷಯವನ್ನು ಒತ್ತಿಹೇಳಿದ್ದೇನೆ.

ನಾಗರೀಕರಿಂದ ಸಂಗ್ರಹಿಸಿರುವ ತೆರಿಗೆ ಬೇರೆಲ್ಲೋ ಹೋಗುವುದು ಮತ್ತು ನಗರದ ಬೆಳವಣಿಗೆಗೆ ಬಳಕೆ ಮಾಡದೇ ಇರುವುದು ಸೇರಿದಂತೆ ಸಾವಿರಾರು ಕೋಟಿ ರೂ. ಗಳ ಆದಾಯದ ಬಿಬಿಎಂಪಿ ಹಣಕಾಸುಗಳ ಅತಿರೇಕದ ಮತ್ತು ಉದ್ದೇಶಪೂರ್ವಕ ತಪ್ಪು ನಿರ್ವಹಣೆಯ ಬಗ್ಗೆ ನಿಮ್ಮ ಗಮನವನ್ನು ಸೆಳೆಯಲು ನಾನು ಮತ್ತೆ ನಿಮಗೆ ಪತ್ರ ಬರೆಯುತ್ತಿದ್ದೇನೆ.

ಬಿಬಿಎಂಪಿ ಸಂಗ್ರಹಿಸಿದ ನೂರಾರು ಕೋಟಿ ತೆರಿಗೆ ರಶೀದಿಗಳು ಮತ್ತು ಆದಾಯವನ್ನು ಮುಖ್ಯ ಬ್ಯಾಂಕ್ ಖಾತೆಗಳಿಗೆ ನೀಡಲಾಗುವುದಿಲ್ಲ, ಬದಲಿಗೆ ಬಿಬಿಎಂಪಿಯ ಕೆಲವು ಅಧಿಕಾರಿಗಳು ವಿವಿಧ ಖಾತೆಗಳಲ್ಲಿ ಠೇವಣಿ ಮಾಡಿದ್ದಾರೆ ಎಂದು ಕಳವಳಗೊಂಡ ನಾಗರೀಕರು ಮತ್ತು ಸರ್ಕಾರೇತರ ಸಂಸ್ಥೆಗಳು ನನ್ನ ಗಮನಕ್ಕೆ ತಂದಿರುತ್ತವೆ. ಬಿಬಿಎಂಪಿ ಅಧಿಕಾರಿಗಳು 900ಕ್ಕಿಂತ ಹೆಚ್ಚು ಬ್ಯಾಂಕ್ ಖಾತೆಗಳನ್ನು ನಿರ್ವಹಿಸುತ್ತಿರುವುದು ತಿಳಿದುಬಂದಿದೆ.

ಒಂದೇ ನಗರದಲ್ಲಿನ ಒಂದು ಸಂಸ್ಥೆಗೆ ಇಷ್ಟೊಂದು ದೊಡ್ಡ ಸಂಖ್ಯೆಯ ಬ್ಯಾಂಕ್ ಖಾತೆಗಳು ವಿವಿಧ ಸಾರ್ವಜನಿಕ ಮತ್ತು ಖಾಸಗಿ ವಲಯದ ಬ್ಯಾಂಕುಗಳಲ್ಲಿ ಹೇಗೆ ತೆರೆಯಲಾಗಿದೆ ಮತ್ತು ನಿರ್ವಹಿಸಲಾಗುತ್ತಿದೆ ಎಂಬುದರ ಕುರಿತು ವಿಚಾರಣೆಗಾಗಿ ಮಾಡಬೇಕಾದ ಅಗತ್ಯವಿದೆ. ತರುವಾಯ ಈ ಖಾತೆಗಳನ್ನು 25 ಖಾತೆಗಳಾಗಿ ಒಟ್ಟುಗೂಡಿಸಲಾಗುತ್ತಿದೆ ಎಂದು ನಾನು ಅರ್ಥಮಾಡಿಕೊಂಡಿದ್ದೇನೆ, ಆದರೆ ಈ ಹಿಂದೆ 900 ಕ್ಕಿಂತಲೂ ಹೆಚ್ಚಿನ ಖಾತೆಗಳ ಕಾರ್ಯಕ್ಷಮತೆಯ ವಿಷಯವು ಉತ್ತರ ದೊರೆಯದ ಪ್ರಶ್ನೆಯಾಗಿ ಅಥವಾ ಪ್ರಶ್ನಿಸಲ್ಪಡದೆ ಉಳಿದಿದೆ.

ರಾಷ್ಟ್ರೀಯ ಪೌರ ಲೆಕ್ಕಪತ್ರ ನಿರ್ವಹಣೆ ಅಥವಾ ಕರ್ನಾಟಕ ಪೌರ ಲೆಕ್ಕಪತ್ರ ಮತ್ತು ಮುಂಗಡಪತ್ರ ನಿಯಮಗಳಂತ ಲೆಕ್ಕಪತ್ರ ಮಾನದಂಡಗಳನ್ನು ಪರಿಚಯಿಸುವಲ್ಲಿನ ಸರ್ಕಾರದ ವೈಫಲ್ಯವನ್ನು ಬಳಸಿಕೊಂಡು ಪಾಲಿಕೆಯ ನಿಧಿಗಳನ್ನು ದುರ್ಬಳಕೆ ಮಾಡಿಕೊಳ್ಳಲು ಬಿಬಿಎಂಪಿಯಲ್ಲಿನ ಕೆಲವು ನಿರ್ಲಜ್ಜ ಅಧಿಕಾರಿಗಳು ಈ ಹಲವಾರು ಬ್ಯಾಂಕ್ ಖಾತೆಗಳನ್ನು ಬಳಕೆ ಮಾಡಿಕೊಂಡಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಖಾಸಗಿ ಬ್ಯಾಂಕುಗಳಲ್ಲಿ ಮತ್ತು ಕೆಲವು ಪ್ರಕರಣಗಳಲ್ಲಿ ಬೆಂಗಳೂರಿನ ಹೊರಗಿನ

ಬ್ಯಾಂಕುಗಳಲ್ಲಿ ಕೆಲವು ಅಧಿಕಾರಿಗಳ ವೈಯಕ್ತಿಕ ಲಾಭಕ್ಕಾಗಿ ಅಕ್ರಮವಾಗಿ ದೊಡ್ಡ ಪ್ರಮಾಣದ ತೆರಿಗೆಗಳ ಹಣವನ್ನು ಸಂಗ್ರಹಿಸಿರುವ ವರದಿಗಳಿವೆ.

ಇದು ಬಿಡಿಎ, ಬಿಬಿಎಂಪಿ, ಆರ್‌ಡಿಪಿಆರ್ ಅಥವಾ ಇತರ ಯಾವುದೇ ಸರ್ಕಾರಿ ಇಲಾಖೆಗಳಲ್ಲೇ ಆಗಿರಲಿ, ಭ್ರಷ್ಟ ಅಧಿಕಾರಿಗಳು ಅಕ್ರಮವಾಗಿ ಸಾರ್ವಜನಿಕ ಸಾರ್ವಜನಿಕ ನಿಧಿಯನ್ನು ಸಂಗ್ರಹಿಸುತ್ತಿದ್ದಾರೆ. ಇದರಿಂದ ಬೊಕ್ಕಸಕ್ಕೆ ಠೇವಣಿಗಳ ಬಡ್ಡಿ ನಷ್ಟವಾಗುತ್ತಿದ್ದರೆ, ನಗರವು ಅಭಿವೃದ್ಧಿಗೆ ಅಗತ್ಯವಿರುವ ಹಣವನ್ನು ಕಳೆದುಕೊಳ್ಳುತ್ತಿದೆ. ರಾಜ್ಯ ಹಣಕಾಸು ಸಚಿವರಾಗಿ ನಿಮ್ಮಿಂದ ತಕ್ಷಣದ ಕ್ರಮವನ್ನು ಬೇಡುವ ವಿಪರೀತ ಕಾಳಜಿಯ ವಿಷಯವಿದು.

ಬಿಬಿಎಂಪಿಯ ಹಣಕಾಸನ್ನು ಹಲವು ವರ್ಷಗಳಿಂದ ಲೆಕ್ಕಪರಿಶೋಧನೆ ಮಾಡಿಲ್ಲ ಮತ್ತು ಕಳೆದ ಆಂತರಿಕ ಲೆಕ್ಕಪರಿಶೋಧನೆಯು 2011ರಲ್ಲಿ ನಡೆದಿದೆ ಎಂಬುದು ಅತ್ಯಂತ ಆಘಾತಕಾರಿಯಾಗಿದೆ. 2009–10ನೇ ಸಾಲಿನಲ್ಲಿ ಬಿಬಿಎಂಪಿ ಕೊನೆಯ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ (ಸಿಎಜಿ) ಲೆಕ್ಕ ಪರಿಶೋಧನೆಯು ಅಗಾಧ ಪ್ರಮಾಣದ ಆರ್ಥಿಕ ಅಕ್ರಮಗಳನ್ನು ಬಹಿರಂಗಪಡಿಸಿತು ಎಂಬುದನ್ನು ನೀವು ತಿಳಿದಿದ್ದೀರಿ. 14/7/2014 ರಂದು ಶಾಸನಸಭೆಯಲ್ಲಿ 2014 ರ 5 ನೇ ಸಂಖ್ಯೆಯ ವರದಿಯನ್ನು ಮಂಡಿಸಿರುವ ಸಿಬಿಜಿಯು ಬಿಬಿಎಂಪಿಯ ಲೆಕ್ಕಪತ್ರ ಮತ್ತು ಹಣಕಾಸಿನ ಆಚರಣೆಗಳ ಮೇಲೆ ಗಂಭೀರ ಆಪಾದನೆಗಳನ್ನು ವ್ಯಕ್ತಪಡಿಸಿದೆ. 2008–13ರ ವರ್ಷದಲ್ಲಿ ಚಾರ್ಟರ್ಡ್ ಅಕೌಂಟೆಂಟರಿಂದ ಖಾತೆಗಳ ಪ್ರಮಾಣೀಕರಣದ ಕುಸಿತವನ್ನು ಸಿಎಜಿ ಗಮನಿಸಿದೆ. ಪಾಲಿಕೆಯ ವಾರ್ಷಿಕ ಖಾತೆಗಳಲ್ಲಿ ಕೊರತೆಗಳು ಮತ್ತು ಲೋಪಗಳನ್ನು ಪ್ಯಾರಾಗಳು 3.1 ರಿಂದ 3.17, 4.5 ಮತ್ತು 4.6 ಸೇರಿದಂತೆ ಅನೇಕ ಪ್ಯಾರಾಗಳಲ್ಲಿ ಸಿಎಜಿ ಗಮನಿಸಿದೆ.

ಹಣಕಾಸು ಸಚಿವರಾಗಿ ಮತ್ತು ಮುಖ್ಯಮಂತ್ರಿಯವರಾಗಿ, ಹಣಕಾಸು ಮತ್ತು ಲೆಕ್ಕಪರಿಶೋಧನೆಯಲ್ಲಿ ಪಾರದರ್ಶಕತೆ ಮತ್ತು ಸಮಗ್ರತೆಯು ಒಂದು ಸ್ವಚ್ಛ ಆಡಳಿತವನ್ನು ನಡೆಸುವ ಅಂಚುಗಲ್ಲುಗಳಾಗಿವೆ ಎಂಬುದನ್ನು ನೀವು ಒಪ್ಪುತ್ತೀರಿ. ಬಿಬಿಎಂಪಿ ಮತ್ತು ಇತರ ಏಜೆನ್ಸಿಗಳ ಹಣಕಾಸಿನ ಮತ್ತು ಲೆಕ್ಕಪತ್ರ ವ್ಯವಹಾರಗಳ ಸುತ್ತಲೂ ದುರ್ಬಲತೆಯ ಒಂದು ಪೊರೆಯಿದೆ. ಆದ್ದರಿಂದ, ನಾಗರೀಕರಿಗೆ ಸೇರಿರುವ, ಬೇರೆಡೆ ತಿರುಗಿಸಲಾದ ಹಣವನ್ನು ಗುರುತಿಸುವ ಮತ್ತು ಇದಕ್ಕೆ ಕಾರಣರಾದ ಅಪರಾಧಿಗಳನ್ನು ಪತ್ತೆಹಚ್ಚಲು ವಿಶೇಷ ಲೆಕ್ಕಪರಿಶೋಧನೆಯೊಂದು ತುರ್ತಾಗಿ ಅಗತ್ಯವಿದೆ.

ಬಿಬಿಎಂಪಿ ಮತ್ತು ಇತರ ಸಂಸ್ಥೆಗಳು ಸಂಗ್ರಹಿಸಿದ ಸಂಪನ್ಮೂಲಗಳು ಸಾರ್ವಜನಿಕ ನಿಧಿಯ ಭಾಗವಾಗುತ್ತವೆ ಮತ್ತು ಇದನ್ನು ಯಾವುದೇ ರೀತಿಯಲ್ಲಿ ದುರ್ಬಳಕೆ ಮಾಡಿಕೊಳ್ಳುವುದು ಭ್ರಷ್ಟಾಚಾರವೆನಿಸುತ್ತದೆ ಮತ್ತು ಭ್ರಷ್ಟಾಚಾರ ತಡೆ ಕಾಯ್ದೆ ಸೇರಿದಂತೆ ಕಾನೂನಿನ ವಿವಿಧ ಸೆಕ್ಷನ್ ಅಡಿಯಲ್ಲಿ ಭ್ರಷ್ಟಾಚಾರದ ಈ ದುಷ್ಕೃತ್ಯಗಳ ವಿರುದ್ಧ ಮೊಕದ್ದಮೆ ಹೂಡಬಹುದಾಗಿದೆ.

ವ್ಯಾಪಕವಾದ ಆದಾಯ ಸೋರಿಕೆಯಿದ್ದು ಆದಾಯವನ್ನು ಬೇರೆಡೆ ತಿರುಗಿಸಲಾಗುತ್ತಿದೆ ಎಂಬುದಕ್ಕೆ ಸಾಕಷ್ಟು ಪುರಾವೆಗಳಿವೆ. ಬೆಂಗಳೂರಿನಲ್ಲಿರುವ ಈ ಪರಿಸ್ಥಿತಿಯನ್ನು ಬದಲಿಸುವುದಕ್ಕಾಗಿ ಹಸ್ತಕ್ಷೇಪ ಮಾಡಲು ಮತ್ತು ಆಡಳಿತವನ್ನು ಸ್ವಚ್ಛಗೊಳಿಸಲು ನಾನು ನಿಮಗೆ ಪತ್ರ ಬರೆದಿದ್ದೇನೆ. ಆದರೆ ನೀವು ಈವರೆಗೆ ಏನನ್ನೂ ಮಾಡಿಲ್ಲ. ಬೆಂಗಳೂರನ್ನು ಪ್ರತಿನಿಧಿಸುವ ಸಂಸತ್ ಸದಸ್ಯನಾಗಿ, ನಾನು ನಿಮಗೆ ಮತ್ತು ನಿಮ್ಮ ಸರಕಾರಕ್ಕೆ ಸರಿಯಾದ ಕ್ರಮ ಜರುಗಿಸುವಂತೆ ಮತ್ತು ಬಿಬಿಎಂಪಿ ಹಣಕಾಸಿನ ಸಿಎಜಿ ಲೆಕ್ಕ ಪರಿಶೋಧನೆಗೆ ತಕ್ಷಣದ ಆದೇಶ ನೀಡುವಂತೆ ನಿಮ್ಮನ್ನು ಒತ್ತಾಯಿಸುತ್ತೇನೆ. ಈ ಲೆಕ್ಕಪರಿಶೋಧನೆಯಲ್ಲಿ 2010ರ ನಂತರ ಬಿಡುಗಡೆಯಾದ ಆದಾಯ ರಸೀದಿಗಳು ಮತ್ತು ನಿಜವಾದ ಆದಾಯ ರಶೀದಿಗಳ ನಡುವಿನ ಸಮನ್ವಯದ ಮೇಲೆ ವಿಶೇಷ ಗಮನ ಹರಿಸತಕ್ಕದ್ದು. ಈ ವಿಷಯದಲ್ಲಿ ವಿಫಲರಾದಲ್ಲಿ ಕಾನೂನಿನ ಕ್ರಮವನ್ನು ಜರುಗಿಸಬೇಕಾಗುತ್ತದೆ.

ನಿಮ್ಮ ತುರ್ತು ಮತ್ತು ಧನಾತ್ಮಕ ಪ್ರತಿಕ್ರಿಯೆಗಾಗಿ ಎದುರುನೋಡುತ್ತೇನೆ.

ನಿಮ್ಮ ವಿಶ್ವಾಸಿ,
ರಾಜೀವ್ ಚಂದ್ರಶೇಖರ್

ಶ್ರೀ ಸಿದ್ದರಾಮಯ್ಯ,
ಮಾನ್ಯ ಮುಖ್ಯಮಂತ್ರಿ,
ಕರ್ನಾಟಕ ಸರ್ಕಾರ

# 33

# ರಾಜಾರೋಷ ಭ್ರಷ್ಟಾಚಾರ ಮತ್ತು ಸ್ಥಾಪಿತ ಹಿತಾಸಕ್ತಿಗಳ ಕಪಿಮುಷ್ಠಿಯ ಕುರಿತು ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರಿಗೆ ಪತ್ರ

5ನೇ ನವೆಂಬರ್, 2015

ಶ್ರೀ ಜಾರ್ಜ್,

ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರ ಜವಾಬ್ದಾರಿಯನ್ನು ವಹಿಸಿಕೊಂಡಿರುವ ನಿಮಗೆ ದಯವಿಟ್ಟು ನನ್ನ ಶುಭಾಶಯಗಳು. ಬೆಂಗಳೂರು ನಗರವು ಹೂಡಿಕೆ ಮತ್ತು ಆರ್ಥಿಕ ಚಟುವಟಿಕೆಯ ರಹದಾರಿಯಾಗಿದ್ದು, ನಮ್ಮ ರಾಜ್ಯಕ್ಕೆ ಮುಖ್ಯವಾಗಿದೆ ಎಂಬುದರಲ್ಲಿ ನಿಮಗೆ ಯಾವುದೇ ಸಂಶಯವೂ ಬೇಡ.

ಆದ್ದರಿಂದ, ಇದರ ಸುಸ್ಥಿತಿ ಮತ್ತು ಪ್ರಗತಿಯೆಂಬುದು ಸಮರ್ಥನೀಯ ಮತ್ತು ಯೋಜಿತ ಬೆಳವಣಿಗೆ ಮತ್ತು ವಿಸ್ತರಣೆಗೆ ಏಕೈಕ ಖಾತರಿಯಾಗಿದ್ದು ಹೆಚ್ಚು ನಿರ್ಣಾಯಕವಾದುದಾಗಿದೆ. ನಮ್ಮ ನಗರದ ಅಸ್ತವ್ಯಸ್ತತೆ ಮತ್ತು ಅವನತಿ ಮತ್ತು

ಆಡಳಿತ ಹಾಗೂ ಅದರ ಸಂಸ್ಥೆಗಳಲ್ಲಿ ಸುಧಾರಣೆಗಳ ಅಗತ್ಯದ ವಿಷಯದ ಬಗ್ಗೆ ನಾನು ಅಧಿಕಾರ ವಹಿಸಿಕೊಂಡಂದಿನಿಂದ ನಾನು ಸರ್ಕಾರದೊಂದಿಗೆ ತೊಡಗಿಸಿಕೊಂಡಿದ್ದೇನೆ ಎಂದು ನಿಮಗೆ ತಿಳಿದಿರುತ್ತದೆ. ನಮ್ಮ ನಗರವನ್ನು ಪುನಶ್ಚೇತನಗೊಳಿಸುವುದಕ್ಕಾಗಿ ಅಗತ್ಯವಿರುವ ಕ್ರಮಗಳನ್ನು ನೀವು ಪ್ರಾರಂಭಿಸಿ ಎಂದು ವಿನಂತಿಸುತ್ತ ನಾನು ನಿಮಗೆ ಈ ಪತ್ರ ಬರೆಯುತ್ತಿದ್ದೇನೆ. ನಗರದ ಉಸ್ತುವಾರಿ ಮತ್ತು ಅದರ ಎಲ್ಲಾ ಸಂಸ್ಥೆಗಳ ಹೊಣೆ ಹೊತ್ತಿರುವ ಮೊದಲ ಸಚಿವರಾಗಿ ಅಗತ್ಯವಿರುವ ಬದಲಾವಣೆಗಳು ಮತ್ತು ಸುಧಾರಣೆಗಳನ್ನು ಜಾರಿಗೆ ತರಲು ನಿಮಗೆ ಅವಕಾಶವಿದೆ.

ಮೊದಲಿಗೆ, ಹಲವಾರು ಸಂಘಟನೆಗಳು, ನಾಗರೀಕ ಗುಂಪುಗಳು ಮತ್ತು ನಾಗರೀಕರು ಬೆಂಗಳೂರಿನ ಸಮಸ್ಯೆಗಳನ್ನು ಪರಿಹರಿಸುವಲ್ಲಿ ವಿಭಿನ್ನ ರೀತಿಯಲ್ಲಿ ಪ್ರಯತ್ನಿಸುತ್ತಿದ್ದಾರೆ ಎಂದು ನಿಮಗೆ ತಿಳಿದಿದೆ. ಅವರೆಲ್ಲರೂ ವಿಭಿನ್ನ ವಿಚಾರಗಳು ಮತ್ತು ಸಲಹೆಗಳನ್ನು ಪ್ರಸ್ತಾಪಿಸುತ್ತಿದ್ದಾರೆ. ಇದು ದೃಢವಾದ ನಾಗರೀಕ ಪಾಲ್ಗೊಳ್ಳುವಿಕೆಯ ಉತ್ತಮ ಸಂಕೇತವಾಗಿದ್ದರೂ, ಸರಿಯಾದ ಯೋಜನಾ ದೃಷ್ಟಿಕೋನದಿಂದ ಸರ್ಕಾರವು ಈ ಸಲಹೆಗಳನ್ನು ಸೂಕ್ತರೂಪಕ್ಕೆ ತರಬೇಕಾದ ಅಗತ್ಯವಿದೆ. ಇಲ್ಲದಿದ್ದರೆ ಆಲೋಚನೆಗಳ ಆಯ್ದ ಮತ್ತು ಅಪಾರದರ್ಶಕವಾದ ಅನುಷ್ಠಾನವು ಸಾರ್ವಜನಿಕ ಹಣವನ್ನು ಮಧ್ಯಂತರ ವಿಚಾರಗಳಲ್ಲಿ ಖರ್ಚು ಮಾಡಲು ಕಾರಣವಾಗಬಹುದು. ಟೆಂಡರ್ ಶ್ಯೂರ್ ರಸ್ತೆಗಳು ಆ ವಲಯಕ್ಕೆ ಸ್ಪಷ್ಟವಾದ ಸಮಗ್ರ ಯೋಜನೆಯಿಲ್ಲದೆ ಸಾರ್ವಜನಿಕ ಹಣವನ್ನು ಖರ್ಚು ಮಾಡುವ ಮೂಲಕ ಕೆಟ್ಟ-ಸಂದೇಶವನ್ನುಳ್ಳ ಮತ್ತು ಕಳಪೆ ಚಿಂತನೆಯ ಉದಾಹರಣೆಯಾಗಿದೆ, ಇದು ಯೋಜನೆಗಳ ಸ್ಥಳದ ಹಿಂದಿನ ಪ್ರೇರಣೆಗಳ ಅರ್ಹವಾದ ಪ್ರಶ್ನೆಗಳಿಗೆ ಕಾರಣವಾಗುತ್ತದೆ.

ನಾನು ಇಲ್ಲಿ ತುರ್ತು ಪರಿಹಾರಗಳನ್ನು ಯೋಜಿಸಬೇಕಾದಂತಹ ಸಮಸ್ಯೆಗಳನ್ನು ಇಲ್ಲಿ ಪಟ್ಟಿ ಮಾಡಿದ್ದೇನೆ:

**1. ನಗರಕ್ಕೆ ಸಂಬಂಧಿಸಿ ಸರಿಯಾದ ದೀರ್ಘಕಾಲದ ಯೋಜನೆ:** ಬೆಂಗಳೂರಿಗೆ ಒಂದು ಸೂಕ್ತವಾದ ಆರ್ಥಿಕ ಯೋಜನೆಯೂ ಸೇರಿದಂತೆ ಶಾಸನಬದ್ಧವಾದ ದೀರ್ಘಾವಧಿಯ ಯೋಜನೆಯ ಅಗತ್ಯವಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಒಂದು ಯೋಜನೆಯ ಮೇಲೆ ಕೆಲಸ ಮಾಡುತ್ತಿದ್ದರೂ, ಆ ಪ್ರಕ್ರಿಯೆಯಲ್ಲಿ ನಾಗರೀಕರು ಮತ್ತು ಸರ್ಕಾರೇತರ ಸಂಘಟನೆಗಳನ್ನೂ ಸೇರಿಸಿಕೊಂಡು ಅವುಗಳನ್ನು ಪಾರದರ್ಶಕವಾಗಿಸಬೇಕು, ಮತ್ತು ನಂತರ ಅದನ್ನು ಬೆಂಗಳೂರು ಮೆಟ್ರೋಪಾಲಿಟನ್ ಪ್ಲಾನಿಂಗ್ ಕಮಿಟಿ (ಎಂಪಿಸಿ) ಎದುರು ಪ್ರಸ್ತುತಪಡಿಸಿ

ಪಾರದರ್ಶಕವಾಗಿ ಚರ್ಚಿಸಬೇಕು. ಚುನಾಯಿತ ಪ್ರತಿನಿಧಿಗಳ ಮತ್ತು ತಜ್ಞರ ಸರಿಯಾದ ಪ್ರಾತಿನಿಧ್ಯದೊಂದಿಗೆ ಎಂಪಿಸಿಯನ್ನು ಕೂಡ ಪುನಾರಚಿಸಬೇಕು.

**2. ಆದಾಯಗಳು ಮತ್ತು ಬಂಡವಾಳ ಸಾಮರ್ಥ್ಯಗಳನ್ನು ಸುಧಾರಿಸಿ.**

**2ಎ. ತೆರಿಗೆ ತಪ್ಪಿಸುವಿಕೆ ಮತ್ತು ಆದಾಯ ಸೋರಿಕೆಗಳನ್ನು ಸ್ವಚ್ಛಗೊಳಿಸಿ:**

ಬೆಂಗಳೂರಿನ ಸಂಸ್ಥೆಗಳಲ್ಲಿ ತೆರಿಗೆ ಮತ್ತು ಆದಾಯ ಸೋರಿಕೆ ರಾಜಾರೋಷವಾಗಿ ನಡೆಯುತ್ತಿದೆ. ತೆರಿಗೆ ಸಂಗ್ರಹಣೆ ಮತ್ತು ಸಾರ್ವಜನಿಕ ಹಣವನ್ನು ಸಮರ್ಥವಾಗಿ ಬಳಸಿಕೊಳ್ಳುವ ದೃಷ್ಟಿಯಿಂದ ಸಮಗ್ರ ಆರ್ಥಿಕ ಸುಧಾರಣೆಗಳು ಬೆಂಗಳೂರಿನ ಅಭಿವೃದ್ಧಿಗೆ ಆದ್ಯತೆಯಾಗಿವೆ. ಬಹು ವರ್ಷದ ಹಣಕಾಸು ಯೋಜನೆ ಸಹ ಅಗತ್ಯವಿದೆ. ಕೆಯುಐಡಿಎಫ್‌ಸಿ ಮತ್ತು ಇತರ ಸಂಸ್ಥೆಗಳನ್ನು ಇದನ್ನು ರಚಿಸುವುದಕ್ಕಾಗಿ ತೊಡಗಿಸಬಹುದು. ಹಣಕಾಸಿನ ಸಂಪನ್ಮೂಲಗಳನ್ನು ಬಹಳ ಅಸಮರ್ಥವಾಗಿ ಬಳಸುವ ತುಂಬ ಅದಕ್ಷ ಮತ್ತು ಹೊಂದಾಣಿಕೆಗಳಿರುವ, ಯೋಜನೆಗಳ ಪಾಲನೆ ಬದಲಿಗೆ ಪಟ್ಟಭದ್ರ ಹಿತಾಸಕ್ತಿಗಳಿಗೆ ಮಣೆ ಹಾಕುವ ಗುತ್ತಿಗೆ ವ್ಯವಸ್ಥೆ ಬಿಬಿಎಂಪಿಯ ಒಂದು ಭಾಗವೇ ಆಗಿದೆ.

2007 ರಿಂದ 2015 ರವರೆಗೆ ಬಿಬಿಎಂಪಿಯಲ್ಲಿನ ಹಣಕಾಸು ಅಕ್ರಮಗಳ ಬಗ್ಗೆ ಕಟಾರಿಯಾ ಸಮಿತಿಯ ವರದಿ ತಿಳಿಸಿದೆ. ಇದರಲ್ಲಿ ರೂ. ಘನ ತ್ಯಾಜ್ಯ ನಿರ್ವಹಣೆಯ ಪ್ರದೇಶಗಳು, ನಾಗರೀಕ ಕಾರ್ಯಕ್ಕಾಗಿ ಕೆಲಸದ ಆದೇಶಗಳು, ಜಾಹೀರಾತುಗಳು, ಖಾತೆಗಳ ವರ್ಗಾವಣೆ, ಆದಾಯದ ಮರುಪಾವತಿ, ಮತ್ತು ಸಾಲಗಳ ಮರುಪಾವತಿ ಇತ್ಯಾದಿಯಲ್ಲಿ 4,000 ಕೋಟಿ ಹಗರಣಗಳಾಗಿರುವುದಾಗಿ ತಿಳಿಸಿದೆ.

ಬಿಬಿಎಂಪಿಯ ಗುತ್ತಿಗೆ ಮತ್ತು ಹಣದ ಬಳಕೆ ಹೆಚ್ಚು ಪಾರದರ್ಶಕ, ಸ್ಪರ್ಧಾತ್ಮಕ ಮತ್ತು ಸಮರ್ಥವಾಗಬೇಕು. ಬಿಬಿಎಂಪಿಯಲ್ಲಿ ಲೆಕ್ಕಪರಿಶೋಧನೆ ಮತ್ತು ಬಹಿರಂಗಗೊಳಿಸುವಿಕೆಗಳನ್ನು ಪರಿಚಯಿಸುವ ಜೊತೆಗೆ ಇದನ್ನು ಬೇರೆ ಮಹಾನಗರಪಾಲಿಕೆಗಳ ಮಾದರಿಯಲ್ಲಿ ಕರ್ನಾಟಕ ಮಹಾನಗರಪಾಲಿಕೆಗಳು ಕಾಯಿದೆಯ ಅಡಿಯಲ್ಲಿ ತರಬೇಕು. ಬಿಬಿಎಂಪಿ ಖಾತೆಗಳ ತಕ್ಷಣದ ಲೆಕ್ಕಪರಿಶೋಧನೆಗೆ ಆದೇಶ ನೀಡಬೇಕೆಂಬ ನಾಗರೀಕ ಗುಂಪುಗಳ ಕರೆಗೆ ನನ್ನ ಬೆಂಬಲವಿದೆ. 5 ವರ್ಷಗಳವರೆಗೆ ಬಿಬಿಎಂಪಿಯ ಲೆಕ್ಕ ಪರಿಶೋಧನೆ ನಡೆದಿಲ್ಲ ಮತ್ತು ಬಿಬಿಎಂಪಿ ಖಾತೆಯ ಸಿಎಜಿ ಲೆಕ್ಕಪರಿಶೋಧನೆಗೆ ಆದೇಶ ನೀಡಲು ಮುಖ್ಯಮಂತ್ರಿಯವರಿಗೆ ಎಂದು ನಾನು ಈಗಾಗಲೇ ಮನವಿ ಮಾಡಿದ್ದೇನೆ. 2009–10ನೇ ಸಾಲಿನ

ಬಿಬಿಎಂಪಿಯ ಕೊನೆಯ ಸಿಎಜಿ ಲೆಕ್ಕಪರಿಶೋಧನೆಯು ದೊಡ್ಡ ಪ್ರಮಾಣದಲ್ಲಿ ಹಣಕಾಸಿನ ಅಕ್ರಮಗಳ ಬಗ್ಗೆ ಬಹಿರಂಗಪಡಿಸಿದ್ದು ನಿಮಗೆ ತಿಳಿದಿದೆ. 14/7/2014 ರಂದು ಶಾಸನಸಭೆಯಲ್ಲಿ ಮಂಡಿಸಲಾಗಿರುವ 2014ರ ತನ್ನ 5 ನೆ ಸಂಖ್ಯೆಯ ವರದಿಯಲ್ಲಿ ಸಿಎಜಿಯು ಬಿಬಿಎಂಪಿಯ ಲೆಕ್ಕಪತ್ರ ಅಭ್ಯಾಸಗಳ ಬಗ್ಗೆ ಗಂಭೀರವಾದ ಕುಂದುಕೊರತೆಗಳನ್ನು ಗಮನಿಸಿದ್ದು 3.2 ರಿಂದ 3.17, 4.5 ಮತ್ತು 4.6 ಇತ್ಯಾದಿ ಪ್ಯಾರಾಗಳಲ್ಲಿ ಇವುಗಳನ್ನು ಉಲ್ಲೇಖಿಸಲಾಗಿದೆ (ಮುಖ್ಯಮಂತ್ರಿಯವರಿಗೆ ಪತ್ರವನ್ನು ಉಲ್ಲೇಖಕ್ಕಾಗಿ ಲಗತ್ತಿಸಲಾಗಿದೆ).

## 2b. ಪಿಪಿಪಿಗಳಿಂದ ಸರ್ಕಾರಿ ಸಂಪನ್ಮೂಲಗಳು ಮತ್ತು ಆಸ್ತಿಗಳ ಹಣಗಳಿಕೆಯನ್ನು ಸುಧಾರಿಸುವುದು

ಹಣಕಾಸಿನ ಸಂಪನ್ಮೂಲಗಳನ್ನು ಗರಿಷ್ಠಗೊಳಿಸುವ ಬದಲಾಗಿ ಪಟ್ಟಭದ್ರ ಹಿತಾಸಕ್ತಿಗಳಿಗೆ ಅನುಕೂಲವಾಗುವಂತೆ ಜಮೀನು ಮತ್ತು ಕಟ್ಟಡಗಳಂತಹ ಸರ್ಕಾರಿ ಆಸ್ತಿಗಳಗಳನ್ನು ಪ್ರಸ್ತುತ ಬಳಸಲಾಗುತ್ತಿದೆ. ವಾಣಿಜ್ಯ ಹಿತಾಸಕ್ತಿಗಳಿಂದ ಒತ್ತುವರಿಯಾಗಿರುವ ಭೂಮಿಯನ್ನು ಮತ್ತೆ ತೆಗೆದುಕೊಳ್ಳಬೇಕು ಹಾಗೂ ಸಾರ್ವಜನಿಕ ಭೂಮಿಯನ್ನು ಗುತ್ತಿಗೆ ಅಥವಾ ಮಾರಾಟ ಮಾಡಿದಾಗಲೆಲ್ಲ, ಅದು ಮಾರುಕಟ್ಟೆ ದರದಲ್ಲಿ ನಡೆಯಬೇಕು. ಇವು ನಗರದ ಆರ್ಥಿಕತೆಯನ್ನು ಸುಧಾರಿಸುತ್ತವೆ.

## 3. Bengaluru.Gov ವೆಬ್ ಸೈಟನ್ನು ಪ್ರಾರಂಭಿಸಿ

ನಾಗರೀಕ ಪೋರ್ಟಲ್ ಅನ್ನು ರಚಿಸಿ ಮತ್ತು ಎಲ್ಲಾ ಸೇವೆಗಳನ್ನು ಮತ್ತು ಸಂಸ್ಥೆಗಳನ್ನು ಅಲ್ಲಿ ಏಕೀಕರಿಸಿ, ಎಲ್ಲಾ ಸರ್ಕಾರ–ನಾಗರೀಕ ಇಂಟರ್ಫೇಸ್ ಮತ್ತು ನಾಗರೀಕರಿಂದ ಸರ್ಕಾರಕ್ಕೆ ಪ್ರತಿಕ್ರಿಯೆ ನೀಡುವ ಏಕೈಕ ಪೋರ್ಟಲ್ ಇದಾಗಲಿ. ವಲಯ ಯೋಜನೆ ಮತ್ತು ಹಣಕಾಸು ಸಮಾಲೋಚನೆಗಳನ್ನು ಸಹ Bengaluru.Gov ಪೋರ್ಟಲ್ ಬಳಸಿ ನಡೆಸಬಹುದಾಗಿದೆ. ನಗರ ಸರ್ಕಾರವು ನಿರ್ಧರಿಸುವ ಮುನ್ನ ವಿವಿಧ ಸರ್ಕಾರೇತರ ಸಂಘಟನೆಗಳು ಮತ್ತು ಅವರ ಸಲಹೆಗಳನ್ನು ಎಲ್ಲಾ ನಾಗರೀಕರಿಗೂ ಪ್ರದರ್ಶಿಸಬಹುದು.

## 4. "ಬೆಂಗಳೂರು ಉಳಿಸಿ ನಾಗರೀಕರ ಚಾರ್ಟರ್" ಜಾರಿಗೊಳಿಸಿ

ಇತ್ತೀಚೆಗೆ, ನಮ್ಮ ಬೆಂಗಳೂರು ಫೌಂಡೇಶನ್ ನಾಗರೀಕ ಗುಂಪುಗಳು ಮತ್ತು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ (ಆರ್‌ಡಬ್ಲ್ಯುಎ) ಸಹಭಾಗಿತ್ವವು ಬೆಂಗಳೂರಿನ ಪುನರುಜ್ಜೀವನಕ್ಕಾಗಿ ನಾಗರೀಕರ ಚಾರ್ಟರ್ ಅನ್ನು ರಚಿಸಿದೆ ಮತ್ತು

ಈ ಕೆಳಗಿನ ಬೇಡಿಕೆಗಳನ್ನು ಮಾಡಿದೆ, ನಾನೂ ಸೇರಿದಂತೆ ಅನೇಕ ಚುನಾಯಿತ ಪ್ರತಿನಿಧಿಗಳು ಇದನ್ನು ಬೆಂಬಲಿಸಿದ್ದೇವೆ:

ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು ಮತ್ತು ವಾರ್ಡ್ ಸಮಿತಿಗಳಲ್ಲಿ ನಾಗರೀಕರ ಭಾಗವಹಿಸುವಿಕೆಯನ್ನು ಕೋರುವ ನಾಗರೀಕ–ಕೇಂದ್ರಿತ ಆಡಳಿತ

ಒಂದು ಭ್ರಷ್ಟಾಚಾರ ಮುಕ್ತ ಮತ್ತು ಪಾರದರ್ಶಕ ಬಿಬಿಎಂಪಿ – ಖಾತೆಗಳ ಸಂಪೂರ್ಣ ಲೆಕ್ಕಪರಿಶೋಧನೆಯ ಮೂಲಕ ಬಿಬಿಎಂಪಿ ಮತ್ತು ಇತರ ನಾಗರೀಕ ಸಂಸ್ಥೆಗಳ ಹಣಕಾಸನ್ನು ಸ್ವಚ್ಛಗೊಳಿಸಲು ಬೇಡಿಕೆ

ಅರೆಸರ್ಕಾರಿ ಸಂಸ್ಥೆಗಳ ನಡುವೆ ಮೆಟ್ರೋಪಾಲಿಟನ್ ಯೋಜನಾ ಸಮಿತಿಯ ಅಕ್ಷರಶಃ ಮತ್ತು ಕಾರ್ಯಶಃ ಅನುಷ್ಠಾನಕ್ಕಾಗಿ ಶಾಸನಬದ್ಧ ಯೋಜನೆ ರೂಪಿಸಲು ಮತ್ತು ಉತ್ತಮ ಸಂಯೋಜನೆ.

ಚಾಲ್ತಿಯಲ್ಲಿರುವ ಭ್ರಷ್ಟಾಚಾರಕ್ಕೆ ಶೂನ್ಯ ಸಹಿಷ್ಣುತೆ – ಕೆರೆಗಳಂತಹ ಪರಿಸರ ಸೂಕ್ಷ್ಮ ಪ್ರದೇಶಗಳನ್ನು ಬಿಲ್ಡರುಗಳು ಮತ್ತು ಗುತ್ತಿಗೆದಾರರು ನಾಶಪಡಿಸುವುದನ್ನು ತಪ್ಪಿಸಲು ಮತ್ತು ವ್ಯವಸ್ಥೆಯಲ್ಲಿನ ದೋಷಪೂರಿತ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಕಠಿಣವಾದ ನೀತಿಸಂಹಿತೆಯನ್ನು ಜಾರಿಗೊಳಿಸುವುದು

ಇಂದು ನಾಗರೀಕರು, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಟನೆಗಳು ಮತ್ತು ಹೂಡಿಕೆದಾರರು ಅತಿರೇಕದ ಭ್ರಷ್ಟಾಚಾರ, ಅಪಾರದರ್ಶಕತೆ, ದೋಷಪೂರಿತ ಒಪ್ಪಂದಗಳು ಮತ್ತು ನಗರವನ್ನು ಚಾಲನೆ ಮಾಡುತ್ತಿರುವ ಪಟ್ಟಭದ್ರ ಹಿತಾಸಕ್ತಿಗಳಿಂದ ನಿರಾಸೆಗೊಂಡಿದ್ದಾರೆ. ಹತಾಶೆಯಿಂದಾಗಿ ಅವರು ಸರ್ಕಾರವು ನಿರ್ಣಾಯಕವಾಗಿ ಮತ್ತು ವಿಳಂಬವಿಲ್ಲದೆ ಕಾರ್ಯನಿರ್ವಹಿಸುವಂತೆ ಹಲವಾರು ವೇದಿಕೆಗಳಲ್ಲಿ ಕೇಳಿಕೊಳ್ಳಲು ಕಾರಣವಾಗಿದೆ.

ಬೆಂಗಳೂರಿನ ನಾಗರೀಕರು ಉತ್ತಮ ಆಡಳಿತದ ಅನುಪಸ್ಥಿತಿಯಿಂದ ನಿರಾಶೆಗೊಂಡು ತಮ್ಮ ನಗರವನ್ನು ಸುಧಾರಿಸಲು ಆಂದೋಲನಗಳು ಅಥವಾ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳ ಮೊರೆಹೊಗುವುದನ್ನು ತಪ್ಪಿಸಲು ಗೋಚರಿಸುವ ಮತ್ತು ನಿರ್ಣಾಯಕ ರೀತಿಯಲ್ಲಿ ವರ್ತಿಸುವಂತೆ ನಿಮ್ಮನ್ನು ನಾನು ಕೋರುತ್ತೇನೆ.

ಈ ಪತ್ರ ಮತ್ತು ನಗರದ ಅಭಿವೃದ್ಧಿಯ ವಿಷಯದಲ್ಲಿ ನಿಮಗೆ ಏನಾದರೂ ಅಗತ್ಯವಿದ್ದಲ್ಲಿ ನಾನು ನಿಮಗೆ ಲಭ್ಯವಿರುತ್ತೇನೆ.

ನಿಮ್ಮ ವಿಶ್ವಾಸಿ
ರಾಜೀವ್ ಚಂದ್ರಶೇಖರ್

ಶ್ರೀ ಕೆ ಜೆ ಜಾರ್ಜ್,
ಗೌರವಾನ್ವಿತ ಬೆಂಗಳೂರು ಅಭಿವೃದ್ಧಿ ಮತ್ತು ಪಟ್ಟಣ ಯೋಜನೆ ಸಚಿವರು,
ವಿಧಾನ ಸೌಧ,
ಬೆಂಗಳೂರು.

# 34

# ನಗರದ ಅಭಿವೃದ್ಧಿಯ ಕುರಿತು ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರಿಗೆ ಪತ್ರ

3 ನೇ ಡಿಸೆಂಬರ್, 2015

ಶ್ರೀ ಜಾರ್ಜ್,

ಬೆಂಗಳೂರಿನ ಅಭಿವೃದ್ಧಿಯ ಕುರಿತು ಸಲಹೆಗಳನ್ನು ಪಡೆಯಲು ಚುನಾಯಿತ ಪ್ರತಿನಿಧಿಗಳ ಸಭೆಯನ್ನು ಕರೆದುದಕ್ಕಾಗಿ ಧನ್ಯವಾದಗಳು.

ನೀವು ತಿಳಿದಿರುವಂತೆ, ನಮ್ಮ ನಗರವನ್ನು (ನಿಮ್ಮ ಉಲ್ಲೇಖಕ್ಕಾಗಿ ಪತ್ರದ ಪ್ರತಿಯನ್ನು ಲಗತ್ತಿಸಲಾಗಿದೆ) ಪುನರುಜ್ಜೀವನಗೊಳಿಸುವುದಕ್ಕಾಗಿ ನೀವು ಅಗತ್ಯ ಕ್ರಮಗಳನ್ನು ಪ್ರಾರಂಭಿಸುವಿರೆಂಬ ಭರವಸೆಯಿಂದ ಬೆಂಗಳೂರಿನ ಆದ್ಯತೆಗಳನ್ನು ವಿವರಿಸುವ ಪತ್ರವನ್ನು 05 ನವೆಂಬರ್, 2015 ರಂದು ನಾನು ನಿಮಗೆ ಈಗಾಗಲೇ ಬರೆದಿದ್ದೇನೆ.

ಬೆಂಗಳೂರಿನ ಅಭಿವೃದ್ಧಿ ಮತ್ತು ಯೋಜನೆಗೆ ಜವಾಬ್ದಾರರಾಗಿರುವ ಮೊದಲ ಸಚಿವರಾದ ನಿಮಗೆ ಈ ಪತ್ರದ ಮೂಲಕ, ನಗರದ ಸಮಸ್ಯೆಗಳಿಗೆ ತಾತ್ಕಾಲಿಕ ಪರಿಹಾರವು ಸಾಧ್ಯವಿಲ್ಲ, ಮೂಲಭೂತ ಸೌಕರ್ಯಗಳ ಯೋಜನೆಗಳ

ತುಣುಕುಗಳಿಂದ ಏನೂ ಸಾಧ್ಯವಿಲ್ಲ, ಬದಲಿಗೆ ವ್ಯವಸ್ಥೆಯನ್ನು ಇಡಿಯಾಗಿ ಶುದ್ಧಗೊಳಿಸುವುದು ಹಾಗೂ ಅತ್ಯಂತ ಭ್ರಷ್ಟ ಮತ್ತು ಪಟ್ಟಭದ್ರ ಹಿತಾಸಕ್ತಿಯಿಂದ ಚಾಲನೆಗೊಂಡ ನಗರ ಸಂಸ್ಥೆಗಳಲ್ಲಿನ ಗುಂಪುಗಳನ್ನು ಸುಧಾರಣೆ ಮಾಡುವುದು ಅಗತ್ಯವಿದೆ. ಈ ರೀತಿಯ ಸುಧಾರಣೆಯು ನಾಗರೀಕರ ಮತ್ತು ನಗರದ ಬೆಳವಣಿಗೆಯ ಅಗತ್ಯಗಳಿಗೆ ಸರ್ಕಾರವನ್ನು ಜೋಡಿಸುವುದರ ಜೊತೆಗೆ, ಮೂಲಭೂತ ಸೌಕರ್ಯ ಮತ್ತು ಸೇವೆಗಳಲ್ಲಿ ಹೂಡಿಕೆ ಮಾಡಲು ಇತರ ಸ್ವರೂಪದ ಹಣಕಾಸುಗಳನ್ನು ಆಕರ್ಷಿಸುವ ನಗರದ ಆರ್ಥಿಕ ಸಾಮರ್ಥ್ಯವನ್ನು ಸುಧಾರಿಸುತ್ತವೆ.

ಬೆಂಗಳೂರಿನ ಮತ್ತು ಅದರ ನಾಗರೀಕರ ಹಿತಾಸಕ್ತಿಯ ದೃಷ್ಟಿಯಿಂದ ಗೋಚರಿಸುವ ಮತ್ತು ನಿರ್ಣಾಯಕ ರೀತಿಯಲ್ಲಿ ಈ ಅವಕಾಶವನ್ನು ನಿರ್ವಹಿಸಲು ನಾನು

ನಿಮ್ಮನ್ನು ಒತ್ತಾಯಿಸುತ್ತೇನೆ.

ಈ ನಿಟ್ಟಿನಲ್ಲಿ ಯಾವುದೇ ರೀತಿಯಲ್ಲಿ ಸರ್ಕಾರಕ್ಕೆ ಸಹಾಯ ಮಾಡಲು ನಾನು ಇನ್ನೂ ಲಭ್ಯವಿರುತ್ತೇನೆ.

ನಿಮ್ಮ ವಿಶ್ವಾಸಿ,
ರಾಜೀವ್ ಚಂದ್ರಶೇಖರ್
ಲಗತ್ತಿಸಿರುವುದು:
05 ನವೆಂಬರ್, 2015 ರ ದಿನಾಂಕದ ನನ್ನ ಪತ್ರದ ನಕಲು

ಶ್ರೀ ಕೆ ಜೆ ಜಾರ್ಜ್,
ಗೌರವಾನ್ವಿತ ಬೆಂಗಳೂರು ಅಭಿವೃದ್ಧಿ ಮತ್ತು ಪಟ್ಟಣ ಯೋಜನೆ ಸಚಿವರು,
ವಿಧಾನ ಸೌಧ,
ಬೆಂಗಳೂರು.

# 35

# ಕೋರಮಂಗಲದ ಸಂಚಾರ ನಿರ್ವಹಣೆ ಕುರಿತು ರಾಜ್ಯದ ಗೃಹ ಸಚಿವರಿಗೆ ಪತ್ರ

25 ಜನವರಿ, 2016

ಡಾ. ಪರಮೇಶ್ವರ ಅವರೇ,

ಕೋರಮಂಗಲದಂಥ ಸಾಂಪ್ರದಾಯಿಕ ವಸತಿ ಪ್ರದೇಶಗಳಲ್ಲಿ ಸಂಚಾರ ನಿರ್ವಹಣೆಯ ಪ್ರಭಾವದ ಕುರಿತು ನಿಮ್ಮ ಗಮನವನ್ನು ಸೆಳೆಯಲು ನಾನು ಈ ಪತ್ರವನ್ನು ಬರೆಯುತ್ತಿದ್ದೇನೆ. ನಾನು ಇದನ್ನು ಮೊದಲು ಪೋಲಿಸ್ ಆಯುಕ್ತ (ಸಂಚಾರ) ಶ್ರೀ ಸಲೀಮ್ ಅವರ ಗಮನಕ್ಕೆ ತಂದು ಅವರ ಹೊಸ ಸಂಚಾರ ನಿಯಮಗಳು ಈ ಪ್ರದೇಶದ ನೆರೆಹೊರೆಗಳಲ್ಲಿ ವಾಸಿಸುತ್ತಿರುವ ಅನೇಕ ಕುಟುಂಬಗಳಿಗೆ ಹಾನಿ ಉಂಟುಮಾಡುತ್ತಿರುವುದಲ್ಲದೇ ಮತ್ತು ಸುರಕ್ಷತೆಯ ಸಮಸ್ಯೆಗಳನ್ನು ಸೃಷ್ಟಿಸುತ್ತಿವೆ.

ಮಲ್ಟಿ–ಯುಟಿಲಿಟಿ ವಾಹನಗಳು, ಕ್ಯಾಬ್, ಕಾರುಗಳು ಮತ್ತು ದ್ವಿಚಕ್ರ ವಾಹನಗಳನ್ನು ಒಳಗೊಂಡಿರುವ ಸಂಚಾರ ದಟ್ಟಣೆಗಳ ಬಗ್ಗೆ ಸ್ಥಳೀಯ ಜನರನ್ನು ಸಂಪರ್ಕಿಸದೆ ಅಥವಾ ಅವರ ಸುರಕ್ಷತೆ ಮತ್ತು ಕಾಳಜಿಯನ್ನು ಮನಸ್ಸಿನಲ್ಲಿಟ್ಟುಕೊಳ್ಳದೆ ಇಂಥ ತೀರ್ಮಾನಗಳನ್ನು ಹೇಗೆ ಕೈಗೊಳ್ಳಲಾಗಿದೆ ಎಂಬ ಬಗ್ಗೆ ಪ್ರಶ್ನಿಸುವ ಹಲವಾರು

ಅರ್ಜಿಗಳನ್ನು ನಾನು ಕೋರಮಂಗಲದ ನಿವಾಸಿಗಳಿಂದ ಸ್ವೀಕರಿಸಿದ್ದೇನೆ, ಈ ಸಂಚಾರ ನಿರ್ವಹಣೆ ಕ್ರಮಗಳಿಂದಾಗಿ ಸಂಚಾರ ಅತಿಯಾಗಿದ್ದು ಕೋರಮಂಗಲದ ನಿವಾಸಿಗಳು, ವಿಶೇಷವಾಗಿ ಮಕ್ಕಳು, ಮಹಿಳೆಯರು ಮತ್ತು ಹಿರಿಯ ನಾಗರೀಕರ ಸುರಕ್ಷತೆ ಮತ್ತು ಚಲನೆಯನ್ನು ಅಪಾಯಕ್ಕೆ ತಳ್ಳುವ ಮೂಲಕ ಅವರಿಗೆ ತೀವ್ರವಾದ ಕಷ್ಟಗಳನ್ನು ಉಂಟುಮಾಡಿದೆ. ಹೀಗಿರದಿದ್ದರೆ ಶಾಂತಿಯುತವಾಗಿರಬಹುದಾದ ವಸತಿ ಪ್ರದೇಶಗಳಲ್ಲಿನ ಇಂತಹ ಅಡಚಣೆ ಸ್ವೀಕಾರಾರ್ಹವಲ್ಲ ಮತ್ತು ಮುಂದುವರೆಯಲು ಅನುಮತಿಸಬಾರದು.

ಸಂಚಾರದ ಸುಧಾರಣೆಗಾಗಿ ವಸತಿ ಪ್ರದೇಶಗಳ ಮೂಲಕ ಹೊಸೂರು ಮತ್ತು ಸರ್ಜಾಪುರದ ರಸ್ತೆಗಳ ದಟ್ಟಣೆಯನ್ನು ಕಡಿಮೆ ಮಾಡಲು ಪ್ರಯತ್ನಿಸುವುದು ಕಲ್ಪನಾತೀತ ಮತ್ತು ಸಂಚಾರ ಸಮಸ್ಯೆಗಳನ್ನು ಪರಿಹರಿಸಲು ಒಪ್ಪಿಕೊಳ್ಳಲಾಗದ ಮಾರ್ಗವಾಗಿದೆ. ವಸತಿ ಪ್ರದೇಶಗಳಲ್ಲಿ ಸಮಸ್ಯೆಗಳನ್ನು ಹುಟ್ಟುಹಾಕುವುದು ಹಾಗೂ ಮಕ್ಕಳು, ವಯಸ್ಕರು ಮತ್ತು ಕುಟುಂಬಗಳ ಜೀವನವನ್ನು ಅತಿದಟ್ಟಣೆಗೆ ತಳ್ಳುವುದು ಅಪಾಯಕಾರಿಯಾಗಿದೆ ಮತ್ತು ಎಲ್ಲ ಹೆಮ್ಮೆಯ ತೆರಿಗೆದಾರರಾಗಿರುವ ನಾಗರೀಕರಿಗೆ/ನಿವಾಸಿಗಳತ್ತ ದಿವ್ಯ ಉದಾಸೀನಕ್ಕೆ ಸಾಕ್ಷಿಯಾಗಿದೆ.

ಈ ಪರಿಸ್ಥಿತಿಯು ಖಂಡಿತವಾಗಿಯೂ ಸದ್ಯೋಭವಿಷ್ಯದಲ್ಲಿ ಅನಾಹುತ ವುಂಟುಮಾಡುತ್ತದೆ ಎಂದು ನಾನು ನಿಮಗೆ ಎಚ್ಚರಿಸುತ್ತಿದ್ದೇನೆ – ಹೀಗಾಗದಿರಲಿ ಎಂದು ನಾನು ಪ್ರಾರ್ಥಿಸುತ್ತಿದ್ದೇನಾದರೂ, ಈ ಪ್ರಸ್ತುತ ಪರಿಹಾರವು ದುರಂತವಾಗಿದೆ. ಈ ಸಂದರ್ಭದಲ್ಲಿ ನಿಮ್ಮ ಸರ್ಕಾರವನ್ನು ಜವಾಬ್ದಾರವನ್ನಾಗಿ ಮಾಡುತ್ತೇವೆ ಎಂಬ ಖಾತ್ರಿ ನೀಡಬಲ್ಲೆ. ನಮ್ಮ ನಗರದ ಜನರಲ್ಲಿ ಸುರಕ್ಷತೆ, ಕಾನೂನು ಮತ್ತು ಸುವ್ಯವಸ್ಥೆ ಮತ್ತು ಜೀವದ ನಷ್ಟಕ್ಕೆ ಸಂಬಂಧಿಸಿ ಸರ್ಕಾರಗಳು ಮತ್ತು ಆಡಳಿತಾತ್ಮಕ ಇಲಾಖೆಗಳನ್ನು ಜವಾಬ್ದಾರವಾಗಿ ಮಾಡಬೇಕೆಂಬ ಬೇಡಿಕೆ ಇದೆ.

ಸಂಚಾರಿ ಪೋಲಿಸರ ಇತ್ತೀಚಿನ ನಿರ್ಧಾರಗಳು ಆ ವಿಭಾಗದ ಅಡಿಯಲ್ಲಿ ಬರುತ್ತಿವೆ ಮತ್ತು ಇಂಥ ತಾತ್ಕಾಲಿಕ ಕ್ರಮಗಳ ಮೂಲಕ ವಸತಿ ಪ್ರದೇಶಗಳಲ್ಲಿ ವಾಸಿಸುವವರ ಸುರಕ್ಷತೆ ಮತ್ತು ಜೀವನವನ್ನು ಅಪಾಯಕ್ಕೀಡುಮಾಡುವವರನ್ನು ಇದರಿಂದ ಉಂಟಾಗುವ ತೊಂದರೆಗಳಿಗೆ ಜವಾಬ್ದಾರರನ್ನಾಗಿ ಮಾಡಲಾಗುತ್ತದೆ ಎಂದು ನಾನು ನಿಮಗೆ ಭರವಸೆ ನೀಡುತ್ತೇನೆ. ಸಂಚಾರಿ ಪೋಲೀಸರು ನೆರೆಹೊರೆಗಳ ಮೂಲಕ ಸಂಚಾರದ ಮಾರ್ಗವನ್ನು ಬದಲಿಸಿ ಅಸ್ತವ್ಯಸ್ತತೆಯನ್ನು ಸೃಷ್ಟಿಸುವ ಮೂಲಕ ಸ್ಥಳೀಯ ನಿವಾಸಿಗಳ ಸುರಕ್ಷತೆಯನ್ನು ಅಪಾಯಕ್ಕೆ ತಳ್ಳುವ ಬದಲು ಸಂಚಾರ ದಟ್ಟಣೆಯನ್ನು ನಿರ್ವಹಿಸಲು ಪರ್ಯಾಯ ಮಾರ್ಗಗಳನ್ನು ಕಂಡುಹಿಡಿಯಬೇಕು.

ಸಂಚಾರ ಸಮಸ್ಯೆಗಳಿಗೆ ಶಾಶ್ವತವಾದ ಪರಿಹಾರಗಳಿಲ್ಲದ ಇಂಥ ತೀರ್ಮಾನಗಳು ಶಾರ್ಟ್ ಕಟ್ ಗಳಾಗಿರುತ್ತವೆ ಮತ್ತು ಸ್ಥಳೀಯ ನಿವಾಸಿಗಳ ಸುರಕ್ಷತೆಗೆ ಹಾನಿಕಾರಕವಾಗಿವೆ. ಇತ್ತೀಚಿನ ನಿರ್ಧಾರಗಳನ್ನು ಪರಿಶೀಲಿಸಲು ಈ ಪತ್ರವನ್ನು ನೀವು ಬಳಸುತ್ತೀರಿ ಮತ್ತು ಕೋರಮಂಗಲ ಮತ್ತು ಇತರ ನೆರೆಹೊರೆಯಂತಹ ವಸತಿ ಪ್ರದೇಶಗಳ ಸಂಚಾರ ದಟ್ಟಣೆಯನ್ನು ನಿಲ್ಲಿಸುತ್ತೀರಿ ಎಂದು ನಾನು ನಂಬುತ್ತೇನೆ.

ವಿಶ್ವಾಸಪೂರ್ವಕವಾಗಿ,
ರಾಜೀವ್ ಚಂದ್ರಶೇಖರ್

ಡಾ. ಪರಮೇಶ್ವರ,
ಗೃಹ ಸಚಿವ,
ಕರ್ನಾಟಕ ಸರ್ಕಾರ,
ಬೆಂಗಳೂರು.

ಇವರಿಗೆ ಪ್ರತಿಗಳು:
ಕೆ.ಜೆ ಜಾರ್ಜ್,
ಬೆಂಗಳೂರು ಅಭಿವೃದ್ಧಿ ಸಚಿವ,
ಕರ್ನಾಟಕ ಸರ್ಕಾರ,
ಬೆಂಗಳೂರು.

ಶ್ರೀ ಸಲೀಮ್,
ಐಪಿಎಸ್,
ಹೆಚ್ಚುವರಿ ಪೊಲೀಸ್ ಆಯುಕ್ತ, ಸಂಚಾರ,
ಬೆಂಗಳೂರು.

# 36

# ಭಾರತೀಯ ವಿಮಾನಯಾನ ಪ್ರಾಧಿಕಾರದ ಕುರಿತು ನಾಗರೀಕ ವಿಮಾನಯಾನ ಸಚಿವರಿಗೆ ಪತ್ರ

29ನೇ ಫೆಬ್ರವರಿ, 2016

ಮಾನ್ಯ ಶ್ರೀ ಗಜಪಾತಿರಾಜು ಅವರೇ

ವಿಷಯ: ಏರ್‌ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾದಿಂದ ಗಂಭೀರ ಸ್ವರೂಪದ ಮತ್ತು ಪದೇ ಪದೇ ಆಗುತ್ತಿರುವ ಉಲ್ಲಂಘನೆಗಳು ಮತ್ತು ಎಚ್‌ಎಎಲ್‌ನ ಕಾರ್ಯನಿರ್ವಹಣೆಗೆ ಅಡ್ಡಿಪಡಿಸುವ ಮತ್ತು ದೇಶದ ರಕ್ಷಣಾ ಸಿದ್ಧತೆಗೆ ಹಾನಿಮಾಡುವಂತಹ ಸಾಧ್ಯತೆಯಿರುವುದು

ವಿಮಾನ ಕಾಯಿದೆ 1934 ("ಅಧಿಸೂಚನೆ") ಯ ಅನ್ವಯ ನಾಗರೀಕ ವಿಮಾನಯಾನ ಖಾತೆಯ ಜನವರಿ, 14, 2010 ರಂದು ಪ್ರಕಟಿಸಲಾದ ಅಧಿಸೂಚನೆ ಸಂಖ್ಯೆ: ಎಸ್‌ಓ 84ಇ ಯ ಗಂಭೀರ ಹಾಗೂ ಪುನರಾವರ್ತಿತ ಉಲ್ಲಂಘನೆಯ ಕುರಿತು ನಾನು ನಿಮ್ಮ ಗಮನವನ್ನು ಸೆಳೆಯಲು ಇಚ್ಛಿಸುತ್ತೇನೆ. ನಾನು ಈ ಮೊದಲು ಇದನ್ನು ಏರ್‌ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾದ – ಚೇರ್‌ಮನ್ ಅವರಿಗೆ ದೂರವಾಣಿ ಸಂಭಾಷಣೆಯ ಮೂಲಕ ತಿಳಿಸಿದ್ದೆ ಮತ್ತು ಅವರು ಈ ಕುರಿತು ಪರಿಶೀಲಿಸುವುದಾಗಿ ಭರವಸೆಯನ್ನು ನೀಡಿದ್ದರು.

ಅಧಿಸೂಚನೆಯ ಪ್ರಕಾರ ಏರ್‌ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ (ಎಎಐ) ವು ನಾಗರೀಕ ವಾಣಿಜ್ಯ ವಿಮಾನಯಾನಗಳು ಕಾರ್ಯನಿರ್ವಹಿಸುವ ರಾಜ್ಯ ಸರ್ಕಾರದ ವಿಮಾನನಿಲ್ದಾಣಗಳು ಮತ್ತು ಖಾಸಗಿ ವಿಮಾನನಿಲ್ದಾಣಗಳನ್ನು ಒಳಗೊಂಡು ಭಾರತದಲ್ಲಿನ ನಾಗರೀಕ ವಿಮಾನನಿಲ್ದಾಣಗಳಿಗೆ ಸಂಬಂಧಿಸಿ ಕೇಂದ್ರ ಸರ್ಕಾರದ ಪರವಾಗಿ ನಿರಕ್ಷೇಪಣಾ ಪತ್ರವನ್ನು ನೀಡುವ ಹೊಣೆಗಾರಿಕೆಯನ್ನು ಹೊಂದಿದೆ. ಸೈನಿಕ ವಿಮಾನಪಥಗಳಿಗಾಗಿ ರಕ್ಷಣಾ ಇಲಾಖೆಯ ಅಧಿಕಾರಿಗಳು ಎನ್‌ಒಸಿಯನ್ನು ನೀಡುವ ಹೊಣೆಗಾರಿಕೆಯನ್ನು ಹೊಂದಿದ್ದು, ಇದು ಅಂತಹ ಪ್ರಾಧಿಕಾರಗಳಿಂದ ನಿರ್ಧರಿಸಲ್ಪಡುವ ಹೆಚ್ಚಿನ ನಿರ್ಬಂಧಗಳಿಗೆ ಅಥವಾ ಷರತ್ತುಗಳಿಗೆ ಒಳಪಟ್ಟಿರಬಹುದು. ಆರಂಭದಲ್ಲಿ ನಾಗರೀಕ ವಿಮಾನಗಳಿಗೆ ಸಂಬಂಧಿಸಿ ಎಎಐನ ಎನ್‌ಒಸಿಗಳನ್ನು ನೀಡುವ ಅಧಿಕಾರವು ನಿಯಂತ್ರಣಕ್ಕೆ ಒಳಪಡಿಸುವವರು ಮತ್ತು ನಿಯಂತ್ರಣಕ್ಕೆ ಒಳಗಾಗುವವರ ವಿಷಯದಲ್ಲಿ ಮುಕ್ತತೆಯ ತತ್ವ ಹಾಗೂ ಅಧಿಕಾರಗಳನ್ನು ಪ್ರತ್ಯೇಕಿಸುವಲ್ಲಿ ಸಂಘರ್ಷವನ್ನು ಉಂಟುಮಾಡುತ್ತದೆ. ಎಎಐ ದೇಶದ ಉದ್ದಕ್ಕೂ ಭಾರೀ ಪ್ರಮಾಣದಲ್ಲಿ ವಿಮಾನನಿಲ್ದಾಣಗಳನ್ನು ನಿರ್ವಹಿಸುತ್ತದೆ. ಸ್ವತಃ ವಿಮಾನಯಾನ ಕಾರ್ಯಾಚರಣೆ ಸಂಸ್ಥೆಯಾಗಿರುವ ಇದು ಸ್ವತಂತ್ರವಾಗಿ ಅಧಿಸೂಚನೆಯನ್ನು ನೀಡುವ ಅಧಿಕಾರವನ್ನು ಚಲಾಯಿಸುವುದು ಸೂಕ್ತ ಎಂದು ನಿರೀಕ್ಷಿಸಲಾಗುವುದಿಲ್ಲ. ಅಧಿಸೂಚನೆಗಳ ಅಡಿಯಲ್ಲಿನ ಅಧಿಕಾರವು ಇಲ್ಲಿಯವರೆಗೆ ನಾಗರೀಕ ವಿಮಾನಗಳಿಗೆ ಸಂಬಂಧಿಸಿದ್ದು, ಇದನ್ನು ಆದ್ದರಿಂದ ನಾಗರೀಕ ವಿಮಾನಯಾನ ವಿಭಾಗದ ಮಹಾನಿರ್ದೇಶಕರ ಕಚೇರಿಯಿಂದ ನಿರ್ಧರಿಸಲ್ಪಡಬೇಕು, ಏಕೆಂದರೆ ಇದು ದೇಶದ ನಾಗರೀಕ ವಿಮಾನಯಾನ ಚಟುವಟಿಕೆಗಳಿಗೆ ನಿಯಂತ್ರಕ ಸಂಸ್ಥೆಯಾಗಿರುತ್ತದೆ.

ಅಲ್ಲದೇ ಅಧಿಸೂಚನೆಯು ರಕ್ಷಣಾ ವಿಮಾನಗಳಿಗೆ ಸಂಬಂಧಿಸಿ ಎನ್‌ಒಸಿ ನೀಡುವ ಅಧಿಕಾರವನ್ನು ರಕ್ಷಣಾ ಇಲಾಖೆಯ ಪ್ರಾಧಿಕಾರಗಳಿಗೆ ನೀಡಿದ್ದರೂ , ಇಲ್ಲಿಯವರೆಗೆ ಎಚ್‌ಎಎಲ್ ಏರ್‌ಪೋರ್ಟ್ ಬೆಂಗಳೂರು ಇದಕ್ಕೆ ಸಂಬಂಧಿಸಿದಂತೆ ಅಂತಹ ಎನ್‌ಒಸಿಯನ್ನು ನೀಡುವ ಅಧಿಕಾರವನ್ನು ವಿಮಾನ ನಿಲ್ದಾಣದ ನಿರ್ವಹಣೆ ಹಾಗೂ ಕಾರ್ಯಚಟುವಟಿಕೆಯನ್ನು ನಡೆಸುವ ಹಿಂದುಸ್ಥಾನ್ ಏರೋನಾಟಿಕ್ಸ್ ಲಿಮಿಟೆಡ್ ಸ್ವತಃ ಚಲಾಯಿಸುತ್ತಿದೆ. ಆ ಮೂಲಕ ಹಿಂದುಸ್ಥಾನ್ ಏರೋನಾಟಿಕ್ಸ್ ಲಿಮಿಟೆಡ್ ಅಧಿಕಾರವನ್ನು ಚಲಾಯಿಸುತ್ತಿದೆಯಲ್ಲದೇ ಸ್ವತಃ ಆಪರೇಟರ್ ಮತ್ತು ರೆಗ್ಯುಲೇಟರ್ (ನಿಯಂತ್ರಕ) ಎರಡೂ ಕಾರ್ಯವನ್ನು ನಿರ್ವಹಿಸುತ್ತಿದೆ.ದುರದೃಷ್ಟಕರವಾಗಿ ಈ ದ್ವಿ–ರೂಪದ ಕಾರ್ಯಾಚರಣೆಯು ದೀರ್ಘಕಾಲದಿಂದ ನಡೆದುಬರುತ್ತಿದೆ.

ಆದ್ದರಿಂದ, ನಾನು ಈ ವಿಚಾರವಾಗಿ ಸರಿಪಡಿಸುವ ಕ್ರಮವನ್ನು ಕೈಗೊಳ್ಳುವ ಮೂಲಕ ಆಪರೇಟರ್ ಮತ್ತು ನಿಯಂತ್ರಣಾಧಿಕಾರ ಎರಡೂ ಕೆಲಸಗಳನ್ನು ಒಂದೇ ಸಂಸ್ಥೆಯು ಮಾಡದಂತೆ ಇವುಗಳನ್ನು ಪ್ರತ್ಯೇಕಿಸಬೇಕು ಎಂದು ಒತ್ತಾಯಿಸುತ್ತೇನೆ. ನನ್ನ ಅಭಿಪ್ರಾಯದಲ್ಲಿ, ಎಲ್ಲ ನಾಗರೀಕ ವಿಮಾನಗಳಿಗೆ, ಎನ್‌ಒಸಿಗಳನ್ನು ನೀಡುವ ಅಧಿಕಾರವು ಡಿಜಿಸಿಎ ಯದ್ದೇ ಆಗಿರುತ್ತದೆ ಮತ್ತು ಯುದ್ಧ ವಿಮಾನಗಳಿಗೆ ಸಂಬಂಧಿಸಿ ಈ ಅಧಿಕಾರವು ಭಾರತೀಯ ವಾಯುಸೇನೆ ಅಥವಾ ರಕ್ಷಣಾ ಸಚಿವಾಲಯದ್ದಾಗಿರುತ್ತದೆ.

ಇದರೊಂದಿಗೆ ಮತ್ತು ನಿಮ್ಮಿಂದ ಮೇಲೆ ಉಲ್ಲೇಖಿಸಿದಂತೆ ನೀತಿ ಬದಲಾವಣೆಯು ಆರಂಭಗೊಳ್ಳುವವರೆಗೆ, ಅಧಿಸೂಚನೆಯನ್ನು ಕೂಡ ಪುನರಾವರ್ತಿತವಾಗಿ ಉಲ್ಲಂಘಿಸಲಾಗುತ್ತಿದೆ ಎಂದು ನಿಮ್ಮ ಗಮನಕ್ಕೆ ತರಲು ಯತ್ನಿಸುತ್ತೇನೆ. ನನ್ನ ನಗರ ಬೆಂಗಳೂರಿನಲ್ಲಿ, ಅಧಿಸೂಚನೆಯ ಹೊರನೋಟಕ್ಕೆ ಕಾಣುವ ಉಲ್ಲಂಘನೆಯಾಗಿ ಸಂಭವಿಸುತ್ತಿರುವ ಒಂದೆರಡು ಘಟನೆಗಳನ್ನು ಮುಖ್ಯವಾಗಿ ಉಲ್ಲೇಖಿಸಲು ಬಯಸುತ್ತೇನೆ: ಮಂತ್ರಿ ಟೆಕ್ನಿಝೋನ್ ಪ್ರೈವೇಟ್ ಲಿಮಿಟೆಡ್ ಎನ್ನುವ ಮಂತ್ರಿ ಡೆವಲಪರ್ಸ್ ಸಂಸ್ಥೆಯ ಮಾಲಿಕತ್ವದ ಕಂಪನಿಯು ಆಗರ ಕೆರೆಯ ದಡದಲ್ಲಿ, ಎಚ್‌ಎಎಲ್ ವಿಮಾನನಿಲ್ದಾಣದ ವ್ಯಾಪ್ತಿಯಲ್ಲಿಯೇ ಬರುವ ಸ್ಥಳದಲ್ಲಿ 1.2 ಕೋಟಿ ಚದರಡಿ ವಿಸ್ತೀರ್ಣದ ಭಾರೀ ಕಟ್ಟಡವೊಂದನ್ನು ನಿರ್ಮಾಣ ಮಾಡುವ ಪ್ರಕ್ರಿಯೆಯನ್ನು ಆರಂಭಿಸಿದೆ. ಅಧಿಸೂಚನೆಯ ಅನ್ವಯ, ಎತ್ತರ ಮಿತಿಯನ್ನು ನಿರ್ಧರಿಸುವುದಕ್ಕೆ ಎನ್‌ಒಸಿಯನ್ನು ನೀಡುವ ಅಧಿಕಾರವು ಹಿಂದುಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್‌ನದಾಗಿರುತ್ತದೆಯೇ ಹೊರತೂ ಎಎಐನದ್ದಾಗಿರುವುದಿಲ್ಲ. ಇದರ ಹೊರತಾಗಿಯೂ ಮಂತ್ರಿ ಡೆವಲಪರ್ಸ್ ಎಎಐನಿಂದ ಎನ್‌ಒಸಿಯನ್ನು ಪಡೆಯುವುದಕ್ಕೆ ಸಾಧ್ಯವಾಗಿದೆ ಮತ್ತು ನಿರ್ಮಾಣ ಕಾಮಗಾರಿಗಳನ್ನು ಆರಂಭಿಸಿದೆ ಎಂದು ಅರ್ಥಮಾಡಿಕೊಂಡಿದ್ದೇನೆ. ಇಂತಹ ರಕ್ಷಣಾ ಇಲಾಖೆಯ ವಿಮಾನ ನಿಲ್ದಾಣಗಳ ವ್ಯಾಪ್ತಿಯಲ್ಲಿ ಬರುವ ಸ್ಥಳಗಳಲ್ಲಿ ಎನ್‌ಒಸಿಗಳನ್ನು ನಿರ್ಮಾಣ ಕಾಮಗಾರಿಗೆಂದು ನೀಡುವ ಎಎಐನ ಕ್ರಮವು ಸಂಪೂರ್ಣವಾಗಿ ಕಾನೂನುಬಾಹಿರವಾಗಿದೆ.

ಇಂತಹ ಇನ್ನೊಂದು ಉಲ್ಲಂಘನೆಯ ಪ್ರಕರಣವೆಂದರೆ ರಹೇಜಾ ಡೆವಲಪರ್ಸ್ ತನ್ನ ಆಧೀನ ಸಂಸ್ಥೆಗಳಲ್ಲಿ ಒಂದಾಗಿರುವ ಚಾಲೆಟ್ ಹೋಟೆಲ್ಸ್ ಮೂಲಕ ನಿರ್ಮಾಣ ಮಾಡುತ್ತಿರುವ ಭಾರೀ ಕಟ್ಟಡ. ಈ ನಿರ್ಮಾಣ ಕಾಮಗಾರಿಯ ಸ್ಥಳವು

ಎಚ್‌ಎಎಲ್ ವಿಮಾನನಿಲ್ದಾಣದ ಕ್ಷಿತಿಜೀಯ ಮೇಲ್ಮೈ ಮಿತಿಯ ಒಳಗೇ ಇದೆ. ಡೆವಲಪರ್ ಕೆಲವು ದೋಷಪೂರಿತವಾದ ಸಮುದ್ರ ಮಟ್ಟದ ಮಾನದಂಡಗಳನ್ನು ಒದಗಿಸಿ, ಎಚ್‌ಎಎಲ್‌ನಿಂದ ಕಟ್ಟಡದ ಎತ್ತರದ ಕುರಿತು ಎನ್‌ಒಸಿಯನ್ನು ಪಡೆದುಕೊಂಡಿರುತ್ತಾರೆ. ಈ ಎತ್ತರದ ಮಿತಿಯು ಅನುಮತಿಸುವ ಎತ್ತರದ ಮಿತಿಗಿಂತ 22 ಮೀಟರುಗಳಷ್ಟು ಹೆಚ್ಚಾಗಿರುತ್ತದೆ.

ಬೆಂಗಳೂರಿನ ಕೆಲವು ನಾಗರೀಕರು ತೋರಿದ ವಿಚಕ್ಷಣಾ ಕ್ರಮಗಳಿಂದಾಗಿ ಸಂಭವನೀಯ ಅನಾಹುತವು ತಪ್ಪಿರುತ್ತದೆ. ಎಚ್‌ಎಎಲ್ ನೀಡಿರುವ ಎನ್‌ಒಸಿಯನ್ನು ಅಮಾನ್ಯಗೊಳಿಸುವ ನಾಗರೀಕರ ಬೇಡಿಕೆಯನ್ನು ಬೆಂಬಲಿಸಿದ್ದೇನೆ. ನನ್ನ ವಿನಂತಿಯನ್ನು ಇನ್ನಷ್ಟು ಬಲಗೊಳಿಸಲು, ನಾನು ಆಗ ರಕ್ಷಣಾ ಮಂತ್ರಿಯಾಗಿದ್ದ (ಪತ್ರವನ್ನು ಲಗತ್ತಿಸಿದ್ದೇನೆ) ಎ.ಕೆ.ಆಂಟನಿ ಅವರಿಗೂ ಕೂಡ, ಈ ಕುರಿತು ಗಮನವನ್ನು ನೀಡುವಂತೆ ಪತ್ರಮುಖೇನ ತಿಳಿಸಿದ್ದೇನೆ. ನಂತರ, ಎಚ್‌ಎಎಲ್ ಈ ಎನ್‌ಒಸಿಯನ್ನು ಹಿಂತೆಗೆದುಕೊಂಡಿರುತ್ತದೆ. ನಂತರ ಡೆವಲಪರ್ ಈ ಹಿಂತೆಗೆದುಕೊಳ್ಳುವಿಕೆಯ ವಿರುದ್ಧ ಗೌರವಾನ್ವಿತ ಕರ್ನಾಟಕ ಮುಖ್ಯನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿರುತ್ತಾರೆ ಎನ್ನುವುದನ್ನು ತಿಳಿದಿದ್ದೇನೆ ಮತ್ತು ಇದು ನ್ಯಾಯವ್ಯಾಪ್ತಿಯಲ್ಲಿರುವುದರಿಂದ ಈ ಕುರಿತು ಹೆಚ್ಚಿನ ಅಭಿಪ್ರಾಯವನ್ನು ನೀಡಲು ನಾನು ಬಯಸುವುದಿಲ್ಲ.

ಆದರೆ ಈ ಮೊಕದ್ದಮೆಯ ಒಂದು ವಿಷಯವು ಮುಖ್ಯವಾಗಿದೆ ಎಂದೆನಿಸುತ್ತದೆ. ಘನತೆವೆತ್ತ ಕರ್ನಾಟಕ ಮುಖ್ಯ ನ್ಯಾಯಾಲಯವು ಅಧ್ಯಯನವನ್ನು ನಡೆಸುವುದಕ್ಕೆ ಎಎಐಗೆ ಸೂಚಿಸಿದೆ ಮತ್ತು ಡೆವಲಪರ್ ಮಾಡಬಹುದಾದ ನಿರ್ಮಾಣ ಕಾಮಗಾರಿಯು ಯಾವುದೇ ರೀತಿಯಲ್ಲಿ ವಿಮಾನಯಾನ ಸುರಕ್ಷತೆ ಹಾಗೂ ಎಚ್‌ಎಎಲ್ ಏರ್‌ಪೋರ್ಟ್‌ನ ನಿಯಮಿತವಾದ ಕಾರ್ಯನಿರ್ವಹಣೆಯ ಮೇಲೆ ಪರಿಣಾಮವುಂಟುಮಾಡುತ್ತದೆಯೇ ಎಂದು ತಿಳಿಸಲು ಸೂಚಿಸಿದೆ. ಎಎಐ ಘನತೆವೆತ್ತ ಮುಖ್ಯ ನ್ಯಾಯಾಲಯಕ್ಕೆ ತನ್ನ ವರದಿಯನ್ನು ಸಲ್ಲಿಸಿರುವುದನ್ನು ಕೂಡ ತಿಳಿದಿರುತ್ತೇನೆ. ಅಂತಹ ವರದಿಗಳನ್ನು ಪರಿಗಣಿಸುವುದು ಮತ್ತು ಅಂತಹ ಮೊಕದ್ದಮೆಗಳಲ್ಲಿ ಸೂಕ್ತ ನಿರ್ಣಯಗಳನ್ನು ನೀಡುವುದು ಮುಖ್ಯ ನ್ಯಾಯಾಲಯದ ಪರಮಾಧಿಕಾರವೇ ಆಗಿದ್ದರೂ, ಸ್ವತಃ ಸೇನಾ ವಿಚಾರಕ್ಕೆ ಸಂಬಂಧಿಸಿಲ್ಲದ–ನಾಗರೀಕ ವಿಮಾನಯಾನ ಸಂಸ್ಥೆಯಾದ ಎಎಐಗೆ ವಾಯುಸೇನೆಯ ವಿಮಾನನಿಲ್ದಾಣಗಳಿಗೆ ಸಂಬಂಧಿಸಿ ವಾಯುಯಾನ ಅಧ್ಯಯನಗಳನ್ನು ನಡೆಸುವ ಅಧಿಕಾರವನ್ನು ನೀಡಬಾರದು ಎನ್ನುವ ವಿಚಾರವನ್ನು ತಮ್ಮ ಗಮನಕ್ಕೆ ತರಲು ಪ್ರಯತ್ನಿಸುತ್ತೇನೆ.

ನನ್ನ ದೃಷ್ಟಿಕೋನದಲ್ಲಿ ಎಎಐಗೆ ಇಂತಹ ಒಂದು ಅಧ್ಯಯನವನ್ನು ನಡೆಸುವ ಕಾನೂನುಬದ್ಧ ಅಧಿಕಾರವಾಗಲೀ ಅಥವಾ ಕಾರ್ಯನಿರ್ವಹಣಾ ಸಾಮರ್ಥ್ಯವಾಗಲೀ ಇರುವುದಿಲ್ಲ. ಇದು ಎಚ್‌ಎಎಲ್‌ನ ಕಾರ್ಯಗಳಿಗೆ ಅಡ್ಡಿಯಾಗುವ ಸಾಧ್ಯತೆಯಿರುವ ಮುಖ್ಯವಾದ ಪ್ರಕರಣವಾಗಿದ್ದು ದೇಶದ ಬಧ್ರತಾ ಸಿದ್ಧತೆಯ ವ್ಯವಸ್ಥೆಯ ಮೇಲೆ ದುಷ್ಪರಿಣಾಮವನ್ನು ಬೀರಬಹುದಾಗಿದೆ.

ಹಿಂದುಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್, ಬೆಂಗಳೂರು ದೇಶದ ಏಕೈಕ ವಿಮಾನ ವಿನ್ಯಾಸ ಮತ್ತು ಉತ್ಪಾದನಾ ಸಂಸ್ಥೆಯಾಗಿದ್ದು, ರಕ್ಷಣಾ ವಲಯಕ್ಕೆ ಅತ್ಯಂತ ಅಗತ್ಯವಾಗಿರುವ ಸುರಕ್ಷಿತವಾದ ಪರೀಕ್ಷಾ ಹಾರಾಟ ಪರಿಸರವನ್ನು ಒದಗಿಸುತ್ತದೆ. ಎಚ್‌ಎಎಲ್‌ನ ಹಾರಾಟ ಕಾರ್ಯಗಳು ಪ್ರಾಯೋಗಿಕ, ರುಜುವಾತಾಗಿಲ್ಲದ, ಅಭಿವೃದ್ಧಿ ಹಂತದ ವಿಮಾನಗಳು ಹಾಗೂ ಹೆಲಿಕ್ಯಾಪ್ಟರುಗಳ ಹಾರಾಟವನ್ನು ಒಳಗೊಂಡಿರುತ್ತವೆ. ಹತ್ತಿರದ ಕಟ್ಟಡಗಳ ಎತ್ತರದ ನಿರ್ಬಂಧಗಳನ್ನು ಎಚ್‌ಎಎಲ್‌ನ ಪರೀಕ್ಷಾರ್ಥ ಹಾರಾಟ ಹಾಗೂ ವಿಶೇಷ ಲ್ಯಾಂಡಿಂಗ್ ಅಭ್ಯಾಸಗಳಿಗೆ ಅಡಚಣೆಯುಂಟುಮಾಡುವ ಅಪಾಯಗಳಿರುವುದಿಲ್ಲ ಎಂದು ಖಾತ್ರಿಪಡಿಸಿಕೊಳ್ಳಲು ಅಳವಡಿಸಿಕೊಳ್ಳಲಾಗಿರುತ್ತದೆ. ಮೇಲೆ ವಿವರಿಸಿದ ಅಂಶಗಳನ್ನು ಪರಿಗಣಿಸಿ, ನಾನು ನಿಮಗೆ ಈ ವಿಷಯವನ್ನು ತುರ್ತು ಎಂದು ಪರಿಗಣಿಸಿ ಪರಿಶೀಲಿಸುವಂತೆ ಮತ್ತು ಈ ಕುರಿತು ವಿವರವಾದ ವಿಚಾರಣೆಯನ್ನು ಕೈಗೊಳ್ಳುವಂತೆ ಒತ್ತಾಯಿಸುತ್ತೇನೆ. ಅಲ್ಲದೇ ಅಧಿಸೂಚನೆಯನ್ನು ಉಲ್ಲಂಘಿಸಿ ಕಾರ್ಯನಿರ್ವಹಿಸಿರುವ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವುದು ಮತ್ತು ಅವರನ್ನು ಅವರ ತಪ್ಪು ಕ್ರಮ ಹಾಗೂ ಕ್ರಮ ಕೈಗೊಳ್ಳುವಲ್ಲಿ ವಿಫಲತೆಗಾಗಿ ಹೊಣೆಗಾರರನ್ನಾಗಿ ಮಾಡುವುದು ಕೂಡ ಅಗತ್ಯವಿರುತ್ತದೆ. ಅಲ್ಲದೇ ನಾನು ಇದೊಂದು ಮಹತ್ವದ ವಿಚಾರವಾಗಿದ್ದು ಅಧಿಸೂಚನೆ ಹಾಗೂ ಸೂಕ್ತ ತಿದ್ದುಪಡಿಗಳನ್ನು ಸಾಧ್ಯವಿದ್ದಷ್ಟು ಬೇಗನೇ ಈ ನಿಟ್ಟಿನಲ್ಲಿ ಕೈಗೊಳ್ಳುವುದಕ್ಕಾಗಿ ನಿಮ್ಮ ಗಮನವನ್ನು ನಿಯಂತ್ರಕ ಹಾಗೂ ನಿಯಂತ್ರಣಕ್ಕೆ ಒಳಪಡುವವರ ನಡುವಿನ ಅಧಿಕಾರಗಳನ್ನು ಪ್ರತ್ಯೇಕಿಸುವುದರತ್ತಲೂ ಗಮನ ಸೆಳೆಯುತ್ತೇನೆ.

ನಿಮ್ಮ ವಿಶ್ವಾಸಿ,
ರಾಜೀವ್ ಚಂದ್ರಶೇಖರ್

ಶ್ರೀ ಪಿ.ಅಶೋಕ್ ಗಜಪತಿರಾಜು,
ಮಾನ್ಯ ನಾಗರೀಕ ವಿಮಾನಯಾನ ಖಾತೆಯ ಸಚಿವರು,
ಭಾರತ ಸರ್ಕಾರ
ನವದೆಹಲಿ

ಲಗತ್ತು:
ಮಾಜಿ ರಕ್ಷಣಾ ಸಚಿವರಾಗಿದ್ದ ಶ್ರೀ ಎ.ಕೆ.ಆಂಟನಿಯವರಿಗೆ ದಿನಾಂಕ 17ನೇ ಸೆಪ್ಟೆಂಬರ್, 2013 ಕಳುಹಿಸಿದ್ದ ನನ್ನ ಪತ್ರ

ಪ್ರತಿಗಳು:

ಶ್ರೀ ನರೇಂದ್ರ ಮೋದಿ,
ಗೌರವಾನ್ವಿತ ಪ್ರಧಾನ ಮಂತ್ರಿಗಳು

ಶ್ರೀ ಮನೋಹರ್ ಪರಿಕ್ಕರ್,
ಮಾನ್ಯ ರಕ್ಷಣಾ ಸಚಿವರು

# 37

# ನಗರ ಸ್ಥಳೀಯ ಸಂಸ್ಥೆಗಳಿಗೆ ನಿಧಿ ಮಂಜೂರಾತಿ ಕುರಿತು ರಾಜ್ಯ ಹಣಕಾಸು ಆಯೋಗಕ್ಕೆ ಪತ್ರ

21ನೇ ಮೇ, 2016

ಶ್ರೀ ಚಿನ್ನಸ್ವಾಮಿ ಅವರೇ,

**ವಿಷಯ: ನಗರ ಸ್ಥಳೀಯ ಸಂಸ್ಥೆಗಳಿಗೆ ನಿಧಿ ಹಂಚಿಕೆ ಮಾಡುವ ಮೊದಲು ಆಡಿಟ್ ಹಾಗೂ ಹೊಣೆಗಾರಿಕೆಯ ಸಂಸ್ಕೃತಿಯನ್ನು ತಿಳಿಸುವುದು ಅಗತ್ಯವಿದೆ**

3 ಶ್ರೇಣಿಯ ಪ್ರಜಾಪ್ರಭುತ್ವದಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಮುಖ್ಯವಾದ ಹಂತವಾಗಿವೆ. ದೇಶದ ಉದ್ದಗಲಕ್ಕೂ ಕೆಡುತ್ತಿರುವ ನಗರ ವ್ಯವಸ್ಥೆಯನ್ನು ಸುಧಾರಿಸುವುದಕ್ಕೆ ನಗರ ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಹಣಕಾಸಿನ ಸಂಪನ್ಮೂಲಗಳು ಅಗತ್ಯವಿರುತ್ತವೆ. ನಾನು ಅನೇಕ ವರ್ಷಗಳಿಂದ ನಗರ ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ಆಳವಾದ ಆಡಳಿತ ಸುಧಾರಣೆ, ಹೊಣೆಗಾರಿಕೆ ಹೆಚ್ಚಳ ಹಾಗೂ ಸಂಸ್ಥೆಗಳನ್ನು ಬಲಗೊಳಿಸುವುದನ್ನು ತೀವ್ರವಾಗಿ ಪ್ರತಿಪಾದಿಸುತ್ತಿದ್ದೇನೆ.

14ನೇ ಹಣಕಾಸು ಆಯೋಗದ ಶಿಫಾರಸುಗಳು ಅಂತಿಮವಾಗಿ ನಾಗರಿಕೆ ಹೆಚ್ಚಿನ ಪ್ರಯೋಜನ ಸಿಗಲಿ ಎನ್ನುವ ಉದ್ದೇಶದಿಂದ ರಾಜ್ಯಗಳಿಗೆ ಹೆಚ್ಚಿನ ಹಣಕಾಸಿನ ಸ್ವಾಯತ್ತತೆಯನ್ನು ನೀಡಿವೆ. ಆಯೋಗದ ಶಿಫಾರಸು ರಾಜ್ಯಗಳಿಗೆ 42 ಪ್ರತಿಶತದಷ್ಟು ಹಣ ನೀಡಿಕೆಯನ್ನು ಕೇಂದ್ರ ಸರ್ಕಾರವೂ ಕೂಡ ಒಪ್ಪಿಕೊಂಡಿರುತ್ತದೆ. ಹೆಚ್ಚಿನ ಹಂಚಿಕೆಯ ಅನ್ವಯ ಕರ್ನಾಟಕದ ಪಾಲು 13ನೇ ಹಣಕಾಸು ಆಯೋಗದ ಅವಧಿಯಲ್ಲಿ 4.328ರಿಂದ 4.713 ಪ್ರತಿಶತದಷ್ಟಾಗಿದೆ, ಇದು ಕರ್ನಾಟಕಕ್ಕೆ 2015–16 ರಲ್ಲಿ ಹೆಚ್ಚಿನ 8400 ಕೋಟಿಗಳನ್ನು ಒದಗಿಸುತ್ತದೆ.

**ಸುಧಾರಣೆಗಳು ಮತ್ತು ಬಿಬಿಎಂಪಿ**

74ನೇ ಸಾಂಸ್ಥಿಕ ತಿದ್ದುಪಡಿ ಕಾಯ್ದೆಯ ಧ್ಯೇಯವು ದಕ್ಷತೆಯಿಂದ ಮತ್ತು ಪರಿಣಾಮಕಾರಿಯಾಗಿ ಅದೇ ಸಮಯದಲ್ಲಿ ಸ್ವಾಯತ್ತ ಸಂಸ್ಥೆಗಳಂತೆ ಆರ್ಥಿಕ ಬೆಳವಣಿಗೆ ಹಾಗೂ ಸಾಮಾಜಿಕ ನ್ಯಾಯದ ಸೇವೆಗಳನ್ನು ಒದಗಿಸುವಂತೆ ನಗರ ಸ್ಥಳೀಯ ಸಂಸ್ಥೆಗಳನ್ನು ಬಲಗೊಳಿಸುವುದಾಗಿದೆ.

ಆದರೆ ಇಂದು ನಗರ ಸ್ಥಳೀಯ ಸಂಸ್ಥೆಗಳು ಅತ್ಯಂತ ಭ್ರಷ್ಟವಾದ ಸಂಸ್ಥೆಗಳಾಗಿವೆ ಮತ್ತು ಹಣವನ್ನು ಹೆಚ್ಚಿನ ಪರಿಶೀಲನೆ ಇಲ್ಲದೇ ನೀಡುವುದು ಮತ್ತು ಕಾರ್ಯನಿರ್ವಹಣೆ ಸ್ಥಿತಿಗಳ ರೂಪದಲ್ಲಿರುವ ಬ್ಯಾಲನ್ಸ್‌ಗಳು ನಿಧಿಗಳನ್ನು ಇನ್ನೂ ಹೆಚ್ಚಿನ ಮಟ್ಟದಲ್ಲಿ ಲೂಟಿ ಮಾಡುವುದಕ್ಕೆ ಕಾರಣವಾಗುತ್ತಿದೆ. ರಾಜ್ಯ ಸರ್ಕಾರ ಹಾಗೂ ಹಣಕಾಸು ಆಯೋಗವು ನಗರ ಸ್ಥಳೀಯ ಸಂಸ್ಥೆಗಳು ಜವಾಬ್ದಾರಿಯಿಂದ ಕೆಲಸ ಮಾಡುವುದನ್ನು ಮತ್ತು ನಾಗರೀಕ ಸೇವೆ ಹಾಗೂ ಮೂಲಭೂತ ಸೌಕರ್ಯಗಳನ್ನು ಸಾರ್ವಜನಿಕ ಹಣ ಹಾಗೂ ಸ್ವತ್ತಿನ ಟ್ರಸ್ಟಿಗಳಂತೆ ಪಾರದರ್ಶಕ ರೀತಿಯಲ್ಲಿ ಒದಗಿಸುತ್ತಾರೆ ಎನ್ನುವುದನ್ನು ಖಾತ್ರಿಪಡಿಸಬೇಕು.

ಬೃಹತ್ ಬೆಂಗಳೂರು ಮಹಾನಗರಪಾಲಿಕೆ (ಬಿಬಿಎಂಪಿ)ಯು ಶಾಸನಾತ್ಮಕ ಸ್ಥಳೀಯ ಸಂಸ್ಥೆಯಾಗಿದ್ದು, ಇದು ಬೆಂಗಳೂರಿನ ನಾಗರೀಕರಿಗೆ ನಾಗರೀಕ ಸೇವೆಗಳು ಮತ್ತು ಮೂಲಭೂತ ಸೌಕರ್ಯವನ್ನು ನೀಡುವುದಕ್ಕೆ ಬದ್ಧತೆಯನ್ನು ಹೊಂದಿರಬೇಕು. ಆದರೆ ಬಿಬಿಎಂಪಿಯ ದಾಖಲೆಗಳು ಸಾರ್ವಜನಿಕ ಸಂಪನ್ಮೂಲಗಳ – ಭೂಮಿಯ ಭಾರೀ ಪ್ರಮಾಣದ ದುರ್ಬಳಕೆಯಿರುವುದನ್ನು ನಿರ್ದಿಷ್ಟವಾಗಿ ಎತ್ತಿ ತೋರಿಸುತ್ತವೆ; ಅಷ್ಟೇ ಅಲ್ಲದೇ ನಿರುಪಯುಕ್ತ ಹಾಗೂ ಅನಗತ್ಯವಾಗಿ ಹೆಚ್ಚು ಹಣ ನೀಡುವ ಪ್ರಾಜೆಕ್ಟುಗಳು ಮತ್ತು ಆದಾಯದಲ್ಲಿ ಭಾರೀ ಪ್ರಮಾಣದಲ್ಲಿ ಇಳಿಕೆಯಾಗಿರುವುದು ಭ್ರಷ್ಟಾಚಾರದ ಹೆಚ್ಚಿನ ಉದಾಹರಣೆಗಳೆನ್ನಬಹುದು (ವಿವರಗಳು ಅನುಬಂಧ

1 ರಲ್ಲಿವೆ). ಹಾಗಾಗಿ ಬಿಬಿಎಂಪಿಯ ಹೊಣೆಗಾರಿಕೆಯ ಪ್ರಶ್ನೆಯು ಅತ್ಯಂತ ಮುಖ್ಯವಾಗಿರುತ್ತದೆ. ಬಿಬಿಎಂಪಿಯು 2015–16ರ ತನ್ನ ಬಜೆಟ್ಟಿನಲ್ಲಿ ಒಟ್ಟಾರೆ 37% ಆದಾಯವು ರಾಜ್ಯ ಮತ್ತು ಕೇಂದ್ರವು ನೀಡಿರುವ ಹಣ ಎನ್ನುವುದನ್ನು ಸೂಚಿಸಿದೆ. ಇದರೊಂದಿಗೆ 2011–12 ರಿಂದ 2014–15 ರವರೆಗೆ, ಬಿಬಿಎಂಪಿಯು ರಾಜ್ಯ ಸರ್ಕಾರವು ನೀಡಿರುವ 3659.92 ಕೋಟಿ ಮತ್ತು ಜೆಎನ್ಎನ್‌ಯುಆರ್‌ಎಂ ಅಡಿಯಲ್ಲಿ ಹೆಚ್ಚುವರಿಯಾಗಿ ನೆರೆ ನೀರಿನ ಚರಂಡಿಗೆಂದೇ ನೀಡಿರುವ 55.50 ಕೋಟಿ ರೂಪಾಯಿಗಳ ಜೊತೆಯಲ್ಲಿ 13ನೇ ಹಣಕಾಸು ಆಯೋಗದಿಂದ 452.22 ಕೋಟಿಯನ್ನು ಪಡೆದಿರುತ್ತದೆ.

ನಗರವು ಮೂಲಭೂತ ಸೌಕರ್ಯಗಳೂ ಇಲ್ಲದೇ ಬಳಲುತ್ತಿರುವಾಗ ರಾಜ್ಯ ಸರ್ಕಾರದ ವತಿಯಿಂದ ಹಾಗೂ ಕೇಂದ್ರ ಸರ್ಕಾರದಿಂದ ವಿತರಣೆಯಾಗುವ ಹಣದಲ್ಲಿ ಹೆಚ್ಚಳವಾದರೂ ಬಿಬಿಎಂಪಿಯು ಯಾವುದೇ ಪಾರದರ್ಶಕತೆ ಹಾಗೂ ಹೊಣೆಗಾರಿಕೆಯಿಲ್ಲದೇ ಹಣಪೋಲು ಮಾಡುವುದರಿಂದ ಇನ್ನೂ ಹೆಚ್ಚಿನ ಅನಿಯಮಿತತೆಗಳನ್ನು ಉಂಟುಮಾಡುತ್ತದೆ.

ಈ ಸಮಸ್ಯೆಗಳನ್ನು ಪರಿಹರಿಸದೇ ಇದ್ದಲ್ಲಿ ಹೆಚ್ಚಿನ ನಿಧಿಯನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆ ಮಾಡುವುದು ಬಕೆಟ್ ಹೊರಗಿನ ಜನರಿಗೆ ಸಹಾಯವಾಗಲೆಂದು ಸೋರಿಕೆಯಾಗುತ್ತಿರುವ ಬಕೆಟ್ಟುಗಳಿಗೆ ಇನ್ನಷ್ಟು ನೀರನ್ನು ಸೇರಿಸಿದಂತೆಯೇ ಆಗುತ್ತದೆ ಅಂದರೆ ನೈಜವಾಗಿ ನಗರದೊಳಗಿನ ಜನರಿಗೆ, ನಾಗರೀಕರಿಗೆ ಮೂಲಸೌಕರ್ಯವು ಸಿಗುವ ಬದಲು ಕೆಲವು ಪಟ್ಟಭದ್ರರ ಜೇಬು ತುಂಬುವಂತಾಗುತ್ತದೆ.

**ಹಣವನ್ನು ಬಿಡುಗಡೆ ಮಾಡುವುದಕ್ಕಾಗಿ ಷರತ್ತುಗಳನ್ನು ವಿಧಿಸುವುದಕ್ಕೆ ಆಯೋಗಕ್ಕೆ ಶಿಫಾರಸುಗಳು**

ರಾಜ್ಯವು ಸ್ಥಳೀಯ ಸಂಸ್ಥೆಗಳಿಗೆ ನೀಡುವ ಹಣವು ಹೆಚ್ಚಿನ ಸಂದರ್ಭಗಳಲ್ಲಿ ರಾಜ್ಯ ಹಣಕಾಸು ಆಯೋಗಗಳ ಶಿಫಾರಸುಗಳನ್ನು ಅವಲಂಬಿಸಿರುತ್ತದೆ. ಆದ್ದರಿಂದ ನಗರ ಸ್ಥಳೀಯ ಸಂಸ್ಥೆಗಳ ಸುಧಾರಣಾ ಕ್ರಮಗಳ ಜಾರಿ ಹಾಗೂ ಉತ್ತೇಜಿತ ಹೊಣೆಗಾರಿಕೆಗೆ ಸಂಬಂಧಿಸಿಯೇ ನಿಧಿ ನೀಡಿಕೆಯನ್ನು ಮಾಡುವುದಕ್ಕೆ 4ನೇ ರಾಜ್ಯ ಹಣಕಾಸು ಆಯೋಗವು ಹೆಚ್ಚಿನ ಒತ್ತು ನೀಡುವುದು ಅಗತ್ಯವಿರುತ್ತದೆ. **ಹಣಕಾಸಿನ, ತೆರಿಗೆ ಆದಾಯದ ಹಾಗೂ ವೆಚ್ಚಗಳ ವಾರ್ಷಿಕ ಆಡಿಟ್, ವಾರ್ಡ್ ಆಧಾರಿತ ವಾರ್ಷಿಕ ಆಡಿಟ್ ಮತ್ತು ನಿರ್ದಿಷ್ಟ ಕಾಲಾವಧಿಯ ಒಳಗೆ ಆಡಿಟ್ ವರದಿಗಳನ್ನು**

**ಪ್ರಕಟಿಸುವುದನ್ನು ಕಡ್ಡಾಯಗೊಳಿಸುವುದು.**

1. ಬಿಬಿಎಂಪಿಯು ನಗರಪಾಲಿಕೆಗೆ ಹೊಸದಾಗಿ ಸೇರಿಕೊಂಡಿರುವ ಪ್ರದೇಶಗಳನ್ನು ಆಸ್ತಿ ತೆರಿಗೆಯ ಜಾಲವನ್ನು ದಕ್ಷತೆಯಿಂದ ವ್ಯಾಪಕಗೊಳಿಸಬೇಕು, ಇಲ್ಲಿ ವಿವರಗಳು ಇಲ್ಲದೇ ಇರುವುದರಿಂದ ಸಾವಿರಗಟ್ಟಲೆ ತೆರಿಗೆ ಆದಾಯವು ಪಾಲಿಕೆಗೆ ಸಿಗುತ್ತಿಲ್ಲ. ಬಹುವರ್ಷೀಯ ಹೂಡಿಕೆಯ ಯೋಜನೆಯ ಅನುಮೋದನೆಯು ಶಾಸನಾತ್ಮಕ, ಕಾನೂನುಬದ್ಧ ಹಾಗೂ ಬಿಬಿಎಂಪಿ ಒಳಗೊಂಡು ಎಲ್ಲ ನಗರ ಸ್ಥಳೀಯ ಸಂಸ್ಥೆಗಳಿಗೆ ನಿರ್ಬಂಧಕವಾಗಿರುತ್ತದೆ.

2. ಸಂವಿಧಾನದ 74ನೇ ತಿದ್ದುಪಡಿಯು ನಗರ ಯೋಜನಾ ಸಮಿತಿಗಳನ್ನು ರಚಿಸುವುದನ್ನು ಕಡ್ಡಾಯಗೊಳಿಸಿದೆ - ಈ ಶಾಸನಾತ್ಮಕ ಸಂಸ್ಥೆಯು ಪಾರದರ್ಶಕವಾದ ಹಾಗೂ ರಚನಾತ್ಮಕ ರೀತಿಯಲ್ಲಿ ಯೋಜನೆಯನ್ನು ರೂಪಿಸುವುದಕ್ಕೆ ಹೊಣೆಯಾಗಿರುತ್ತದೆ. ಎಸ್‌ಎಫ್‌ಸಿಯು ಎಂಪಿಸಿಯ ಜಾರಿಯನ್ನು ಕಡ್ಡಾಯಗೊಳಿಸಬೇಕು ಮತ್ತು ನಗರ ಸ್ಥಳೀಯ ಸಂಸ್ಥೆಗಳು ಅಂತಹ ಯೋಜನೆಗಳನ್ನೇ ಅನುಷ್ಠಾನಗೊಳಿಸುವಂತೆ ಮಾಡಬೇಕು. ಹೊಸ ಮೂಲಕಸೌಕರ್ಯ ಯೋಜನೆ ರೂಪಿಸುವಲ್ಲಿ ಹಾಗೂ ಸೇವೆಯ ನೀಡಿಕೆಯ ಮಟ್ಟದ ವಿಶ್ಲೇಷಣೆಗಳಲ್ಲಿ ಸಾರ್ವಜನಿಕ ತೊಡಗಿಕೊಳ್ಳುವಿಕೆಯು ಕಡ್ಡಾಯವಾಗಿ ಹೆಚ್ಚಿನ ಮಟ್ಟದಲ್ಲಿ ಇರಬೇಕು.

3. ನಗರ ಸ್ಥಳೀಯ ಸಂಸ್ಥೆಗಳು ನೀಡುವ ಎಲ್ಲ ಗುತ್ತಿಗೆಗಳಲ್ಲಿಯೂ ಪಾರದರ್ಶಕತೆಯನ್ನು ಮತ್ತು ಸ್ವತ್ತುಗಳ ರೆಜಿಸ್ಟರ್ ಅನ್ನು ಉಳಿಸಿಕೊಳ್ಳುವ ಮೂಲಕ ಸಾರ್ವಜನಿಕ ಸ್ವತ್ತುಗಳ ಬಳಕೆಯ ಬಹಿರಂಗಗೊಳಿಸುವಿಕೆಯನ್ನು ಕಡ್ಡಾಯಗೊಳಿಸುವುದರ ಜೊತೆಗೆ ಗುತ್ತಿಗೆಯ ನಿಯಮಗಳು ಮತ್ತು ಷರತ್ತುಗಳ ಬಹಿರಂಗಪಡಿಸುವಿಕೆ ಖಾತ್ರಿಪಡಿಸಬೇಕು.

4. ಎಸ್‌ಎಫ್‌ಸಿಯು ಪ್ರತಿಯೊಂದು ವಾರ್ಡ್, ವಲಯ, ನಗರ ಸ್ಥಳೀಯ ಸಂಸ್ಥೆಯ ನಡುವೆ ಹಣಕಾಸು ನಿಧಿಗಳನ್ನು ಪಡೆಯಲು ಸ್ಪರ್ಧೆಯೇರ್ಪಡುವಂತಹ ಆರೋಗ್ಯಕರವಾದ ತಾಂತ್ರಿಕತೆಯ ವಾತಾವರಣವನ್ನು ಸೃಷ್ಟಿಸುವ ಮೂಲಕ ಅವು ಸತತವಾದ ಸುಧಾರಣೆಯತ್ತ ಮುನ್ನುಗ್ಗುವಂತೆ ಮಾಡಬೇಕು.

5. ನಗರ ಸ್ಥಳೀಯ ಸಂಸ್ಥೆಗಳು ನಾಗರೀಕರು ಇವುಗಳ ಬಗ್ಗೆ ತಿಳಿಯುವುದಕ್ಕಾಗಿ ಮತ್ತು ಸುಧಾರಣೆಗಳನ್ನು ವಿಶ್ಲೇಷಿಸುವುದಕ್ಕಾಗಿ ನೀರು ಸರಬರಾಜು, ಚರಂಡಿ ಇತ್ಯಾದಿ ಒಳಗೊಂಡು ಎಲ್ಲ ಡೇಟಾ(ಹಿಂದಿನ ಹಾಗೂ ಹಳೆಯ ಡೇಟಾ

ಒಳಗೊಂಡು), ಮಾಹಿತಿ ಮತ್ತು ಯೋಜನೆಗಳನ್ನು ತಮ್ಮ ಕಾರ್ಯಕ್ರಮಗಳು ಹಾಗೂ ಪ್ರಾಜೆಕ್ಟುಗಳ ಅಡಿಯಲ್ಲಿ ಡಿಜಿಟೈಸ್ ಮಾಡಲು ಮತ್ತು ಲಭ್ಯವಿರುವಂತೆ ಮಾಡಲು ತಾಂತ್ರಿಕತೆಯನ್ನು ಬಳಸಬೇಕು.

6. ನಗರ ಸ್ಥಳೀಯ ಸಂಸ್ಥೆಗಳು ರಾಷ್ಟ್ರೀಯ ಮುನ್ಸಿಪಲ್ ಅಕೌಂಟಿಂಗ್ ಕೈಪಿಡಿಯನ್ನು ಅಥವಾ ಕರ್ನಾಟಕ ಮುನ್ಸಿಪಲ್ ಅಕೌಂಟಿಂಗ್ ಮತ್ತು ಬಜೆಟ್ ನಿಯಮಗಳನ್ನು ಅಳವಡಿಸಿಕೊಳ್ಳುವಂತೆ ಮತ್ತು ಆನ್‌ಲೈನ್ ಮುನ್ಸಿಪಲ್ ಹಣಕಾಸು ಮಾಹಿತಿ ಸಿಸ್ಟಂಗಳನ್ನು ಅಭಿವೃದ್ಧಿಪಡಿಸುವಂತೆ ಮಾಡಬೇಕು.

7. ಒಂದು ಮೂರನೇ ಪಕ್ಷದ ದೃಢೀಕರಣ ಅಂದರೆ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ ಅವರಿಂದ ಆಡಿಟ್ ಅನ್ನು ಸಿ & ಎಜಿ ಕಾಯಿದೆ 1971 ರ ಸೆಕ್ಷನ್ 14 (2) ರ ಅನ್ವಯ ಕಡ್ಡಾಯಗೊಳಿಸಬೇಕು ಮತ್ತು ಅಂತಹ ಆಡಿಟ್ ಅನ್ನು ನಿಯತಕಾಲಿಕವಾಗಿ ಮಾಡುವುದಕ್ಕೆ ಕರ್ನಾಟಕ ಸರ್ಕಾರವನ್ನು ಹೊಣೆಯಾಗಿಸಬೇಕು.

ಮೇಲೆ ಉಲ್ಲೇಖಿಸಿದ ವಿಷಯಗಳನ್ನು ಗಣನೆಗೆ ತೆಗೆದುಕೊಳ್ಳುವಂತೆ ನಾನು ಆಯೋಗವನ್ನು ವಿನಂತಿಸುತ್ತೇನೆ. ಬೆಂಗಳೂರಿನ ಸಂಸತ್ ಸದಸ್ಯನಾಗಿ, ನಾನು ರಾಜ್ಯ ಸರ್ಕಾರವು ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡುವ ಅಥವಾ ಹಂಚಿಕೆ ಮಾಡುವ ಹಣವು ನಗರ ಸ್ಥಳೀಯ ಸಂಸ್ಥೆಗಳು, ಆಡಳಿತಾತ್ಮಕ ದಕ್ಷತೆಯ ಷರತ್ತುಗಳಿಗೆ ಅನುಗುಣವಾಗಿರಬೇಕು ಮತ್ತು ಸರ್ಕಾರವು ಹೊಣೆಗಾರಿಕೆಯ ಸಮಸ್ಯೆಯನ್ನು ಪರಿಹರಿಸಬೇಕು ಎನ್ನುವುದನ್ನು ಖಾತ್ರಿಪಡಿಸುವ ಜವಾಬ್ದಾರಿಯನ್ನು ನಾಗರೀಕರಿಗಾಗಿ ಆಯೋಗವು ಹೊಂದಿದೆ ಎನ್ನುವುದನ್ನು ಗುರುತಿಸಿಕೊಳ್ಳುವಂತೆ ವಿನಂತಿಸುತ್ತೇನೆ.

ಕರ್ನಾಟಕ ಸರಕಾರಕ್ಕೆ ನೀಡುವ ನಿಮ್ಮ ಶಿಫಾರಸುಗಳಲ್ಲಿ ಸಾಕಷ್ಟು ಸುರಕ್ಷತಾ ಕ್ರಮಗಳಿದ್ದು, ಅಂತಹವುಗಳ ಮೂಲಕ ನಗರ ಸ್ಥಳೀಯ ಸಂಸ್ಥೆಗಳು ತಾವು ಪಡೆದ ಸಾರ್ವಜನಿಕ ಹಣದ ಬಳಕೆಯನ್ನು ಅತ್ಯಂತ ನ್ಯಾಯಯುತವಾಗಿ ಹೊಣೆಗಾರಿಕೆಯನ್ನು ಅತ್ಯುಚ್ಚ ಮಟ್ಟದಲ್ಲಿ ಉಳಿಸಿಕೊಂಡು ಮಾಡುವಂತೆ ಪ್ರೇರೇಪಿಸುವಂತಾಗಬೇಕು ಎಂದು ಎದುರುನೋಡುತ್ತೇನೆ.

ಅಂತಿಮವಾಗಿ, ಕರ್ನಾಟಕ ಸರ್ಕಾರಕ್ಕೆ ನಿಮ್ಮ ಶಿಫಾರಸುಗಳನ್ನು ಅಂತಿಮಗೊಳಿಸುವುದು ಮತ್ತು ಸಲ್ಲಿಸುವುದಕ್ಕಿಂತ ಬೆಂಗಳೂರಿನ ಎಲ್ಲ ಸಂಸತ್ ಸದಸ್ಯರುಗಳನ್ನು ಭೇಟಿಯಾಗುವಂತೆ ಹಾಗೂ ಅವರೊಂದಿಗೆ ಸಮಾಲೋಚಿಸುವಂತೆ ನಿಮ್ಮನ್ನು

ಒತ್ತಾಯಿಸುತ್ತೇನೆ.

ನಿಮ್ಮ ವಿಶ್ವಾಸಿ
ರಾಜೀವ್ ಚಂದ್ರಶೇಖರ್

ಶ್ರೀ ಚಿನ್ನಸ್ವಾಮಿಯವರು,
ಮುಖ್ಯಸ್ಥರು,
4ನೇ ಕರ್ನಾಟಕ ರಾಜ್ಯ ಹಣಕಾಸು ಆಯೋಗ,
ಖನಿಜ ಭವನ,
ರೇಸ್‌ಕೋರ್ಸ್ ರಸ್ತೆ,
ಬೆಂಗಳೂರು.

# 38

# ರಾಷ್ಟ್ರೀಯ ಹಸಿರು ನ್ಯಾಯಾಧಿಕರಣದ ಆದೇಶ ಜಾರಿ ಕುರಿತು ಮುಖ್ಯಮಂತ್ರಿಯವರಿಗೆ ಪತ್ರ

1ನೇ ಜೂನ್, 2016

ಗೌರವಾನ್ವಿತ ಮುಖ್ಯಮಂತ್ರಿಗಳೇ,

ನೀವು ಈಗಾಗಲೇ ತಿಳಿದಿರುವಂತೆ ನಮ್ಮ ಬೆಂಗಳೂರು ಪ್ರತಿಷ್ಠಾನದಂತಹ ಸಾಮಾಜಿಕ ಕಳಕಳಿಯುಳ್ಳ ಸಂಘಟನೆಗಳನ್ನು ಒಳಗೊಂಡ ನಾಗರೀಕ ಸಮಾಜವು ಸಲ್ಲಿಸಿರುವ ದೂರನ್ನು ಆಧರಿಸಿ ಗೌರವಾನ್ವಿತ ಹಸಿರುವ ನ್ಯಾಯಮಂಡಳಿ (ಎನ್‌ಜಿಟಿ) ಯು ಕೆರೆಗಳು, ನೀರಿನ ಹಳ್ಳಕೊಳ್ಳಗಳು ಹಾಗೂ ರಾಜಕಾಲುವೆಗಳ ಸುತ್ತಲೂ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ ಸವಿವರವಾದ ನಿರ್ದೇಶನಗಳನ್ನು ನೀಡಿರುತ್ತದೆ. ನಿಮ್ಮ ಅವಗಾಹನೆಗಾಗಿ ಫಾರ್ವರ್ಡ್ ಫೌಂಡೇಶನ್ ಮತ್ತು ಇತರರು ವಿರುದ್ಧ ಕರ್ನಾಟಕ ರಾಜ್ಯ ಸರ್ಕಾರ ಮತ್ತು ಇತರರು ಪ್ರಕರಣದ ಸಂಬಂಧ ಹಸಿರು ನ್ಯಾಯಮಂಡಳಿಯು 04.05.2016 ರಂದು ನೀಡಿರುವ ಆದೇಶವನ್ನು ಲಗತ್ತಿಸಿರುತ್ತೇನೆ. ಬೆಂಗಳೂರಿನಲ್ಲಿ ರಿಯಲ್ ಎಸ್ಟೇಟ್ ಲಾಬಿಗಳಂತಹ ಪಟ್ಟಭದ್ರ ಹಿತಾಸಕ್ತಿಗಳು ಅಪ್ರಾಮಾಣಿಕ ಸರ್ಕಾರಿ ನೌಕರರರೊಂದಿಗೆ ಸೇರಿರುವುದರಿಂದ ಅನೇಕ ಕೆರೆಗಳು ಮತ್ತು ನೀರಿನ ಹಳ್ಳಕೊಳ್ಳಗಳಲ್ಲಿ ಮತ್ತು ಸುತ್ತಮುತ್ತಲಿನಲ್ಲಿ

ಉಂಟಾಗಿರುವ ಪಾರಿಸರಿಕ ಹಾನಿಯನ್ನು ಎನ್‌ಜಿಟಿಯು ಗಮನಕ್ಕೆ ತೆಗೆದುಕೊಂಡಿದೆ. ಸ್ವಚ್ಛ, ಸಂಪೂರ್ಣ ಹಾಗೂ ಮಾಲಿನ್ಯರಹಿತ ಪರಿಸರವನ್ನು ಪಡೆಯುವ ಹಾಗೂ ಯೋಜಿತವಾಗಿರುವ ಅಭಿವೃದ್ಧಿಯನ್ನ ಹೊಂದುವ ನಾಗರೀಕರ ಹಕ್ಕುಗಳನ್ನು ಎತ್ತಿಹಿಡಿಯುತ್ತಾ, ಎನ್‌ಜಿಟಿಯು ನೀರಿನ ಹಳ್ಳಕೊಳ್ಳಗಳು ಹಾಗೂ ರಾಜಕಾಲುವೆಗಳ ಸುತ್ತಲಿನ ಬಫರ್ ಝೋನ್‌ಗಳ ಕುರಿತು ನಿರ್ದಿಷ್ಟವಾದ ನಿರ್ದೇಶನಗಳನ್ನು ನೀಡಿರುತ್ತದೆ.

ಸ್ವಚ್ಛ ಪರಿಸರವನ್ನು ಹೊಂದುವ ಸಾಂವಿಧಾನಿಕ ಹಕ್ಕನ್ನು ರಕ್ಷಿಸುವುದಕ್ಕಾಗಿ ಹಸಿರು ನ್ಯಾಯಮಂಡಳಿಯ ನಿರ್ದೇಶನಗಳನ್ನು ಸಂಪೂರ್ಣವಾಗಿ ಜಾರಿಗೊಳಿಸುವುದು ಅಗತ್ಯವಿರುತ್ತದೆ. ಎನ್‌ಜಿಟಿಯ ನಿರ್ದೇಶನಗಳ ಕಠಿಣವಾದ ಜಾರಿಯು ನಾಗರೀಕ ಸಮಾಜವು ಉದ್ಯಾನನಗರಿಯ ಹಾಗೂ ಇಲ್ಲಿರುವ ಕೆರೆಗಳ ನೈಜ ಸೌಂದರ್ಯವನ್ನು ಆನಂದಿಸುವ ಅವಕಾಶವಿರುವುದನ್ನು ಕೂಡ ಖಾತ್ರಿಗೊಳಿಸುತ್ತದೆ. ಎನ್‌ಜಿಟಿಯು ಬೆಂಗಳೂರಿನ ಪ್ರಕೃತಿದತ್ತ ಪರಂಪರೆಯನ್ನು ರಕ್ಷಿಸುವುದಕ್ಕಾಗಿ ಕೆರೆಗಳು, ಹಳ್ಳಕೊಳ್ಳಗಳು ಮತ್ತು ರಾಜಕಾಲುವೆಗಳ ಸುತ್ತಲಿನ ನಿರ್ಮಾಣ ಕಾಮಗಾರಿಗಳಿಗೆ ಬಫರ್ ಝೋನ್‌ಗಳ ಪ್ರದೇಶ ಮಿತಿಯನ್ನು ವಿಸ್ತರಿಸಿದೆ ಮತ್ತು ಅಂತಹ ಬಫರ್ ಝೋನ್‌ಗಳನ್ನು "ನಿರ್ಮಾಣೇತರ ವಲಯಗಳು" ಎಂದು ಘೋಷಿಸಿದೆ. ನಗರದ ಪಾರಿಸರಿಕ ಮಾಲಿನ್ಯವು ಇನ್ನೂ ಹೆಚ್ಚಳವಾಗದಂತೆ ತಡೆಯುವುದಕ್ಕಾಗಿ ಎನ್‌ಜಿಟಿಯು ಆದೇಶದಲ್ಲಿ ವಿವರಿಸಿರುವ ಷರತ್ತುಗಳನ್ನು ಪೂರ್ತಿಗೊಳಿಸುವುದನ್ನು ಕಡ್ಡಾಯಗೊಳಿಸಲು ನಗರದಲ್ಲಿನ ಎಲ್ಲ ಭವಿಷ್ಯದ ನಿರ್ಮಾಣ ಕಾಮಗಾರಿಗಳಿಗೆ ಪರಿಸರ ಇಲಾಖೆಯಿಂದ ಕ್ಲಿಯರನ್ಸ್ ಪಡೆಯುವುದನ್ನು ಕೂಡ ನಿರ್ದೇಶಿಸಿದೆ.

ಬಫರ್ ಝೋನ್‌ಗಳ ಹೊರತಾಗಿ, ಎನ್‌ಜಿಟಿಯು 2010ರ ತೇವಾಂಶಯುಕ್ತ ಪ್ರದೇಶಗಳ ನಿಯಮಗಳ ಅಡಿಯಲ್ಲಿ ರಾಜ್ಯ ಸರ್ಕಾರಕ್ಕೆ ತೇವಾಂಶಯುಕ್ತ ಪ್ರದೇಶಗಳನ್ನು ಗುರುತಿಸುವಂತೆ ಹಾಗೂ ಸಮಯಮಿತಿಯನ್ನು ಆಧರಿಸಿ ಅಂತಹ ಪ್ರಸ್ತಾವನೆಗಳನ್ನು ಪರಿಸರ ಹಾಗೂ ಅರಣ್ಯ ಸಚಿವಾಲಯಕ್ಕೆ ಕಳುಹಿಸುವಂತೆ ಕೂಡ ನಿರ್ದೇಶಿಸಿದೆ. 3.25 ಎಕರೆಯಷ್ಟು ಭೂಮಿಯನ್ನು ಕರೆಯ ಮೇಲ್ಬದಿಯಲ್ಲಿಯೇ ತನ್ನ ಎಸ್‌ಇಜೆಡ್ ಪ್ರಾಜೆಕ್ಟಿಗಾಗಿ ಆಕ್ರಮಿಸಿರುವ ಮಂತ್ರಿ ಟೆಕ್‌ಝೋನ್ ಪ್ರೈ ಲಿನಂತಹ ಪಟ್ಟಭದ್ರ ವಾಣಿಜ್ಯಿಕ ಹಿತಾಸಕ್ತಿಗಳು ತೋರಿಸುವ ನಿರ್ಭೀತಿ ಮತ್ತು ಅಂತಹವುಗಳಿಗೆ ಪರಿಸರ ಅನುಮತಿಗಳು ಹಾಗೂ ಬಿಲ್ಡರ್‌ನ ಯೋಜನೆಗೆ ಮಂಜೂರಿಯು, ಕಾನೂನನ್ನು ಸಂಪೂರ್ಣವಾಗಿ ಗಣನೆಗೆ ತೆಗೆದುಕೊಳ್ಳದೇ ಇರುವುದು ಮತ್ತು

ರಿಯಲ್ ಎಸ್ಟೇಟ್ ಡೆವಲಪರ್ ಮತ್ತು ಸರ್ಕಾರಿ ಅಧಿಕಾರಿಗಳ ನಡುವಿನ ಒಳ ಒಪ್ಪಂದವನ್ನು ತೋರಿಸುತ್ತದೆ.

3.25 ಎಕರೆಗೂ ಹೆಚ್ಚಿನ ಕೆರೆ ಜಾಗದ ಒತ್ತುವರಿ ಇದ್ದಾಗಲೂ ರಾಜ್ಯ ಮಟ್ಟದ ಪಾರಿಸರಿಕ ಪರಿಣಾಮ ವಿಶ್ಲೇಷಣೆ ಪ್ರಾಧಿಕಾರ ಮತ್ತು ಕೆಐಎಡಿಬಿಗಳು ಪಾರಿಸರಿಕ ಅನುಮತಿಗಳನ್ನು ಹಾಗೂ ಪ್ಲಾನ್ ಮಂಜೂರಿಯನ್ನು ನಿರ್ಮಾಣ ಕಾಮಗಾರಿಗಾಗಿ ಹೇಗೆ ಕೊಟ್ಟಿದ್ದಾರೆ ಎನ್ನುವುದು ಅಲೋಚನೆಗೆ ನಿಲುಕದೇ ಇರುವಂತದ್ದಾಗಿರುತ್ತದೆ. ಅಷ್ಟು ಭಾರೀ ಪ್ರಮಾಣದ ಅತಿಕ್ರಮಣ ಇರುವಾಗಲೂ ಕೂಡ ಸರ್ಕಾರಿ ಅಧಿಕಾರಿಗಳು ಕಣ್ಣು ಕಾಣದವರಂತೆ ಕಾರ್ಯನಿರ್ವಹಿಸಿದ್ದು ಆಳವಾದ ತನಿಖೆಯನ್ನು ಈ ಕುರಿತು ನಡೆಸುವ ಅವಶ್ಯಕತೆಯನ್ನು ಒತ್ತಿ ಹೇಳುತ್ತದೆ (ಇದು ಎಸ್ಇಐಎಎ, ಕೆಐಎಡಿಬಿ ಮತ್ತು ಬಿಡಿಎ ಅಧಿಕಾರಿಗಳನ್ನು ಒಳಗೊಂಡಿದೆಯಾದರೂ ಅವರಿಗಷ್ಟೇ ಸೀಮಿತವಲ್ಲ).

ಮೇಲಿನವುಗಳನ್ನು ಪರಿಗಣಿಸಿ ನಾನು ಇವುಗಳ ಕುರಿತು ನಿಮ್ಮನ್ನು ಒತ್ತಾಯಿಸುತ್ತೇನೆ -

1. ನಗರದ ಆಡಳಿತಕ್ಕೆ ಸಂಬಂಧಪಟ್ಟಿರುವ ಎಲ್ಲ ಸಚಿವಾಲಯಗಳು ಹಾಗೂ ವಿಭಾಗಗಳಿಗೆ ಎನ್‌ಜಿಟಿಯ ಆದೇಶಗಳಲ್ಲಿ ಒಳಗೊಂಡಿರುವ ಪ್ರತಿಯೊಂದು ನಿರ್ದೇಶನವನ್ನೂ ಕಠಿಣವಾಗಿ ಅನುಷ್ಠಾನಕ್ಕೆ ತರಲು ಸ್ಪಷ್ಟ ಹಾಗೂ ನಿಖರವಾದ ಸೂಚನೆಗಳನ್ನು ನೀಡುವಂತೆ ಕೋರುತ್ತೇನೆ. ಅಲ್ಲದೇ ಅಂತಹ ಅನುಷ್ಠಾನವನ್ನು, ಸಂಪೂರ್ಣವಾಗಿ ಹಣಕಾಸಿನ ಉದ್ದೇಶಗಳಿಂದಲೇ ಕಾರ್ಯನಿರ್ವಹಿಸುತ್ತಿರುವ ಕೆಲವು ಹಿತಾಸಕ್ತಿಗಳು ಯೋಜಿತ ಅಭಿವೃದ್ಧಿ ಹಾಗೂ ಸ್ವಚ್ಛ ಪರಿಸರವನ್ನು ಖಾತ್ರಿಗೊಳಿಸುವಲ್ಲಿ ನಾಗರೀಕರ ಮೌಲ್ಯಯುತವಾದ ಹಕ್ಕುಗಳನ್ನು ನಾಶಪಡಿಸುವುದಕ್ಕೆ ಅವಕಾಶ ನೀಡದಂತೆ ನಿಯಮಿತವಾಗಿ ಪರಿಶೀಲಿಸುವಂತೆ ಕೂಡ ನಿಮ್ಮನ್ನು ಒತ್ತಾಯಿಸುತ್ತೇನೆ.

2. ದಂಡನೀಯ ತಪ್ಪುನಡೆಗಳನ್ನು ತೆಗೆದುಕೊಂಡಿರುವ ಅಥವಾ ನಿಷ್ಕ್ರಿಯತೆಯನ್ನು ತೋರಿಸಿರುವ ಅಧಿಕಾರಿಗಳನ್ನು ಗುರುತಿಸಲು ವಿಷಯದ ಕುರಿತು ಸವಿವರವಾದ ವಿಚಾರಣೆಯನ್ನು ಮಾಡಬೇಕು ಮತ್ತು ಆಪರಾಧಿಕ ಷಡ್ಯಂತ್ರದ ಪ್ರಕರಣವನ್ನು ಆರಂಭಿಸಬೇಕು, ಇದರಿಂದ ಎಲ್ಲ ದೋಷಿ ಹಾಗೂ ಭ್ರಷ್ಟ ಸರ್ಕಾರಿ ಅಧಿಕಾರಿಗಳು ಹಾಗೂ ಜೊತೆ ಸೇರಿರುವ ರಿಯಲ್ ಎಸ್ಟೇಟ್ ಡೆವಲಪರ್‌ಗಳನ್ನು ಕಟಕಟೆಗೆ ನಿಲ್ಲಿಸುವುದು ಸಾಧ್ಯವಾಗುತ್ತದೆ.

ಯಾವುದೇ ವಿಳಂಬ ಅಥವಾ ನಿಷ್ಕ್ರಿಯತೆಯು ನಾಗರೀಕ ಸಮಾಜಕ್ಕೆ ತನ್ನ ಹಕ್ಕುಗಳನ್ನು ಅನುಷ್ಠಾನಗೊಳಿಸುವುದಕ್ಕೆ ಸೂಕ್ತ ನ್ಯಾಯವ್ಯಾಪ್ತಿಯ ನ್ಯಾಯಾಲಯಗಳ ಹಾಗೂ ನ್ಯಾಯಮಂಡಳಿಗಳ ನ್ಯಾಯವ್ಯಾಪ್ತಿಯನ್ನು ಅಳವಡಿಸಿಕೊಳ್ಳಲು ಸಾಧ್ಯವಾಗದಂತೆ ನಿರ್ಬಂಧಿಸುತ್ತದೆ.

ನಿಮ್ಮ ವಿಶ್ವಾಸಿ
ರಾಜೀವ್ ಚಂದ್ರಶೇಖರ್

ಶ್ರೀ ಸಿದ್ಧರಾಮಯ್ಯ,
ಗೌರವಾನ್ವಿತ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ,
ವಿಧಾನ ಸೌಧ,
ಬೆಂಗಳೂರು.

# 39

# ರಾಷ್ಟ್ರೀಯ ಹಸಿರು ನ್ಯಾಯಾಧಿಕರಣದ ಆದೇಶ ಜಾರಿ ಕುರಿತು ಪರಿಸರ ಮತ್ತು ಅರಣ್ಯ ಸಚಿವರಿಗೆ ಪತ್ರ

ಜೂನ್ 1, 2016

ಶ್ರೀ ಪ್ರಕಾಶ್ ಅವರೇ

ನೀವು ಈಗಾಗಲೇ ತಿಳಿದಿರುವಂತೆ ನಮ್ಮ ಬೆಂಗಳೂರು ಪ್ರತಿಷ್ಠಾನದಂತಹ ಸಾಮಾಜಿಕ ಕಳಕಳಿಯುಳ್ಳ ಸಂಘಟನೆಗಳನ್ನು ಒಳಗೊಂಡ ನಾಗರೀಕ ಸಮಾಜವು ಸಲ್ಲಿಸಿರುವ ದೂರನ್ನು ಆಧರಿಸಿ ಗೌರವಾನ್ವಿತ ಹಸಿರುವ ನ್ಯಾಯಮಂಡಳಿಯು (ಎನ್‌ಜಿಟಿ) ಕೆರೆಗಳು, ನೀರಿನ ಹಳ್ಳಕೊಳ್ಳಗಳು ಹಾಗೂ ರಾಜಕಾಲುವೆಗಳ ಸುತ್ತಲೂ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ ಸವಿವರವಾದ ನಿರ್ದೇಶನಗಳನ್ನು ನೀಡಿರುತ್ತದೆ. ನಿಮ್ಮ ಅವಗಾಹನೆಗಾಗಿ ಫಾರ್ವರ್ಡ್ ಫೌಂಡೇಶನ್ ಮತ್ತು ಇತರರು ವಿರುದ್ಧ ಕರ್ನಾಟಕ ರಾಜ್ಯ ಸರ್ಕಾರ ಮತ್ತು ಇತರರು ಪ್ರಕರಣದ ಸಂಬಂಧ ಹಸಿರು ನ್ಯಾಯಮಂಡಳಿಯು 04.05.2016 ರಂದು ನೀಡಿರುವ ಆದೇಶವನ್ನು ಲಗತ್ತಿಸಿರುತ್ತೇನೆ. ಬೆಂಗಳೂರಿನಲ್ಲಿ ರಿಯಲ್ ಎಸ್ಟೇಟ್ ಲಾಬಿಗಳಂತಹ ಪಟ್ಟಭದ್ರ ಹಿತಾಸಕ್ತಿಗಳು ಅಪ್ರಾಮಾಣಿಕ ಸರ್ಕಾರಿ ನೌಕರರರೊಂದಿಗೆ ಸೇರಿರುವುದರಿಂದ ಅನೇಕ ಕೆರೆಗಳು ಮತ್ತು ನೀರಿನ ಹಳ್ಳಕೊಳ್ಳಗಳಲ್ಲಿ ಮತ್ತು ಸುತ್ತಮುತ್ತಲಿನಲ್ಲಿ ಉಂಟಾಗಿರುವ

ಪಾರಿಸರಿಕ ಹಾನಿಯನ್ನು ಎನ್‌ಜಿಟಿಯು ಗಮನಕ್ಕೆ ತೆಗೆದುಕೊಂಡಿದೆ.

ಸ್ವಚ್ಛ, ಸಂಪೂರ್ಣ ಹಾಗೂ ಮಾಲಿನ್ಯರಹಿತ ಪರಿಸರವನ್ನು ಪಡೆಯುವ ಹಾಗೂ ಯೋಜಿತವಾಗಿರುವ ಅಭಿವೃದ್ಧಿಯನ್ನ ಹೊಂದುವ ನಾಗರೀಕರ ಹಕ್ಕುಗಳನ್ನು ಎತ್ತಿಹಿಡಿಯುತ್ತಾ, ಎನ್‌ಜಿಟಿಯು ನೀರಿನ ಹಳ್ಳಕೊಳ್ಳಗಳು ಹಾಗೂ ರಾಜಕಾಲುವೆಗಳ ಸುತ್ತಲಿನ ಬಫರ್ ಝೋನ್‌ಗಳ ಕುರಿತು ನಿರ್ದಿಷ್ಟವಾದ ನಿರ್ದೇಶನಗಳನ್ನು ನೀಡಿರುತ್ತದೆ. ಸ್ವಚ್ಛ ಪರಿಸರವನ್ನು ಹೊಂದುವ ಸಾಂವಿಧಾನಿಕ ಹಕ್ಕನ್ನು ರಕ್ಷಿಸುವುದಕ್ಕಾಗಿ ಹಸಿರು ನ್ಯಾಯಮಂಡಳಿಯ ನಿರ್ದೇಶನಗಳನ್ನು ಸಂಪೂರ್ಣವಾಗಿ ಜಾರಿಗೊಳಿಸುವುದು ಅಗತ್ಯವಿರುತ್ತದೆ. ಎನ್‌ಜಿಟಿಯ ನಿರ್ದೇಶನಗಳ ಕಠಿಣವಾದ ಜಾರಿಯು ನಾಗರೀಕ ಸಮಾಜವು ಉದ್ಯಾನನಗರಿಯ ಹಾಗೂ ಇಲ್ಲಿರುವ ಕೆರೆಗಳ ನೈಜ ಸೌಂದರ್ಯವನ್ನು ಆನಂದಿಸುವ ಅವಕಾಶವಿರುವುದನ್ನು ಕೂಡ ಖಾತ್ರಿಗೊಳಿಸುತ್ತದೆ.

ಎನ್‌ಜಿಟಿಯು ಬೆಂಗಳೂರಿನ ಪ್ರಕೃತಿದತ್ತ ಪರಂಪರೆಯನ್ನು ರಕ್ಷಿಸುವುದಕ್ಕಾಗಿ ಕೆರೆಗಳು, ಹಳ್ಳಕೊಳ್ಳಗಳು ಮತ್ತು ರಾಜಕಾಲುವೆಗಳ ಸುತ್ತಲಿನ ನಿರ್ಮಾಣ ಕಾಮಗಾರಿಗಳಿಗೆ ಬಫರ್ ಝೋನ್‌ಗಳ ಪ್ರದೇಶ ಮಿತಿಯನ್ನು ವಿಸ್ತರಿಸಿದೆ ಮತ್ತು ಅಂತಹ ಬಫರ್ ಝೋನ್‌ಗಳನ್ನು "ನಿರ್ಮಾಣೇತರ ವಲಯಗಳು" ಎಂದು ಘೋಷಿಸಿದೆ. ನಗರದ ಪಾರಿಸರಿಕ ಮಾಲಿನ್ಯವು ಇನ್ನೂ ಹೆಚ್ಚಳವಾಗದಂತೆ ತಡೆಯುವುದಕ್ಕಾಗಿ ಎನ್‌ಜಿಟಿಯು ಆದೇಶದಲ್ಲಿ ವಿವರಿಸಿರುವ ಷರತ್ತುಗಳನ್ನು ಪೂರ್ತಿಗೊಳಿಸುವುದನ್ನು ಕಡ್ಡಾಯಗೊಳಿಸಲು ನಗರದಲ್ಲಿನ ಎಲ್ಲ ಭವಿಷ್ಯದ ನಿರ್ಮಾಣ ಕಾಮಗಾರಿಗಳಿಗೆ ಪರಿಸರ ಇಲಾಖೆಯಿಂದ ಕ್ಲಿಯರನ್ಸ್ ಪಡೆಯುವುದನ್ನು ಕೂಡ ನಿರ್ದೇಶಿಸಿದೆ. ಬಫರ್ ಝೋನ್‌ಗಳ ಹೊರತಾಗಿ, ಎನ್‌ಜಿಟಿಯು 2010ರ ತೇವಾಂಶಯುಕ್ತ ಪ್ರದೇಶಗಳ ನಿಯಮಗಳ ಅಡಿಯಲ್ಲಿ ರಾಜ್ಯ ಸರ್ಕಾರಕ್ಕೆ ತೇವಾಂಶಯುಕ್ತ ಪ್ರದೇಶಗಳನ್ನು ಗುರುತಿಸುವಂತೆ ಹಾಗೂ ಸಮಯಮಿತಿಯನ್ನು ಆಧರಿಸಿ ಅಂತಹ ಪ್ರಸ್ತಾವನೆಗಳನ್ನು ಪರಿಸರ ಹಾಗೂ ಅರಣ್ಯ ಸಚಿವಾಲಯಕ್ಕೆ ಕಳುಹಿಸುವಂತೆ ಕೂಡ ನಿರ್ದೇಶಿಸಿದೆ.

3.25 ಎಕರೆಯಷ್ಟು ಭೂಮಿಯನ್ನು ಕರೆಯ ಮೇಲ್ಬದಿಯಲ್ಲಿಯೇ ತನ್ನ ಎಸ್‌ಇಜೆಡ್ ಪ್ರಾಜೆಕ್ಟಿಗಾಗಿ ಆಕ್ರಮಿಸಿರುವ ಮಂತ್ರಿ ಟೆಕ್‌ಝೋನ್ ಪ್ರೈ.ಲಿ ನಂತಹ ಪಟ್ಟಭದ್ರ ವಾಣಿಜ್ಯಿಕ ಹಿತಾಸಕ್ತಿಗಳು ತೋರಿಸುವ ನಿರ್ಭೀತಿ ಮತ್ತು ಅಂತಹವುಗಳಿಗೆ ಪರಿಸರ ಅನುಮತಿಗಳು ಹಾಗೂ ಬಿಲ್ಡರ್‌ನ ಯೋಜನೆಗೆ ಮಂಜೂರಿಯು, ಕಾನೂನನ್ನು ಸಂಪೂರ್ಣವಾಗಿ ಗಣನೆಗೆ ತೆಗೆದುಕೊಳ್ಳದೇ ಇರುವುದು ಮತ್ತು ರಿಯಲ್ ಎಸ್ಟೇಟ್ ಡೆವಲಪರ್ ಮತ್ತು ಸರ್ಕಾರಿ ಅಧಿಕಾರಿಗಳ ನಡುವಿನ ಒಳ ಒಪ್ಪಂದವನ್ನು

ತೋರಿಸುತ್ತದೆ. 3.25 ಎಕರೆಗೂ ಹೆಚ್ಚಿನ ಕೆರೆ ಜಾಗದ ಒತ್ತುವರಿ ಇದ್ದಾಗಲೂ ರಾಜ್ಯ ಮಟ್ಟದ ಪಾರಿಸರಿಕ ಪರಿಣಾಮ ವಿಶ್ಲೇಷಣೆ ಪ್ರಾಧಿಕಾರ ಮತ್ತು ಕೆಐಎಡಿಬಿಗಳು ಪಾರಿಸರಿಕ ಅನುಮತಿಗಳನ್ನು ಹಾಗೂ ಪ್ಲಾನ್ ಮಂಜೂರಿಯನ್ನು ನಿರ್ಮಾಣ ಕಾಮಗಾರಿಗಾಗಿ ಹೇಗೆ ಕೊಟ್ಟಿದ್ದಾರೆ ಎನ್ನುವುದು ಅಲೋಚನೆಗೆ ನಿಲುಕದೇ ಇರುವಂತದ್ದಾಗಿರುತ್ತದೆ.

ಅಷ್ಟು ಭಾರೀ ಪ್ರಮಾಣದ ಅತಿಕ್ರಮಣ ಇರುವಾಗಲೂ ಕೂಡ ಸರ್ಕಾರಿ ಅಧಿಕಾರಿಗಳು ಕಣ್ಣು ಕಾಣದವರಂತೆ ಕಾರ್ಯನಿರ್ವಹಿಸಿದ್ದು ಆಳವಾದ ತನಿಖೆಯನ್ನು ಈ ಕುರಿತು ನಡೆಸುವ ಅವಶ್ಯಕತೆಯನ್ನು ಒತ್ತಿ ಹೇಳುತ್ತದೆ (ಇದು ಎಸ್‌ಇಐಎಎ, ಕೆಐಎಡಿಬಿ ಮತ್ತು ಬಿಡಿಎ ಅಧಿಕಾರಿಗಳನ್ನು ಒಳಗೊಂಡಿದೆಯಾದರೂ ಅವರಿಗಷ್ಟೇ ಸೀಮಿತವಲ್ಲ).

ಮೇಲಿನವುಗಳನ್ನು ಪರಿಗಣಿಸಿ ನಾನು ಇವುಗಳ ಕುರಿತು ನಿಮ್ಮನ್ನು ಒತ್ತಾಯಿಸುತ್ತೇನೆ –

1. ನಗರದ ಆಡಳಿತಕ್ಕೆ ಸಂಬಂಧಪಟ್ಟಿರುವ ಎಲ್ಲ ಸಚಿವಾಲಯಗಳು ಹಾಗೂ ವಿಭಾಗಗಳಿಗೆ ಎನ್‌ಜಿಟಿಯ ಆದೇಶಗಳಲ್ಲಿ ಒಳಗೊಂಡಿರುವ ಪ್ರತಿಯೊಂದು ನಿರ್ದೇಶನವನ್ನೂ ಕಠಿಣವಾಗಿ ಅನುಷ್ಠಾನಕ್ಕೆ ತರಲು ಸ್ಪಷ್ಟ ಹಾಗೂ ನಿಖರವಾದ ಸೂಚನೆಗಳನ್ನು ನೀಡುವಂತೆ ಕೋರುತ್ತೇನೆ. ಅಲ್ಲದೇ ಅಂತಹ ಅನುಷ್ಠಾನವನ್ನು, ಸಂಪೂರ್ಣವಾಗಿ ಹಣಕಾಸಿನ ಉದ್ದೇಶಗಳಿಂದಲೇ ಕಾರ್ಯನಿರ್ವಹಿಸುತ್ತಿರುವ ಕೆಲವು ಹಿತಾಸಕ್ತಿಗಳು ಯೋಜಿತ ಅಭಿವೃದ್ಧಿ ಹಾಗೂ ಸ್ವಚ್ಛ ಪರಿಸರವನ್ನು ಖಾತ್ರಿಗೊಳಿಸುವಲ್ಲಿ ನಾಗರೀಕರ ಮೌಲ್ಯಯುತವಾದ ಹಕ್ಕುಗಳನ್ನು ನಾಶಪಡಿಸುವುದಕ್ಕೆ ಅವಕಾಶ ನೀಡದಂತೆ ನಿಯಮಿತವಾಗಿ ಪರಿಶೀಲಿಸುವಂತೆ ಕೂಡ ನಿಮ್ಮನ್ನು ಒತ್ತಾಯಿಸುತ್ತೇನೆ.

2. ದಂಡನೀಯವಾದ ತಪ್ಪು ನಡೆಗಳನ್ನು ತೆಗೆದುಕೊಂಡಿರುವ ಅಥವಾ ನಿಷ್ಕ್ರಿಯತೆಯನ್ನು ತೋರಿಸಿರುವ ಅಧಿಕಾರಿಗಳನ್ನು ಗುರುತಿಸಲು ವಿಷಯದ ಕುರಿತು ಸವಿವರವಾದ ವಿಚಾರಣೆಯನ್ನು ಮಾಡಬೇಕು ಮತ್ತು ಆಪರಾಧಿಕ ಷಡ್ಯಂತ್ರದ ಪ್ರಕರಣವನ್ನು ಆರಂಭಿಸಬೇಕು, ಇದರಿಂದ ಎಲ್ಲ ದೋಷಿ ಹಾಗೂ ಭ್ರಷ್ಟ ಸರ್ಕಾರಿ ಅಧಿಕಾರಿಗಳು ಹಾಗೂ ಜೊತೆ ಸೇರಿರುವ ರಿಯಲ್ ಎಸ್ಟೇಟ್ ಡೆವಲಪರ್‌ಗಳನ್ನು ಕಟಕಟೆಗೆ ನಿಲ್ಲಿಸುವುದು ಸಾಧ್ಯವಾಗುತ್ತದೆ.

ಯಾವುದೇ ವಿಳಂಬ ಅಥವಾ ನಿಷ್ಕ್ರಿಯತೆಯು ನಾಗರೀಕ ಸಮಾಜಕ್ಕೆ ತನ್ನ ಹಕ್ಕುಗಳನ್ನು

ಅನುಷ್ಠಾನಗೊಳಿಸುವುದಕ್ಕೆ ಸೂಕ್ತ ನ್ಯಾಯವ್ಯಾಪ್ತಿಯ ನ್ಯಾಯಾಲಯಗಳ ಹಾಗೂ ನ್ಯಾಯಮಂಡಳಿಗಳ ನ್ಯಾಯವ್ಯಾಪ್ತಿಯನ್ನು ಅಳವಡಿಸಿಕೊಳ್ಳಲು ಸಾಧ್ಯವಾಗದಂತೆ ನಿರ್ಬಂಧಿಸುತ್ತದೆ.

ತಮ್ಮ ವಿಶ್ವಾಸಿ,
ರಾಜೀವ್ ಚಂದ್ರಶೇಖರ್

ಶ್ರೀ ಪ್ರಕಾಶ್ ಜಾವಡೇಕರ್
ಪರಿಸರ, ಅರಣ್ಯ ಮತ್ತು ವಾತವಾರಣ ಬದಲಾವಣೆ ತಡೆಯ ಇಲಾಖೆಯ ರಾಜ್ಯ ಮಂತ್ರಿಗಳು
ಬಂಗಲೆ ನಂ.6
ಕೌಶಕ್ ರೋಡ್
ನವದೆಹಲಿ – 110011

# 40

# ರಾಷ್ಟ್ರೀಯ ಹಸಿರು ನ್ಯಾಯಾಧಿಕರಣದ ಆದೇಶ ಜಾರಿ ಕುರಿತು ಬೆಂಗಳೂರು ಅಭಿವೃದ್ಧಿ ಸಚಿವರಿಗೆ ಪತ್ರ

ಜೂನ್ 1, 2016

ಶ್ರೀ ಕೆ. ಜೆ. ಜಾರ್ಜ್ ಅವರೇ,

ನೀವು ಈಗಾಗಲೇ ತಿಳಿದಿರುವಂತೆ ನಮ್ಮ ಬೆಂಗಳೂರು ಪ್ರತಿಷ್ಠಾನದಂತಹ ಸಾಮಾಜಿಕ ಕಳಕಳಿಯುಳ್ಳ ಸಂಘಟನೆಗಳನ್ನು ಒಳಗೊಂಡ ನಾಗರೀಕ ಸಮಾಜವು ಸಲ್ಲಿಸಿರುವ ದೂರನ್ನು ಆಧರಿಸಿ ಗೌರವಾನ್ವಿತ ಹಸಿರುವ ನ್ಯಾಯಮಂಡಳಿ (ಎನ್‌ಜಿಟಿ) ಯು ಕೆರೆಗಳು, ನೀರಿನ ಹಳ್ಳಕೊಳ್ಳಗಳು ಹಾಗೂ ರಾಜಕಾಲುವೆಗಳ ಸುತ್ತಲೂ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ ಸವಿವರವಾದ ನಿರ್ದೇಶನಗಳನ್ನು ನೀಡಿರುತ್ತದೆ. ನಿಮ್ಮ ಅವಗಾಹನೆಗಾಗಿ ಫಾರ್ವರ್ಡ್ ಫೌಂಡೇಶನ್ ಮತ್ತು ಇತರರು ವಿರುದ್ಧ ಕರ್ನಾಟಕ ರಾಜ್ಯ ಸರ್ಕಾರ ಮತ್ತು ಇತರರು ಪ್ರಕರಣದ ಸಂಬಂಧ ಹಸಿರು ನ್ಯಾಯಮಂಡಳಿಯು 04.05.2016 ರಂದು ನೀಡಿರುವ ಆದೇಶವನ್ನು ಲಗತ್ತಿಸಿರುತ್ತೇನೆ. ಬೆಂಗಳೂರಿನಲ್ಲಿ ರಿಯಲ್ ಎಸ್ಟೇಟ್ ಲಾಬಿಗಳಂತಹ ಪಟ್ಟಭದ್ರ ಹಿತಾಸಕ್ತಿಗಳು ಅಪ್ರಾಮಾಣಿಕ ಸರ್ಕಾರಿ ನೌಕರರರೊಂದಿಗೆ ಸೇರಿರುವುದರಿಂದ ಅನೇಕ ಕೆರೆಗಳು ಮತ್ತು ನೀರಿನ ಹಳ್ಳಕೊಳ್ಳಗಳಲ್ಲಿ ಮತ್ತು ಸುತ್ತಮುತ್ತಲಿನಲ್ಲಿ ಉಂಟಾಗಿರುವ ಪಾರಿಸರಿಕ

ಹಾನಿಯನ್ನು ಎನ್‌ಜಿಟಿಯು ಗಮನಕ್ಕೆ ತೆಗೆದುಕೊಂಡಿದೆ. ಸ್ವಚ್ಛ, ಸಂಪೂರ್ಣ ಹಾಗೂ ಮಾಲಿನ್ಯರಹಿತ ಪರಿಸರವನ್ನು ಪಡೆಯುವ ಹಾಗೂ ಯೋಜಿತವಾಗಿರುವ ಅಭಿವೃದ್ಧಿಯನ್ನ ಹೊಂದುವ ನಾಗರೀಕರ ಹಕ್ಕುಗಳನ್ನು ಎತ್ತಿಹಿಡಿಯುತ್ತಾ, ಎನ್‌ಜಿಟಿಯು ನೀರಿನ ಹಳ್ಳಕೊಳ್ಳಗಳು ಹಾಗೂ ರಾಜಕಾಲುವೆಗಳ ಸುತ್ತಲಿನ ಬಫರ್ ಝೋನ್‌ಗಳ ಕುರಿತು ನಿರ್ದಿಷ್ಟವಾದ ನಿರ್ದೇಶನಗಳನ್ನು ನೀಡಿರುತ್ತದೆ. ಸ್ವಚ್ಛ ಪರಿಸರವನ್ನು ಹೊಂದುವ ಸಾಂವಿಧಾನಿಕ ಹಕ್ಕನ್ನು ರಕ್ಷಿಸುವುದಕ್ಕಾಗಿ ಹಸಿರು ನ್ಯಾಯಮಂಡಳಿಯ ನಿರ್ದೇಶನಗಳನ್ನು ಸಂಪೂರ್ಣವಾಗಿ ಜಾರಿಗೊಳಿಸುವುದು ಅಗತ್ಯವಿರುತ್ತದೆ. ಎನ್‌ಜಿಟಿಯ ನಿರ್ದೇಶನಗಳ ಕಠಿಣವಾದ ಜಾರಿಯು ನಾಗರೀಕ ಸಮಾಜವು ಉದ್ಯಾನನಗರಿಯ ಹಾಗೂ ಇಲ್ಲಿರುವ ಕೆರೆಗಳ ನೈಜ ಸೌಂದರ್ಯವನ್ನು ಆನಂದಿಸುವ ಅವಕಾಶವಿರುವುದನ್ನು ಕೂಡ ಖಾತ್ರಿಗೊಳಿಸುತ್ತದೆ.

ಎನ್‌ಜಿಟಿಯು ಬೆಂಗಳೂರಿನ ಪ್ರಕೃತಿದತ್ತ ಪರಂಪರೆಯನ್ನು ರಕ್ಷಿಸುವುದಕ್ಕಾಗಿ ಕೆರೆಗಳು, ಹಳ್ಳಕೊಳ್ಳಗಳು ಮತ್ತು ರಾಜಕಾಲುವೆಗಳ ಸುತ್ತಲಿನ ನಿರ್ಮಾಣ ಕಾಮಗಾರಿಗಳಿಗೆ ಬಫರ್ ಝೋನ್‌ಗಳ ಪ್ರದೇಶ ಮಿತಿಯನ್ನು ವಿಸ್ತರಿಸಿದೆ ಮತ್ತು ಅಂತಹ ಬಫರ್ ಝೋನ್‌ಗಳನ್ನು "ನಿರ್ಮಾಣೇತರ ವಲಯಗಳು" ಎಂದು ಘೋಷಿಸಿದೆ. ನಗರದ ಪಾರಿಸರಿಕ ಮಾಲಿನ್ಯವು ಇನ್ನೂ ಹೆಚ್ಚಳವಾಗದಂತೆ ತಡೆಯುವುದಕ್ಕಾಗಿ ಎನ್‌ಜಿಟಿಯು ಆದೇಶದಲ್ಲಿ ವಿವರಿಸಿರುವ ಷರತ್ತುಗಳನ್ನು ಪೂರ್ತಿಗೊಳಿಸುವುದನ್ನು ಕಡ್ಡಾಯಗೊಳಿಸಲು ನಗರದಲ್ಲಿನ ಎಲ್ಲ ಭವಿಷ್ಯದ ನಿರ್ಮಾಣ ಕಾಮಗಾರಿಗಳಿಗೆ ಪರಿಸರ ಇಲಾಖೆಯಿಂದ ಕ್ಲಿಯರನ್ಸ್ ಪಡೆಯುವುದನ್ನು ಕೂಡ ನಿರ್ದೇಶಿಸಿದೆ. ಬಫರ್ ಝೋನ್‌ಗಳ ಹೊರತಾಗಿ, ಎನ್‌ಜಿಟಿಯು 2010ರ ತೇವಾಂಶಯುಕ್ತ ಪ್ರದೇಶಗಳ ನಿಯಮಗಳ ಅಡಿಯಲ್ಲಿ ರಾಜ್ಯ ಸರ್ಕಾರಕ್ಕೆ ತೇವಾಂಶಯುಕ್ತ ಪ್ರದೇಶಗಳನ್ನು ಗುರುತಿಸುವಂತೆ ಹಾಗೂ ಸಮಯಮಿತಿಯನ್ನು ಆಧರಿಸಿ ಅಂತಹ ಪ್ರಸ್ತಾವನೆಗಳನ್ನು ಪರಿಸರ ಹಾಗೂ ಅರಣ್ಯ ಸಚಿವಾಲಯಕ್ಕೆ ಕಳುಹಿಸುವಂತೆ ಕೂಡ ನಿರ್ದೇಶಿಸಿದೆ.

3.25 ಎಕರೆಯಷ್ಟು ಭೂಮಿಯನ್ನು ಕರೆಯ ಮೇಲ್ಬದಿಯಲ್ಲಿಯೇ ತನ್ನ ಎಸ್‌ಇಜೆಡ್ ಪ್ರಾಜೆಕ್ಟಿಗಾಗಿ ಆಕ್ರಮಿಸಿರುವ ಮಂತ್ರಿ ಟೆಕ್‌ಝೋನ್ ಪ್ರೈ.ಲಿ ನಂತಹ ಪಟ್ಟಭದ್ರ ವಾಣಿಜ್ಯಿಕ ಹಿತಾಸಕ್ತಿಗಳು ತೋರಿಸುವ ನಿರ್ಭೀತಿ ಮತ್ತು ಅಂತಹವುಗಳಿಗೆ ಪರಿಸರ ಅನುಮತಿಗಳು ಹಾಗೂ ಬಿಲ್ಡರ್‌ನ ಯೋಜನೆಗೆ ಮಂಜೂರಿಯು, ಕಾನೂನನ್ನು ಸಂಪೂರ್ಣವಾಗಿ ಗಣನೆಗೆ ತೆಗೆದುಕೊಳ್ಳದೇ ಇರುವುದು ಮತ್ತು ರಿಯಲ್ ಎಸ್ಟೇಟ್ ಡೆವಲಪರ್ ಮತ್ತು ಸರ್ಕಾರಿ ಅಧಿಕಾರಿಗಳ ನಡುವಿನ ಒಳ ಒಪ್ಪಂದವನ್ನು

ತೋರಿಸುತ್ತದೆ. 3.25 ಎಕರೆಗೂ ಹೆಚ್ಚಿನ ಕೆರೆ ಜಾಗದ ಒತ್ತುವರಿ ಇದ್ದಾಗಲೂ ರಾಜ್ಯ ಮಟ್ಟದ ಪಾರಿಸರಿಕ ಪರಿಣಾಮ ವಿಶ್ಲೇಷಣೆ ಪ್ರಾಧಿಕಾರ ಮತ್ತು ಕೆಐಎಡಿಬಿಗಳು ಪಾರಿಸರಿಕ ಅನುಮತಿಗಳನ್ನು ಹಾಗೂ ಪ್ಲಾನ್ ಮಂಜೂರಿಯನ್ನು ನಿರ್ಮಾಣ ಕಾಮಗಾರಿಗಾಗಿ ಹೇಗೆ ಕೊಟ್ಟಿದ್ದಾರೆ ಎನ್ನುವುದು ಅಲೋಚನೆಗೆ ನಿಲುಕದೇ ಇರುವಂತದ್ದಾಗಿರುತ್ತದೆ. ಅಷ್ಟು ಭಾರೀ ಪ್ರಮಾಣದ ಅತಿಕ್ರಮಣ ಇರುವಾಗಲೂ ಕೂಡ ಸರ್ಕಾರಿ ಅಧಿಕಾರಿಗಳು ಕಣ್ಣು ಕಾಣದವರಂತೆ ಕಾರ್ಯನಿರ್ವಹಿಸಿದ್ದು ಆಳವಾದ ತನಿಖೆಯನ್ನು ಈ ಕುರಿತು ನಡೆಸುವ ಅವಶ್ಯಕತೆಯನ್ನು ಒತ್ತಿ ಹೇಳುತ್ತದೆ (ಇದು ಎಸ್ಇಐಎಎ, ಕೆಐಎಡಿಬಿ ಮತ್ತು ಬಿಡಿಎ ಅಧಿಕಾರಿಗಳನ್ನು ಒಳಗೊಂಡಿದೆಯಾದರೂ ಅವರಿಗಷ್ಟೇ ಸೀಮಿತವಲ್ಲ).

ಮೇಲಿನವುಗಳನ್ನು ಪರಿಗಣಿಸಿ ನಾನು ಇವುಗಳ ಕುರಿತು ನಿಮ್ಮನ್ನು ಒತ್ತಾಯಿಸುತ್ತೇನೆ –

1. ನಗರದ ಆಡಳಿತಕ್ಕೆ ಸಂಬಂಧಪಟ್ಟಿರುವ ಎಲ್ಲ ಸಚಿವಾಲಯಗಳು ಹಾಗೂ ವಿಭಾಗಗಳಿಗೆ ಎನ್‌ಜಿಟಿಯ ಆದೇಶಗಳಲ್ಲಿ ಒಳಗೊಂಡಿರುವ ಪ್ರತಿಯೊಂದು ನಿರ್ದೇಶನವನ್ನೂ ಕಠಿಣವಾಗಿ ಅನುಷ್ಠಾನಕ್ಕೆ ತರಲು ಸ್ಪಷ್ಟ ಹಾಗೂ ನಿಖರವಾದ ಸೂಚನೆಗಳನ್ನು ನೀಡುವಂತೆ ಕೋರುತ್ತೇನೆ. ಅಲ್ಲದೇ ಅಂತಹ ಅನುಷ್ಠಾನವನ್ನು, ಸಂಪೂರ್ಣವಾಗಿ ಹಣಕಾಸಿನ ಉದ್ದೇಶಗಳಿಂದಲೇ ಕಾರ್ಯನಿರ್ವಹಿಸುತ್ತಿರುವ ಕೆಲವು ಹಿತಾಸಕ್ತಿಗಳು ಯೋಜಿತ ಅಭಿವೃದ್ಧಿ ಹಾಗೂ ಸ್ವಚ್ಛ ಪರಿಸರವನ್ನು ಖಾತ್ರಿಗೊಳಿಸುವಲ್ಲಿ ನಾಗರೀಕರ ಮೌಲ್ಯಯುತವಾದ ಹಕ್ಕುಗಳನ್ನು ನಾಶಪಡಿಸುವುದಕ್ಕೆ ಅವಕಾಶ ನೀಡದಂತೆ ನಿಯಮಿತವಾಗಿ ಪರಿಶೀಲಿಸುವಂತೆ ಕೂಡ ನಿಮ್ಮನ್ನು ಒತ್ತಾಯಿಸುತ್ತೇನೆ.

2. ದಂಡನೀಯವಾದ ತಪ್ಪು ನಡೆಗಳನ್ನು ತೆಗೆದುಕೊಂಡಿರುವ ಅಥವಾ ನಿಷ್ಕ್ರಿಯತೆಯನ್ನು ತೋರಿಸಿರುವ ಅಧಿಕಾರಿಗಳನ್ನು ಗುರುತಿಸಲು ವಿಷಯದ ಕುರಿತು ಸವಿವರವಾದ ವಿಚಾರಣೆಯನ್ನು ಮಾಡಬೇಕು ಮತ್ತು ಆಪರಾಧಿಕ ಷಡ್ಯಂತ್ರದ ಪ್ರಕರಣವನ್ನು ಆರಂಭಿಸಬೇಕು, ಇದರಿಂದ ಎಲ್ಲ ದೋಷಿ ಹಾಗೂ ಭ್ರಷ್ಟ ಸರ್ಕಾರಿ ಅಧಿಕಾರಿಗಳು ಹಾಗೂ ಜೊತೆ ಸೇರಿರುವ ರಿಯಲ್ ಎಸ್ಟೇಟ್ ಡೆವಲಪರ್‌ಗಳನ್ನು ಕಟಕಟೆಗೆ ನಿಲ್ಲಿಸುವುದು ಸಾಧ್ಯವಾಗುತ್ತದೆ.

ಯಾವುದೇ ವಿಳಂಬ ಅಥವಾ ನಿಷ್ಕ್ರಿಯತೆಯು ನಾಗರೀಕ ಸಮಾಜಕ್ಕೆ ತನ್ನ ಹಕ್ಕುಗಳನ್ನು ಅನುಷ್ಠಾನಗೊಳಿಸುವುದಕ್ಕೆ ಸೂಕ್ತ ನ್ಯಾಯವ್ಯಾಪ್ತಿಯ ನ್ಯಾಯಾಲಯಗಳ ಹಾಗೂ

ನ್ಯಾಯಮಂಡಳಿಗಳ ನ್ಯಾಯವ್ಯಾಪ್ತಿಯನ್ನು ಅಳವಡಿಸಿಕೊಳ್ಳಲು ಸಾಧ್ಯವಾಗದಂತೆ ನಿರ್ಬಂಧಿಸುತ್ತದೆ.

ತಮ್ಮ ವಿಶ್ವಾಸಿ,
ರಾಜೀವ್ ಚಂದ್ರಶೇಖರ್

ಶ್ರೀ ಕೆ.ಜೆ.ಜಾರ್ಜ್,
ಗೌರವಾನ್ವಿತ ಬೆಂಗಳೂರು ನಗರಾಭಿವೃದ್ಧಿ ಮತ್ತು ನಗರ ಯೋಜನಾ ಮಂತ್ರಿಗಳು,
ಕರ್ನಾಟಕ ವಿಧಾನ ಸೌಧ,
ಬೆಂಗಳೂರು.

# 41

# ಬಸವೇಶ್ವರ ವೃತ್ತದಿಂದ ಹೆಬ್ಬಾಳದ ವರೆಗಿನ ಉಕ್ಕಿನ ಮೇಲ್ಸೇತುವೆ ವಿರೋಧಿಸಿ ಮುಖ್ಯಮಂತ್ರಿಯವರಿಗೆ ಪತ್ರ

ಜೂನ್ 29, 2016

ಮಾನ್ಯ ಶ್ರೀ ಸಿದ್ಧರಾಮಯ್ಯನವರೇ

ಬಸವೇಶ್ವರ ಸರ್ಕಲ್ಲಿನಿಂದ ಹೆಬ್ಬಾಳದವರೆಗೆ ಪ್ರಸ್ತಾವಿತ ಉಕ್ಕಿನ ಮೇಲ್ಸೇತುವೆ ಕುರಿತು ಆತಂಕಿತರಾಗಿರುವ ನಾಗರೀಕರು ಮತ್ತು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳಿಂದ ಅನೇಕ ನಿರೂಪಣೆಗಳನ್ನು ಮತ್ತು ವಿನಂತಿಗಳನ್ನು ನಾನು ಪಡೆದಿರುತ್ತೇನೆ.

ಬೆಂಗಳೂರಿನ ನಾಗರೀಕನಾಗಿ ಮತ್ತು ನಗರದ ಓರ್ವ ಸಂಸತ್ ಸದಸ್ಯನಾಗಿ, ನಾನು ಅವರ ಪರವಾಗಿ ಮತ್ತು ಸ್ವತಃ ಈ ವಿಷಯವನ್ನು ನಿರ್ವಹಿಸುವಲ್ಲಿ ಸರ್ಕಾರವು ನಡೆದುಕೊಂಡಿರುವ ರೀತಿಯ ಬಗ್ಗೆ ತೀವ್ರ ಬೇಸರ ಮತ್ತು ಸ್ವಲ್ಪ ಕೋಪವನ್ನು ವ್ಯಕ್ತಪಡಿಸಲು ಬರೆಯುತ್ತಿದ್ದೇನೆ.

ನಾನು ಈ ಯೋಜನೆಗೆ ಸಂಬಂಧಿಸಿದಂತೆ ಈ ಮಾತುಗಳನ್ನು ಹೇಳುವುದಕ್ಕೆ ಯಾವುದೇ ಹಿಂಜರಿಕೆಯನ್ನು ಹೊಂದಿಲ್ಲ – ಇದು ಸಂಪೂರ್ಣ ಗುತ್ತಿಗೆದಾರರಿಗಾಗಿ ಮತ್ತು ರಾಜಕೀಯ ಉದ್ದೇಶಿತವಾಗಿದ್ದು, ಯಾವುದೇ ರೀತಿಯಂದಲೂ

ನಾಗರೀಕರಿಗೆ ಸ್ನೇಹಿ ಅಥವಾ ಯೋಜನೆಗೆ ಪೂರಕವಾಗಿರುವುದು ಆಗಿರುವುದಿಲ್ಲ. ಸಾಂವಿಧಾನಿಕವಾಗಿರುವ ಬೆಂಗಳೂರು ಮೆಟ್ರೋಪಾಲಿಟನ್ ಪ್ಲಾನಿಂಗ್ ಕಮಿಟಿ (ಬಿಎಂಪಿಸಿ) ಯ ಮುಂದೆ ಇದನ್ನು ಇರಿಸದೇ ಇರುವುದರಿಂದ ಸಾರ್ವಜನಿಕ ಹಣದ ಸಂಪೂರ್ಣ ಹಾಗೂ ಕಾನೂನುಬಾಹೀರವಾದ ದುರ್ಬಳಕೆಯಾಗಿದೆ ಮತ್ತು ವಿಸ್ತೃತ ಪ್ರಾಜೆಕ್ಟ್ ರಿಪೋರ್ಟ್ ತಯಾರಿಸುವ ಮುನ್ನ ಯಾವುದೇ ಸಾರ್ವಜನಿಕ ಸಮಾಲೋಚನೆಯನ್ನು ನಡೆಸಲಾಗಿರುವುದಿಲ್ಲ. ಯಾವುದೇ ಪರಿಣಾಮದ ಅಧ್ಯಯನವನ್ನು ನಡೆಸಿ ಅದನ್ನು ಸಾರ್ವಜನಿಕರ ಮುಂದೆ ಪರಿಶೀಲನೆ ಹಾಗೂ ಪಾರದರ್ಶಕತೆಯ ಖಾತರಿಗಾಗಿ ಇರಿಸಲಾಗಿಲ್ಲ, ಅಲ್ಲದೇ 500 ಪೂರ್ತಿ ಬೆಳೆದಿರುವ ಮರಗಳನ್ನು ಈ ಪ್ರಾಜೆಕ್ಟ್ ಉದ್ದೇಶಕ್ಕಾಗಿ ಕಡಿಯಲಾಗುತ್ತದೆ ಮಾಧ್ಯಮ ವರದಿಗಳು ಉಲ್ಲೇಖಿಸುತ್ತಿವೆ.

ಈ ಪ್ರಾಜೆಕ್ಟುಗಳ ಬಗ್ಗೆ ಅನೇಕ ಉತ್ತರಿಸದೇ ಇರುವ ಪ್ರಶ್ನೆಗಳಿವೆ – ತುರ್ತು, ವಿನ್ಯಾಸ, ಪರಿಸರದ ಮೇಲೆ ಪರಿಣಾಮ, ನಿರ್ವಹಣೆಯ ಸಮಸ್ಯೆಗಳು, ನಗರದ ಸೌಂದರ್ಯ, ನಮ್ಮ ಫ್ಲೈಓವರ್‌ಗಳಂತೆ ಏಕೆ ಕಾಂಕ್ರೀಟ್ ಆಗಿರಬಾರದು, ಭವಿಷ್ಯದ ನಿರ್ಮಾಣಗಳೊಂದಿಗೆ ಮತ್ತು ಎಲಿವೇಟೆಡ್ ಕಾರಿಡಾರ್ ಇದನ್ನು ಜೋಡಣೆ ಮಾಡುವುದರ ಸಮಸ್ಯೆ ಮುಂತಾದವುಗಳಿಗೆ ಸಮರ್ಪಕ ಉತ್ತರ ಅಗತ್ಯವಿರುತ್ತದೆ. ಇದರ ಪ್ರಾಯೋಜಕರಾದ ಬೆಂಗಳೂರು ಅಭಿವೃದ್ಧ ಪ್ರಾಧಿಕಾರ (ಬಿಡಿಎ) ಮತ್ತು ಇನ್ನೂ ಅನೇಕ ಪ್ರಶ್ನಾರ್ಹ ನಿರ್ಧಾರಗಳಲ್ಲಿ ಹಾಗೂ ಹಣಕಾಸು ಅವ್ಯವಹಾರಗಳಲ್ಲಿ ವಿವಾದಾಸ್ಪದವಾಗಿರುವ ಇದರ ನಾಯಕತ್ವ ಇವೆಲ್ಲವನ್ನೂ ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ.

ತಮ್ಮ ನಗರದ ಅಭಿವೃದ್ಧಿಯ ವಿಚಾರದಲ್ಲಿ ಸ್ವತಃ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಬೆಂಗಳೂರಿಗರು ಇಚ್ಛಿಸುತ್ತಿದ್ದಾರೆ ಎನ್ನುವುದು ಈ ಯೋಜನೆಗೆ ಎದುರಾದ ಬಲವಾದ ವಿರೋಧದಿಂದ ಮತ್ತೊಮ್ಮೆ ವ್ಯಕ್ತವಾಗಿದೆ. ನಾವು ಇಂದು ಏನನ್ನು ನೋಡುತ್ತಿದ್ದೇವೆಯೋ ಅದಕ್ಕಿಂತ ಒಳ್ಳೆಯದನ್ನು ಪಡೆಯುವ ಹಕ್ಕು ನಮ್ಮ ಜನರಿಗೆ ಹಾಗೂ ರಾಜ್ಯಕ್ಕೆ ಇದೆ. ಸರ್ಕಾರ ಮತ್ತು ಸಂಸ್ಥೆಗಳು ನಾಗರೀಕರ ಜೊತೆಯಲ್ಲಿ ಪಾಲುದಾರಿಕೆಯೊಂದಿಗೆ ಕಾರ್ಯನಿರ್ವಹಿಸುವಂತೆ ಮಾಡುವ ಸಾಮರ್ಥ್ಯವನ್ನು ಹೊಂದಿದ್ದು, ಸರ್ಕಾರ ಮತ್ತು ನಿವಾಸಿಗಳ ನಡುವೆ ವಿವಾದಗಳು ಉಂಟಾಗುವ ಸದ್ಯದ ಸನ್ನಿವೇಶವು ಸೂಕ್ತವಾಗಿರುವುದಿಲ್ಲ.

ಬೆಂಗಳೂರು ಎದುರಿಸುತ್ತಿರುವ ಸಮಸ್ಯೆಗಳು, ನಿರ್ದಿಷ್ಟವಾಗಿ ಸಾಗಾಟ ಮತ್ತು ಟ್ರಾಫಿಕ್ ಸಮಸ್ಯೆಯ ಮೂಲ ನಗರದ ರಚನೆ ಅಥವಾ ಗಾತ್ರಕ್ಕಿಂತ ಹೆಚ್ಚಾಗಿ ಸಾರ್ವಜನಿಕ

ಸೇವೆಗಳನ್ನು ನೀಡುವಲ್ಲಿ ಯೋಜನೆ ಹಾಗೂ ಸಾಂಸ್ಥಿಕ ನಿರ್ವಹಣೆಯ ಇನ್ನೂ ಹೆಚ್ಚು ಮೂಲಭೂತ ಸಮಸ್ಯೆಗಳಿಗೆ ಸಂಬಂಧಿಸಿರುತ್ತವೆ. ಟ್ರಾಫಿಕ್ ಸಮಸ್ಯೆಗಳು ಹಾಗೂ ಸಾರ್ವಜನಿಕ ಆರೋಗ್ಯ ಮತ್ತು ಡೆಂಗ್ಯು, ಕಸದ ಅಸಮರ್ಪಕ ನಿರ್ವಹಣೆ, ನೀರಿನ ಕೊರತೆ ಇತ್ಯಾದಿಗಳಂತಹ ಅನೇಕ ಇತರ ಸಮಸ್ಯೆಗಗಳು ಯೋಜನೆಯನ್ನು ಮಾಡದೇ ನಗರ ನಿರ್ವಹಣೆಯನ್ನು ಮಾಡುವುದರ ಪ್ರತ್ಯಕ್ಷ ಉದಾಹರಣೆಗಳಾಗಿವೆ. ಸಾರ್ವಜನಿಕ ಹಣದೊಂದಿಗೆ ಯಾವುದೇ ಪರಿಶೀಲನೆ ಅಥವಾ ಪ್ರಶ್ನೆಗಳು ಇಲ್ಲದೇ ಅನೇಕ ಪ್ರಾಜೆಕ್ಟುಗಳನ್ನು ಆರಂಭಿಸಲು ಆಡಳಿತಾತ್ಮಕ ಹಾಗೂ ರಾಜಕೀಯವಾದ ಮುಕ್ತ ನಿರ್ಧಾರದ ಅವಕಾಶವನ್ನು ನೀಡುವುದರಿಂದ ಪ್ಲಾನಿಂಗ್ ಇಲ್ಲದೇ ಕಾರ್ಯನಿರ್ವಹಿಸುವುದರ ಹಿಂದಿನ ಮರ್ಮವನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ಆದರೆ ಇನ್ನೂ ಹೆಚ್ಚು ದಿನ ಹಾಗಾಗಲು ಸಾಧ್ಯವಿಲ್ಲ ಎನ್ನುವುದನ್ನು ನಿಮಗೆ ನಾನು ಖಾತರಿಪಡಿಸಬಲ್ಲೆ.

ಬೆಂಗಳೂರಿಗೆ ಹಣಕಾಸು ಯೋಜನೆ ಒಳಗೊಂಡಂತೆ ಸೂಕ್ತ ಶಾಸನಾತ್ಮಕ ದೀರ್ಘಕಾಲಿಕ ಯೋಜನೆ ಅಗತ್ಯವಿರುತ್ತದೆ. ಬಿಡಿಎ ಸದ್ಯ ಒಂದು ಪ್ಲಾನ್ ಕುರಿತು ಕೆಲಸ ಮಾಡುತ್ತಿದ್ದರೂ ಆ ಪ್ಲಾನ್ ಅನ್ನು ಬೆಂಗಳೂರು ಮಹಾನಗರಪಾಲಿಕೆಯ ಯೋಜನಾ ಆಯೋಗದ (ಬಿಎಂಪಿಸಿ) ಇರಿಸುವ ಮೊದಲು ನಾಗರೀಕರು, ನಾಗರೀಕ ಸಂಸ್ಥೆಗಳು ಮತ್ತು ಸರ್ಕಾರೇತರ ಸಂಸ್ಥೆಗಳನ್ನು ಸೇರಿಸಿಕೊಂಡು ಅವರೊಂದಿಗೆ ಮುಕ್ತವಾಗಿ ಚರ್ಚಿಸಿ ಮತ್ತು ಸಾರ್ವಜನಿಕ ಸಲಹೆಗಳೊಂದಿಗೆ ಅನುಮೋದನೆಯನ್ನು ಪಡೆಯುವ ಮೂಲಕ ಹೆಚ್ಚು ಪಾರದರ್ಶಕವಾಗಿಸುವುದು ಅಗತ್ಯವಿದೆ.

ಒಂದೊಮ್ಮೆ ರಾಜ್ಯಸರ್ಕಾರವು ಸಂವಿಧಾನದ 74 ನೇ ತಿದ್ದುಪಡಿಯ ಕಾಯಿದೆಯನ್ನು (ಸಿಎಎ) ಸಂಪೂರ್ಣವಾಗಿ ಎತ್ತಿಹಿಡಿಯಲು ಆಶಿಸಿದಲ್ಲಿ ಮತ್ತು ನಗರದ ಅಭಿವೃದ್ಧಿಯಲ್ಲಿ ನಾಗರೀಕರ ಅಭಿಪ್ರಾಯಕ್ಕೆ ಮನ್ನಣೆಯಿದೆ ಎನ್ನುವುದನ್ನು ಖಾತ್ರಿಪಡಿಸುವುದಾದಲ್ಲಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಈ ವಿಷಯದಲ್ಲಿ ಎಚ್ಚರಿಕೆ ವಹಿಸಲು ಹಾಗೂ ತನಗೆ ನೀಡಿರುವ ಅಧಿಕಾರವನ್ನು ಮೀರದೇ ಇರುವಂತೆ ಮಾಡಲು ತಮ್ಮ ಮಧ್ಯಪ್ರವೇಶವು ಅಗತ್ಯವಿರುತ್ತದೆ. ಈ ಯೋಜನೆ ಮತ್ತು ಉಳಿದ ಎಲ್ಲ ಯೋಜನೆಗಳನ್ನು ಸೇರಿಸಿ ಮಧ್ಯಮ ಹಾಗೂ ದೀರ್ಘಕಾಲಿಕ ಪ್ಲಾನ್ ಅನ್ನು ರೂಪಿಸಿ, ಇದನ್ನು ಮಾಡಲು ಸಾಂವಿಧಾನಿಕ ಸಾಮರ್ಥ್ಯವನ್ನು ಪಡೆದಿರುವ ಮಹಾನಗರಪಾಲಿಕೆಯ ಯೋಜನಾ ಆಯೋಗದ ಮುಂದೆ ಇರಿಸಬೇಕು.

ವ್ಯಾಪಕ ಮಟ್ಟದಲ್ಲಿ ನಗರಗಳ ಆಡಳಿತವು ಕೇವಲ ಕೋಲಾಹಲ ಹಾಗೂ ಆಪತ್ತು ನಿರ್ವಹಣೆಯ ಮಟ್ಟಕ್ಕೆ ಇಳಿದಿದೆ – ನೀವು ಉತ್ತಮ ಆಡಳಿತದ ಭರವಸೆಯನ್ನು

ನೀಡಿದ್ದರಿಂದ ಈ ಅಂಶವು ಮುಖ್ಯವಾಗಿರುತ್ತದೆ. ಭಾರೀ ಪ್ರಮಾಣದ ಭ್ರಷ್ಟಾಚಾರ, ಪಾರದರ್ಶಕತೆಯಿಲ್ಲದಿರುವುದು, ದೋಷಯುಕ್ತ ಗುತ್ತಿಗೆ ವ್ಯವಸ್ಥೆ ಮತ್ತು ಸರ್ಕಾರದ ಆಡಳಿತದ ನೀತಿಯನ್ನು ನಿರ್ಧರಿಸುವ ಹಿತಾಸಕ್ತಿಗಳು, ನಾಗರೀಕರು ತೀವ್ರವಾಗಿ ಸಿಟ್ಟಿಗೇಳುವಂತೆ ಮಾಡಿರುತ್ತವೆ.

ನಿಮ್ಮ ಉತ್ತಮ ಆಡಳಿತದ ಭರವಸೆಯನ್ನು ಪೂರ್ತಿಗೊಳಿಸುವಂತೆ ಹಾಗೂ ಎಂಪಿಸಿಯ ಸಾಂವಿಧಾನಿಕ ಅಸ್ತಿತ್ವವನ್ನು ಎತ್ತಿಹಿಡಿಯಲು ಅಥವಾ ಈ ನಡೆಗಳಿಂದ ಉಂಟಾಗಬಹುದಾದ ತೀವ್ರ ವಿರೋಧಗಳನ್ನು ಗಣನೆಗೆ ತೆಗೆದುಕೊಳ್ಳುವಂತೆ ನಿಮ್ಮನ್ನು ಒತ್ತಾಯಿಸುತ್ತೇನೆ. ಸಾರಿಗೆ ವ್ಯವಸ್ಥೆಯನ್ನು ಒಳಗೊಂಡಂತೆ ನಗರದ ಸಮಸ್ಯೆಗಳನ್ನು ಒಟ್ಟಾರೆಯಾಗಿ ಹಂತಹಂತವಾಗಿ ಬಗೆಹರಿಸುವುದಕ್ಕಾಗಿ ಬಿಎಂಪಿಸಿಯು ಅನುಮೋದಿತ ಬಹುವಾರ್ಷಿಕ ಯೋಜನೆಯ ನೀಲ ನಕ್ಷೆಯನ್ನು ಹೊಂದುವುದಕ್ಕೂ ಕೂಡ ನಿಮ್ಮನ್ನು ಒತ್ತಾಯಿಸುತ್ತೇನೆ.

ಈ ವಿಚಾರವಾಗಿ ತಾವು ಸೂಕ್ತವಾಗಿ ಕ್ರಮವನ್ನು ಕೈಗೊಳ್ಳುತ್ತೀರಿ ಎಂದು ಆಶಿಸುತ್ತೇನೆ, ತಪ್ಪಿದಲ್ಲಿ ಪ್ರಾಮಾಣಿಕ, ಈ ನಗರವನ್ನು ರಕ್ಷಿಸಲು ಬಯಸುತ್ತಿರುವ ಕಷ್ಟಪಟ್ಟು ದುಡಿಯುತ್ತಿರುವ ಲಕ್ಷಗಟ್ಟಲೆ ನಾಗರೀಕರು ಹಾಗೂ ಅವರ ಕುಟುಂಬದ ಪರವಾಗಿ ಸರಿಯಾದ ಕ್ರಮವನ್ನು ನೀವು ಕೈಗೊಳ್ಳುವುದನ್ನು ಖಾತ್ರಿಪಡಿಸಲು ಇತರ ವೇದಿಕೆಗಳನ್ನು ಆಶ್ರಯಿಸುವುದು ಅನಿವಾರ್ಯವಾಗುತ್ತದೆ.

ನಿಮ್ಮ ವಿಶ್ವಾಸಿ<br>
ರಾಜೀವ್ ಚಂದ್ರಶೇಖರ್

ಶ್ರೀ ಸಿದ್ಧರಾಮಯ್ಯ,<br>
ಗೌರವಾನ್ವಿತ ಮುಖ್ಯಮಂತ್ರಿಗಳು,<br>
ಕರ್ನಾಟಕ ಸರ್ಕಾರ,<br>
ವಿಧಾನ ಸೌಧ,<br>
ಬೆಂಗಳೂರು.

ಪ್ರತಿಗಳು:

ಸಿಸಿ:

ಶ್ರೀ ಕೆ.ಜೆ.ಜಾರ್ಜ್,
ಗೌರವಾನ್ವಿತ ಬೆಂಗಳೂರು ನಗರಾಭಿವೃದ್ಧಿ ಮತ್ತು ನಗರ ಯೋಜನಾ ಮಂತ್ರಿಗಳು,
ಕರ್ನಾಟಕ ವಿಧಾನ ಸೌಧ,
ಬೆಂಗಳೂರು.

# 42

# ರೇರಾಗಾಗಿ ಕರ್ನಾಟಕದಲ್ಲಿ ಒಬ್ಬರು ಅಧಿಕಾರಿಯನ್ನು ನೇಮಿಸುವಂತೆ ಮುಖ್ಯಮಂತ್ರಿಯವರಿಗೆ ಪತ್ರ

ಜುಲೈ 1, 2016

ಮಾನ್ಯ ಶ್ರೀ ಸಿದ್ಧರಾಮಯ್ಯನವರೇ,

ವಿಷಯ: ರಿಯಲ್ ಎಸ್ಟೇಟ್ (ನಿಯಂತ್ರಣ ಹಾಗೂ ಅಭಿವೃದ್ಧಿ) ಕಾಯಿದೆ 2016 ಅಡಿಯಲ್ಲಿ ಮಧ್ಯಂತರ ಅವಧಿಗೆ ಕರ್ನಾಟಕ ರಾಜ್ಯ ಸರ್ಕಾರದ ನಿಯಂತ್ರಣಾಧಿಕಾರಿಯಾಗಿ ಅಧಿಕಾರಿಯೊಬ್ಬರ ನೇಮಕಾತಿಯ ಕುರಿತು.

ಉಲ್ಲೇಖ: ರಿಯಲ್ ಎಸ್ಟೇಟ್ (ನಿಯಂತ್ರಣ ಹಾಗೂ ಅಭಿವೃದ್ಧಿ) ಕಾಯಿದೆ 2016

ತಾವು ತಿಳಿದಿರುವಂತೆ ರಿಯಲ್ ಎಸ್ಟೇಟ್ (ನಿಯಂತ್ರಣ ಹಾಗೂ ಅಭಿವೃದ್ಧಿ) ಕಾಯಿದೆ 2016 ಅನ್ನು ಸಂಸತ್ತು ಅಂಗೀಕರಿಸಿದೆ ಮತ್ತು 25ನೇ ಮಾರ್ಚ್, 2016 ರಂದು ಇದು ಮಾನ್ಯ ರಾಷ್ಟ್ರಪತಿಗಳ ಅಂಕಿತವನ್ನೂ ಪಡೆದಿರುತ್ತದೆ. ಇದರೊಂದಿಗೆ, ಕೇಂದ್ರ ಸರ್ಕಾರವು 26ನೇ ಏಪ್ರಿಲ್, 2016 ರಂದು ಪ್ರಕಟಿಸಿದ ಅಧಿಸೂಚನೆಯಂತೆ ಮೇ 1, 2016 ರಿಂದ ರಿಯಲ್ ಎಸ್ಟೇಟ್ (ನಿಯಂತ್ರಣ ಹಾಗೂ ಅಭಿವೃದ್ಧಿ) ಕಾಯಿದೆ

2016ರ ಹೆಚ್ಚಿನ ನಿಯಮಗಳು ರಿಯಲ್ ಎಸ್ಟೇಟ್ (ನಿಯಂತ್ರಣ ಹಾಗೂ ಅಭಿವೃದ್ಧಿ) ಕಾಯಿದೆ 2016(ಸಂಕ್ಷಿಪ್ತವಾಗಿ ಕಾಯಿದೆ ಎಂದು ಉಲ್ಲೇಖಿಸಲಾಗುವುದು) ಯ ಪರಿಚ್ಛೇದ 20ನ್ನು ಒಳಗೊಂಡು ಜಾರಿಗೆ ಬರುತ್ತವೆ ಎಂದು ತಿಳಿಸಿರುತ್ತದೆ.

ಈ ಕಾಯಿದೆಯು ರಿಯಲ್ ಎಸ್ಟೇಟ್ ವಲಯದ ನಿಯಂತ್ರಣ ಹಾಗೂ ಪ್ರೋತ್ಸಾಹಕ್ಕಾಗಿ ಮತ್ತು ಉಳಿದ ಧ್ಯೇಯಗಳಲ್ಲಿ ಒಂದಾದ ರಿಯಲ್ ಎಸ್ಟೇಟ್ ವಲಯದ ಗ್ರಾಹಕರನ್ನು ರಕ್ಷಿಸುವ ಉದ್ದೇಶದಿಂದ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರವನ್ನು ಸ್ಥಾಪಿಸುವುದಕ್ಕೆ ಅವಕಾಶವನ್ನು ಒದಗಿಸಿರುತ್ತದೆ.

ಕಾಯಿದೆಯ ಪರಿಚ್ಛೇದ 20ರ ನಿಯಮಗಳ ಅಡಿಯಲ್ಲಿ ಕರ್ನಾಟಕ ರಾಜ್ಯ ಸರ್ಕಾರವು "ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ" ಎಂದು ಕರೆಯಲಾಗುವ ಪ್ರಾಧಿಕಾರವೊಂದನ್ನು ಇದಕ್ಕ ನೀಡಲಾದ ಅಧಿಕಾರಗಳನ್ನು ಚಲಾಯಿಸುವುದಕ್ಕಾಗಿ ಮತ್ತು ಕಾಯಿದೆ ಅಡಿಯಲ್ಲಿ ವಿವರಿಸಲಾಗಿರುವ ಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಮೇ 1, 2016 ರ ಅವಧಿಯ ಒಳಗಾಗಿ ಸ್ಥಾಪನೆ ಮಾಡುವುದು ಅಗತ್ಯವಿರುತ್ತದೆ. ಪರಿಚ್ಛೇದ 20ರ ಮೂರನೇ ನಿಯಮವು ಈ ಕೆಳಗಿನಂತೆ ವಿವರಿಸುತ್ತದೆ:

"ಈ ಪರಿಚ್ಛೇದದ ಅಡಿಯಲ್ಲಿ ನಿಯಂತ್ರಣ ಪ್ರಾಧಿಕಾರವೊಂದನ್ನು ರಚಿಸುವವರೆಗೆ, ಸೂಕ್ತ ಸರ್ಕಾರವು ಆದೇಶದ ಮೂಲಕ ಯಾವುದೇ ನಿಯಂತ್ರಣ ಪ್ರಾಧಿಕಾರವನ್ನು ಅಥವಾ ಅಧಿಕಾರಿಯನ್ನು, ವಿಶೇಷವಾಗಿ ಗೃಹನಿರ್ಮಾಣಕ್ಕೆ ಸಂಬಂಧಿಸಿದ ವಿಭಾಗದ ಕಾರ್ಯದರ್ಶಿಯನ್ನು ಈ ಕಾಯಿದೆಯ ಅಡಿಯಲ್ಲಿನ ನಿಯಂತ್ರಣ ಪ್ರಾಧಿಕಾರದ ಉದ್ದೇಶಗಳನ್ನು ನಿರ್ವಹಿಸುವುದಕ್ಕಾಗಿ ನಿಯೋಜನೆ ಮಾಡತಕ್ಕದ್ದು"

ಉಳಿದಂತೆ ಕಾಯಿದೆಯು ರಿಯಲ್ ಎಸ್ಟೇಟ್ ವಲಯದಲ್ಲಿ ಹೆಚ್ಚಿನ ಅಗತ್ಯವಿದ್ದ ಸುಧಾರಣೆಗಳನ್ನು ತರುವ ಅಂದರೆ ರಿಯಲ್ ಎಸ್ಟೇಟ್ ವಲಯದಲ್ಲಿ ಗ್ರಾಹಕರ ಹಿತವನ್ನು ರಕ್ಷಿಸುವ ಮತ್ತು ಪ್ಲಾಟಿನ, ಅಪಾರ್ಟ್‌ಮೆಂಟಿನ ಅಥವಾ ಕಟ್ಟಡದ ಮಾರಾಟವನ್ನು ದಕ್ಷ ಹಾಗೂ ಪಾರದರ್ಶಕ ರೀತಿಯಲ್ಲಿ ನಡೆಯುವಂತೆ ಉತ್ತೇಜಿಸುವ ಉದ್ದೇಶವನ್ನು ಹೊಂದಿದೆ. ಇದನ್ನು ಜಾರಿಗೊಳಿಸುವುದಕ್ಕಾಗಿ, ಈ ಕಾಯಿದೆ ಉದ್ದೇಶಗಳಿಗಾಗಿ ನಿಯಂತ್ರಣ ಪ್ರಾಧಿಕಾರದ ರೀತಿಯಲ್ಲಿ ಅಧಿಕಾರಿಯನ್ನು, ವಿಶೇಷವಾಗಿ ಗೃಹನಿರ್ಮಾಣಕ್ಕೆ ಸಂಬಂಧಿಸಿದ ವಿಭಾಗದ ಕಾರ್ಯದರ್ಶಿಯನ್ನು ನಿಯೋಜಿಸುವುದು ಅಗತ್ಯವಿರುತ್ತದೆ. ಅಂತಹ ನೇಮಕಾತಿ ಇಲ್ಲದೆ ಇದ್ದಲ್ಲಿ, ಕಾಯಿದೆಯ ನಿಯಮಗಳನ್ನು ಕರ್ನಾಟಕ ರಾಜ್ಯದಲ್ಲಿ ದಕ್ಷತೆಯಿಂದ ಜಾರಿಗೊಳಿಸುವುದು ಮತ್ತು ಅನುಷ್ಠಾನರೂಪಕ್ಕೆ ತರುವುದು ಸಾಧ್ಯವಾಗುವುದಿಲ್ಲ.

ನಮ್ಮ ನಾಗರೀಕರ ಕ್ಷೇಮಾಭಿವೃದ್ಧಿಗಾಗಿ ಹಾಗೂ ರಿಯಲ್ ಎಸ್ಟೇಟ್ ವಲಯದ ಗ್ರಾಹಕರ ಹಿತರಕ್ಷಣೆಯ ದೃಷ್ಟಿಯಿಂದ, ಈ ಕಾಯಿದೆಯ ಉದ್ದೇಶಗಳಿಗಾಗಿ ನಿಯಂತ್ರಣ ಪ್ರಾಧಿಕಾರವಾಗಿ ಅಧಿಕಾರಿಯೊಬ್ಬರನ್ನು ನಿಯೋಜನೆ ಮಾಡುವುದು ಅಗತ್ಯವಿರುತ್ತದೆ. ಮೇಲಿನ ವಿಚಾರಗಳನ್ನು ಗಣನೆಯಲ್ಲಿರಿಸಿಕೊಂಡು ಮತ್ತು ಕಾಯಿದೆಯ ಪರಿಚ್ಛೇದ 20ರ ಅನ್ವಯ, ಕರ್ನಾಟಕ ರಾಜ್ಯದಲ್ಲಿ ನಿಯಮಗಳ ಪರಿಣಾಮಕಾರಿ ಅನುಷ್ಠಾನಗೊಳಿಸುವಿಕೆಯನ್ನು ಖಾತರಿಪಡಿಸಲು ಕರ್ನಾಟಕದ ಸರ್ಕಾರದ ಗೃಹನಿರ್ಮಾಣ ಇಲಾಖೆಯ ಮುಖ್ಯ ಕಾರ್ಯದರ್ಶಿಯವರನ್ನು ಈ ಕಾಯಿದೆಯ ಉದ್ದೇಶಗಳಿಗಾಗಿ 'ನಿಯಂತ್ರಣ ಪ್ರಾಧಿಕಾರ'ದ ರೂಪದಲ್ಲಿ ಸಾಧ್ಯವಿರುವಷ್ಟು ಬೇಗನೆ ನೇಮಕ ಮಾಡಲು ಸೂಕ್ತ ಆದೇಶವನ್ನು ಮಾಡುವಂತೆ ತಮ್ಮನ್ನು ಒತ್ತಾಯಿಸುತ್ತೇನೆ. ಅಂತಹ ನೇಮಕಾತಿಯಲ್ಲಿ ಮಾಡುವ ವಿಳಂಬವು ಈ ಕಾಯಿದೆಯ ಮುಖ್ಯ ಉದ್ದೇಶಗಳನ್ನೇ ಹಾಳುಗೆಡಹುತ್ತದೆಯಲ್ಲದೇ, ಕಾಯಿದೆಯು ಕಾರ್ಯರೂಪಕ್ಕೆ ಬರದಂತೆ ತಡೆಯುತ್ತದೆ ಮತ್ತು ಗ್ರಾಹಕರು ಕಾನೂನು ಮುರಿಯುವ ರಿಯಲ್ ಎಸ್ಟೇಟ್ ಕಂಪನಿಗಳ ಹಿಡಿತದಲ್ಲಿ ಸಿಲುಕಿ ನಲುಗುವ ಸ್ಥಿತಿ ಮುಂದುವರಿಯುತ್ತದೆ.

ಈ ಪತ್ರವು ಬೇಗನೇ ಈ ಕಾಯಿದೆಯು ಜಾರಿಯಾಗುವುದರಿಂದ ನ್ಯಾಯಪಡೆಯುವುದಕ್ಕೆ ಸಾಧ್ಯವಾಗಬಹುದಾದ ಲಕ್ಷಗಟ್ಟಲೆ ರಿಯಲ್ ಎಸ್ಟೇಟ್ ಗ್ರಾಹಕರ ಪರವಾಗಿ ಆಗಿರುತ್ತದೆ.

ತಮ್ಮ ವಿಶ್ವಾಸಿ,
ರಾಜೀವ್ ಚಂದ್ರಶೇಖರ್

ಶ್ರೀ ಸಿದ್ದರಾಮಯ್ಯ
ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳು,
ವಿಧಾನ ಸೌಧ,
ಬೆಂಗಳೂರು.

ಪ್ರತಿ:
ಶ್ರೀ ಕೆಜೆ ಜಾರ್ಜ್
ಗೌರವಾನ್ವಿತ ಸಚಿವರು ಅಭಿವೃದ್ಧಿ ಮತ್ತು ನಗರ ಯೋಜನೆ,
ವಿಧಾನ ಸೌಧ,
ಬೆಂಗಳೂರು.

# 43

# ಮಹದಾಯಿ ನದಿಗೆ ಸಂಬಂಧಿಸಿ ಮುಖ್ಯಮಂತ್ರಿಯವರಿಗೆ ಪತ್ರ

6ನೇ ಆಗಸ್ಟ್ 2016

ಶ್ರೀ ಸಿದ್ಧರಾಮಯ್ಯನವರೇ,

ಈ ಪತ್ರವು ಚಾಲ್ತಿಯಲ್ಲಿರುವ ನದಿ ನೀರಿನ ವಿವಾದ ಮತ್ತು ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳ ಜನರು ಎದುರಿಸುತ್ತಿರುವ ಸನ್ನಿವೇಶದ ಕುರಿತಾಗಿದೆ.

ಕರ್ನಾಟಕ ಸರ್ಕಾರಕ್ಕೆ ಪ್ರಾಧಿಕಾರದ ಇತ್ತೀಚಿನ ಆದೇಶ ಜನರಿಗೆ ಸ್ಪಷ್ಟವಾಗಿ ಒಂದು ಹಿನ್ನಡೆ ಎನಿಸಿದೆ.

ಇದು ಎರಡು ಪ್ರಮುಖ ಸಮಸ್ಯೆಗಳಿಗೆ ಕಾರಣವಾಗುತ್ತದೆ:

**ಎ. ರಾಜ್ಯಕ್ಕೆ ಮತ್ತು ಜನರಿಗೆ ನ್ಯಾಯ ಒದಗಿಸುವಲ್ಲಿ ಕರ್ನಾಟಕ ಸರ್ಕಾರದ ಕಾನೂನು ಕಾರ್ಯತಂತ್ರವು ವಿಫಲವಾಗಿದೆ.**

ಕಾನೂನಿನ ಪ್ರಕರಣ ನಿರ್ವಹಿಸುವ ನಿಮ್ಮ ಸರ್ಕಾರದ ಸಾಮರ್ಥ್ಯದ ಕುರಿತಾಗಿ

ಎದುರಾಗುವ ಪ್ರಶ್ನೆಗಳಿಗೆ ಉತ್ತರವನ್ನು ನೀಡಬೇಕಾಗಿದೆ.

ಈ ಪ್ರಕರಣದ ಎಲ್ಲಾ ಆಯಾಮಗಳನ್ನು ನಿಭಾಯಿಸುವಲ್ಲಿ ಸರ್ಕಾರ ಮತ್ತು ಕೇವಲ ಸರಕಾರವೇ ಜವಾಬ್ದಾರವಾಗಿತ್ತು. ಹೀಗಾಗಿ ಈ ಪ್ರಕರಣದ ಫಲಿತಾಂಶಗಳಿಗೆ ಸರ್ಕಾರವೇ ಹೊಣೆಯಾಗಿದೆ.

ಕಾನೂನು ತಜ್ಞರ ಅಭಿಪ್ರಾಯದ ಪ್ರಕಾರ ಕರ್ನಾಟಕ ಸರ್ಕಾರವು ಕಾನೂನು ಕ್ರಮವನ್ನು ಸಮರ್ಪಕವಾಗಿ ಕೈಗೊಳ್ಳಲು ವಿಫಲವಾಯಿತು ಮತ್ತು ಮೇಲ್ಮನವಿಯನ್ನು ಅತ್ಯಂತ ಕೆಟ್ಟದಾಗಿ ಸಿದ್ಧಪಡಿಸಿತು. ಮುಖ್ಯವಾಗಿ ಕಾನೂನು ಪ್ರಕರಣವನ್ನು ನಿರ್ವಹಿಸುವಲ್ಲಿ ನಿರ್ಲಕ್ಷವನ್ನು ಎತ್ತಿ ಹಿಡಿಯುವಂತಹ ಅಥವಾ ಆ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎತ್ತುವಂಥ ವಿಷಯವೆಂದರೆ ಕುಡಿಯುವ ನೀರಿನ ಅಗತ್ಯತೆಗಳನ್ನು ಕೊನೆಯದಾಗಿ ಸಲ್ಲಿಸಿದ್ದು.

ಈ ವಿಚಾರವು ನ್ಯಾಯಾಂಗದ ಮುಂದಿರುವುದರಿಂದ ನಾನು ಹೇಳುವುದಿಷ್ಟೆ, ಈ ಬಗೆಯ ಹಿನ್ನಡೆಯು ಪರಿಹಾರ ಪಡೆಯುವ ಅಥವ ಸಂಧಾನದ ಮೂಲಕ ಪರಿಹರಿಸುವ ರಾಜ್ಯದ ಪ್ರಯತ್ನಗಳಿಗೆ ಯಶಸ್ಸು ತಂದುಕೊಡುವುದಿಲ್ಲ.

ನ್ಯಾಯಮಂಡಳಿಯ ಆದೇಶ ಮತ್ತು ಈ ಬಗ್ಗೆ ಪ್ರಕಟವಾದ ಪತ್ರಿಕಾ ವರದಿಗಳನ್ನು ಓದಿದ ಬಳಿಕ ರಾಜ್ಯ ಸರ್ಕಾರವು ಭದ್ರವಾದ ಕಾನೂನು ಕಾರ್ಯತಂತ್ರವನ್ನು ರೂಪಿಸಲು ವಿಫಲವಾಯಿತು ಮತ್ತು ಪ್ರಕರಣವನ್ನು ಕಳಪೆಯಾಗಿ ನಿರೂಪಿಸಿತು ಎಂಬುದು ಗೊತ್ತಾಗುತ್ತದೆ. ನ್ಯಾಯಾಧಿಕರಣವು ಹೇಳುವಂತೆ, ರಾಜ್ಯ ಸರ್ಕಾರವು 2000 ಟಿಎಂಸಿ ಅಡಿಗಳಷ್ಟು ನೀರು ಸಮುದ್ರಕ್ಕೆ ವ್ಯರ್ಥವಾಗಿ ಸೇರುತ್ತಿದೆ ಎಂಬುದನ್ನು ಮನದಟ್ಟು ಮಾಡಿಕೊಡಲು ವಿಫಲವಾಗಿದೆ .

ಸರ್ಕಾರ ನೀರನ್ನು ಪಡೆಯಲು ಇಚ್ಚಿಸುವ ಮೂರು ಅಧಿಸೂಚಿತ ಸ್ಥಳಗಳಲ್ಲಿ ಸಾಕಷ್ಟು ಪ್ರಮಾಣದ ನೀರಿದೆ ಎಂಬುದನ್ನು ನಿರೂಪಿಸಲು ಸರ್ಕಾರ ವಿಫಲವಾಗಿದೆ. ಮಹದಾಯಿ ನೀರು ಸಮುದ್ರದಲ್ಲಿ ವ್ಯರ್ಥವಾಗುತ್ತಿದೆ ಎಂಬುದನ್ನು ಮಂಡಿಸುವುದಕ್ಕೂ ಮುನ್ನ ಪೊಟಮೊಲಜಿಯನ್ನು (ನೀರಿನ ಜಲಭೌತ ಶಾಸ್ತ್ರ) ಅಧ್ಯಯನ ಮಾಡುವಂತೆ ಕರ್ನಾಟಕದ ನ್ಯಾಯವಾದಿಗಳಿಗೆ ನ್ಯಾಯಾಧಿಕರಣವು ಸೂಚಿಸಿರುವುದು ಸರಕಾರದ ವೈಫಲ್ಯಕ್ಕೆ ಹಿಡಿದ ಕನ್ನಡಿಯಾಗಿದೆ!

ಕರ್ನಾಟಕ ಸರ್ಕಾರವು ಮನದಟ್ಟು ಮಾಡಿಕೊಡುವಂತಹ ವಾದಗಳನ್ನು ಮಂಡಿಸಲು ವಿಫಲವಾಗಿದೆ ಎಂಬುದನ್ನು ಬಿಂಬಿಸುವಂತಹ ಅಂಶಗಳನ್ನು ಮಧ್ಯಂತರ ಆದೇಶವು

ತೋರಿಸುತ್ತಿದೆ. ಅವುಗಳೆಂದರೆ ತಾನು ಪ್ರಸ್ತಾಪಿಸಿದ ಯೋಜನೆಯ ವಿವರಗಳನ್ನು ನೀಡದಿರುವುದು, ಈ ಯೋಜನೆಗಳು ಹೇಗೆ ತಾತ್ಕಾಲಿಕ ಎಂಬುದನ್ನು ಹೇಳದಿರುವುದು; ಅಗತ್ಯ ಮಂಜೂರಾತಿಗಳನ್ನು ಪಡೆಯದಿರುವುದು; ತಾನು ಮಹದಾಯಿ ನೀರಿನ ಬಳಕೆಯ ಪರಿಣಾಮವನ್ನು ಸ್ಪಷ್ಟಪಡಿಸಿಲ್ಲ ಎಂಬುದನ್ನು ಹೇಳದಿರುವುದು ಬದಲಿಗೆ ನದಿ ಕೊಳ್ಳದಲ್ಲಿ ಇರುವ ನೀರಿನ ಪ್ರಮಾಣವನ್ನು ಹೇಳದೇ ಉದ್ದೇಶಿತ ಅಣೆಕಟ್ಟಿನಲ್ಲಿ ಇರಬಹುದಾದಂಥ ನೀರಿನ ಕೊರತೆಯನ್ನು ಸೂಚಿಸುವ ವಾದ ಮಂಡಿಸಿದ್ದು.

ನ್ಯಾಯಾಧಿಕರಣವು ಗಮನಿಸಿದ ಇತರ ಅಂಶಗಳು ಕಳಪೆ ಕಾನೂನು ಕಾರ್ಯತಂತ್ರ ಮತ್ತು ಈ ವಿಷಯವನ್ನು ದೋಷಪೂರಿತವಾಗಿ ನಿರ್ವಹಿಸಿರುವುದನ್ನು ಎತ್ತಿ ಹಿಡಿಯುತ್ತಿವೆ. ವಿಷಯ ಹೀಗಿರುವಾಗ ಸರ್ಕಾರದಲ್ಲಿನ ಕೆಲವರು ರಾಜಕೀಯ ಮಾಡುತ್ತಿರುವುದು ಮತ್ತು ವಿಷಯಕ್ಕೆ ರಾಜಕೀಯ ಬಣ್ಣ ಬಳಿಯಲು ಪ್ರಯತ್ನಿಸುತ್ತಿರುವುದು ಆಶ್ಚರ್ಯದಾಯಕವಾಗಿದೆ. ಅವರು ವೈಫಲ್ಯಕ್ಕೆ ನೆವ ಹೇಳುತ್ತಿದ್ದಾರೆ.

ಕರ್ನಾಟಕದ ನ್ಯಾಯಯುತವಾದ ಅಗತ್ಯಗಳನ್ನು ಬಿಂಬಿಸುವುದಕ್ಕಾಗಿ ಸಮಗ್ರವಾದ ಮತ್ತು ನಿರಾಕರಿಸಲಾಗದ ವಾದವನ್ನು ಸಿದ್ಧಪಡಿಸಲು ರಾಜ್ಯ ಸರ್ಕಾರವು ವಿಫಲವಾಗಿದೆ ಎಂಬುದು ದೂರವಿಡಲಾಗದ ವಸ್ತುಸ್ಥಿತಿಯಾಗಿದೆ ಮತ್ತು ಸರ್ಕಾರಕ್ಕೆ ನ್ಯಾಯಮಂಡಳಿಯ ಮುಂದಿಡುವುದಕ್ಕೆ ಕಾನೂನಿನ ಚಿಂತನೆ ಅಥವಾ ಕಾರ್ಯತಂತ್ರ ಇರಲಿಲ್ಲ ಎಂಬುದು ಸ್ಪಷ್ಟ. ಮಧ್ಯಂತರ ಮೇಲ್ಮನವಿಯನ್ನು ಮುಂದಿಡುವಂತೆ ಕಾನೂನು ತಂಡದ ಸಲಹೆಯನ್ನು ನಿರ್ಲಕ್ಷಿಸಿದ ಕುರಿತು ಕರ್ನಾಟಕ ಸರ್ಕಾರವು ಒಂದು ವಿವರಣೆಯನ್ನು ಕೂಡ ನೀಡಬೇಕಾಗುತ್ತದೆ.

**ಬಿ. ರಾಜ್ಯ ಸರ್ಕಾರವು ರಾಜಕೀಯ ಮಾಡುವುದನ್ನು ನಿಲ್ಲಿಸಬೇಕು ಮತ್ತು ಜನರಿಗಾಗಿ ಕೆಲಸ ಮಾಡಲು ಪ್ರಯತ್ನಿಸಬೇಕು**

ಉತ್ತರ ಕರ್ನಾಟಕ ಭಾಗವೂ ದೀರ್ಘಕಾಲದಿಂದಲೂ ಕುಡಿಯುವ ನೀರಿನ ಕೊರತೆಯಿಂದ ಬಳಲುತ್ತಿದೆ ಎಂಬುದು ಸಾಕಷ್ಟು ತಿಳಿದಿರುವ ವಿಷಯವೇ. ಹೀಗಾಗಿ ಜನರ ಸಮಸ್ಯೆಗಳಿಗೆ ಅಸೂಕ್ಷ್ಮವಾಗಿರುವ ಸರ್ಕಾರ ಕೂಡ ಉತ್ತರ ಕರ್ನಾಟಕದ ಜನರ ಕುಡಿಯುವ ನೀರಿನ ಬವಣೆಯನ್ನು ಪರಿಹರಿಸಲು ಕ್ರಮ ಕೈಗೊಳ್ಳಬೇಕು. ಸರ್ವೋಚ್ಚ ನ್ಯಾಯಾಲಯ ಕೂಡ ಕುಡಿಯುವ ನೀರಿನ ಅಗತ್ಯಗಳನ್ನು ಮಾನವೀಯ ನೆಲೆಗಟ್ಟಿನಲ್ಲಿ ಪರಿಗಣಿಸಬೇಕೆಂದು ಉಲ್ಲೇಖಿಸಿದೆ.

ಆದರೆ ರಾಜ್ಯ ಸರ್ಕಾರವು ಜನರ ಸಮಸ್ಯೆಗಳನ್ನು ಮಧ್ಯಂತರ ಪರಿಹಾರದ ಮೂಲಕ ಪರಿಹರಿಸುವುದಕ್ಕೆ ಪ್ರಕರಣದ ವಿಚಾರಣೆ ಸಂದರ್ಭದಲ್ಲಿ ಯಾವುದೇ ಪ್ರಯತ್ನವನ್ನೂ ಮಾಡಿಲ್ಲ. ಕುಡಿಯುವ ನೀರಿನ ಬವಣೆ ಅನುಭವಿಸುತ್ತಿರುವ ಉತ್ತರ ಕರ್ನಾಟಕದ ಜನರಿಗೆ ಸಹಾಯ ಮಾಡಲು ಹಲವಾರು ವಿಧಾನಗಳಿವೆ.

ಉದಾಹರಣೆಗೆ ರಾಜ್ಯವು ಮಹಾರಾಷ್ಟ್ರ ಸರ್ಕಾರವು ಲಾತೂರಿನ ಬರಪೀಡಿತ ಪ್ರದೇಶಗಳಿಗೆ ರೈಲಿನ ಮೂಲಕ ಕುಡಿಯುವ ನೀರನ್ನು ಪೂರೈಸುವ ಏರ್ಪಾಟು ಮಾಡಿದೆ, ಇದೇ ರೀತಿಯ ಕ್ರಮವನ್ನು ರಾಜ್ಯ ಕೈಗೊಳ್ಳಲಿ.

ಬಾಧೆಗೊಳಗಾದ ಜಿಲ್ಲೆಗಳ ಕುಟುಂಬಗಳು ಮತ್ತು ರೈತರಿಗೆ ತಕ್ಷಣವೇ ಮಧ್ಯಂತರ ಹಣಕಾಸು ಪರಿಹಾರವನ್ನು ಒದಗಿಸಬೇಕು.

ರೈತರ ಸಮಸ್ಯೆ ಪರಿಹರಿಸುವುದಕ್ಕಾಗಿ ನೀರನ್ನು ಉಳಿಸುವ ಮತ್ತು ನೀರಾವರಿ ಯೋಜನೆಗಳನ್ನು ಆರಂಭಿಸುವ ಕ್ರಮವನ್ನು ರಾಜ್ಯ ಸರ್ಕಾರ ಕೈಗೊಂಡಿಲ್ಲ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ನಾವೀಗ ಈ ಪ್ರಶ್ನೆಯನ್ನೂ ಕೇಳಬೇಕಿದೆ – ಸರ್ವಪಕ್ಷ ಸಭೆಗಳನ್ನು ನಡೆಸುವುದನ್ನು ಹೊರತುಪಡಿಸಿ ವಿಷಯದಲ್ಲಿ ರಾಜಕೀಯ ಮಾಡುವುದನ್ನು ಹೊರತುಪಡಿಸಿ ಕರ್ನಾಟಕ ಸರ್ಕಾರವು ಏಕೆ ಏನನ್ನೂ ಮಾಡಿಲ್ಲ? ಏಕೆ ಜನರ ಬೇಡಿಕೆಗಳನ್ನು ಪೂರೈಸುವುದಕ್ಕಾಗಿ ನೈಜವಾದ ಪರಿಹಾರವನ್ನು ಕಂಡುಕೊಳ್ಳುವ ಪ್ರಯತ್ನ ಮಾಡದೇ ಬರೀ ರಾಜಕೀಯ ಮಾಡುತ್ತಿದೆ?

ಗೌರವಪೂರ್ವಕವಾಗಿ ನಿಮ್ಮನ್ನು ಉದ್ದೇಶಿಸಿ ಹೇಳುವುದೇನೆಂದರೆ ಜಲ ಮೂಲಗಳನ್ನು ಉಳಿಸಿಕೊಳ್ಳುವಲ್ಲಿ ರಾಜ್ಯ ಸರ್ಕಾರದ ಯಾವುದೇ ಕಾರ್ಯತಂತ್ರ ಅಥವಾ ಯೋಜನೆಯಾಗಲಿ ಕಂಡುಬಂದಿಲ್ಲ, ಇದಕ್ಕೆ ಬೆಂಗಳೂರಿನಲ್ಲಿರುವ ಕೆರೆಗಳ ಕತೆಯೇ ಸಾಕ್ಷಿ. ಕುಡಿಯುವ ನೀರಿನ ಕೊರತೆಗಳ ದೀರ್ಘಕಾಲಿಕ ಸಮಸ್ಯೆಗಳನ್ನು ಪರಿಹರಿಸುವಲ್ಲಿ ನೀವು ಯಾವುದೇ ಆಸಕ್ತಿಯನ್ನು ಪ್ರದರ್ಶಿಸಿಲ್ಲ ಅಥವಾ ಯಾವುದೇ ಪ್ರಯತ್ನವನ್ನೂ ಮಾಡಿಲ್ಲ, ಮಹದಾಯಿ ಇರಲಿ ಮಹದಾಯಿ ನದಿ ನೀರಿನಲ್ಲಿ ರಾಜ್ಯದ ಕಾನೂನುಬದ್ಧವಾದ ಹಕ್ಕುಗಳನ್ನು ಕೇಳುವ ಜೊತೆಯಲ್ಲೇ ನೀರಿನ ಸಂರಕ್ಷಣೆ ಮತ್ತು ನೀರಾವರಿಗೆ ನಿಮ್ಮಿಂದ ಯಾವುದೇ ಪ್ರಯತ್ನಗಳಾಗಿಲ್ಲ.

ನಮ್ಮ ರಾಜ್ಯಕ್ಕೆ ನೀರಿನ ನ್ಯಾಯಯುತ ಪಾಲು ಕೇಳುವ ಹಕ್ಕಿದೆ ಮತ್ತು ಇದಕ್ಕಾಗಿ ಅದು ಕಾನೂನುಬದ್ಧ ಹೋರಾಟ ನಡೆಸಬೇಕು, ಆದರೆ ವಿಷಯವು ನ್ಯಾಯಾಧಿಕರಣದಲ್ಲಿದೆ ಎಂಬುದು ಜನರ ಸಮಸ್ಯೆಗಳನ್ನು ಈಡೇರಿಸುವ ಸರ್ಕಾರದ ಜವಾಬ್ದಾರಿಯನ್ನು

ತಪ್ಪಿಸುವುದಿಲ್ಲ.

ಕೊನೆಯದಾಗಿ ದುರದೃಷ್ಟಕರ ವಿಚಾರ ವಿಚಾರವೆಂದರೆ ಭಾವನಾತ್ಮಕವಾಗಿ ಖಿನ್ನರಾಗಿದ್ದ ಆವೇಶ ಭರಿತರಾಗಿದ್ದ ಪ್ರತಿಭಟನಕಾರರ ಮೇಲೆ ಹೇಸರು ಲಾಠಿಚಾರ್ಜ್ ನಡೆಸಿದ್ದು.

ಒಟ್ಟು 200ಕ್ಕೂ ಹೆಚ್ಚು ಬಂಧಿತ ಪ್ರತಿಭಟನಾಕಾರರಿದ್ದು ಅವರಲ್ಲಿ 5 ಜನ ಆಸ್ಪತ್ರೆಗೆ ದಾಖಲಾಗಿದ್ದು ಇವರೆಲ್ಲರನ್ನು ಬಿಡುಗಡೆ ಮಾಡುವಂತೆ ಮತ್ತು ಅವರ ವಿರುದ್ಧದ ಪ್ರಕರಣಗಳನ್ನು ಕೈಬಿಡುವಂತೆ ಸರ್ಕಾರವನ್ನು ನಾನು ಒತ್ತಾಯಿಸುತ್ತೇನೆ. ಜನರ ಬವಣೆಯ ವಿಷಯಗಳಲ್ಲಿ ರಾಜಕೀಯ ಮಾಡುವುದು ಚುನಾಯಿತ ಸರ್ಕಾರಕ್ಕೆ ಸೂಕ್ತ ವಿಷಯವಲ್ಲ ಉತ್ತರ ಕರ್ನಾಟಕದ ಜನರ ಹಿತಾಸಕ್ತಿಯ ದೃಷ್ಟಿಯಿಂದ ನಿಮ್ಮ ಕಾನೂನು ಕಾರ್ಯತಂತ್ರವನ್ನು ಪರಿಶೀಲಿಸಿಕೊಂಡು ಪ್ರದೇಶದ ಮತ್ತು ಜನರ ತುರ್ತು ನೀರಿನ ಸಮಸ್ಯೆಗಳನ್ನು ತಕ್ಷಣವೇ ಪರಿಹರಿಸಲು ಮುಂದಾಗುವಂತೆ ನಿಮ್ಮನ್ನು ಕೋರುತ್ತೇನೆ.

ನಿಮ್ಮವನೇ ಆದ
ರಾಜೀವ್ ಚಂದ್ರಶೇಖರ್

ಶ್ರೀ ಸಿದ್ದರಾಮಯ್ಯ
ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳು,
ವಿಧಾನ ಸೌಧ,
ಬೆಂಗಳೂರು

# 44

# ಅಸಮರ್ಪಕ ಬಿಎಂಪಿಸಿ ಸೂಚನೆ ಕುರಿತಂತೆ ಮುಖ್ಯಮಂತ್ರಿಯವರಿಗೆ ಪತ್ರ

24ನೇ ಡಿಸೆಂಬರ್ 2016

ಶ್ರೀ ಸಿದ್ಧರಾಮಯ್ಯನವರೇ,

ವಿಷಯ: ಬೆಂಗಳೂರು ಮೆಟ್ರೋಪಾಲಿಟನ್ ಪ್ಲಾನಿಂಗ್ ಕಮಿಟಿಯ (ಬಿಎಂಪಿಸಿ) 2ನೇ ಸಭೆಗೆ ಅಸಮರ್ಪಕ ಸೂಚನೆಯ ಕುರಿತು

ಉಲ್ಲೇಖ:

ಉಲ್ಲೇಖ ಬಿಡಿಎ/ಕಮೀಷನರ್/ಬಿಎಂಪಿಸಿ/ ಸಭೆ–2/ /2016–17 ರ ಬೆಂಗಳೂರು ಮೆಟ್ರೋಪಾಲಿಟನ್ ಪ್ಲಾನಿಂಗ್ ಕಮಿಟಿಯ 2ನೇ ಸಭೆಯ ಕಾರ್ಯಸೂಚಿಯ ಜೊತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಹೊರಡಿಸಲಾದ ಬೆಂಗಳೂರು ಮೆಟ್ರೋಪಾಲಿಟನ್ ಪ್ಲಾನಿಂಗ್ ಕಮಿಟಿಯ (ಬಿಎಂಪಿಸಿ) 2ನೇ ಸಭೆಗೆ ದಿನಾಂಕರಹಿತ ಪತ್ರ

ಬಿಎಂಪಿಸಿಯ ಆಡಳಿತವನ್ನು ಕರ್ನಾಟಕ ಸರ್ಕಾರವು ಅಸಮರ್ಪಕವಾಗಿ ಮಾಡುತ್ತಿರುವುದನ್ನು ತಮ್ಮ ಗಮನಕ್ಕೆ ತರುವುದಕ್ಕಾಗಿ

ತುಂಬು ವಿಷಾದದಿಂದ ನಾನು ನಿಮಗೆ ಈ ಪತ್ರವನ್ನು ಬರೆಯುತ್ತಿದ್ದೇನೆ. ಮೇಲೆ ಉಲ್ಲೇಖಿಸಲಾದ, ಬಿಎಂಪಿಸಿಯ 2ನೇ ಸಭೆಯನ್ನು ಡಿಸೆಂಬರ್ 16, 2016ರಂದು 04:30ಕ್ಕೆ ನಡೆಸಲು ನಿಶ್ಚಯಿಸಲಾಗಿದೆ ಎಂಬ ಒಕ್ಕಣೆಯುಳ್ಳ ಪತ್ರವನ್ನು (ಇಲ್ಲಿಂದ ಮುಂದೆ ಅದನ್ನು ಪತ್ರ ಎಂದು ಉಲ್ಲೇಖಿಸುತ್ತೇನೆ) ಬಿಡಿಎನಿಂದ ನಾನು ಡಿಸೆಂಬರ್ 15, 2016ರಂದು ಸಂಜೆ ಸ್ವೀಕರಿಸಿರುತ್ತೇನೆ.

ಪೂರ್ವಭಾವಿಯಾಗಿ ನಿಮಗೆ ನಾನು ನೆನಪಿಸಲಿಚ್ಛಿಸುವ ವಿಷಯವೇನೆಂದರೆ ಬಿಎಂಪಿಸಿ ಎಂಬುದು ಸಾಂವಿಧಾನಿಕವಾಗಿ ಗುರುತಿಸಲಾಗಿರುವ ಅಂಗವಾಗಿದ್ದು ಬೆಂಗಳೂರಿನ ನಗರ ಯೋಜನೆ, ಸಾಮಾಜಿಕ-ಆರ್ಥಿಕ ಅಭಿವೃದ್ಧಿಯ ಉಪಕ್ರಮಗಳ ಕುರಿತು ಬೆಂಗಳೂರಿನ ಆಡಳಿತದ ಕುರಿತು ಸಲಹೆಗಳನ್ನು ನೀಡುತ್ತದೆ. ಡಿಸೆಂಬರ್ 15, 2016ರಂದು ನನಗೆ ಸೂಚನೆ ನೀಡಲಾಗಿದ್ದು ಸಭೆ ನಡೆಯುವುದಕ್ಕಿಂತ ಇಪ್ಪತ್ತು (20) ತಾಸುಗಳಿಗಿಂತ ಕಡಿಮೆ ಅವಧಿಯನ್ನಷ್ಟೇ ನೀಡುವಲ್ಲಿನ ಬಿಡಿಎಯ ಬೇಜವಾಬ್ದಾರಿತನವನ್ನು ಅರ್ಥಮಾಡಿಕೊಳ್ಳಲು ನನಗೆ ಸಾಧ್ಯವಾಗುತ್ತಿಲ್ಲ. ಬಿಎಂಪಿಸಿಯು ಸ್ಥಳೀಯ ಆಡಳಿತದಲ್ಲಿನ ವಿಸ್ತೃತ ಸ್ತರದ ಸ್ಥಳೀಯ ಆಡಳಿತದ ಸದಸ್ಯರು ಹಾಗೂ ಇನ್ನಿತರರನ್ನು ಒಳಗೊಂಡಿದೆ. ಬೆಂಗಳೂರು ಮೆಟ್ರೋಪಾಲಿಟನ್ ಪ್ಲಾನಿಂಗ್ ಕಮಿಟಿಯ ನಿಯಮಗಳು, 2013 (ನಿಯಮಗಳು)ರ ಅನುಚ್ಛೇದ (3) ರ ನಿಯಮ 5ರ ಪ್ರಕಾರ ಸಭೆಯಲ್ಲಿ ಅದರ ವ್ಯವಹಾರಗಳನ್ನು ನಡೆಸಿಕೊಂಡು ಹೋಗಲು ಅಗತ್ಯವಿರುವ ಕೋರಂ ಎಂದರೆ ಬಿಎಂಪಿಸಿಯ ಒಟ್ಟು ಸದಸ್ಯರ ಪೈಕಿ ಮೂರನೆ ಎರಡರಷ್ಟು ಹಾಜರಿ ಇರಬೇಕು. ಹೀಗಿರುವಾಗ ಅನ್ನು ಬಿಎಂಪಿಸಿಯಂಥ ಮಹತ್ವಪೂರ್ಣ ಅಂಗದ ಪರಿಣಾಮಕಾರಿ ಮತ್ತು ಅರ್ಥಪೂರ್ಣವಾದ ಸಭೆಯನ್ನು ಕೈಗೊಳ್ಳುವುದಕ್ಕಾಗಿ ಅಂಥ ಸಭೆಗೆ ನೀಡಲಾಗಿರುವ ಕಾರ್ಯಸೂಚಿಯ ಕುರಿತು ತಮ್ಮ ಸಿದ್ಧತೆ ಮಾಡಿಕೊಳ್ಳುವುದಕ್ಕಾಗಿ ಸದಸ್ಯರಿಗೆ ಸೂಕ್ತವಾದ ಕಾಲಾವಕಾಶವನ್ನು ನೀಡಬೇಕಾದುದು ಅಗತ್ಯವೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಇದು ಬಿಎಂಪಿಸಿಯ ಆಡಳಿತವನ್ನು ನಡೆಸುವಲ್ಲಿ ಬಿಡಿಎ ರೂಪಿಸಿಕೊಳ್ಳುತ್ತಿರುವ ಹೊಸ ಕಾರ್ಯವಿಧಾನವೋ ಮತ್ತು ಬಿಎಂಪಿಸಿಯ ಸಭೆಗೆ ಹಾಜರಾಗಲು ಅದರ ಬೇರೆ ಸದಸ್ಯರಿಗೆ ಸೂಕ್ತ ಕಾಲಾವಕಾಶ ನೀಡಲಾಗಿದೆಯೋ ನನಗಂತೂ ಗೊತ್ತಿಲ್ಲ. ಆದರೆ ಭಾರತೀಯ ಸಂವಿಧಾನದ ಅಡಿಯಲ್ಲಿ ಮಹತ್ವದ ಮಾನ್ಯತೆಯನ್ನು

ಪಡೆದಿರುವ ಬಿಎಂಪಿಸಿಯ ಆಡಳಿತವು ನಡೆಯುತ್ತಿರುವ ರೀತಿಯ ಬಗ್ಗೆ ಆಕ್ಷೇಪವನ್ನು ಎತ್ತುವುದಕ್ಕಾಗಿ ಈ ಅವಕಾಶವನ್ನು ಬಳಸಿಕೊಳ್ಳಲು ನಾನು ಬಯಸುತ್ತೇನೆ.

ವೈಯಕ್ತಿಕವಾಗಿ, ನಾನು ಬಿಎಂಪಿಸಿಯ ಪ್ರತಿ ಸಭೆಯಲ್ಲೂ ಪಾಲ್ಗೊಳ್ಳಲು ಮತ್ತು ಜೂನ್ 1, 2016ರಂದು ನಡೆಸಲಾದ ಮೊದಲ ಸಭೆಗೆ ನಾನು ಕೊಡುಗೆ ಸಲ್ಲಿಸಿದ ರೀತಿಯಲ್ಲೇ ಎಲ್ಲ ಸಭೆಗಳಿಗೂ ಹಾಜರಾಗಲು ಬಯಸುತ್ತೇನೆ. ಆದರೆ ಸಂಸತ್ತಿನ ಅಧಿವೇಶನಗಳು ನಡೆಯುತ್ತಿರುವುದರಿಂದ ಮತ್ತು ಆಕ್ಷೇಪಾರ್ಹವಾದ ರೀತಿಯಲ್ಲಿ ಕಾಲಾವಕಾಶವನ್ನು ನನಗೆ ನೀಡಲಾಗಿರುವುದರಿಂದ ಇಂದು (ಡಿಸೆಂಬರ್ 16, 2016) ನಡೆಸಲುದ್ದೇಶಿಸಲಾಗಿರುವ ಸಭೆಯಲ್ಲಿ ಪಾಲ್ಗೊಳ್ಳಲು ನನ್ನಿಂದ ಸಾಧ್ಯವಾಗುತ್ತಿಲ್ಲ.

ಇಂಥ ಕಡಿಮೆ ಕಾಲಾವಕಾಶ ನೀಡಿ ಬಿಎಂಪಿಸಿಯ 2ನೇ ಸಭೆಯನ್ನು ಕೈಗೊಳ್ಳಲು ತೀರ್ಮಾನಿಸಿದ್ದಕ್ಕೆ ನನ್ನ ಆಕ್ಷೇಪವನ್ನು ಈ ಮೂಲಕ ನಾನು ನಿಮಗೆ ಸಲ್ಲಿಸುತ್ತಿದ್ದೇನೆ. ಜೊತೆಯಲ್ಲಿ ಇಂದು ಈ ರೀತಿಯಲ್ಲಿ ಸಭೆಯು ನಡೆದಿದ್ದಾದಲ್ಲಿ ಅದರ ಔಚಿತ್ಯ ಮತ್ತು ನ್ಯಾಯಬದ್ಧತೆಯ ಬಗ್ಗೆ ಕಾನೂನಿನನ್ವಯ ಪ್ರಶ್ನೆಮಾಡುವ ನನ್ನ ಸ್ವಾತಂತ್ರ್ಯವನ್ನು ಕಾಯ್ದಿರಿಸಲು ಇಚ್ಛಿಸುತ್ತೇನೆ. ಪರ್ಯಾಯವಾಗಿ, ಈ ಸಭೆಯನ್ನು ಮುಂದಿನ ದಿನಾಂಕಕ್ಕೆ ಮುಂದೂಡಲು ಪರಿಗಣಿಸುವಂತೆ ನಾನು ಬಲವಾಗಿ ಒತ್ತಾಯಿಸುವುದಷ್ಟೇ ಅಲ್ಲ, ಮುಂದಿನ ದಿನಾಂಕವನ್ನು ನಿಗದಿಪಡಿಸುವಂತೆ ಮತ್ತು ಪಾಲ್ಗೊಳ್ಳುವಿಕೆ ಗರಿಷ್ಠಪ್ರಮಾಣದಲ್ಲಿರುವಂತೆ ನೋಡಿಕೊಳ್ಳುವುದಕ್ಕಾಗಿ ಅಂಥ ಸಭೆಯನ್ನು ನಡೆಸುವುದಕ್ಕೆ ಕನಿಷ್ಠ ಏಳು (7) ದಿನಗಳ ಕಾಲಾವಕಾಶ ಒದಗಿಸುವಂತೆ ಬಿಡಿಎಗೆ ಸೂಚಿಸುತ್ತೇನೆ.

ವಿಶ್ವಾಸಪೂರ್ವಕವಾಗಿ,
ರಾಜೀವ್ ಚಂದ್ರಶೇಖರ್

ಶ್ರೀ ಸಿದ್ಧರಾಮಯ್ಯ,
ಮಾನ್ಯ ಮುಖ್ಯ ಮಂತ್ರಿ,
ಕರ್ನಾಟಕ ಸರ್ಕಾರ,
ವಿಧಾನ ಸೌಧ,
ಬೆಂಗಳೂರು.

ಪ್ರತಿಗಳು:

ಮಾನ್ಯ ರಾಜ್ಯಪಾಲರು,
ಕರ್ನಾಟಕ, ರಾಜ ಭವನ ರಸ್ತೆ,
ಬೆಂಗಳೂರು

ಆಯುಕ್ತರು,
ಬಿಡಿಎ,
ಕುಮಾರ ಪಾರ್ಕ್ ಪಶ್ಚಿಮ,
ಬೆಂಗಳೂರು

# 45

# ನಮ್ಮ ಬೆಂಗಳೂರು ನಾಗರೀಕರಿಗೆ ಪತ್ರ

24ನೇ ಡಿಸೆಂಬರ್ 2016

ಪ್ರಿಯ ಬೆಂಗಳೂರಿಗರೇ,

ನಮ್ಮ ನಗರಿಯಾಗಿರುವ ಬೆಂಗಳೂರನ್ನು ರಕ್ಷಣೆ ಮಾಡುವುದಕ್ಕಾಗಿ ನಮ್ಮ ಹೊಸ ಸಂಘಟಿತ ಮತ್ತು ಒಗ್ಗಟ್ಟಿನ ಪ್ರಯತ್ನವನ್ನು ಪ್ರಾರಂಭಿಸುವುದಕ್ಕಾಗಿ ಒಬ್ಬ ನಾಗರೀಕನಾಗಿ ಮತ್ತು ನಗರದ ಸಕ್ರಿಯ ಬೆಂಬಲಿಗನಾಗಿ ಮನವಿಯೊಂದರ ರೂಪದಲ್ಲಿ ಈ ಪತ್ರವನ್ನು ನಿಮಗೆ ನಾನು ಬರೆಯುತ್ತಿದ್ದೇನೆ.

ನೀವು ಮತ್ತು ನಾನು ಈ ಒಂದು ಘಟನೆಗೆ ಸಾಕ್ಷಿಗಳಾಗಿರುವುದಷ್ಟೇ ಅಲ್ಲ, ಅದರ ಬಲಿಪಶುಗಳೂ ಆಗಿದ್ದೇವೆ. ಅದೇಂದರೆ ನಗರದ ಕ್ಷಿಪ್ರ ಆರ್ಥಿಕ ಪ್ರಗತಿಯ ಹೊರತಾಗಿಯೂ ಈ ನಗರವು ಹೆಚ್ಚೆಚ್ಚು ಬದುಕಲಸಾಧ್ಯವಾದ ಪರಿಸರವಾಗಿ ಪರಿಣಮಿಸುತ್ತಿದೆ. ನಾಗರೀಕರ ಸ್ಥಿತಿ ಕಷ್ಟದಲ್ಲಿದೆ. ಅದೇ ವೇಳೆಗೆ ನಮ್ಮ ಸುಂದರವಾದ ನಗರವನ್ನು ಯಾವ ಮಟ್ಟಕ್ಕೆ ಹಾಳುಗೆಡವಲಾಗುತ್ತಿದೆ ಎಂದರೆ ಅದರ

ಪರಿಸರ ಮತ್ತು ಗತವೈಭವವನ್ನು ಪೂರ್ವಸ್ಥಿತಿಗೆ ತರಲು ಸಾಧ್ಯವೇ ಇಲ್ಲವೇನೋ ಎಂಬಂಥ ಸ್ಥಿತಿಯಿದೆ. ಎಲ್ಲದಕ್ಕೂ ನಾವು ಸಾಕ್ಷಿಯಾಗಿದ್ದೇವೆ – ಸಾಯುತ್ತಿರುವ/ಒತ್ತುವರಿಗೊಂಡಿರುವ ಕೆರೆಗಳು, ಕುಸಿಯುತ್ತಿರುವ ಅಂತರ್ಜಲಮಟ್ಟ, ಕಸದ ನಿರ್ವಹಣೆಯಲ್ಲಿ ವೈಫಲ್ಯ, ಸಾರ್ವಜನಿಕ ಆರೋಗ್ಯದ ತೊಂದರೆಗಳು, ಶಾಲೆಗಳಿಗೆ ಕಳಪೆ ಅನುದಾನ,

ರಾಜಾರೋಷವಾಗಿ ತೆರಿಗೆ ತಪ್ಪಿಸುವುದು, ಆದಾಯದ ಸೋರಿಕೆಗಳು, ಅಕ್ರಮ ಕಟ್ಟಡಗಳು ಮತ್ತು ಅವುಗಳನ್ನು ಸಕ್ರಮಗೊಳಿಸುವುದು ಇತ್ಯಾದಿ.

ಅಧಿಕಾರಿಗಳು ಮತ್ತು ರಾಜಕಾರಣಿಗಳು ಇವುಗಳಿಂದ ಲಾಭ ಮಾಡಿ ಶ್ರೀಮಂತರಾಗುತ್ತಿದ್ದರೆ ನಗರವನ್ನು ಇವು ಇನ್ನಿಲ್ಲದಂತೆ ಬಾಧಿಸುತ್ತಿವೆ. ಹೊಸ ಯೋಜನೆಗಳನ್ನು ಘೋಷಿಸಲಾಗುತ್ತಿದ್ದರೂ ಹಳೆಯ ಯೋಜನೆಗಳನ್ನು ಕೇಳುವವರೇ ಇಲ್ಲದೇ ಜನರು ಬವಣೆಪಡುವಂತಾಗಿದೆ.

ನಗರ ಮತ್ತು ನೆರೆಹೊರೆಯ ಪ್ರದೇಶಗಳ ಅಭಿವೃದ್ಧಿ ಮಾಡುವಾಗ ಜನರಿಗೆ ಯಾವುದೇ ಪ್ರಾಮುಖ್ಯತೆಯನ್ನು ನೀಡದೇ ಇರುವುದೇ ಇದಕ್ಕೆ ಮುಖ್ಯ ಕಾರಣ ಎಂದೆನಿಸುತ್ತಿದೆ ಅಲ್ಲವೇ?

ಇದಕ್ಕೆ ಏಕೈಕ ಅತಿದೊಡ್ಡ ಕಾರಣವೆಂದರೆ ನಗರದ ವಿಷಯದಲ್ಲಿ ನಾಗರೀಕರನ್ನು ಪಾಲುದಾರರೆಂದು ಪರಿಗಣಿಸಲಾಗುತ್ತಿಲ್ಲ. ಈಗ ಪ್ರಮುಖ ಪಾಲುದಾರರೆಂದರೆ ಈ ವ್ಯವಹಾರಗಳಿಗೆ ಸಂಬಂಧಪಟ್ಟ ಉದ್ಯಮಿಗಳು, ರಾಜಕಾರಣಿಗಳು ಮತ್ತು/ಅಥವಾ ಅಧಿಕಾರಿಗಳು. ಇದರ ಅರ್ಥವೇನೆಂದರೆ, ನಗರದ ಜನರಿಗೆ, ಪ್ರಯಾಣಿಕರಿಗೆ ಮತ್ತು ನೆರೆಹೊರೆಯ ಪ್ರದೇಶಗಳಲ್ಲಿನವರಿಗೆ ಮಹತ್ವ ನೀಡುವುದಕ್ಕೆ ಬದಲಾಗಿ ನಮ್ಮ ನಗರವನ್ನು ಹೆಚ್ಚಾಗಿ ಆಯಾ ಗುಂಪಿಗೆ ಸಂಬಂಧಪಟ್ಟ ಅಗತ್ಯಗಳನ್ನು ಪೂರೈಸುವ ರಿಯಲ್ ಎಸ್ಟೇಟ್ ಅಥವಾ ಗುತ್ತಿಗೆದಾರರ ಕಂಪನಿಯಂತೆ ನಡೆಸಲಾಗುತ್ತಿದೆ. ಇದರಿಂದಾಗಿ ನಗರದ ಸಂಘಟನೆಗಳು ಮತ್ತು ಆಡಳಿತದ ಪ್ರತಿ ಆಯಾಮದಲ್ಲೂ ಪಟ್ಟಭದ್ರ ಹಿತಾಸಕ್ತಿಗಳು ಮತ್ತು ರಾಜಾರೋಷವಾದ ಭ್ರಷ್ಟಾಚಾರವು ಘಟಸರ್ಪದಂತೆ ವ್ಯಾಪಿಸಿದ್ದು ಹೆಚ್ಚಿನ ರಿಯಲ್ ಎಷ್ಟೇಟ್ ಅಥವಾ ಗುತ್ತಿಗೆ ವ್ಯವಹಾರಗಳಲ್ಲಿ ಹೆಚ್ಚಿನ ರಾಜಕಾರಣಿಗಳು ಮತ್ತು ಅಧಿಕಾರಿಗಳು ನೇರ ಅಥವಾ ಪರೋಕ್ಷ ಭಾಗಿಗಳಾಗಿದ್ದಾರೆ. ನಾವು ನೋಡುತ್ತಿರುವ ಭ್ರಷ್ಟಾಚಾರವೆಂಬುದು ಕೇವಲ ಸಣ್ಣಪುಟ್ಟ ಲಂಚಗಳ ವ್ಯವಹಾರವಾಗಿ ಉಳಿಯುವ ಬದಲಿಗೆ ವಿಸ್ತೃತವಾದ ಸಾರ್ವಜನಿಕ ಹಣದ ಮತ್ತು ಸಂಪತ್ತಿನ ದುರ್ಬಳಕೆ ಹಾಗೂ ಹಗಲುದರೋಡೆಯಲ್ಲಿ ಪರಿಣಮಿಸಿದೆ. ನಾಗರೀಕರ

ಹಣವನ್ನು ಪಟ್ಟಭದ್ರ ಹಿತಾಸಕ್ತಿಗಳು ಕೊಳ್ಳೆ ಹೊಡೆಯುತ್ತಿವೆ. ಕಳೆದ ಹಲವಾರು ವರ್ಷಗಳಿಂದಲೂ ನಮ್ಮ ಹೆಚ್ಚಿನ ನಾಗರೀಕರು ಮೌನ ಸಮ್ಮತಿ ವ್ಯಕ್ತಪಡಿಸುತ್ತ ಬಂದಿರುವುದರಿಂದಾಗಿ ನಗರ ಮತ್ತು ಅದರ ಸಂಪನ್ಮೂಲಗಳನ್ನು ಅವರು ವಶಕ್ಕೆ ತೆಗೆದುಕೊಳ್ಳಲು ಸಾಧ್ಯವಾಗಿದೆ.

ನಾವು ನಡೆದುಹೋದುದನ್ನು ಬದಲಿಸಲಾರೆವು. ಆದರೆ ಭವಿಷ್ಯದ ಬಗ್ಗೆ ನಾವು ಏನನ್ನಾದರೂ ಮಾಡುವುದು ಖಂಡಿತವಾಗಿಯೂ ಸಾಧ್ಯವಿದೆ! ಈ ಮೂಲಕ ನಾವು ನಮ್ಮ ಮಕ್ಕಳಿಗೆ ಮತ್ತು ಬೆಂಗಳೂರಿನ ಭವಿಷ್ಯದ ತಲೆಮಾರುಗಳಿಗೆ ಉತ್ತಮ ನಗರವನ್ನು ಉಳಿಸಬಹುದು. ನಾಗರೀಕರಾದ ನಾವೆಲ್ಲರೂ ನಮ್ಮ ನಗರವು ಸಂದಿಗ್ಧ ಎದುರಿಸುತ್ತಿದೆ ಎಂದು ಹೇಳುವುದಕ್ಕಾಗಿ ನಾನು ಈ ಪತ್ರ ಬರೆಯುತ್ತಿದ್ದೇನೆ.

ನಾವೆಲ್ಲರೂ ಕಳೆದ ಕೆಲವು ತಿಂಗಳುಗಳಲ್ಲಿ ದೊಡ್ಡ ಬದಲಾವಣೆಯನ್ನು ಕಂಡಿದ್ದೇವೆ. ನಾವು ಇತ್ತೀಚೆಗೆ ಬೆಂಗಳೂರಿನ ರಾಜಾರೋಷ ವಿನಾಶದ ವಿರುದ್ಧ ನಾಗರೀಕರಿಗಾಗಿ ಆಳವಾದ ಅರಿವು ಮೂಡಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅಪಖ್ಯಾತಿಯ ಸ್ಟೀಲ್ ಫ್ಲೈ ಓವರ್ ಯೋಜನೆಯನ್ನು ವಿರೋಧಿಸಿದ್ದು ನನಗೆ ಹರ್ಷ ತಂದಿದೆ. ನಾವೆಲ್ಲರೂ ಸ್ಪಷ್ಟವಾಗಿ ವ್ಯಕ್ತಪಡಿಸಿದ ಆಕ್ರೋಶ ಮತ್ತು ವಿರೋಧವೇ ಈ ಅಧಿಕಪ್ರಸಂಗಿತನದ ಯೋಜನೆಗೆ ಮಧ್ಯಂತರದಲ್ಲಿ ಪೂರ್ಣವಿರಾಮ ಹಾಕಿತು ಎಂದರೆ ತಪ್ಪೇನಿಲ್ಲ.

ಉಕ್ಕಿನ ಮೇಲ್ಸೇತುವೆ ಕುರಿತು ಹಿಂದೆಂದೂ ಪ್ರದರ್ಶಿಸದ ಅರಿವು ಹಾಗೂ ನಾಗರೀಕರ ಒಗ್ಗಟ್ಟು ನಗರದ ಭವಿಷ್ಯದ ಕುರಿತು ಕಾರ್ಯಕ್ರಮಗಳನ್ನು ರೂಪಿಸುವಾಗ ನಾಗರೀಕರ ಹಕ್ಕನ್ನು ಗಮನದಲ್ಲಿಟ್ಟುಕೊಳ್ಳಬೇಕೆಂಬುದನ್ನು ಎತ್ತಿಹಿಡಿದಿತು. ನಮ್ಮ ನಗರದ ರಕ್ಷಣೆಗಾಗಿ ಹೋರಾಡುತ್ತಿರುವ ಹಲವಾರು ಸರ್ಕಾರೇತರ ಸಂಘಟನೆಗಳು, ನಾಗರೀಕರ ಹಿತಾಸಕ್ತಿ ಸಂಸ್ಥೆಗಳು ಮತ್ತು ನಾಗರೀಕರು ತಮ್ಮ ಚಿಂತನೆಗಳು ಮತ್ತು ಪ್ರಯತ್ನಗಳನ್ನು ಒಗ್ಗೂಡಿಸಿದ ಫಲವಾಗಿಯೇ ಬೆಂಗಳೂರಿಗೆ ಒಂದು ಹೊಸ ಬೆಳ್ಳಿಯ ಕಿರಣವು ಮೂಡಿರುವುದನ್ನು ಈ ಆಂದೋಲನವು ತೋರಿಸಿಕೊಟ್ಟಿತು.

ಒಬ್ಬ ಚುನಾಯಿತ ಪ್ರತಿನಿಧಿಯಾಗಿ ನಗರದ ಭವಿಷ್ಯವನ್ನು ರೂಪಿಸುವ ವಿಷಯದಲ್ಲಿ ನಾಗರೀಕರ ಬಲವಾದ ತೊಡಗಿಸಿಕೊಳ್ಳುವಿಕೆಗಾಗಿ ನಾನು ಹೋರಾಡಿದ್ದೇನೆ ಮತ್ತು ಮೂಡಿಬರುತ್ತಿರುವ ನಮ್ಮ ನಗರದ ಭವಿಷ್ಯದ ದಿಕ್ಕನ್ನು ಬದಲಿಸಬಹುದಾದ ಹಲವಾರು ಧ್ವನಿಗಳಲ್ಲಿ ಒಗ್ಗಟ್ಟು ಇಲ್ಲದ ಕುರಿತು ನನ್ನ ನಿರಾಸೆ ವ್ಯಕ್ತಪಡಿಸಿದ್ದೇನೆ. ಇಂತಿರಲು, ಬೆಂಗಳೂರಿನ ಗತವೈಭವವನ್ನು ಮರಳಿ ತರುವ ಹೊಸ ಅಲೆಗಾಗಿ ನಮ್ಮ

ಸಾಮಾನ್ಯ ಒತ್ತಾಸೆಯಾಗಿ ಈ ಹೊಸ ಕಾರ್ಯತಂತ್ರವನ್ನು ನಾನು ಸ್ವಾಗತಿಸುತ್ತೇನೆ.

ಇಲ್ಲಿ ನಾನು ನನ್ನ ಮನವಿಯ ಮುಖ್ಯ ಅಂಶಕ್ಕೆ ಬರುತ್ತೇನೆ – ನಮ್ಮ ಬೆಂಗಳೂರು ಸ್ವಯಂಪ್ರೇರಣೆಯ ವೈವಿಧ್ಯಮಯ ಸ್ಫೂರ್ತಿಯನ್ನು ಹೊಂದಿದ್ದು ಇಲ್ಲಿ ನಿಮ್ಮಂಥ ಹಲವಾರು ಸರ್ಕಾರೇತರ ಸಂಘಟನೆಗಳು, ನಾಗರೀಕ ಮತ್ತು ವಸತಿ ಗುಂಪುಗಳಿದ್ದು ಅವರು ಸ್ವಯಂಪ್ರೇರಣೆಯ ಸಕ್ರಿಯ ಸ್ಫೂರ್ತಿಯನ್ನು ಎಲ್ಲರಿಗೂ ತಲುಪಿಸಬಲ್ಲರು ಮತ್ತು ಬೆಂಗಳೂರಿನ ಅಭಿವೃದ್ಧಿಗೆ ಕಠಿಣ ಪರಿಶ್ರಮ ವಹಿಸಬಲ್ಲರು. ಆದರೆ ನಾವು ಈ ಎಲ್ಲ ಶಕ್ತಿಯ ಲಾಭ ಪಡೆಯುವುದಕ್ಕಾಗಿ ಮಾರ್ಗವನ್ನು ಹಾಗೂ ಒಲವನ್ನು ಕಂಡುಕೊಳ್ಳುವ ಮೂಲಕ ನಮ್ಮ ನಗರದ ಭವಿಷ್ಯವನ್ನು ರೂಪಿಸುವಂಥ ನೈಜ ಬದಲಾವಣೆಯನ್ನು ತರಬೇಕಿದೆ.

ಬಹುಕಾಲದಿಂದಲೂ ಸರ್ಕಾರಗಳು ಮತ್ತು ಆಡಳಿತಗಾರರು ತಮ್ಮ ವ್ಯವಹಾರದ ಕಾರ್ಯಾಚರಣೆಗಳಿಗಾಗಿ 'ಒಡೆದು ಆಳುವ' ನೀತಿಯನ್ನು ಬಳಸುವ ಮೂಲಕ ಪ್ರಮುಖ ವಿಷಯಗಳಲ್ಲಿ ನಾಗರೀಕ ಸಮಾಜ ಮತ್ತು ನಾಗರೀಕರು ಜೊತೆಗೂಡದಂತೆ ತಡೆಗಟ್ಟಿದ್ದಾರೆ. ತಮ್ಮ ಹಿತಾಸಕ್ತಿಗಳಿಗೆ ಸಂಬಂಧಪಟ್ಟಂತೆ ತಮಗಿರುವ ಬಾಧ್ಯತೆಗಳಿಂದಾಗಿ ಗುಂಪುಗಳ ನಾಗರೀಕರು ಮತ್ತು ಸಂಘಟನೆಗಳು ಪರಸ್ಪರ ಕಚ್ಚಾಟವಾಡುವುದು ಅವರ ಮಟ್ಟಿಗೆ ಒಳ್ಳೆಯದು.

ನಾಗರೀಕರ ಪ್ರತಿಭಟನೆಗಳನ್ನು ಸರ್ಕಾರಗಳು ಸಾಮಾನ್ಯವಾಗಿ ನಿರ್ಲಕ್ಷಿಸುವುದು ಇದೇ ಕಾರಣಕ್ಕೆ. ಆದರೆ ಇದರಲ್ಲಿ ಬದಲಾವಣೆ ಕಂಡುಬಂತು ಮತ್ತು ಈ ಬದಲಾವಣೆಯನ್ನು ನಾವು ಒಗ್ಗಟ್ಟಿನ ಉಕ್ಕಿನ ಮೇಲ್ಸೇತುವೆ ಬೇಡ (#SteelFlyoverBeda) ಆಂದೋಲನದಲ್ಲಿ ಕಂಡೆವು.

ನಮಗೆ ನಮ್ಮದೇ ಆದ ದೃಷ್ಟಿಕೋನಗಳು, ರಾಜಕೀಯ ಅಭಿಪ್ರಾಯಗಳು, ಆದರ್ಶಗಳಿವೆ ಮತ್ತು ನಮ್ಮ ನಗರಕ್ಕೆ ಯಾವ ರೀತಿಯ ಪರಿಹಾರ ಬೇಕು ಎಂಬ ಬಗ್ಗೆ ನಮ್ಮಲ್ಲಿ ಭಿನ್ನಾಭಿಪ್ರಾಯಗಳಿವೆ. ಅದೇನೇ ಇದ್ದರೂ ನಾವೆಲ್ಲರೂ ನಗರದ ಭವಿಷ್ಯಕ್ಕೆ ಹಾಗೂ ಸರ್ಕಾರ, ನಗರ ಮತ್ತು ಜನರಿಗೆ ಸಂಬಂಧಿಸಿದ ಕೆಲವು ಮೂಲಭೂತ ವಿಷಯಗಳಲ್ಲಿ ಒಂದಾಗುವುದು ಮಹತ್ವದ್ದು. ನಾವು ಒಗ್ಗಟ್ಟಾಗಿರಲು ಒಪ್ಪಿದಲ್ಲಿ ಪ್ರಯತ್ನಿಸಿದಲ್ಲಿ ನಮ್ಮ ನಗರ ಹಾಗೂ ಅದರ ಪ್ರಗತಿಗಾಗಿ ನಗರ ಮತ್ತು ಜನರಿಗೆ ಪ್ರಸಕ್ತ ಮತ್ತು ಭವಿಷ್ಯದ ಸರ್ಕಾರಗಳು ಸೇವೆ ಸಲ್ಲಿಸಬಹುದಾದ ರೀತಿಯಲ್ಲಿ ಬದಲಾವಣೆಗಳನ್ನು ಮಾಡಬಹುದು. ಅವರು ನಗರವನ್ನು ದುರ್ಬಳಕೆ ಮತ್ತು ಲೂಟಿ ಮಾಡುವುದರಿಂದ ತಪ್ಪಿಸಬಹುದು. ನಮ್ಮ ಬೆಂಗಳೂರಿನಲ್ಲಿ ಪರಿವರ್ತನೆಯನ್ನು

ತರುವಲ್ಲಿ ನಾಗರೀಕರ ಶಾಶ್ವತ ತೊಡಗಿಸಿಕೊಳ್ಳುವಿಕೆಗಾಗಿ ರೂಪಿಸಬೇಕಾದ ಒಗ್ಗಟ್ಟಿನ ವಿಧಾನವನ್ನು ಅಭಿವೃದ್ಧಿಗೊಳಿಸುವಲ್ಲಿ ಸಹಾಯ ಮಾಡಬಹುದಾದ ಸಂಭಾಷಣೆಗೆ ಪ್ರಾರಂಭವೆಂದು ಪರಿಗಣಿಸಬಹುದಾದ ಕೆಲವು ಆಲೋಚನೆಗಳನ್ನು ನಾನು ಹಂಚಿಕೊಳ್ಳಲು ಬಯಸುತ್ತೇನೆ. ಒಗ್ಗಟ್ಟಿನ ಈ ಕರೆಯ ಕುರಿತಾಗಿ ನಿಮ್ಮ ಆಲೋಚನೆಗಳು, ಸಲಹೆಗಳು ಮತ್ತು ಬೆಂಬಲದ ಬಗ್ಗೆ ನಿಮ್ಮಿಂದ ಕೇಳಲು ನಾನು ಬಯಸುತ್ತೇನೆ.

ನಾನು ನಿಮಗೆ, ನಿಮ್ಮ ಕುಟುಂಬಕ್ಕೆ ಮತ್ತು ಪ್ರೀತಿಪಾತ್ರರಿಗೆ ರಜಾದಿನದ ಶುಭಾಶಯಗಳನ್ನು ಮತ್ತು ಯುಗಾದಿಯ ಶುಭ ಹಾರೈಕೆಗಳನ್ನು ತಿಳಿಸಲಿಚ್ಛಿಸುತ್ತೇನೆ.

ವಿಶ್ವಾಸಪೂರ್ವಕವಾಗಿ,
ರಾಜೀವ್ ಚಂದ್ರಶೇಖರ್

ನಾಗರೀಕರು ನಮ್ಮ ನಗರದ ಭವಿಷ್ಯವನ್ನು ರೂಪಿಸಬೇಕು

1. ನಗರವನ್ನು ಹಾಗೂ ಅದರ ಭವಿಷ್ಯವನ್ನು ರೂಪಿಸುವಲ್ಲಿ ನಾಗರೀಕರನ್ನು ತೊಡಗಿಸಬೇಕು

ನೆರೆಹೊರೆಯ ಪ್ರದೇಶಗಳು, ವಾರ್ಡುಗಳು ಮತ್ತು ನಗರದ ಮೇಲೆ ಪರಿಣಾಮಬೀರುವ ಯೋಜನೆಗಳು/ತೀರ್ಮಾನಗಳನ್ನು ಕೈಗೊಳ್ಳುವಾಗ ಸರ್ಕಾರ/ಸಂಸ್ಥೆಗಳು ನಾಗರೀಕರನ್ನು ಸಂಪರ್ಕಿಸಬೇಕು

ಸಾರ್ವಜನಿಕ ಅಭಿಪ್ರಾಯ ಸಂಗ್ರಹಣೆ ಕಡ್ಡಾಯ. ನಗರಕ್ಕಾಗಿ ಪರಿಹಾರಗಳನ್ನು ರೂಪಿಸುವಾಗ ಸರ್ಕಾರ–ನಾಗರೀಕರ ಸಂಭಾಷಣೆ ರಚಿಸಲು ಅವಕಾಶ ನೀಡುವುದು ಪಾರದರ್ಶಕತೆ ಮೂಡಿಸುವಲ್ಲಿ ಅತ್ಯುತ್ತಮ ವಿಧಾನವಾಗಿದೆ.

ಎ. ಅಭಿಪ್ರಾಯ ಸಂಗ್ರಹಣೆಗೂ ಮುನ್ನ ಯೋಜನೆ/ಪ್ಲಾನ್/ನೀತಿಗೆ ಸಂಬಂಧಪಟ್ಟ ಎಲ್ಲ ಮಾಹಿತಿಯೂ ಸಾರ್ವಜನಿಕ ಡೊಮೈನಿನಲ್ಲಿ ಲಭ್ಯವಿರುವಂತೆ ನೋಡಿಕೊಳ್ಳುವುದನ್ನು ಸರ್ಕಾರವು ಖಚಿತಪಡಿಸಿಕೊಳ್ಳಬೇಕು

ಬಿ. ಯೋಜನೆ/ಪ್ಲಾನಿನ ಪ್ರಮಾಣಮ ಸ್ವಭಾವ ಮತ್ತು ಪರಿಣಾಮದ ಆಧಾರದ ಮೇಲೆ ಕನಿಷ್ಠ 4 ವಾರಗಳು ಅಥವಾ ಅದಕ್ಕೂ ಮುನ್ನವೇ ಸಾರ್ವಜನಿಕ ಸಂಪರ್ಕವನ್ನು

ನಡೆಸಬೇಕು

ಸಿ. ಸಾರ್ವಜನಿಕ ಸಂವಹನ ಪ್ರತಿಕ್ರಿಯೆಗಳು ಮತ್ತು ಸರ್ಕಾರದಿಂದ ಅದರ ಬಹಿರಂಗಪಡಿಸುವಿಕೆ ಎಂಬುದು ಕಡ್ಡಾಯವಾದುದು

2. ಸಮಗ್ರ ನಗರ ಅಭಿವೃದ್ಧಿ ಯೋಜನೆ ಎಂಬುದು ಕಡ್ಡಾಯ – ರುಷುವತ್ತು ಮತ್ತು ಲಂಚಕ್ಕೆ ದಾರಿಮಾಡಿಕೊಡುವ ಮಧ್ಯಂತರ ತೀರ್ಮಾನಗಳನ್ನು ಮತ್ತು ಸರ್ಕಾರದ ಏಕಪಕ್ಷೀಯ ತೀರ್ಮಾನಗಳನ್ನು ನಿಲ್ಲಿಸುವುದಕ್ಕೆ ಯೋಜನೆ

ಸುಸ್ಥಿರತೆಯೂ ಸೇರಿದಂತೆ ಈ ಶ್ರೇಣಿಗಳಲ್ಲಿ ಬರುವ ಎಲ್ಲ ಆಯಾಮಗಳನ್ನೂ ಒಳಗೊಂಡ ಬೆಂಗಳೂರು ಪ್ರದೇಶಕ್ಕಾಗಿನ ಶಾಸನಬದ್ಧ ಬಹುವಾರ್ಷಿಕ ಅಭಿವೃದ್ಧಿ ಯೋಜನೆ,

ಎ. ವಲಯವಾರು ವಿಂಗಡಣೆ (ವಸತಿ ಪ್ರದೇಶಗಳ ವಾಣಿಜ್ಯ ಬಳಕೆ) ಮತ್ತು ನೆಲದ ಬಳಕೆ

ಬಿ. ಸಾರಿಗೆ ಮತ್ತು ಸಾಗಾಟ ಸಾಧ್ಯತೆ

ಸಿ. ಸಾರ್ವಜನಿಕ ಆರೋಗ್ಯ, ಶಿಕ್ಷಣ, ಕೆರೆಗಳು ಮತ್ತು ಜಲಮೂಲಗಳು

ಡಿ. ನಗರದಲ್ಲಿನ ಬಡಜನರು

ಇ. ಪರಿಸರ ಮತ್ತು ಪರಂಪರೆ

3. ಸರ್ಕಾರಗಳು/ಸರ್ಕಾರದ ಸಂಸ್ಥೆಗಳು ಜವಾಬ್ದಾರವಾಗಿವೆ – ಅವುಗಳನ್ನು ಉತ್ತರದಾಯಿಯಾಗಿ ಮಾಡುವುದು; ನಾಗರೀಕರಿಗೆ ಹಕ್ಕುಗಳಿವೆ – ಅವರು ಈ ವಿಷಯದಲ್ಲಿ ವಿಶ್ಲೇಷಣಾತ್ಮಕವಾಗಿದ್ದು ಹೋರಾಟ ನಡೆಸಬೇಕು

ನಾಗರೀಕರು ಅರಿವು ಹೊಂದಿದ್ದು ಜಾಗೃತಗೊಳ್ಳಬೇಕು. ಸರ್ಕಾರವು ನಾಗರೀಕರು ಮತ್ತು ನಗರಕ್ಕೆ ಸೇವೆ ಸಲ್ಲಿಸಬೇಕು ಮತ್ತು ಎಲ್ಲ ಸಾರ್ವಜನಿಕ ಹಣ, ಸ್ವತ್ತುಗಳು ಮತ್ತು ಗುತ್ತಿಗೆಗಳಿಗೆ ಉತ್ತರದಾಯಿಯಾಗಬೇಕು

ಎ. ಆಡಳಿತ ಮತ್ತು ನಾಗರೀಕ ಸಾಕ್ಷರತೆಯನ್ನು ಹೆಚ್ಚಿಸುವುದು, ಎಂದರೆ ವಿವಿಧ ನಿಯಂತ್ರಣ ಪ್ರಾಧಿಕಾರಗಳ ಬಗ್ಗೆ; ಅವುಗಳ ಕಾರ್ಯನಿರ್ವಹಣೆಗಳು ಮತ್ತು ನಗರಕ್ಕೆ ಸಂಬಂಧಿಸಿ ಅವುಗಳ ಜವಾಬ್ದಾರಿಯ ಬಗ್ಗೆ ಅರಿವು.

ಬಿ. ಕಾನೂನುಗಳು ಮತ್ತು ನಾಗರೀಕರ ಹಕ್ಕುಗಳ ಬಗ್ಗೆ ಅರಿವು ಹೆಚ್ಚಿಸುವುದು.

ಸಿ. ಸರ್ಕಾರ/ನಿಯಂತ್ರಣ ಪ್ರಾಧಿಕಾರಗಳಲ್ಲಿ ಹಾಗೂ ಅರೆಸರ್ಕಾರಿ ಸಂಸ್ಥೆಗಳಲ್ಲಿ ಉತ್ತರದಾಯಿತ್ವ ಮತ್ತು ಪಾರದರ್ಶಕತೆಗಾಗಿ ಹೋರಾಟ; ನಿರ್ಲಕ್ಷ್ಯ ತೋರಿದ ಅಥವಾ ಭ್ರಷ್ಟ ಅಧಿಕಾರಿಯ ವಿರುದ್ಧ ವಿಚಾರಣೆಗಾಗಿ ಬೇಡಿಕೆ ಮಂಡಿಸುವುದು.

ಡಿ. ಸರ್ಕಾರದಲ್ಲಿ ಸಲಹೆಗಾರರಾಗಿ ಮುಂದುವರಿಯಲು ಬಯಸುವ ನಾಗರೀಕರು, ಸರ್ಕಾರೇತರ ಸಂಘಟನೆಗಳು, ನಿವಾಸಿಗಳ ಹಿತಾಸಕ್ತಿ ಸಂಘಟನೆಗಳು ಸ್ವಯಂಪ್ರೇರಣೆಯಿಂದ ಕಾರ್ಯನಿರ್ವಹಿಸುವ ತಮ್ಮ ಸ್ಫೂರ್ತಿ ಹಾಗೂ ಕೊಡುಗೆಯನ್ನು ಮುಂದುವರಿಸುವುದು; ಆದರೆ ನಗರ ಹಾಗೂ ಅದರ ಅಭಿವೃದ್ಧಿಗೆ ಸಂಬಂಧಪಟ್ಟು ಸಂಪೂರ್ಣ ಜವಾಬ್ದಾರಿ ಹಾಗೂ ಸಾಮರ್ಥ್ಯ ನಿರ್ಮಾಣದ ಸರ್ಕಾರದ ಸಮಗ್ರ ಜವಾಬ್ದಾರಿಯನ್ನು ಇದು ಕಡಿಮೆ ಮಾಡುವಂತಿಲ್ಲ.

# 46

# ಉಕ್ಕಿನ ಮೇಲ್ಸೇತುವೆ ವಿವಾದಕ್ಕೆ ಸಂಬಂಧಿಸಿ ಸಾರ್ವಜನಿಕ ಆಡಳಿತಾಧಿಕಾರಿಗಳ ವಿರುದ್ಧ ಸ್ವಯಂಪ್ರೇರಣೆಯ ಕ್ರಮ ಜರುಗಿಸಲು ಲೋಕಾಯುಕ್ತರಿಗೆ ಮನವಿ ಪತ್ರ

16ನೇ ಫೆಬ್ರವರಿ, 2017

ಮಾನ್ಯ ನ್ಯಾಯಮೂರ್ತಿ ಶ್ರೀ ವಿಶ್ವನಾಥ ಶೆಟ್ಟಿಯವರೇ

ವಿಷಯ: ಬಸವೇಶ್ವರ ವೃತ್ತದಿಂದ ಹೆಬ್ಬಾಳದ ವರೆಗಿನ ಪ್ರಸ್ತಾವಿತ ಉಕ್ಕಿನ ಮೇಲ್ಸೇತುವೆ ಸಂಬಂಧದಲ್ಲಿ ಭ್ರಷ್ಟಾಚಾರ ಎಸಗಿರುವುದಕ್ಕೆ ಸಂಬಂಧಿಸಿ ಕರ್ನಾಟಕ ಲೋಕಾಯುಕ್ತ ಮಸೂದೆ 1984ರ ಅನ್ವಯ ದೋಷಿಗಳಾಗಿರುವ ಮತ್ತು ಲೋಪವೆಸಗಿರುವ ಸಚಿವರು ಹಾಗೂ ಅಧಿಕಾರಿಗಳು ಸೇರಿದಂತೆ ಸರ್ಕಾರಿ ಆಡಳಿತಾಧಿಕಾರಿಗಳ ವಿರುದ್ಧ ಸ್ವಯಂಪ್ರೇರಣೆಯ ಕ್ರಮ ಜರುಗಿಸಲು ವಿನಂತಿ.

ಬಸವೇಶ್ವರ ವೃತ್ತದಿಂದ ಹೆಬ್ಬಾಳದ ವರೆಗೆ 6.7 ಕಿಮೀ ದೂರದವರೆಗೆ ಉಕ್ಕಿನ ಮೇಲ್ಸೇತುವೆ ನಿರ್ಮಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಪ್ರಸ್ತಾವಿಸಿದೆ. 2014ರಲ್ಲಿ ಯೋಜನೆಯನ್ನು ಪ್ರಸ್ತಾಪಿಸಿದಾಗ ಅದರ ವೆಚ್ಚವು 1,350 ಕೋಟಿ ರೂ.

ಗಳೆಂದು ಅಂದಾಜಿಸಲಾಗಿತ್ತು. ಬಿಡಿಎಯು ಅಂತಾರಾಷ್ಟ್ರೀಯ ಟೆಂಡರ್ ಪ್ರಕ್ರಿಯೆಯ ನಂತರ ಯೋಜನೆ ಅನುಷ್ಠಾನಕ್ಕಾಗಿ ಗುತ್ತಿಗೆದಾರರೊಬ್ಬರನ್ನು ನಿಶ್ಚಯಿಸಿರುವುದಾಗಿ ಹೇಳಿದೆ.

ಆದರೆ ಅಂತಾರಾಷ್ಟ್ರೀಯ ಟೆಂಡರ್ ಪ್ರಕ್ರಿಯೆಯ ಬಳಿಕ ಸಾರ್ವಜನಿಕ ಡೊಮೇನಿನಲ್ಲಿ ಗುತ್ತಿಗೆದಾರರನ್ನು ನಿರ್ಣಯಿಸಿರುವ ಕುರಿತು ಯಾವುದೇ ಮಾಹಿತಿಯೂ ಲಭ್ಯವಿಲ್ಲ. ಇನ್ನೂ ಹೆಚ್ಚಾಗಿ ಕಡ್ಡಾಯ ಪ್ರಕ್ರಿಯೆಗಳನ್ನು ಕೈಗೊಂಡಿಲ್ಲ ಮತ್ತು ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಲಾಗಿಲ್ಲ. ಸಾರ್ವಜನಿಕ ಡೊಮೇನಿನಲ್ಲಿ ಲಭ್ಯವಿರುವ ಮಾಹಿತಿಯ ಪ್ರಕಾರ ಯೋಜನೆಯ ವೆಚ್ಚವನ್ನು 1,800 ಕೋಟಿ ರೂ.ಗಳೆಂದು ನಿಗದಿಗೊಳಿಸಲಾಗಿದೆ.

ಉಕ್ಕಿನ ಮೇಲ್ಸೇತುವೆ ಯೋಜನೆಗೆ ಸಂಬಂಧಪಟ್ಟು ಸಾರ್ವಜನಿಕರಿಗೆ ಮಾಹಿತಿಯನ್ನು ಒದಗಿಸುವ ವಿಷಯದಲ್ಲಿ ರಾಜ್ಯ ಸರ್ಕಾರದ ಹಲವಾರು ಇಲಾಖೆಗಳು ಮತ್ತು ಬಿಡಿಎ ಸತತವಾಗಿ ಹಿಂಜರಿಕೆ ಪ್ರದರ್ಶಿಸುತ್ತ ಬಂದಿವೆ. ಮಾನ್ಯ ಮುಖ್ಯಮಂತ್ರಿ, ಬೆಂಗಳೂರು ಅಭಿವೃದ್ಧಿ ಸಚಿವರು, ಬಿಡಿಎ ಸಾರ್ವಜನಿಕರ ಗಮನಕ್ಕೆ ಬಾರದಂತೆ ಯೋಜನೆಯ ಸುತ್ತ ಬೇಲಿ ನಿರ್ಮಿಸುವ ರೀತಿಯಲ್ಲಿ ನಡೆದುಕೊಂಡಿದ್ದು ಯೋಜನೆ ಜಾರಿಯಲ್ಲಿ ಅಪಾರದರ್ಶಕ ನಿಲುವು ತಳೆದಿರುವುದು ಕಂಡುಬಂದಿದೆ. ನಾನು ಉಕ್ಕಿನ ಮೇಲ್ಸೇತುವೆ ಯೋಜನೆಯನ್ನು ಬಲವಾಗಿ ವಿರೋಧಿಸಿದ್ದು ಇದಕ್ಕೆ ಕಾರಣ ಕೇವಲ ಅಪಾರದರ್ಶಕತೆಯೊಂದೇ ಅಲ್ಲ, ಬದಲಿಗೆ ಪರಿಸರ ಹಾಳುಮಾಡುವರೆಂಬುದೂ ಇತ್ತು.

ಯೋಜನೆ ಜಾರಿಗೆ ತುರ್ತಾಗಿ ಕ್ರಮ ಕೈಗೊಂಡ ಸರ್ಕಾರದ ನಿಲುವಿನ ಸಂಪೂರ್ಣ ಮರುಪರಿಶೀಲನೆಗೆ ನಾನು ಆಗ್ರಹಿಸಿದ್ದೆ. ದೋಷನಿರತ ಸರ್ಕಾರಿ ಆಡಳಿತಾಧಿಕಾರಿಗಳ ಲಾಭಕ್ಕಾಗಿ ಅಕ್ರಮ ಸಂಪಾದನೆಗೆ ಮಾರ್ಗವಾಗಿ ಈ ಯೋಜನೆಯನ್ನು ಬಳಕೆ ಮಾಡಲಾಗುತ್ತಿದೆ ಎಂಬ ಸಾರ್ವಜನಿಕ ಕಳವಳಕ್ಕೆ ಇದು ಕಾರಣವಾಯಿತು. ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಮತ್ತು ಬಿಡಿಎಯ ಕಮೀಷನರ್ ಶ್ರೀ ರಾಜಕುಮಾರ್ ಖತ್ರಿ ಅವರಿಗೆ ನನ್ನ ನಿರ್ದಿಷ್ಟ ಪತ್ರಗಳಿಗೆ ಯಾವುದೇ ಉತ್ತರವೂ ಸಿಗಲಿಲ್ಲ.

ದಯೆಯಿಂದ ನೀವು ಪರಿಗಣಿಸಲೆಂದು ಕೋರಿ ನನ್ನ ಪತ್ರದ ಪ್ರತಿಗಳನ್ನು ಲಗತ್ತಿಸಿದ್ದೇನೆ. ಈ ಹಿನ್ನೆಲೆಯಲ್ಲಿ ಉಕ್ಕಿನ ಮೇಲ್ಸೇತುವೆ ಯೋಜನೆಗೆ ವಿರೋಧ ವ್ಯಕ್ತಪಡಿಸಿರುವ ಮುಖವಾಗಿ ನಾಗರೀಕ ಸಂಘಟನೆಗಳು ಸೇರಿದಂತೆ ನಮ್ಮ ಬೆಂಗಳೂರು ಪ್ರತಿಷ್ಠಾನ

ಮತ್ತು ಕೆಲವು ಇತರ ಸರ್ಕಾರೇತರ ಸಂಘಟನೆಗಳು ಧ್ವನಿಯೆತ್ತಿದ್ದು ಸಕಾಲಿಕವಾಗಿ ಹಲವು ನ್ಯಾಯಾಂಗ ವೇದಿಕೆಗಳಲ್ಲಿ ಉಕ್ಕಿನ ಮೇಲ್ಸೇತುವೆ ಯೋಜನೆಯ ಕಾನೂನುಬದ್ಧತೆಯನ್ನು ಪ್ರಶ್ನೆ ಮಾಡಿವೆ.

ಯೋಜನೆಯ ಕಾನೂನುಬದ್ಧತೆಯನ್ನು ಪ್ರಶ್ನಿಸುವ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯು ಮಾನ್ಯ ಕರ್ನಾಟಕದ ಉಚ್ಚ ನ್ಯಾಯಾಲಯದಲ್ಲಿದೆ; ಚೆನ್ನೈನ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣದ ಮುಂದೆ ಯೋಜನೆಯನ್ನು ಪ್ರಶ್ನಿಸುವ ಮೊಕದ್ದಮೆಯೊಂದಿದೆ.

ಹಸಿರು ನ್ಯಾಯಾಧಿಕರಣದ ಎದುರಲ್ಲಿರುವ ಮೊಕದ್ದಮೆಯಲ್ಲಿ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣವು ಉಕ್ಕಿನ ಮೇಲ್ಸೇತುವೆ ಯೋಜನೆಯ ಅನುಷ್ಠಾನಕ್ಕೆ ತಡೆಯಾಜ್ಞೆ ನೀಡಿದ್ದು ಬಿಡಿಎ ಮತ್ತು ಇತರ ಪ್ರಾಧಿಕಾರಗಳನ್ನು  ಯೋಜನೆ ಕೈಗೆತ್ತಿಕೊಳ್ಳದಂತೆ ತಡೆದಿದೆ. ಯೋಜನೆಯ ಕಾನೂನುಬದ್ಧತೆ ಹಾಗೂ ಪರಿಸರ ಪರಿಣಾಮಗಳನ್ನು ವಿವಿಧ ನ್ಯಾಯಾಂಗಗಳು ಪರಿಶೀಲಿಸುತ್ತಿರುವಂತೆ ಫೆಬ್ರವರಿ 12, 2017ರಂದು ಮಾಧ್ಯಮಗಳಲ್ಲಿ ದಿಗಿಲುಹುಟ್ಟಿಸುವಂಥ ಅಂಶಗಳು ಬಹಿರಂಗಗೊಂಡಿದ್ದು ಇವು ಉಕ್ಕಿನ ಮೇಲ್ಸೇತುವೆ ಯೋಜನೆಯಿಂದ ಪ್ರಯೋಜನಗಳಾಗದಿರುವುದನ್ನು ಮತ್ತು ಅದರ ಸುತ್ತ ಹೆಣೆಯಲಾಗಿರುವ ಭ್ರಷ್ಟಾಚಾರದ ಜಾಲಗಳನ್ನು ಬಹಿರಂಗಗೊಳಿಸಿವೆ. ಇದು ಕರ್ನಾಟಕದ ಲೋಕಾಯುಕ್ತರಿಗೆ ತನಿಖೆಗೆ ಬೇಡಿಕೆ ಸಲ್ಲಿಸಲು ತಪ್ಪಿತಸ್ಥ ಸರ್ಕಾರಿ ಆಡಳಿತಾಧಿಕಾರಿಗಳ ವಿರುದ್ಧ 1984 ರ ಕರ್ನಾಟಕ ಲೋಕಾಯುಕ್ತ ಕಾಯ್ದೆಯನ್ವಯ ಕ್ರಮ ಜರುಗಿಸುವಂತೆ ಒತ್ತಾಯಿಸಲು ನನ್ನನ್ನು ಪ್ರೇರೇಪಿಸಿದೆ.

ಫೆಬ್ರವರಿ 12, 2017ರಂದು ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳು ಸಾರ್ವಜನಿಕವಾಗಿ ರಾಷ್ಟ್ರ ಮತ್ತು ಪ್ರಾದೇಶಿಕ ಮಾಧ್ಯಮಗಳಲ್ಲಿ ಹಲವಾರು ವಿಚಾರಗಳನ್ನು ಬಹಿರಂಗಗೊಳಿಸಿದರು. ಇದು ಉಕ್ಕಿನ ಮೇಲ್ಸೇತುವೆ ಯೋಜನೆಯ ವಿಚಾರದಲ್ಲಿ ಆಳವಾಗಿ ಬೇರೂರಿರುವ ಭ್ರಷ್ಟಾಚಾರದತ್ತ ಬೊಟ್ಟುಮಾಡಿತು. ಈ ವಿಚಾರಗಳ ಪ್ರಕಾರ ಕಾಂಗ್ರೆಸ್ಸಿನ ಎಂಎಲ್‌ಸಿ ಶ್ರೀ ಕೆ. ಗೋವಿಂದರಾಜು ಅವರನ್ನು ಒಬ್ಬ ಮಧ್ಯವರ್ತಿಯನ್ನಾಗಿ ಬಳಕೆ ಮಾಡಲಾಗಿದ್ದು ಮುಖ್ಯಮಂತ್ರಿ, ಪ್ರಸಕ್ತ ಸಚಿವರು ಮತ್ತು ಅಧಿಕಾರಿಗಳು ಸೇರಿದಂತೆ ಸಾರ್ವಜನಿಕ ಆಡಳಿತಾಧಿಕಾರಿಗಳಿಗೆ ಲಂಚದ ರೂಪದಲ್ಲಿ 150 ಕೋಟಿ ರೂ.ಗಳನ್ನು ಪಾವತಿಸಲಾಗಿದೆ. ಸಾರ್ವಜನಿಕವಾಗಿ ಬಹಿರಂಗಗೊಳಿಸಿದ ವಿಚಾರಗಳ ಅನ್ವಯ ಸರಿಸುಮಾರು ರೂ. 65 ಕೋಟಿಗಳನ್ನು ರಾಜ್ಯದ ರಾಜಕಾರಣಿಗಳು ನವದೆಹಲಿಯಲ್ಲಿನ ಪಕ್ಷದ ವರಿಷ್ಠರಿಗೆ ಪಾವತಿ

ಮಾಡಿದ್ದಾರೆ ಎನ್ನಲಾಗಿದೆ. ಸಾರ್ವಜನಿಕ ಹಿತದ ದೃಷ್ಟಿಯಿಂದ ಈ ವಿಚಾರಗಳ ಸತ್ಯಸಂಧತೆ ಮತ್ತು ನಿಖರತೆಗಳನ್ನು ಪರಿಶೀಲಿಸಬೇಕಾದ ಅಗತ್ಯವಿದೆ. ಈ ನಿಟ್ಟಿನಲ್ಲಿ ಪ್ರಕಟಿತವಾಗಿರುವ ಮುದ್ರಣ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿನ ವರದಿಗಳನ್ನು ಈ ಮೂಲಕ ನಿಮ್ಮ ಮುಂದೆ ಸಲ್ಲಿಸುತ್ತಿದ್ದೇನೆ.

ಈ ಕಣ್ತೆರೆಸುವಂಥ ವರದಿಗಳು, ಉಕ್ಕಿನ ಮೇಲ್ಸೇತುವೆ ಯೋಜನೆಯು ರಾಜ್ಯದಲ್ಲಿ ಅಪಾರದರ್ಶಕವಾದುದಾಗಿದ್ದು, ಪ್ರಾಯಶಃ ರಾಜ್ಯದ ಮತ್ತು ಹೊರಗಿನ ವಿವಿಧ ಮಟ್ಟಗಳಲ್ಲಿನ ಅಧಿಕಾರಿಗಳು ಮತ್ತು ರಾಜಕಾರಣಿಗಳ ಲಾಭಕ್ಕಾಗಿ ಒಂದು ಸಾಧನವಾಗಿ ಬಳಕೆಯಾಗುತ್ತಿರುವಂತಿದೆ.

ನಿರ್ದಿಷ್ಟವಾಗಿ ಹೇಳಬೇಕೆಂದರೆ ಇದಕ್ಕೆ ಸಮಗ್ರವಾದ ತನಿಖೆ ನಡೆಸಬೇಕಾದ ಅಗತ್ಯವಿದೆ. ಕರ್ನಾಟಕದ ರಾಜ್ಯದ ಎದುರು ಸೆಲ್ವಿ ಜೆ. ಜಯಲಲಿತಾ ಮತ್ತು ಇತರರು [ಅಪರಾಧ ಮೇಲ್ಮನವಿ 300–303/2017] ಪ್ರಕರಣಕ್ಕೆ ಸಂಬಂಧಿಸಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿಲುವುಗಳು ಕರ್ನಾಟಕದಲ್ಲಿನ ಪ್ರಸಕ್ತ ಸನ್ನಿವೇಶಕ್ಕೆ ಹೊಂದಿಕೆಯಾಗುತ್ತಿದ್ದು ನಿರ್ದಿಷ್ಟವಾಗಿ ಉಕ್ಕಿನ ಮೇಲ್ಸೇತುವೆ ವಿಷಯದಲ್ಲಿ ಈ ಅಂಶ ನಿಜವಾಗಿದೆ ಎಂಬುದನ್ನು ನಿಮ್ಮ ಗಮನಕ್ಕೆ ತರಲು ನಾನು ಬಯಸುತ್ತೇನೆ.

"ಭ್ರಷ್ಟಾಚಾರವೆಂಬುದು ಸ್ವ–ಹಿಡಿತಕ್ಕಾಗಿ ನಿರ್ಲಜ್ಜ ವ್ಯಕ್ತಿಗಳು ತಮ್ಮ ಅಧಿಕಾರದ ದುರ್ಬಳಕೆಯ ಪ್ರತಿಕೂಲ ಲಾಭ ಪಡೆದು, ಸಾಂಸ್ಥಿಕ ಸದಾಚಾರಗಳನ್ನು ಗಾಳಿಗೆ ತೂರುವ ಮೂಲಕ ತಮ್ಮ ತುಚ್ಚ ನಿಷ್ಠಾವಂತರನ್ನು ಬಳಸಿಕೊಂಡು ನಡೆಸುವ ತೃಪ್ತಿಗೊಳಿಸಲಾಗದ ಧನದಾಹದ ದುರಾಚಾರವಾಗಿದೆ.

ಭ್ರಷ್ಟಾಚಾರಿ ಮತ್ತು ಅವರನ್ನು ಭ್ರಷ್ಟಗೊಳಿಸಿದವರಿಬ್ಬರ ಮೇಲೂ ಮೊಕದ್ದಮೆ ದಾಖಲಿಸಬಹುದು ಮತ್ತು ಸಮಾಜ ಹಾಗೂ ದೇಶಕ್ಕೆ ಅವರು ಸಮಗ್ರವಾಗಿ ಉತ್ತರಿಸಬೇಕಾಗುತ್ತದೆ. ಮುಖ್ಯವಾಗಿ ಇದು ಸಾರ್ವಜನಿಕ ವಲಯದಲ್ಲಿ ಸೇವೆ ಸಲ್ಲಿಸುವ, ಸಂವಿಧಾನದ ಪ್ರಕಾರ, ಪ್ರಾಮಾಣಿಕವಾಗಿ ಮತ್ತು ಆತ್ಮಸಾಕ್ಷಿಗೆ ಅನುಗುಣವಾಗಿ ನಿರ್ಭೀತಿಯಿಂದ ಅಥವಾ ಸ್ವಜನಪಕ್ಷಪಾತವಿಲ್ಲದೆ ಅಥವಾ ಪ್ರೀತಿ ಅಥವಾ ದ್ವೇಷಗಳಿಗೆ ತುತ್ತಾಗದೆ ಜನಹಿತಕ್ಕಾಗಿ ತಮ್ಮನ್ನು ತಾವು ಸಮರ್ಪಿಸಿಕೊಳ್ಳುವುದಾಗಿ ಪ್ರತಿಜ್ಞಾವಿಧಿ ಸ್ವೀಕರಿಸುವ ಪ್ರಮಾಣ ಮಾಡಿರುವ ಜನಪ್ರತಿನಿಧಿಗಳ ವಿಚಾರದಲ್ಲಿ ಮಹತ್ವದ್ದಾಗುತ್ತದೆ. ಇಂಥ ಗೊತ್ತುವಳಿಯನ್ನು ಉಲ್ಲಂಘಿಸುವ ನಡವಳಿಕೆಯು ಸಮುದಾಯಕ್ಕೆ ಮಾಡುವ ವಿಶ್ವಾಸಘಾತವಾಗಿದ್ದು ಸಂವಿಧಾನಕ್ಕೆ ಬದ್ಧರಾಗುವುದಾಗಿ ನೀಡಿರುವ ಭರವಸೆಯ ಅವಹೇಳನವಾಗಿದೆ ಮತ್ತು ಈ ಅವಮರ್ಯಾದೆಯು ಖಂಡನಾರ್ಹವಾದುದು.

ಇಂಥ ನಡವಳಿಕೆಯು, ದೇಶದ ಪ್ರತಿ ನಾಗರೀಕನ ಜೀವನ ಹಾಗೂ ಸ್ಫೂರ್ತಿಯನ್ನು ಉಜ್ಜೀವನಗೊಳಿಸುವ ಸಂವಿಧಾನದಲ್ಲಿನ ಪೀಠಿಕೆಯಲ್ಲಿನ ಭರವಸೆಗಳೆನಿಸಿರುವ ದೇಶದಲ್ಲಿನ ನ್ಯಾಯ, ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವದ ಪ್ರತಿಷ್ಠೆ, ದೇಶದ ಐಕ್ಯತೆ ಮತ್ತು ಸಮಗ್ರತೆಯ ಅವಹೇಳನೆಯಷ್ಟೇ ಅಲ್ಲ, ನಮ್ಮ ಪ್ರಜಾಸತ್ತಾತ್ಮಕ ನೀತಿಯ ಅಡಿಗಲ್ಲೆನಿಸಿದ ಸಾಂವಿಧಾನಿಕ ಧರ್ಮದ ಮೇಲೆ ಪ್ರಹಾರವಾಗಿದೆ."

ಭ್ರಷ್ಟಾಚಾರದ ಈ ವಿನಾಶಕಾರಿ ಪಿಡುಗು ಕರ್ನಾಟಕ ಸರ್ಕಾರದ ಕಾರ್ಯನಿರ್ವಹಣೆಯಲ್ಲಿ ತನ್ನ ಛಾಪು ಮೂಡಿಸಿರುವಂತಿದೆ. ರಾಜಕಾರಣಿಗಳು ಮತ್ತು ಅಧಿಕಾರಿಗಳು ಪೌರುಷದ ಹಮ್ಮಿನೊಂದಿಗೆ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಇದು ಕಾನೂನಿನ ಆಡಳಿತಕ್ಕೆ ವಿರೋಧಾಭಾಸವಷ್ಟೇ ಅಲ್ಲ, ನೈತಿಕವಾಗಿದ್ದು ಪ್ರಾಮಾಣಿಕರಾಗಿದ್ದು ಸತ್ಯಸಂಧರಾಗಿರುವವರ ಆತ್ಮಸ್ಥೈರ್ಯ ಉಡುಗಿಸುವಂತಿದೆ. ನಮ್ಮ ರಾಜ್ಯದಲ್ಲಿ ಭ್ರಷ್ಟಾಚಾರವೆಂಬುದು ಉಗ್ರವಾದ ಪ್ರಭುತ್ವ ಪಡೆದಿದೆ, ಇದನ್ನು ಪರಿಣಾಮಕಾರಿ ಕಣ್ಗಾವಲಿನಿಂದಷ್ಟೇ ಹದ್ದುಬಸ್ತಿನಲ್ಲಿಡಲು ಸಾಧ್ಯ.

ಹೀಗಾಗಿ ರಾಜ್ಯದಲ್ಲಿನ ಪ್ರತಿ ನಾಗರೀಕ ಕೂಡ ತಮ್ಮ ದಕ್ಷ ಲೋಕಾಯುಕ್ತ ಕಚೇರಿಯ ನಿರ್ಣಯಕ್ಕೆ ಎದುರುನೋಡುತ್ತಾರೆ, ನೀವು ಭ್ರಷ್ಟರನ್ನು ನ್ಯಾಯದ ಕಟಕಟೆಗೆ ಎಳೆಯಬೇಕಿದೆ. ಹೀಗಾಗಿ ಸ್ವಯಂಪ್ರೇರಣೆಯ ಕ್ರಮ ಜರುಗಿಸುವಂತೆ ಮತ್ತು ಭ್ರಷ್ಟಾಚಾರ ಮತ್ತು ಉಕ್ಕಿನ ಮೇಲ್ಸೇತುವೆ ಯೋಜನೆಗೆ ಸಂಬಂಧಿಸಿ ಭ್ರಷ್ಟ ಅಭ್ಯಾಸಗಳ ವಿಚಾರಗಳ ಕುರಿತು ವಿಚಾರಣೆ ನಡೆಸುವಂತೆ ಹಾಗೂ ಈ ಮೂಲಕ 1988ರ ಭ್ರಷ್ಟಾಚಾರ ನಿರ್ಮೂಲನ ಕಾಯಿದೆ; 1860ರ ಭಾರತೀಯ ದಂಡ ಸಂಹಿತೆಗಳು ಮತ್ತು ಇತರ ಅನ್ವಯಿಸುವ ಕಾನೂನುಗಳ ಅನ್ವಯ ತನಿಖೆ ನಡೆಸುವಂತೆ ನಿಮ್ಮನ್ನು ಈ ಮೂಲಕ ಒತ್ತಾಯಿಸುತ್ತೇನೆ. ಸ್ವಯಂಪ್ರೇರಣೆಯ ಕ್ರಮ ಜರುಗಿಸುವುದು ಕಾನೂನಿನ ಪ್ರಭುತ್ವವನ್ನು ಎತ್ತಿಹಿಡಿಯುವುದಷ್ಟೇ ಅಲ್ಲ, ಕರ್ನಾಟಕ ರಾಜ್ಯದ ಸಾರ್ವಜನಿಕ ಆಡಳಿತದಲ್ಲಿ ಕಾನೂನಿನ ಆಡಳಿತವನ್ನು ಸ್ಥಾಪಿಸುವ ಜೊತೆಗೆ ಉತ್ತರದಾಯಿತ್ವ ಮತ್ತು ಪಾರದರ್ಶಕತೆಯನ್ನು ಬಲಗೊಳಿಸಬಲ್ಲವು.

ಜೈ ಹಿಂದ್!

ನಿಮ್ಮ ವಿಶ್ವಾಸಿ
ರಾಜೀವ್ ಚಂದ್ರಶೇಖರ್

ಲಗತ್ತಿಸಿರುವುದು:
ಮೇಲಿನಂತೆ

1. ಮಾನ್ಯ ನ್ಯಾಯಮೂರ್ತಿ ಪಿ. ವಿಶ್ವನಾಥ ಶೆಟ್ಟಿ ಕರ್ನಾಟಕ ಲೋಕಾಯುಕ್ತ

ಎಂಎಸ್ ಬಿಲ್ಡಿಂಗ್, ಡಾಕ್ಟರ್ ಅಂಬೇಡ್ಕರ್ ಬೀದಿ ಬೆಂಗಳೂರು 560 061

ಪ್ರತಿ:

2. ಮಾನ್ಯ ನ್ಯಾಯಮೂರ್ತಿ ಶ್ರೀ ಎನ್. ಆನಂದ, ಕರ್ನಾಟಕ ಉಪ ಲೋಕಾಯುಕ್ತ,

ಎಂಎಸ್ ಬಿಲ್ಡಿಂಗ್, ಡಾಕ್ಟರ್ ಅಂಬೇಡ್ಕರ್ ಬೀದಿ ಬೆಂಗಳೂರು 560 061

3. ಮಾನ್ಯ ನ್ಯಾಯಮೂರ್ತಿ ಶ್ರೀ ಸುಭಾಷ್ ಬಿ. ಅಡಿ, ಕರ್ನಾಟಕ ಉಪ ಲೋಕಾಯುಕ್ತ,

ಎಂಎಸ್ ಬಿಲ್ಡಿಂಗ್, ಡಾಕ್ಟರ್ ಅಂಬೇಡ್ಕರ್ ಬೀದಿ ಬೆಂಗಳೂರು 560 061

ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಎಂಎಸ್ ಬಿಲ್ಡಿಂಗ್, ಡಾಕ್ಟರ್ ಅಂಬೇಡ್ಕರ್ ಬೀದಿ ಬೆಂಗಳೂರು 560 061

# 47

# ಉಕ್ಕಿನ ಮೇಲ್ಸೇತುವೆ ರದ್ದುಗೊಳಿಸುವಂತೆ ಕೋರಿ ಮುಖ್ಯಮಂತ್ರಿಯವರಿಗೆ ಬಹಿರಂಗ ಪತ್ರ

6ನೇ ಮಾರ್ಚ್2017

ಉಕ್ಕಿನ ಮೇಲ್ಸೇತುವೆ ಕೈಬಿಡುವ ವಿಳಂಬದ ತೀರ್ಮಾನದ ಕುರಿತು ನಾನು ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಸಿದ್ದರಾಮಯ್ಯ ಅವರಿಗೆ ಧನ್ಯವಾದ ಹೇಳುತ್ತೇನೆ. ಇದಕ್ಕಾಗಿ ಹಲವಾರು ನಾಗರೀಕ ಪ್ರತಿಭಟನೆಗಳು ನಡೆದು ಹಲವಾರು ತಿಂಗಳುಗಳೇ ಬೇಕಾಗಿ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ (ಎನ್‌ಜಿಟಿ) ಮತ್ತು ಉಚ್ಚ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ದಾಖಲಿಸಬೇಕಾಯಿತು ಎಂಬುದು ಬೇರೆ ಪ್ರಶ್ನೆ. ಜನರು ನಗರದ ಟ್ರಾಫಿಕ್ ಸಮಸ್ಯೆಗಳನ್ನು ಪರಿಹರಿಸಲು ಒಂದು ಉಕ್ಕಿನ ಮೇಲ್ಸೇತುವೆ ನಿರ್ಮಿಸುವ ಅವರ ಈ ವಿಚಿತ್ರ ಉಪಾಯವನ್ನು ಇಷ್ಟಪಡಲಿಲ್ಲ ಎಂಬುದು ಬೇರೆ ಪ್ರಶ್ನೆ.

ನಾಗರೀಕರ ಜೊತೆಯಲ್ಲಿ ನೈಜ ಸಾರ್ವಜನಿಕ ಸಂಪರ್ಕವಿಲ್ಲದೇ ಮತ್ತು ನೂರಾರು ಮರಗಳನ್ನು ಕಡಿಯುವುದರಿಂದ ಪರಿಸರದ ಮೇಲಾಗುವ ಪರಿಣಾಮದ ಕುರಿತು ನೈಜ ಅಧ್ಯಯನವಿಲ್ಲದೇ ತುರ್ತಾಗಿ ಈ ಯೋಜನೆಯನ್ನು ಜಾರಿಗೆ ತರಲು ಏಕೆ ಪ್ರಯತ್ನಿಸಲಾಯಿತು ಎಂಬ ಬಗ್ಗೆ ಮಹತ್ವದ ಪ್ರಶ್ನೆಗಳನ್ನು ಕೇಳಬೇಕಾದ ಅಗತ್ಯವಿದೆ.

ಭ್ರಷ್ಟಾಚಾರದ ಆರೋಪಗಳು ಮತ್ತು ಕಾಂಗ್ರೆಸ್ ಎಂಎಲ್‌ಸಿಯ ಡೈರಿ ನಮೂದುಗಳ ಬಗ್ಗೆ ಇನ್ನೂ ಉತ್ತರ ಸಿಕ್ಕಿಲ್ಲ. ಇದು ಈ ಯೋಜನೆಗೆ ಕಾರಣವೆಂದರೆ ಟ್ರಾಫಿಕ್ ಜಾಮ್ ಸಮಸ್ಯೆ ಪರಿಹರಿಸುವ ಬದಲಿಗೆ ಬೇರೆ ಏನೋ ಇತ್ತು ಎಂಬ ಸಾರ್ವಜನಿಕರ ನಡುವಿನ ಅಭಿಪ್ರಾಯವನ್ನು ಇನ್ನಷ್ಟು ಬಲಪಡಿಸುತ್ತದೆ. ಮುಖ್ಯ ಮಂತ್ರಿಯವರ ತೀರ್ಮಾನವು ಈ ಬಗೆಯ ಪ್ರಶ್ನಾರ್ಹ ತೀರ್ಮಾನಗಳನ್ನು ಪಕ್ಕಕ್ಕಿಟ್ಟು ಹೊಸತಾಗಿ ಪ್ರಾರಂಭಿಸುವ ಉದ್ದೇಶ ಹೊಂದಿದ್ದಲ್ಲಿ, ಜನರು ಏನನ್ನು ಬಯಸುತ್ತಾರೆ ಎಂಬುದಕ್ಕೆ ಪ್ರತಿಕ್ರಿಯಾತ್ಮಕವಾಗಿದ್ದಲ್ಲಿ ಮತ್ತು ಇದನ್ನು ಯಾವುದೇ ಭ್ರಷ್ಟಾಚಾರದ ಆರೋಪ ಬಾರದಂತೆ ಜಾರಿಗೊಳಿಸುವುದಾಗಿದ್ದಲ್ಲಿ ಮುಖ್ಯಮಂತ್ರಿಯವರು ಕೆಳಗಿನವುಗಳನ್ನು ಕೈಗೊಳ್ಳಬೇಕು.

1. ನಮ್ಮ ಬೆಂಗಳೂರಿಗಾಗಿ ಬಹುಪದರದ ಯೋಜನೆಯನ್ನು ತಕ್ಷಣ ಪ್ರಾರಂಭಿಸಬೇಕು ಮತ್ತು ಈ ಮೂಲಕ ನಗರದ ಎಲ್ಲೆಡೆ ಟ್ರಾಫಿಕ್, ನೀರು, ಕಸ, ಸಾರ್ವಜನಿಕ ಆರೋಗ್ಯ, ಮಕ್ಕಳು ಮತ್ತು ಮಹಿಳೆಯರ ಸುರಕ್ಷತೆ, ಪರಿಸರ ಮತ್ತು ಕೆರೆಗಳು, ಪರಂಪರೆ ಇತ್ಯಾದಿಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಬೇಕು. ಈ ಯೋಜನೆಗಳನ್ನು ನೈಜ ತಜ್ಞರು ಅಭಿವೃದ್ಧಿಗೊಳಿಸಬೇಕು ಮತ್ತು ನಂತರ ಮುಕ್ತ ಹಾಗೂ ಪಾರದರ್ಶಕ ರೀತಿಯಲ್ಲಿ ನಗರದ ನಾಗರೀಕರ ಜೊತೆಯಲ್ಲಿ ಅನುಷ್ಠಾನಗೊಳಿಸಬೇಕು.

2. ಇದರ ಬಗ್ಗೆ ಕ್ರಮ ಕೈಗೊಳ್ಳುವಂತೆ ನಾನು ಈಗ ಅವರನ್ನು ಒತ್ತಾಯಿಸುತ್ತೇನೆ. ರಾಜಾರೋಷವಾಗಿ ನಡೆಯುತ್ತಿರುವ ಭ್ರಷ್ಟಾಚಾರವನ್ನು ನಿರ್ಮೂಲನಗೊಳಿಸುವುದಕ್ಕಾಗಿ ಇಂದಿನಿಂದ ಪ್ರಾರಂಭಿಸಿ 2018ರ ಚುನಾವಣೆಗಳ ಪ್ರಾರಂಭದ ವರೆಗೂ ಸರ್ಕಾರದ, ಬೆಂಗಳೂರಿನ ಸರ್ಕಾರಿ ಸಂಸ್ಥೆಗಳ ಎಲ್ಲ ಪ್ರಸಕ್ತ ಮತ್ತು ಭವಿಷ್ಯದ ಗುತ್ತಿಗೆಗಳನ್ನು, ಟೆಂಡರುಗಳನ್ನು, ನೆಲದ ಬಳಕೆಯ ತೀರ್ಮಾನಗಳನ್ನು ಕಡ್ಡಾಯವಾಗಿ ಬಹಿರಂಗಗೊಳಿಸುವಂತೆ ಒತ್ತಾಯಿಸುತ್ತೇನೆ. ಈ ಬಗೆಯ ಬಹಿರಂಗಗೊಳಿಸುವಿಕೆಗಳು, ಚುನಾವಣೆಗಳಿಗೂ ಮುನ್ನ ಭ್ರಷ್ಟಾಚಾರದ ಅತ್ಯಾಸೆಯನ್ನು ತಪ್ಪಿಸಲು ಎಲ್ಲ ವಹಿವಾಟುಗಳ ಪರಿಶೀಲನೆಯನ್ನು ಖಚಿತಗೊಳಿಸುತ್ತವೆ.

3. ಪರಿಷ್ಕೃತ ಮಾಸ್ಟರ್ ಪ್ಲಾನ್ (ಆರ್ ಎಂ ಪಿ) 2031ರ ಕುರಿತು ಬಿಡಿಎಯ ಪ್ರಯತ್ನಗಳು ಹೆಚ್ಚುವರಿ ಫ್ಲೋರ್ ಸ್ಪೇಸ್ ಇಂಡೆಕ್ಸ್ (ಎಫ್‌ಎಸ್‌ಐ) ಅನ್ನು ನಿರ್ದಿಷ್ಟ ಬಿಲ್ಡರುಗಳು ಮತ್ತು ರಿಯಲ್ ಎಸ್ಟೇಟ್ ಕಂಪನಿಗೆ ನೀಡುವುದಕ್ಕೆ

ದಾರಿಮಾಡಿಕೊಡಬಾರದು. ಸರ್ವೋಚ್ಚ ನ್ಯಾಯಾಲಯದ ಸ್ಪಷ್ಟವಾಗಿ ನಿರೂಪಿಸಲಾದ ಮಾರ್ಗಸೂಚಿಗಳ ಅನ್ವಯ ಆರ್‌ಎಂಪಿಯು ಕಡ್ಡಾಯ ಸಾರ್ವಜನಿಕ ಅಭಿಪ್ರಾಯ ಸಂಗ್ರಹಣೆಗೆ ಒಳಗಾಗಬೇಕು. ನಾಗರೀಕರಿಗೆ ಅಭಿಪ್ರಾಯ ವ್ಯಕ್ತಪಡಿಸುವುದಕ್ಕಾಗಿ ಒಂದು ಅವಕಾಶವನ್ನು ನೀಡಬೇಕು. ನಾಗರೀಕರೆಲ್ಲರ ಹೇಳಿಕೆಗಳೆಲ್ಲವನ್ನೂ, ಒಪ್ಪಲು ಅಥವಾ ತಿರಸ್ಕರಿಸಲು ಕಾರಣ ವ್ಯಕ್ತಪಡಿಸಲು ಅವಕಾಶ ನೀಡುವ ಜೊತೆಗೆ ಸಾರ್ವಜನಿಕ ಡೊಮೇನಿನಲ್ಲಿ ಲಭ್ಯವಾಗುವಂತೆ ಮಾಡಬೇಕು.

4. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಅತ್ಯಂತ ಭ್ರಷ್ಟ ಸಂಸ್ಥೆಯೆಂಬ ಕುಖ್ಯಾತಿ ಪಡೆದಿದೆ. ಉಕ್ಕಿನ ಮೇಲ್ಸೇತುವೆ ರದ್ದುಗೊಳ್ಳುವುದಕ್ಕೂ ಮುನ್ನ ಕೆಲವು ಜನರನ್ನು ವರ್ಗಾವಣೆ ಮಾಡಿದ್ದೂ ಸೇರಿದಂತೆ ಸ್ಟೀಲ್ ಫ್ಲೈ ಓವರ್ ಸಂದರ್ಭದಲ್ಲಿ ಅದರ ಪೂರ್ತಿ ನಡವಳಿಕೆ ಹಾಗೂ ನಿರ್ಣಯ ಕೈಗೊಂಡ ಪ್ರಕ್ರಿಯೆಯನ್ನು ತನಿಖೆ ನಡೆಸಬೇಕು. ಬಿಡಿಎಯನ್ನು ರದ್ದುಗೊಳಿಸಬೇಕು ಇಲ್ಲವೇ ಅದರಲ್ಲಿ ಸುಧಾರಣೆಗಳನ್ನು ತರಬೇಕು.

5. ಪ್ರಸಕ್ತ ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು ಬೆಂಗಳೂರಿನಲ್ಲಿನ ಟ್ರಾಫಿಕ್ ಜಾಂ, ಸಾಯುತ್ತಿರುವ ಕೆರೆಗಳು, ಕಸದ ತೊಂದರೆಗಳು, ಕಾನೂನುಬಾಹಿರ ನಿರ್ಮಾಣಗಳು, ಬಿಬಿಎಂಪಿಯ ನಿರ್ಲಕ್ಷ್ಯದಿಂದಾಗಿ ಸಾವುಗಳು, ಮಕ್ಕಳು ಮತ್ತು ಮಹಿಳೆಯರ ಸುರಕ್ಷತೆ, ಭ್ರಷ್ಟಾಚಾರ ಇತ್ಯಾದಿ ಸಮಸ್ಯೆಗಳನ್ನು ಪರಿಹರಿಸಲು ಅಸಮರ್ಥರಿದ್ದು ದೊಡ್ಡ ಝುಗಮಗಿಸುವ ಫ್ಲೈಓವರಿನಂಥ ಯೋಜನೆಗಳಿಂದ ರೋಮಾಂಚನಗೊಂಡಂತಿದ್ದು ಇದಕ್ಕೆ ಕಾರಣಗಳಾವವು ಎಂಬುದು ಅವರಿಗೆ ಹಾಗೂ ಮುಖ್ಯಮಂತ್ರಿಯವರಿಗೆ ಮಾತ್ರವೇ ಗೊತ್ತಿರಬಹುದು. ನಿನ್ನೆಯ ಪತ್ರಿಕಾಗೋಷ್ಠಿಯಲ್ಲಿ ಬೆಂಗಳೂರಿನ ಸಂಚಾರ ಸಮಸ್ಯೆಗಳನ್ನು ಪರಿಹರಿಸುವ ಕೆಲಸವನ್ನು ನನಗೇ ವಹಿಸಬೇಕು ಎಂಬ ಸಲಹೆಯನ್ನು ಅವರು ಮುಂದಿಟ್ಟಂತಿದೆ. ತಮ್ಮ ಕೆಲಸವನ್ನು ಮಾಡಲು ಅಸಮರ್ಥರಾಗಿರುವ ಸಚಿವರೊಬ್ಬರಿದ್ದಾರೆ ಎಂಬುದನ್ನು ಈ ರೀತಿಯಾಗಿ ಒಪ್ಪಿಕೊಂಡಿರುವುದರಿಂದ ನೀವು ಅವರನ್ನು ಬದಲಿಸಿ ನಮ್ಮ ನಗರ ಹಾಗೂ ಜನರ ಸಮಸ್ಯೆಗಳನ್ನು ಪರಿಹರಿಸಬಲ್ಲ ಇನ್ನಷ್ಟು ದಕ್ಷ ಹಾಗೂ ಪ್ರಾಮಾಣಿಕ ಸಚಿವರನ್ನು ಆ ಸ್ಥಾನಕ್ಕೆ ನೇಮಿಸಬಹುದು.

ಒಂದು ವೇಳೆ ಅವರನ್ನು ಬದಲಿಸಲಾಗದ ಸನ್ನಿವೇಶವನ್ನು ಮುಖ್ಯಮಂತ್ರಿಯವರು ತಮ್ಮ ಪಕ್ಷದಲ್ಲಿ ಎದುರಿಸುತ್ತಿದ್ದಲ್ಲಿ ಸರ್ಕಾರವು, ನಾಗರೀಕರಿಗೆ ಸಂಬಂಧಿಸಿ ತನ್ನ ಜವಾಬ್ದಾರಿಯನ್ನು ನಿರ್ವಹಿಸಲಾಗದ ತನ್ನ ಅಸಮರ್ಥತೆಯನ್ನು ಮುಕ್ತವಾಗಿ ವ್ಯಕ್ತಪಡಿಸಲಿ ಮತ್ತು ರಾಜೀನಾಮೆ ನೀಡುವ ಮೂಲಕ ಮುಂಚಿತ ಚುನಾವಣೆ ಕೈಗೊಳ್ಳಲಿ. ಏಕೆಂದರೆ ಬೆಂಗಳೂರು ಕಳೆದ 4 ವರ್ಷಗಳ ನಿರ್ಲಕ್ಷ್ಯ ಮತ್ತು ಬೇಜವಾಬ್ದಾರಿತನದ ಧೋರಣೆಯನ್ನೇ ಇನ್ನು ಮುಂದೂ ಸಹಿಸಿಕೊಳ್ಳಲು ಸಾಧ್ಯವಿಲ್ಲ.